ಶ್ರೀ ಎಂ. ಎಸ್. ಕೃಷ್ಣನ್.—ನಿಲುವಳಿ ಸೂಚನೆಯನ್ನು ನೀವು ಕನ್ಸಿಡರ್ ಮಾಡಬೇಕಾಗಿಲ್ಲ. ನಿಜಾಂಶ ಏನೆಂದರೆ, ಒಂದು ಸಮಸ್ಯೆ ಬಂದಿದೆ. ಕೆಲವು ಸಂದರ್ಭಗಳಲ್ಲಿ ಇಂತಹ ಸಮಸ್ಯೆಗಳು ಬಂದಾಗ ಸಂಬಂಧಪಟ್ಟ ಮಂತ್ರಿಗಳು ಹೇಳಿಕೆ ಕೊಡುತ್ತಾರೆ. ನಾವು ಕೇಳಿಕೊಳ್ಳುತ್ತೇವೆ, ನೀವು ಮಂತ್ರಿಗಳಿಗೆ ಹೇಳಬೇಕು. ಅವರು ಒಂದು ಹೇಳಿಕೆಯನ್ನು ಕೊಡುತ್ತಾರೆ. ಬಿನ್ನಿ ಮಿಲ್ ನೌಕರರು ಪಿಕೆಟಿಂಗ್ ಮಾಡಿದ್ದಾರೆ. ಸಮಸ್ಯೆಗಳು ಗಂಭೀರವಾಗಿದೆ. ಮಂತ್ರಿಗಳು ಹೇಳಿಕೆಯನ್ನು ಕೊಡಲು ತಯಾರಾಗಿದ್ದಾರೆ. ಸಾಯಂಕಾಲದೊಳಗೆ ಯಾವಾಗಲಾದರೂ ಹೇಳಿಕೆಯನ್ನು ಕೊಡಲಿ.

ಅಧ್ಯಕ್ಷರು.—೫ ನಿಲುವಳಿ ಸೂಚನೆಗಳು ಬಂದಿವೆ. ಅವುಗಳ ಬಗ್ಗೆ ನಿಮಗೆ ಯಾವರೀತಿಯಲ್ಲಿ ಅವಕಾಶ ಮಾಡಿಕೊಡಬೇಕು ಎನ್ನುವುದರ ಬಗ್ಗೆ ನಿರ್ಧರಿಸಲು ನಾಳೆ, ನಾಡಿದ್ದು ನಿಮ್ಮನ್ನು ಕರೆಸಿ ಮಾತನಾಡುತ್ತೇನೆ. ಅವರನ್ನೂ ಕರೆಸುತ್ತೇನೆ. ನಿಮಗೆ ಅವಕಾಶ ಮಾಡಿಕೊಡುತ್ತೇನೆ. ಇದನ್ನು ನಾನು ರಿಜೆಕ್ಟ್ ಮಾಡಿದ್ದೇನೆಂದು ಹೇಳಿಲ್ಲ. ೫ ನಿಲುವಳಿ ಸೂಚನೆಗಳು ಇರುವುದರಿಂದ ಕಾಲಿಂಗ್ ಅಟೆನ್‌ಷನ್ ಅಥವಾ ನಿಯಮ ೬೦ರ ಪ್ರಕಾರ, ಚರ್ಚೆ ಅಥವಾ ಅರ್ಧ ಗಂಟೆ ಚರ್ಚೆ ಅಥವಾ ಪ್ರಿಲಿಮನರಿ ಸಬ್‌ಮಿಷನ್ ಮಾಡಲು ಯಾವ ರೀತಿ ಅವಕಾಶ ಕೊಡಬೇಕು ಎಂಬುದನ್ನು ನಿರ್ಧಾರ ಮಾಡುತ್ತೇನೆ. ನಿಮ್ಮ ಜೊತೆಯಲ್ಲಿ ಡಿಸ್‌ಕಸ್ ಮಾಡುತ್ತೇವೆ. ಅವರನ್ನೂ ಕರೆದು ಕೂಡ ಡಿಸ್‌ಕಸ್ ಮಾಡುತ್ತೇನೆ. ಈಗ ಬಜೆಟ್ ಮೇಲೆ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಭಾಷಣ ಮಾಡಲಿ. ಎರಡು ಗಂಟೆಗೆ ಮುಖ್ಯ ಮಂತ್ರಿಗಳ ಉತ್ತರ ಇದೆ. ಆದ್ದರಿಂದ ಅವರು ಈಗ ಭಾಷಣವನ್ನು ಪ್ರಾರಂಭ ಮಾಡಲಿ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ತಾವು ದಯವಿಟ್ಟು ನನಗೆ ಒಂದು ನಿಮಿಷ ಮಾತನಾಡಲು ಅವಕಾಶ ಕೊಡಬೇಕು.

ಅಧ್ಯಕ್ಷರು.—ಈಗ ಅವರು ಉತ್ತರ ಕೊಡಲು ಸಾಧ್ಯವಿಲ್ಲ, ಅವರು ಕೊಡುವುದಿಲ್ಲ. ನೀವು ವಾಕ್‌ಔಟ್ ಬೇಕಾದರೆ ಮಾಡಿ. ನಾನು ಬೇರೆಯವರಿಗೆ ಯಾರಿಗೂ ಅವಕಾಶ ಕೊಡುವುದಿಲ್ಲ.

(ಶ್ರೀ ಆರ್. ವೆಂಕಟರಾಮಯ್ಯನವರು ಸಭಾತ್ಯಾಗ ಮಾಡಿದರು)

ವಿತ್ತೀಯ ಕಾರ್ಯಕಲಾಪಗಳು

೧೯೭೯–೮೦ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್).—ಮಾನ್ಯ ಅಧ್ಯಕ್ಷರೆ, ನಾನು ೧೯೭೯–೮೦ನೇ ಸಾಲಿನ ಬಜೆಟ್ ಮೇಲೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಲು ಬಯಸುತ್ತೇನೆ. ಮುಖ್ಯವಾಗಿ ನಾವು ಹೊಸ ಮುಖ್ಯ ಮಂತ್ರಿಗಳು ಬಂದಮೇಲೆ ಅವರು ಏನಾದರೂ ಹೊಸ ಯೋಜನೆಗಳನ್ನು ಹಾಗೂ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಾರೆಂಬ ಭಾವನೆಯನ್ನು ಇಟ್ಟು ಕೊಂಡಿದ್ದೆವು. ಆದರೆ ಈ ಬಜೆಟ್ ಭಾಷಣವನ್ನು ನೋಡಿದ ಮೇಲೆ, ನಾವು ಏನು ತಿಳಿದು ಕೊಂಡಿದ್ದೆವು ಆ ರೀತಿ ಇವರು ಮಾಡಿಲ್ಲ. ಇದು ಯಾವ ಪ್ರಕಾರವಾಗಿ ನಡೆದಿದೆ ಎಂದರೆ ೧೯೭೩ರಿಂದ ನಡೆದುಕೊಂಡು ಬಂದಂತಹ ಪದ್ಧತಿಯಲ್ಲಿಯೇ ಈ ಬಜೆಟ್ ಇದೆ. ೧೯೭೩ ರಿಂದ ಏನು ಒಂದು ಪದ್ಧತಿಯನ್ನು ಇವರು ಅನುಸರಿಸುತ್ತಿದ್ದಾರೆಂದರೆ, ಈ ಬಜೆಟ್‌ನಲ್ಲಿ ಕನಿಷ್ಟ ಪಕ್ಷ ೧೨–೧೩ ಪುಟಗಳನ್ನು ಕೇಂದ್ರ ಸರ್ಕಾರ ಅಥವಾ ಕೇಂದ್ರ ಸರ್ಕಾರವನ್ನು ದೂಷಣೆ ಮಾಡುವ ಉದ್ದೇಶದಿಂದ ಪ್ರಿಂಟ್ ಮಾಡುತ್ತಿದ್ದಾರೆ. ೧೯೭೩ರ ಹಿಂದೆ ಏನು ನಡೆದಿದೆ ಅಂದರೆ ಶ್ರೀ ರಾಮಕೃಷ್ಣ ಹೆಗಡೆಯವರು ಹಿಂದೆ ಹಣಕಾಸು ಸಚಿವರಾಗಿದ್ದಾಗ, ಯಾವ ರೀತಿಯಲ್ಲಿ ಕೇಂದ್ರ ಸರ್ಕಾರದ ಮೇಲೆ ಎಷ್ಟು ಪುಟ ಅವರ ಭಾಷಣದಲ್ಲಿ ರಿಜರ್ವ್ ಮಾಡುತ್ತಿದ್ದರು ಎಂಬುದನ್ನು ನಾನು ನೋಡಿದ್ದೇನೆ. ಹಿಂದೆ ಅವರು ಈ ರೀತಿಯಾಗಿ ೧೦–೧೨ ಪುಟಗಳನ್ನು ಕೇಂದ್ರ ಸರ್ಕಾರವನ್ನು ದೂಷಿಸಲು ಉಪಯೋಗ ಮಾಡಿಲ್ಲ. ಈಗ ೧೯೭೩ರ ನಂತರ ಏನು ಮಾಡುತ್ತಿದ್ದಾರೆಂದರೆ ಕೇಂದ್ರ ಸರ್ಕಾರದವರು ಅದು ಕೊಟ್ಟಿಲ್ಲ. ಸರ್ಕಾರಿಯ ಕಮಿಷನ್ ಪ್ರಕಾರ ನಮಗೆ ಸಿಕ್ಕಬೇಕಾಗಿರುವುದು ಸಿಕ್ಕಿಲ್ಲ. ನಮಗೆ ಸಾಧ್ಯವಾದಷ್ಟು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಸಹಾಯ ಮಾಡಿಲ್ಲ, ನಾವು ಅನೇಕ ವಿಷಯಗಳ ಬಗ್ಗೆ ಶಿಫಾರಸು ಮಾಡಿದ್ದೆವು, ಅವುಗಳನ್ನು ತಿರಸ್ಕಾರ ಮಾಡಿದ್ದಾರೆಂದು ಹೇಳತಕ್ಕಂಥ ಪದ್ಧತಿಯನ್ನು ಇವರು ಕೂಡ ಮುಂದುವರಿಸಿಕೊಂಡು ಬಂದಿದ್ದಾರೆ, ೫-೬ ವರ್ಷಗಳಿಂದ ನಡೆದುಕೊಂಡು ಬಂದಿರುವ ಪದ್ಧತಿಯನ್ನು ಇವರು ಮುಂದುವರಿಸಿಕೊಂಡು ಬಂದಿದ್ದಾರೆ. ಇದರಲ್ಲಿ ಹೊಸ ವಿಷಯ ಏನೂ ಇಲ್ಲ.

ಇನ್ನು ಎರಡನೆಯದು ಏನೆಂದರೆ, ರಾಜ್ಯಪಾಲರ ಭಾಷಣದಲ್ಲಿ ಕರುಣಾನಿಧಿ ಸರ್ಕಾರದ ಬಗ್ಗೆ ಬಹಳ ಪ್ರಶಂಸೆ ಮಾಡಿ ಬರೆದಿದ್ದರು. ಅದನ್ನು ರಾಜ್ಯಪಾಲರವರ ಬಾಯಿಂದ ಓದಿಸಿದರು. ಈಗ ''Emergence of Janata Dal is a major step towards a viable alternative.'' ಇದರಿಂದ ಪ್ರಾರಂಭ ಮಾಡಿದ್ದಾರೆ. ಕರುಣಾನಿಧಿಯಿಂದ ಪ್ರಾರಂಭವಾಗಿದ್ದು, ಈಗ ಇದರಲ್ಲಿ ಜನತಾದಳದ ಬಗ್ಗೆ ಹೇಳಿದ್ದಾರೆ. ಕರುಣಾನಿಧಿಯವರ ಬಗ್ಗೆ ಇವರು ಏನು ಹೇಳಿದ್ದರು, ಈಗ ಅಸೆಂಬ್ಲಿಯಲ್ಲಿ ಏನು ನಡೆದಿದೆ ಎಂಬುದು ಎಲ್ಲರಿಗೂ ಗೊತ್ತಾಗಿದೆ. ಯಾರ ಬಗ್ಗೆ ಇವರು ಇಷ್ಟು ಪ್ರಶಂಸೆ ಮಾಡಿದ್ದಾರೋ ಅವರ ಪರಿಸ್ಥಿತಿ ಏನಾಗಿದೆಯೆಂದು ಇವತ್ತು ಪತ್ರಿಕೆಯಲ್ಲಿ ಬಂದಿರುವುದನ್ನು ತಾವು ನೋಡಿದ್ದೀರಿ, ಎಷ್ಟರ ಮಟ್ಟಿಗೆ ಪ್ರಜಾಪ್ರಭುತ್ವದ ತತ್ವವನ್ನು ಇವರು ನಡೆಸಿಕೊಂಡು ಬಂದಿದ್ದಾರೆಂದು ಗೊತ್ತಾಗುತ್ತದೆ. ಮತ್ತು ಯಾವರೀತಿ ವಿರೋಧಪಕ್ಷದವರ ಮೇಲೆ ಹೆರಾಸ್‌ಮೆಂಟ್ ಮಾಡುತ್ತಿದ್ದಾರೆಂಬುದು ಸಹ ತಮ್ಮ ಗಮನಕ್ಕೆ ಬಂದಿದೆ. ಅದರ ಬಗ್ಗೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಪಶ್ಚಿಮ ಬಂಗಾಳದಲ್ಲಿ ನಿಮ್ಮ ಪಕ್ಷದವರು ಏನು ಮಾಡಿದ್ದಾರೆಂಬುದು ಗೊತ್ತಿಲ್ಲವೇ?

ಶ್ರೀ ವೇದಾಂತ ಹೆಮ್ಮಿಗೆ.—ಮಾರ್ಷಲ್ ಅವರ ಹ್ಯಾಟ್‌ನ್ನು ಇದೇ ಜಾಗದಲ್ಲಿ ಕಿತ್ತು ಹಾಕಿದ್ದೀರಿ. ತಮಗೆ ಗೊತ್ತಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾಜಿ ಮುಖ್ಯ ಮಂತ್ರಿಗಳು ಬಂದರೆ, ಆ ಕಡೆಯ ನಾಲ್ಕಾರು ಜನರು ಎದ್ದು ಒಮ್ಮೆಲೆ ಮಾತನಾಡಲು ಪ್ರಾರಂಭ ಮಾಡುತ್ತಾರೆ. ಇಷ್ಟು ಹೊತ್ತು ಮಾನ್ಯ ರಾಚಯ್ಯನವರು ಸುಮ್ಮನೆ ಕುಳಿತಿದ್ದರು. ಆಗ ಯಾರೂ ಮಾತನಾಡಲು ಹೋಗಲಿಲ್ಲ. ಈಗ ಇವರೆಲ್ಲ ಎದ್ದು ಮಾತನಾಡಲು ಶುರು ಮಾಡಿದ್ದಾರೆ.

೧೧-೦೦ ಎ. ಎಂ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅವರ ಕಡೆಯಲ್ಲಿ ಪೂರ್ಣ ಚಂದ್ರೋದಯವಾಗಿದೆ.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಅವರು ಬಂದಿರುವುದರಿಂದ ನಿಮಗೆ ಭಯ ವಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮಲ್ಲಿ ಬದಲಾವಣೆಯಾಗುತ್ತದೆ, ನಮ್ಮಲ್ಲಿ ಅಲ್ಲ. ಅವರು ಬಂದರೂ ಕೂಡ ನಾವು ಫೇಸ್ ಮಾಡುತ್ತೇವೆ, ಬೊಮ್ಮಾಯಿಯವರನ್ನೂ ಫೇಸ್ ಮಾಡುತ್ತೇವೆ, ನಾಳೆ ರಾಚಯ್ಯನವರು ಬಂದರೂ ಫೇಸ್ ಮಾಡುತ್ತೇವೆ. ಅದು ನಮ್ಮ ಕೆಲಸ ಅದೆ.

ಶ್ರೀ ವೇದಾಂತ ಹೆಮ್ಮಿಗೆ.—ಅವರ ನೆರಳು ಅಂದರೆ ನಿಮಗೆ ಭಯ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಶ್ರೀ ರಾಮಕೃಷ್ಣ ಹೆಗಡೆಯವರು ಬಂದರೆ ನೀವುಗಳು ಓವರ್ ಎಂತೂಜಿಯಾಸ್ಟಿಕ್ ಆಗುತ್ತೀರಿ ಏಕೆಂದರೆ ನಾಳೆ ಇನ್ನೊಂದು ರೀ ಷೆಫಲ್ ಆದರೆ ಅದರಲ್ಲಿ ಏನಾದರೂ ಸ್ಥಾನ ಕೊಡಲು ರೆಕಮೆಂಡೇಷನ್ ಮಾಡಲಿ ಎಂದು.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಡೆಲ್ಲಿಯಿಂದ ನಿಮಗೆನಾದರೂ ಚಾನ್ಸ್ ಇದೆಯೇ? ಅದನ್ನು ಕೊಡಲೆಂದು ನೀವು ಈ ರೀತಿ ಮಾತನಾಡುತ್ತಿದ್ದೀರಾ?

SRI MALLIKARJUNA M. KHARGE.—He has already noted. ತಾವು ಯಾರು ಯಾರು ಎದ್ದು ನಿಂತು ಮಾತನಾಡಿದ್ದೀರಿ, ಅದನ್ನೆಲ್ಲಾ ಅವರು ನೋಟ್ ಮಾಡಿಕೊಂಡಿದ್ದಾರೆ, ಅವರು ಬೊಮ್ಮಾಯಿಯವರಿಗೆ ಹೇಳುತ್ತಾರೆ. ನಿಮ್ಮ ಬಗ್ಗೆ ಅವರು ಚಿಂತನೆ ಮಾಡಿದ್ದಾರೆ, ಪರವಾಗಿಲ್ಲ. ಹಿಂದಿನ ಮುಖ್ಯ ಮಂತ್ರಿಗಳು ಪಶ್ಚಿಮ ಬಂಗಾಳದಲ್ಲಿ ಏನಾಯಿತೆಂದು ಹೇಳಿದರು. ಅದರ ಬಗ್ಗೆ ನಾನು ಹೇಳುತ್ತೇನೆ. ನೀವು ಏನು ಹೇಳುತ್ತೀರೆಂದರೆ, ಕಾಂಗ್ರೆಯೇತರ, ವಿರೋಧ ಪಕ್ಷಗಳ ಸರ್ಕಾರ ಎಲ್ಲಿ

ಇದೆ ಅಲ್ಲಿ ಬಹಳ ಗಂಭೀರವಿದೆ, ಡೆಮಾಕ್ರೆಟಿಕ್ ತತ್ವಗಳ ಮೇಲೆ ನಡೆಯುತ್ತದೆ ಅಲ್ಲಿ ವ್ಯಾಲ್ಯೂ ಬೇಸ್ಡ್ ಪಾಲಿಟಿಕ್ಸ್ ಇದೆಯೆಂದು ಹೇಳುತ್ತೀರಿ, ಈಗ ಏನು ನಡೆದಿದೆ ಎಂಬುದನ್ನು ನೀವೇ ನೋಡಿ. ಇವತ್ತು ಜನತಾ ದಳದ ಬಗ್ಗೆ ಇಲ್ಲಿ ಮೆನ್ಷನ್ ಮಾಡಿದ್ದೀರಿ, ಅದರ ವೆರಿ ಎಗ್ಸಿಸ್ಟೆನ್ಸ್ ಅನ್ನು ನಾವು ಕೊಶ್ಚನ್ ಮಾಡಿದ್ದೇವೆ. ಇವತ್ತು ಎಲೆಕ್ಷನ್ ಕಮಿಷನ್ ಅವರು ಏನು ಹೇಳಿದ್ದಾರೆ, ಶ್ರೀಮಾನ್ ಪೆರಿ ಶಾಸ್ತ್ರಿಯವರು ಏನು ಹೇಳಿದ್ದಾರೆ, ಅವರ ಅಡ್ವೋಕೇಟ್ ಗೋಯಲ್ ಏನು ಹೇಳಿದ್ದಾರೆ, ಆ ಒಂದು ವಾದವನ್ನು ನಾವು ನೋಡುವುದಾದರೆ ನಮಗೆ ಒಂದು ವಿಷಯ ಸ್ಪಷ್ಟವಾಗಿ ಗೊತ್ತಾಗುತ್ತದೆ. ನಾನು ಪತ್ರವನ್ನು ಬರೆದಿದ್ದೆ. ಅದಕ್ಕೆ ಇಲ್ಲಿಯವರೆಗೆ ಉತ್ತರ ಕೊಟ್ಟಿಲ್ಲ. ಜನತಾದಳ ಇನ್ನು ಎಕ್ಸಿಸ್ಟೆನ್ಸ್‌ಗೆ ಬಂದಿಲ್ಲವೆಂದು ತಮ್ಮ ಗೋಯಲ್ ಅವರೂ ಒಪ್ಪಿಕೊಂಡಿದ್ದಾರೆ. ಇನ್ನೂ ಇದರ ಸಂವಿಧಾನ ತಯಾರಾಗಿಲ್ಲ ಹಾಗೂ ಅವರು ಏನು ಹೇಳಿದ್ದಾರೆಂದರೆ, ಹಳೆಯ ಪಕ್ಷ ಏನಿದೆ ಆ ಪಕ್ಷಕ್ಕೆ ಮಾತ್ರ ರೆಕಗ್ನಿಷನ್ ಕೊಟ್ಟಿದ್ದೇವೆ, ಸಿಂಬಲ್ ಕೊಟ್ಟಿದ್ದೇವೆ ಮತ್ತು ಹೊಸ ಪಕ್ಷ ಇನ್ನೂ ಉದಯವಾಗಿಲ್ಲವೆಂದು ಈಗಾಗಲೇ ಎಲೆಕ್ಷನ್ ಕಮಿಷನ್ ಅವರು ಹೇಳಿದ್ದಾರೆ. ವಾದವನ್ನು ಮಂಡಿಸಿದವರೂ ಸಹ ಅದೇ ರೀತಿಯಲ್ಲಿ ಹೇಳಿದ್ದಾರೆ. ಆದ್ದರಿಂದ ಇಲ್ಲಿ ಏತಕ್ಕೆ ಅದನ್ನು ಮೆನ್ಷನ್ ಮಾಡಿದ್ದೀರಿ. ಇದು ಹೇಗೆ ಬಂದಿತು. ಬಜೆಟ್‌ನಲ್ಲಿ ಮೆನ್ಷನ್ ಮಾಡುವುದಕ್ಕೆ ಆಗಲಿಲ್ಲ. ಇಲ್ಲಿ "Emergence of Janata Dal is a major step towards a viable national alternative to which the people can turn for the fulfilment of their aspirations" ಎಂದು ಹೇಳಿದ್ದಾರೆ. ಅದರ ಗತಿ ಏನಾಗಿದೆ. ವಯಬಲ್ ಆಲ್ಟರ್‌ನೇಟೀವ್, ಜನತಾಪಾರ್ಟಿ ಹೊಸದಾಗಿ ನ್ಯಾಷನಲ್ ಪಾರ್ಟಿಯಾಗುವುದಕ್ಕೆ ಸಾಧ್ಯವಿಲ್ಲ. ಇವತ್ತು ಅದನ್ನು ಬೆಳೆಸಿ ಎಂದು ಹೇಳುತ್ತಿಲ್ಲ. ಅದಕ್ಕೆ ಏನು ಹೇಳಿದರೂ ಕೂಡ ಈ ಪಕ್ಷವನ್ನು ನ್ಯಾಷನಲ್ ಆಲ್ಟರ್‌ನೇಟೀವ್ ಪಕ್ಷವೆಂದು ಹೇಳಲಿಕ್ಕೆ ಸಾಧ್ಯವಿಲ್ಲ. ಈಗಾಗಲೇ ಇದರಲ್ಲಿ ಅನೇಕ ಒಡಕುಗಳು ಉಂಟಾಗಿದೆ. ಇವತ್ತು ಒಬ್ಬರು ಒಂದು ರೀತಿ ಸ್ಟೇಟ್‌ಮೆಂಟ್ ಕೊಟ್ಟರೆ ಇನ್ನೊಬ್ಬರು ಇನ್ನೊಂದು ರೀತಿ ಸ್ಟೇಟ್‌ಮೆಂಟ್ ಕೊಡುತ್ತಾರೆ. ಅದರ ಬಗ್ಗೆ ಡೀಟೈಲಾಗಿ ಹೇಳಬೇಕಾದ ಅವಶ್ಯಕತೆ ಇಲ್ಲ. ಎರಡನೆಯದಾಗಿ ಸರ್ಕಾರಿಯ ಕಮಿಷನ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಹೋದಸಲ ಮಾನ್ಯ ರಾಮಕೃಷ್ಣ ಹೆಗಡೆಯವರೂ ಕೂಡ ಅದನ್ನು ಹೇಳಿದ್ದರು. ಆದರೆ ಇದರ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಇವರು ರಾಜ್ಯವನ್ನು ಎಷ್ಟರಮಟ್ಟಿಗೆ ಅಭಿವೃದ್ಧಿಯ ಕಡೆಗೆ ತೆಗೆದುಕೊಂಡು ಹೋಗಿದ್ದಾರೆನ್ನುವುದನ್ನು ಹೇಳುತ್ತೇನೆ. ಏಕೆಂದರೆ ಈ ಸರ್ಕಾರ ಬಂದಮೇಲೆ ಅದು ಬಹಳ ಮುಖ್ಯ. ಇವತ್ತು ಯಾವುದೇ ಒಂದು ಪಕ್ಷ ಅಧಿಕಾರಕ್ಕೆ ಬರುವ ಮುಂಚೆ ಅವರದೇ ಆದ ಒಂದು ಎಲೆಕ್ಷನ್ ಮ್ಯಾನಿಫೆಸ್ಟೋ ಇರುತ್ತದೆ, ಅದರಲ್ಲಿ ಪ್ರಾಮಿಸ್‌ಗಳು ಇರುತ್ತದೆ. ಆ ಎಲೆಕ್ಷನ್ ಮ್ಯಾನಿಫೆಸ್ಟೋವನ್ನು ಜನರಿಗೆ ಕೊಟ್ಟು ಅದರ ಬಗ್ಗೆ ತಿಳುವಳಿಕೆ ಹೇಳಿ, ಪ್ರಚಾರ ಮಾಡಿ ಅಧಿಕಾರಕ್ಕೆ ಬಂದಮೇಲೆ ಪ್ರಾಮಾಣಿಕವಾಗಿ ಅದನ್ನು ಆಚರಣೆಗೆ ತರಬೇಕು. ನುಡಿದಂತೆ ನಡೆಯುತ್ತೇವೆ ಎನ್ನುವಂಥ ನೀತಿಯ ಆಧಾರದ ಮೇಲೆ ನಾವು ಚುನಾವಣೆಗೆ ಹೋಗುತ್ತೇವೆ. ಆದರೆ ಅವತ್ತು ಇವರು ಹೇಳಿರುವುದಕ್ಕೂ ನಂತರ ಅವುಗಳನ್ನು ಕಾರ್ಯಗತ ಮಾಡಿರುವುದಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಇವರು ಹೇಳಿರುವ ಅನೇಕ ವಿಷಯಗಳಲ್ಲಿ ಒಂದು ಉದಾಹರಣೆಯನ್ನು ಹೇಳುವುದಾದರೆ ಷೆಡ್ಯೂಲ್-- ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಜನಾಂಗದವರ ಬಗ್ಗೆ ಯಾರು ಫಸ್ಟ್ ಕ್ಲಾಸ್‌ನಲ್ಲಿ ಪಾಸ್ ಮಾಡುತ್ತಾರೆಯೋ ಅವರಿಗೆ ತಕ್ಷಣ ಕ್ಲಾಸ್-I, ಕ್ಲಾಸ್-II ಆಫೀಸರ್ ಕೆಲಸವನ್ನು ಕೊಡುತ್ತೇವೆಂದು ಹೇಳಿದ್ದರು. ಮತ್ತೆ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುತ್ತೇವೆಂದು ಹೇಳಿದ್ದರು. ಮಾನ್ಯ ಅಧ್ಯಕ್ಷರೇ, ನೀವೇ ಹೇಳಿ, ನಿಮ್ಮ ಮನಸ್ಸಿಗೆ ನೀವೇ ಪ್ರಶ್ನೆಯನ್ನು ಹಾಕಿಕೊಳ್ಳಿ, ಆಗ ನಿಮಗೆ ತಿಳಿಯುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಯಾವಾಗಲೂ ನ್ಯಾಷನಲ್ ಹೈವೇನಲ್ಲಿಯೇ ಇದ್ದಾರೆಂದು. ನಮ್ಮ ರೋಡ್‌ಗಳು ಯಾವರೀತಿ ಇವೆ ಎನ್ನುವುದನ್ನು ಅವರು ನೋಡಬೇಕು. ಬೆಂಗಳೂರಿನಿಂದ ಗುಲ್ಬರ್ಗಾಕ್ಕೆ ಹೋಗಬೇಕಾದರೆ ಕಾರು ಐದು ಸಲ ಕೆಟ್ಟಿರುತ್ತದೆ. ಐದು ಸಲ ರಿಪೇರಿ ಮಾಡಿಸಿಕೊಂಡು ಹೋಗಬೇಕಾದ ಪರಿಸ್ಥಿತಿ ಇದೆ. ನಿಮಗೆ ಮಾತ್ರ ನ್ಯಾಷನಲ್ ಹೈವೇ ಇದೆ, ಹೆಲಿಕ್ಯಾಪ್ಟರ್ ಇದೆ, ಒಂದು ತಾಸಿನಲ್ಲಿ ನೀವು ಹೋಗಿಬರಬಹುದು. ಇವತ್ತಿಗೂ ಕೂಡ ಈ ಕಡೆ ಲಕ್ಷ್ಯವನ್ನು ತಾವು ಕೊಟ್ಟಿಲ್ಲ. ಇದೇ ನ್ಯಾಷನಲ್ ಹೈವೇನಲ್ಲಿ ಹೋದರೆ ನೂರಾರು ಹೋಟೆಲ್‌ಗಳು, ಅಂಗಡಿಗಳು ಇರುವುದನ್ನು ನಾವು ನೋಡುತ್ತೇವೆ. ಅಲ್ಲಿ ನೋಡಬೇಕು, ಸರ್ಕಾರದ ಬಗ್ಗೆ ಏನು ಅಭಿಪ್ರಾಯವಿದೆ ಎಂದು. ಸರ್ಕಾರ ಯಾವರೀತಿ ನಡೆದುಕೊಳ್ಳುತ್ತಿದೆ ಎಂಬುದನ್ನು ಅಲ್ಲಿ ಕೇಳಬೇಕು. ಕರಪ್ಷನ್ ತಪ್ಪಿದೆಯೋ ಎನ್ನುವುದನ್ನು ಕೇಳಿದರೆ ಅವರು ಹೇಳುತ್ತಾರೆ, ನಾವು ಹೇಳುವುದು ಬೇಡ, ಅಲ್ಲಿ ಕರಪ್ಷನ್ ಮತ್ತಷ್ಟು ಹೆಚ್ಚಾಗಿದೆ ಎಂದು ಹೇಳುತ್ತಾರಲ್ಲದೆ ಇಂಥ ಒಂದು ಹೊಲಸು ಸರ್ಕಾರವನ್ನು ಎಲ್ಲೂ ನೋಡಿಲ್ಲ ಎನ್ನುವ ಮಾತನ್ನು ಹೇಳುತ್ತಾರೆ. ಹಿಂದೆ ಯಾವ ಸರ್ಕಾರವೂ ಇಷ್ಟೊಂದು ಹದಗೆಟ್ಟಿರಲಿಲ್ಲ ಎನ್ನುವ ಮಾತನ್ನು ಹೇಳಿ ಅವರು ಸ್ಪಷ್ಟವಾಗಿ ಉತ್ತರವನ್ನು

ಕೊಡುತ್ತಾರೆ. ಇನ್ನೊಂದು ಪಿಕ್ಚರ್ ಆಫ್ ಕರ್ನಾಟಕ ಎಂಬ departmenal actuals on various programme ನ ಪುಸ್ತಕ ಇದೆ. ಅದು ಬಂದಿಲ್ಲ. ಅದನ್ನು ನಿಮ್ಮ ಬಜೆಟ್‌ನಲ್ಲಿ ಎಲ್ಲೂ ತೋರಿಸಿಲ್ಲ. ಎಜ್ಯುಕೇಷನ್ ಮೇಲಾಗಲಿ, ಪವರ್ ಮೇಲಾಗಲಿ, ಅನೇಕ ಸಮಸ್ಯೆಗಳ ಮೇಲೆ ಹೇಳುವುದಕ್ಕೆ ಏನೂ ಮಾಹಿತಿ ಸಿಗುವುದಿಲ್ಲ. ನೀವು ಎಷ್ಟು ಖರ್ಚು ಮಾಡಬೇಕೆಂದಿದ್ದೀರಿ, ಎಷ್ಟು ಹಣ ಖರ್ಚು ಮಾಡಿದ್ದೀರಿ, ಈ ವರ್ಷ ಎಷ್ಟು ಪ್ರಾವಿಷನ್ ಮಾಡಿದ್ದೀರಿ ಎನ್ನುವುದರ ಬಗ್ಗೆ ವಿವರಗಳು ಸಿಕ್ಕದೇಹೋದರೆ ನಾವು ಕೇಳುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ನೀವು ಎಷ್ಟು ಹೇಳಿದರೂ ಕೂಡ ಸಮರ್ಥನೆಯಾಗುವುದಿಲ್ಲ. 'ಪಿಕ್ಚರ್ ಆಫ್ ಕರ್ನಾಟಕ' ಡಾಕ್ಯುಮೆಂಟ್ ಇದ್ದರೆ, ನೋಡಿದ ತಕ್ಷಣ ಗೊತ್ತಾಗುತ್ತದೆ. ನಿಮ್ಮ ಯೋಗ್ಯತೆ ಎಷ್ಟು, ಸರ್ಕಾರದ ಯೋಗ್ಯತೆ ಎಷ್ಟಿದೆ, ಎಷ್ಟರಮಟ್ಟಿಗೆ ಕೆಲಸ ಮಾಡುತ್ತದೆನ್ನುವುದು ಗೊತ್ತಾಗುತ್ತದೆ. ಆ ಡಾಕ್ಯುಮೆಂಟ್ ಇವತ್ತಿನ ದಿವಸ ಸಪ್ಲೈ ಆಗಿಲ್ಲ. ಏತಕ್ಕೆ ಸಪ್ಲೈ ಆಗಿಲ್ಲವೆಂದು ಗೊತ್ತಿಲ್ಲ,

ಶ್ರೀ ಎಸ್. ಆರ್. ಬೊಮ್ಮಾಯಿ.—ಇಲಾಖೆಯ ಬೇಡಿಕೆಗಳ ಮೇಲೆ ಚರ್ಚೆ ಮಾಡುವಾಗ ಅದನ್ನೆಲ್ಲಾ ಕೊಡಲಾಗುವುದು.

ಅಧ್ಯಕ್ಷರು.—ಆಗ ಕೊಡುತ್ತಾರೆ, ಮಾರ್ಚ್ ೩೧ರೊಳಗೆ ಆಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮೇ ತಿಂಗಳಿನಲ್ಲಿ ಅಧಿವೇಶನ ಕುಳಿತಾಗ ಅದೆಲ್ಲಾ ಕೊಡುತ್ತೇವೆ.

ಅಧ್ಯಕ್ಷರು.—ಈಗ ಸಿಗುವುದಿಲ್ಲ. ೧೯೮೮-೮೯ರದ್ದನ್ನೇ ತೆಗೆದುಕೊಂಡು ಹೇಳಿ. ಮುಖ್ಯ ಮಂತ್ರಿಗಳು ಹೇಳಿದ ಹಾಗೆ ಈ ವರ್ಷದ್ದನ್ನು ಮೇ ತಿಂಗಳಿನಲ್ಲಿ ಕೊಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೧೯೮೯-೯೦ರ ಮಾಹಿತಿಯೂ ಕೂಡ ಇದರ ಜೊತೆಯಲ್ಲಿ ಬರಬೇಕು. ಹಿಂದೆ ಎಲ್ಲ ಜೊತೆಯಲ್ಲೇ ಕೊಡುತ್ತಿದ್ದರು. ಈಗ ಕೊಡುವುದಕ್ಕೆ ತಯಾರಾಗಿಲ್ಲವೆಂದು ಹೇಳಿ, ನಾನು ಒಪ್ಪಿಕೊಳ್ಳುತ್ತೇನೆ, ಮುಂದೆ ಕೊಡುತ್ತೇವೆಂದರೆ ಪರ್‌ಫಾರ್ಮೆನ್ಸ್ ಬಡ್ಜೆಟ್ ಮತ್ತು ಇಲಾಖಾ ಬೇಡಿಕೆ ಮೇಲೆ ಚರ್ಚೆ ಬಂದಾಗ ಕೊಡುತ್ತಾರೆ. ಅದು ಸರಿಯಲ್ಲ. ಈ ಆಯವ್ಯಯದ ಜೊತೆಯಲ್ಲೇ ಅದನ್ನೂ ಸಪ್ಲೈ ಮಾಡಬೇಕಾಗಿತ್ತು. ಯಾವ ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಖರ್ಚು ಮಾಡಿದ್ದಾರೆ, ಎಷ್ಟೆಷ್ಟು ಉಳಿತಾಯ ಮಾಡಿದ್ದಾರೆ. ಇವರ ಟಾರ್ಗೆಟ್ ಎಷ್ಟಿತ್ತು, ಅದರಲ್ಲಿ ಎಷ್ಟು ಆ್ಯಕ್ಚುಯಲ್ ಅಚೀವ್‌ಮೆಂಟ್ ಆಗಿದೆ. ಅದನ್ನೆಲ್ಲಾ ತಾವು ತರಿಸಿಕೊಡಬೇಕಾಗಿತ್ತು. ಆದರೆ ಅದು ಈಗ ನಮ್ಮ ಮುಂದೆ ಇಲ್ಲ. ಅದಕ್ಕಾಗಿ ನಾನು ಹೇಳುತ್ತೇನೆ, ಯಾವ ಫೀಲ್ಡ್‌ನಲ್ಲಿ ಹೋದರೂ ಇವರು ಇವತ್ತಿನ ದಿವಸ ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯವಾಗಿಲ್ಲ, ಕರಪ್ಷನ್ ತೆಗೆಯುವುದಕ್ಕೆ ಆಗಿಲ್ಲ. ವಾಲ್ಯು ಬೇಸ್ಡ್ ಪಾಲಿಟಿಕ್ಸ್ ಮಾತ್ರ ಆಗಿದೆ. ಇವರು ಅನೇಕ ಕೆಲಸಗಳನ್ನು ಮಾಡಿದ್ದಾರೆ. ಇವತ್ತು ಬೇರೆ ಹತ್ತಾರು ಹಗರಣಗಳನ್ನು ತೆಗೆದುಕೊಂಡರೆ ವ್ಯಾಲ್ಯು ಬೇಸ್ಡ್ ಪಾಲಿಟಿಕ್ಸ್ ಮುಗಿದಿದೆ. ಸುಮ್ಮನೆ ಇವರು ಹೇಳುವುದು, ವಾಸ್ತವವಾಗಿ ಮಾಡುವುದು ಮಾತ್ರ ಬೇರೆ. ಹೀಗೆ ಜನರಿಗೆ ಮೋಸ ಮಾಡಿ ಇವತ್ತಿನ ದಿವಸ ಇವರು ರಾಜ್ಯವನ್ನು ಆಳುತ್ತಿದ್ದಾರೆ. ಮತ್ತು ಯಾವ ಪ್ರಗತಿಯನ್ನು ಸಾಧಿಸಬೇಕೆಂದು ಹೇಳಿದ್ದರೊ ಅದನ್ನು ಸಾಧಿಸುವುದಕ್ಕೆ ಆಗಿಲ್ಲ ಇವರ ಟ್ಯಾಕ್ಸ್ ಕಲೆಕ್ಷನ್ ಬಗ್ಗೆ ಹೇಳುವುದಾದರೆ, ಆಡಿಟ್ ರಿಪೋರ್ಟ್‌ನಲ್ಲಿ ೧೯೮೬-೮೭ರ ರೆವಿನ್ಯೂ ರಿಸೀಟ್ಸ್ ಅನ್ನು ನೋಡಿದರೆ ಅದರಲ್ಲಿ, at the end of March, 87 the amount uncollected revenuರೆ in respect of major sources aggregated is Rs. 257·83 crores. ಸೇಲ್ಸ್ ಟ್ಯಾಕ್ಸ್‌ನಲ್ಲಿ ೧೫೪.೫೨ ಕೋಟಿ ರೂಪಾಯಿ, ಸ್ಟೇಟ್ ಎಕ್ಸೈಜ್ ಡ್ಯೂಟಿಯಲ್ಲಿ ೬೭.೧೦ ಕೋಟಿ ರೂಪಾಯಿ, ಫಾರೆಸ್ಟ್‌ನಲ್ಲಿ ೨೩.೪೨ ಕೋಟಿ ರೂಪಾಯಿ, ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್‌ನಲ್ಲಿ ೯.೧೩ ಕೋಟಿ ರೂಪಾಯಿಗಳ ಅಗ್ರಿಕಲ್ಚರ್‌ನಲ್ಲಿ ೩.೬ ಕೋಟಿ ರೂಪಾಯಿಗಳು ಬಾಕಿ ಬರಬೇಕು ಎಂದು ಇದೆ. ಇದನ್ನು ಆಡಿಟ್ ರಿಪೋರ್ಟಿನ ರೆವಿನ್ಯೂ ರಿಸೀಟ್ಸ್‌ನಲ್ಲಿ ಇಂಡಿಕೇಟ್ ಮಾಡಿದ್ದಾರೆ. ಕಂಟ್ರೋಲರ್ ಆಫ್ ಆಡಿಟರ್ ಜನರಲ್ ಆಫ್ ಇಂಡಿಯಾ ಅವರು ಇದನ್ನು ಪಾಯಿಂಟ್ ಔಟ್ ಮಾಡಿದ್ದಾರೆ. ಸುಮಾರು ಇಷ್ಟು ಬಾಕಿಯನ್ನು ಇಟ್ಟುಕೊಂಡು ಕಲೆಕ್ಟ್ ಮಾಡದೆ ಇವರು ಕುಳಿತಿದ್ದಾರೆ. ಸ್ಟೇಟ್ ಎಕ್ಸೈಸ್‌ನಲ್ಲಿ ಯಾರಿರುತ್ತಾರೆ ? ಯಾರು ಬಡವರಿರುತ್ತಾರೆ ಅವರ ಮೇಲೆ ಟ್ಯಾಕ್ಸ್ ಹಾಕತಕ್ಕದ್ದು. ಸೇಲ್ಸ್ ಟ್ಯಾಕ್ಸ್‌ನಲ್ಲಿ ಬಡವರಿದ್ದಾರೆಯೇ ? ಅದು ೧೫೪ ಕೋಟಿ ರೂಪಾಯಿ. ಹೀಗೆ ಸುಮಾರು ೨೫೭ ಕೋಟಿ ರೂಪಾಯಿಗಳ ಬಾಕಿಯನ್ನು ವಸೂಲ್ಮಾಡತಕ್ಕ ಶಕ್ತಿ ಸರ್ಕಾರದಲ್ಲಿ ಇಲ್ಲ. ಇನ್ನೊಂದು ಕಡೆ ನಮ್ಮ ಹತ್ತಿರ ಹಣ ಇಲ್ಲವೆಂದು ಒಳ್ಳೆಯ ಕೆಲಸಕ್ಕೆ, ಅಭಿವೃದ್ಧಿ ಕಾರ್ಯಕ್ರಮಗಳಿಗೆ, ಬಡವರಿಗೆ ಖರ್ಚು ಮಾಡುವುದಕ್ಕೆ ಇವರ ಹತ್ತಿರ ಹಣ ಇಲ್ಲ. ಬರತಕ್ಕ ತೆರಿಗೆ

ಯನ್ನು ವಸೂಲ್ಮಾಡತಕ್ಕ ಶಕ್ತಿ ಇಲ್ಲವೇದರೆ ಇದು ಎಂತಹ ಸರ್ಕಾರ ? ಇವರು ಕೊಟ್ಟಂತಹ ಫಿಗರ್ಸ್ ಏನು ಇದೆ, ಅಷ್ಟನ್ನು ಮಾತ್ರ ಇವರು ವಸೂಲ್ಮಾಡಿದ್ದಾರೆ. ಇದರ ಜೊತೆಯಲ್ಲಿ ಇನ್ನೊಂದು ಏನಾಗಿದೆ ಎಂದರೆ ಟ್ಯಾಕ್ಸ್ Short fall ಆಗಿದೆ. ಅಂದರೆ ಕೆಲವು ಟ್ಯಾಕ್ಸ್‌ಗಳನ್ನು ೫ ಪರ್ಸೆಂಟ್ ವಸೂಲ್ಮಾಡಬೇಕಾಗಿದ್ದರೆ ಅಂಥ ಕಡೆ ೩ ಪರ್ಸೆಂಟ್ ಮಾತ್ರ ವಸೂಲ್ಮಾಡಿದ್ದಾರೆ. ಎಲ್ಲಿ ೧೦ ಪರ್ಸೆಂಟ್ ವಸೂಲ್ಮಾಡಬೇಕು ಅಂಥ ಕಡೆ ೭ ಪರ್ಸೆಂಟ್ ವಸೂಲ್ಮಾಡಿದ್ದಾರೆ. ಇಂಥವನ್ನೆಲ್ಲ ಆಡಿಟರ್ ಪಾಯಿಂಟ್ ಔಟ್ ಮಾಡಿ ತೋರಿಸಿದ್ದಾರೆ. ಸೇಲ್ಸ್ ಟ್ಯಾಕ್ಸ್‌ನಲ್ಲಿ ೬.೪೬ ಕೋಟಿ ರೂಪಾಯಿ, ಎಕ್ಸೈಜ್ ಡ್ಯೂಟಿಯಲ್ಲಿ ೨.೬ ಕೋಟಿ ರೂಪಾಯಿ, ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್‌ನಲ್ಲಿ ೧.೩೪ ಕೋಟಿ ರೂಪಾಯಿ, ಸ್ಟ್ಯಾಂಪ್ ಮತ್ತು ರಿಜಿಸ್ಟ್ರೇಷನ್‌ನಲ್ಲಿ ೬೪ ಲಕ್ಷ ರೂಪಾಯಿ. ಈ ರೀತಿ ಆಕ್ಚುಯಲ್ ಕಲೆಕ್ಷನ್ಸ್ ಇನ್ನೂ ಬರಬೇಕು. ಏಕೆಂದರೆ ರೂಲ್ಸ್ ಅನ್ನು ಇಂಪೋಸ್ ಮಾಡುವಾಗ ಸರಿಯಾಗಿ ಇಂಟರ್‌ಪ್ರಿಟ್ ಮಾಡದೆ ಮಾಡುವುದರಿಂದ ಹೀಗಾಗಿದೆ. ಸೇಲ್ಸ್ ಟ್ಯಾಕ್ಸ್ ಆ್ಯಕ್ಟನ್ನು ಇಂಪೋಸ್ ಮಾಡುವಾಗ ಇಂಟರ್‌ಪ್ರಿಟ್ ಮಾಡಿ ಕಲೆಕ್ಟ್ ಮಾಡುವಾಗ ಇಷ್ಟು ಷಾರ್ಟ್‌ಫಾಲಸ್ ಆಗಿ ಇಲಾಖೆಯವರು ಕಲೆಕ್ಟ್ ಮಾಡತಕ್ಕದ್ದು ಉಳಿದಿದೆ. ಅದು ಸುಮಾರು ನಾಲ್ಕು ಡಿಪಾರ್ಟ್‌ಮೆಂಟಿನಿಂದ ಬರತಕ್ಕ ಹಣ. ಅದೂ ಕೂಡ ೧೦ ಕೋಟಿ ರೂಪಾಯಿ ಮೇಲಿದೆ. ಮೊನ್ನೆ ನಾವು ಒಂದು ವಿಚಾರ ಹೇಳಿದಾಗ ಮಾನ್ಯ ಲಕ್ಷ್ಮೀನರಸಿಂಹಯ್ಯನವರಿಗೆ ಸ್ವಲ್ಪ ಸಂಕಟವಾಯಿತು. ಮಾನ್ಯ ಲಕ್ಕಪ್ಪನವರು ಪ್ರಶ್ನೆ ಎತ್ತಿದಾಗ ಒಂದು ವಿಚಾರ ಕೇಳಿದರು. ಭಾಗ್ಯ ಜ್ಯೋತಿ ಸ್ಕೀಂನಲ್ಲಿ ಒಂದೊಂದು ಮನೆಗೆ ೫, ೧೦, ೧೦೦, ೨೦೦ ರೂಪಾಯಿಗಳು ಡ್ಯೂ ಇದೆ ಎಂದು ಎಲೆಕ್ಟ್ರಿಸಿಟಿ ಡಿಸ್‌ಕನೆಕ್ಟ್ ಮಾಡಿ ಅವರ ಮನೆಗಳನ್ನು ಜಫ್ತಿ ಮಾಡಿಸಿದ್ದೀರಿ, ಆದರೆ ಇಲ್ಲಿ ಕೋಟಿಗಟ್ಟಲೆ ಹಣ ಏತಕ್ಕೆ ವಸೂಲು ಮಾಡುತ್ತಿಲ್ಲ ಎಂದು ಕೇಳಿದೆವು, ಇಲ್ಲಿ ಲಕ್ಷಾಂತರ ಜನರ ಬಾಕಿ ಸೇರಿದರೂ ಹಾರ್ಡ್‌ಲಿ ೨ ಕೋಟಿ ೩ ಕೋಟಿ ರೂಪಾಯಿ ಆಗಬಹುದು. ಎಲ್ಲಾ ಡ್ಯೂ ಸೇರಿದರೆ ಅದಕ್ಕಿಂತ ಹೆಚ್ಚಾಗುವುದಿಲ್ಲ. ಆದರೆ ಇಲ್ಲಿ ೨೬೭ ಕೋಟಿ ರೂಪಾಯಿ ವಸೂಲು ಮಾಡತಕ್ಕದ್ದು ಇದೆಯಲ್ಲ ಇದಕ್ಕೆ ಏನು ಹೇಳಬೇಕು ? ಇದಕ್ಕೆ ಯಾರು ಜವಾಬ್ದಾರರು ? ಏತಕ್ಕೆ ವಸೂಲು ಮಾಡುವುದಿಲ್ಲ ? ಆದರೆ ಬಡವರು ಇವತ್ತಿನ ದಿವಸ ಪಿ. ಎಲ್. ಡಿ. ಬ್ಯಾಂಕಿನಲ್ಲಿ ಲೋನ್ ತೆಗೆದುಕೊಂಡು ಬಾವಿ ತೆಗೆಸಿದರೆ ಆ ಸಾಲ ಕಟ್ಟದಿದ್ದರೆ ಅವರ ಮನೆ ಜಫ್ತಿ ಮಾಡುವುದು, ಹರಾಜು ಮಾಡುವುದು ಮಾಡುತ್ತೀರಲ್ಲ ಈ ಕಲಸವನ್ನು ಏತಕ್ಕೆ ಮಾಡಲಿಲ್ಲ ಎಂದು ಕೇಳುತ್ತೇನೆ. ನಿಮ್ಮ ಡಿಪಾರ್ಟ್‌ಮೆಂಟ್‌ನವರು ಅವರ ಜೊತೆಯಲ್ಲಿ ಶಾಮೀಲಾಗಿದ್ದಾರೋ ಏನು ? ವ್ಯಾಪಾರಸ್ಥರ ಬಗ್ಗೆ ಸಾಫ್ಟ್ ಕಾರ್ನರ್ ಇದೆಯೋ ಏನು ? ಇದನ್ನು ಸ್ಪಷ್ಟಪಡಿಸಬೇಕು. ಇದೂ ಅಲ್ಲದೆ ಕೇಂದ್ರ ಸರ್ಕಾರದವರು ಏನು ಹಣ ಕೊಟ್ಟಿದ್ದಾರೆ ಅಥವಾ ನೀವೇ ಖುದ್ದಾಗಿ ಏನು ಬಜೆಟ್ ಪ್ರಾವಿಷನ್ ಮಾಡಿದ್ದೀರೋ ಆ ಹಣವನ್ನು ಕೂಡ ಪೂರ್ತಿಯಾಗಿ ಖರ್ಚು ಮಾಡಿಲ್ಲ. ಉದಾಹರಣೆಗೆ ಸ್ಪೆಷಲ್ ಕಾಂಪೊನೆಂಟ್ ಪ್ಲಾನ್‌ನಲ್ಲಿ ಬಹುತೇಕ ಹಣ ಖರ್ಚು ಮಾಡಿಲ್ಲ. ಮಾನ್ಯ ಅಧ್ಯಕ್ಷರೇ, ನಾನು ತಮಗೆ ಅಭಿನಂದಿಸುತ್ತೇನೆ. ೧೮–೩–೧೯೮೯ರಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಒಂದು ಪತ್ರ ಬರೆದು ಅದರ ಪ್ರತಿಯನ್ನು ಎಲ್ಲಾ ಶಾಸಕರಿಗೂ ತಾವು ಕಳುಹಿಸಿದ್ದೀರಿ. ಅದರಲ್ಲಿ ತಾವೇ ಸ್ಪಷ್ಟವಾಗಿ ಹೇಳಿದ್ದೀರಿ. ಸುಮಾರು ೧೫,೭೭೧ ಲಕ್ಷ ರೂಪಾಯಿ ಹಣವನ್ನು ಸ್ಪೆಷಲ್ ಕಾಂಪೊನೆಂಟ್ ಸ್ಕೀಂನಲ್ಲಿ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿಗೆ ಅವರು ಇಟ್ಟಿದ್ದಾರೆ. ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ ವೆಲ್‌ಫೇರ್ ಸ್ಕೀಂಗಾಗಿ ಈ ಹಣ ಇಡಲಾಗಿದೆ. ಪ್ಲಾನ್ ಮತ್ತು ನಾನ್ ಪ್ಲಾನ್ ಸ್ಕೀಂನಲ್ಲಿ ಇಟ್ಟಿದ್ದಂಥ ೧೫೭ ಕೋಟಿ ರೂಪಾಯಿ ಹಣದಲ್ಲಿ ಖರ್ಚಾಗಿರುವುದು ಎಷ್ಟು ಎಂದರೆ ಕೇವಲ ೩೩ ಕೋಟಿ ೫೪ ಲಕ್ಷ ರೂಪಾಯಿಗಳು. ಅಂದರೆ ಇನ್ನೂ ೧೨೩ ಕೋಟಿ ರೂಪಾಯಿ ಖರ್ಚು ಮಾಡತಕ್ಕದ್ದು ಉಳಿದಿದೆ. ಮೂರು ತಿಂಗಳಲ್ಲಿ ಇಷ್ಟು ಹಣ ಖರ್ಚು ಮಾಡುವ ಸಾಧ್ಯತೆ ಇದೆಯೋ ? ಇದರ ಬಗ್ಗೆ ಒಂದು ವೈಟ್ ಪೇಪರ್ ಪಬ್ಲಿಷ್ ಮಾಡಬೇಕು. ಸ್ಪೆಷಲ್ ಕಾಂಪೋನೆಂಟ್ ಪ್ರೋಗ್ರಾಂನಲ್ಲಿ ಬಡವರಿಗಾಗಿ ಖರ್ಚು ಮಾಡತಕ್ಕ ಹಣ ಏನು ಇಟ್ಟಿದ್ದರು ಅದನ್ನು ಸರ್ಕಾರದವರು ಖರ್ಚು ಮಾಡದೇ ಏತಕ್ಕೆ ಬಿಟ್ಟರು ? ಇದರ ಬಗ್ಗೆ ಏತಕ್ಕೆ ರಿವ್ಯೂ ಮಾಡಲಿಲ್ಲ ? ಏನೋ ಒಂದು ಕೋಟಿ ೨ ಕೋಟಿ ರೂಪಾಯಿ ಲ್ಯಾಪ್ಸ್ ಆಗಿದೆ ಎಂದರೆ ಕಾರಣಾಂತರದಿಂದ ಆಗಿದೆ ಎಂದು ಹೇಳಬಹುದು. ಆದರೆ ೧೫೭ ಕೋಟಿಯಲ್ಲಿ ೩೩ ಕೋಟಿ ರೂಪಾಯಿ ಖರ್ಚು ಮಾಡಿ ಇನ್ನು ೧೨೪ ಕೋಟಿ ರೂಪಾಯಿ ಉಳಿದಿದೆ ಎಂದರೆ ಅದರಲ್ಲೂ ತಮ್ಮ ನಜರಿಗೆ ಬಂದು ತಾವು ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರ ಬರೆಯಬೇಕು ಎಂದರೆ ಸಂಬಂಧಪಟ್ಟ ಮಂತ್ರಿಗಳು ಏನು ಮಾಡುತ್ತಿದ್ದರು? ಮುಖ್ಯ ಮಂತ್ರಿಗಳು ಏತಕ್ಕೆ ರಿವ್ಯೂ ಮಾಡಲಿಲ್ಲ ಇದಕ್ಕೆ ಸರ್ಕಾರದವರು ಉತ್ತರ ಕೊಡಬೇಕು. ಮಾನ್ಯ ಅಧ್ಯಕ್ಷರು ಇದನ್ನು ಎಲ್ಲಾ ಸದಸ್ಯರ ಗಮನಕ್ಕೆ ತಂದಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಆದರೆ ಈ ಕೆಲಸವನ್ನು ಡಿಪಾರ್ಟ್‌ಮೆಂಟ್ ಜನರಾಗಲೀ ಇನ್‌ಚಾರ್ಜ್ ಮಂತ್ರಿಗಳಾಗಲೀ ಮುಖ್ಯ ಮಂತ್ರಿಗಳಾಗಲೀ ಏತಕ್ಕೆ ಮಾಡಲಿಲ್ಲ ? ಎಂದು ಕೇಳುತ್ತೇನೆ.

ಅವರಿಗೆ ಬಡವರ ಬಗ್ಗೆ ಕಳಕಳಿಯಿಲ್ಲವೆಂದು ನಾನು ಭಾವಿಸಬೇಕಾಗಿದೆ. ಒಂದು ಕಡೆ ಹಣವಿಲ್ಲವೆಂದು ಹೇಳುತ್ತೀರಿ, ಇನ್ನೊಂದು ಕಡೆ ಪ್ರಾವಿಜನ್ ಇಟ್ಟುಕೊಂಡು ಹಣ ಇಟ್ಟುಕೊಂಡು ಖರ್ಚು ಮಾಡದೇ ಇರತಕ್ಕ ರೀತಿಯಲ್ಲಿರಬೇಕಾದರೆ, ಅದಕ್ಕೆ ನಾನು ಹೇಳುತ್ತೇನೆ, ನೀವು ಸಂಪೂರ್ಣವಾಗಿ ಬಡವರಿಗೆ ಮೋಸ ಮಾಡುತ್ತಿದ್ದೀರಿ. ಬಜೆಟ್‌ನಲ್ಲಿ ತೋರಿಸುವುದು, ಅವರಿಗಾಗಿ ಖರ್ಚು ಮಾಡದೇ ಇರುವುದು, ಅದು ಇದರಿಂದ ಸ್ಪಷ್ಟವಾಗುತ್ತದೆ. ಅದು ಈ ಡಾಕ್ಯುಮೆಂಟ್‌ನಲ್ಲಿದೆ. ನಾನು ಯಾವುದೇ ಗಾಳಿ ಮಾತು ಹೇಳುತ್ತಿಲ್ಲ. ದಯವಿಟ್ಟು ಇದರ ಬಗ್ಗೆ ತಮ್ಮ ಉತ್ತರದಲ್ಲಿ ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ತಾವು ಬರೆದ ಪತ್ರ ನನ್ನ ಗಮನಕ್ಕೆ ಬಂದಿದೆ, ಅದರ ಬಗ್ಗೆ ವಿವರಗಳನ್ನು ಸಭೆಗೆ ಕೊಡುತ್ತೇನೆ. ನಾವು ಇಲ್ಲೇನು ವಿವರಗಳನ್ನು ಕೊಟ್ಟಿದ್ದೇವೆ ಅದಕ್ಕಿಂತ ಹೆಚ್ಚು ಖರ್ಚು ಮಾಡಿದ್ದೇವೆ. ಆ ವಿವರ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಕೊಟ್ಟಂತಹ ಪ್ರಶ್ನೆಗೆ ಉತ್ತರ ಇದರಲ್ಲೂ ಕೂಡ ಇದೆ. ಅದರಿಂದ ಏನಾಗುತ್ತದೆಂದರೆ, ಬಡವರಿಗಾಗಿ ಯೋಜನೆಯನ್ನು ಹಾಕುತ್ತೀರಿ, ಯಾವುದೇ ಕಾರ್ಯಕ್ರಮಗಳನ್ನು ಬಡವರಿಗಾಗಿ ಹಾಕುತ್ತೀರಿ, ಅದರಿಂದ ಸಂಪೂರ್ಣವಾಗಿ ಅವರಿಗೆ ಉಪಯೋಗವಾಗದಿದ್ದರೆ ಆ ಹಣದಿಂದ ಏನು ಪ್ರಯೋಜನ ? ಬಡವರ ಮಕ್ಕಳಿಗೆ ಸ್ಕಾಲರ್‌ಶಿಪ್ ಜಾಸ್ತಿಯಾದರೂ ಮಾಡಬೇಕು. ಬಡವರ ಮಕ್ಕಳಿಗೆ ೩೦೦ರೂಪಾಯಿ ಸ್ಕಾಲರ್‌ಶಿಪ್ ಕೊಡಿ ಅಂದರೆ ೨೫೦ರೂಪಾಯಿ ಮಾಡಿದ್ದೀರಿ. ಕೋಟಿ ಗಟ್ಟಲೆ ಲಾಸ್ ಆಗುವಾಗ you could have taken care of that ನೀವು ಅಡ್ಜಸ್ಟ್ ಮಾಡಬಹುದು. ಅನೇಕ ಕಡೆಗಳಲ್ಲಿ ಮಕ್ಕಳಿಗೆ ಹಾಸ್ಟಲ್ ಇಲ್ಲ. ಹಳ್ಳಿಗಳಲ್ಲಿ ಬ್ಯಾಕವರ್ಡ್ ಕ್ಲಾಸ್ ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ ಮಕ್ಕಳಿಗೆ ಹಾಸ್ಟಲ್‌ಗಳು ಏನು ನಡೆಯುತ್ತಿವೆ ಅವು ಪ್ರೈವೇಟ್ ಬಿಲ್ಡಿಂಗ್‌ಗಳಲ್ಲಿ ನಡೆಯುತ್ತಿವೆ ಕೆಲವು ಹಳ್ಳಿಗಳಲ್ಲಿ ಬ್ಯಾಕವರ್ಡ್ ಕ್ಲಾಸ್ ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ ಮಕ್ಕಳ ಹಾಸ್ಟಲ್‌ಗಳಿಗೆ ಬಿಲ್ಡಿಂಗ್‌ಗಳನ್ನು ಕೊಡುವುದಿಲ್ಲ. ಇಂತಹ ಕಾರ್ಯಗಳಿಗೆ ಹಣವನ್ನು ಡೈವರ್ಟ್ ಮಾಡಿ ಉಪಯೋಗ ಮಾಡಿದ್ದಾರೆಂದು ನಾವು ತಿಳಿದುಕೊಳ್ಳಬಹುದಾಗಿತ್ತು. ಅಂತಹ ಕೆಲಸವನ್ನು ನೀವು ಮಾಡಿಲ್ಲ. ಅಂತಹ ಕೆಲಸಗಳನ್ನು ಮಾಡಿದ್ದರೆ ಒಳ್ಳೆಯ ಕೆಲಸ ಮಾಡಿದ್ದಾರೆಂದು ನಾವು ತಿಳಿದುಕೊಳ್ಳಬಹುದಾಗಿತ್ತು. ಆ ರೀತಿ ಹಣವನ್ನು ಖರ್ಚು ಮಾಡದೆ ಬಡವರಿಗೆ ಸಾಕಷ್ಟು ತೊಂದರೆಯಾಗಿದೆ ಎನ್ನತಕ್ಕ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ.

ಎರಡನೆಯದಾಗಿ ''ಹೈದರಬಾದ್ ಕರ್ನಾಕ ಡೆವಲಪ್‌ಮೆಂಟ್ ಬೋರ್ಡ್'' ಸ್ಥಾಪನೆ ಮಾಡುತ್ತೇವೆ ಎಂದು ಬಹಳ ಘಂಟಾಘೋಷವಾಗಿ ಹೇಳಿದರು ಮತ್ತು ಆ ಭಾಗಕ್ಕೆ ಹೆಚ್ಚಿನ ಹಣವನ್ನು ಕೊಡುತ್ತೇವೆ. ಅದರ ಅಭಿವೃದ್ಧಿ ಮಾಡತಕ್ಕ ಕೆಲಸಮಾಡುತ್ತಿದ್ದೇವೆಂದು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಅದಕ್ಕೆ ಪ್ರಾವಿಜನ್ ಎಷ್ಟು ಮಾಡಿದ್ದಾರೆಂದರೆ ಕೇವಲ ೨ ಕೋಟಿ ರೂಪಾಯಿಗಳು ಅದರ ಬಗ್ಗೆ ನನ್ನ ಮಿತ್ರರಾದ ಮಾನ್ಯ ಧರ್ಮಸಿಂಗ್‌ರು ಸವಿಸ್ತಾರವಾಗಿ ಹೇಳಿದರು. ಹಿಂದೆ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಮಾಡಬೇಕೆಂದು ವರದಿಯನ್ನು ತಯಾರು ಮಾಡಲಾಗಿತ್ತು. ಆ ವರದಿಯ ಪ್ರಕಾರ ೫ ವರ್ಷಗಳಲ್ಲಿ ಆ ಭಾಗಕ್ಕೆ ೩೫೦ ಕೋಟಿ ರೂಪಾಯಿ ಖರ್ಚು ಮಾಡಿದರೆ ರಾಜ್ಯದ ಬೇರೆ ಭಾಗಗಳಿಗೆ ಇದು ಸರಿಸಮಾನವಾಗಬಹುದು ಎಂದು ಹೇಳಿದರು. ಆ ವರದಿಯ ಪ್ರಕಾರ ೫ ವರ್ಷಗಳಲ್ಲಿ ಸುಮಾರು ೧೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಇವತ್ತಿನ ಮನಿವ್ಯಾಲ್ಯು ತೆಗೆದುಕೊಂಡರೆ ಸುಮಾರು ೭೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಅಲ್ಲಿರತಕ್ಕ ವ್ಯತ್ಯಾಸವನ್ನು ಹೋಗಲಾಡಿಸಬಹುದು. ಕನಿಷ್ಟ ಪಕ್ಷ ಐದು ವರ್ಷಗಳಲ್ಲಿ ಅಲ್ಲಿರತಕ್ಕ ವ್ಯತ್ಯಾಸವನ್ನು ಹೋಗಲಾಡಿಸಲಿಕ್ಕೆ ಪ್ರತಿ ವರ್ಷ ೫ ಕೋಟಿ ರೂಪಾಯಿಗಳನ್ನಾದರೂ ಖರ್ಚು ಮಾಡಬೇಕು. ನಿಮ್ಮ ೨ ಕೋಟಿ ರೂಪಾಯಿ ಏತಕ್ಕೆ ಸಾಕಾಗುತ್ತದೆ.? ಮೊನ್ನೆ ಯಾರೋ ಒಬ್ಬರು ಕೌನ್ಸಿಲ್‌ನಲ್ಲಿ ಒಂದು ಪ್ರಶ್ನೆಯನ್ನು ಹಾಕಿದರು ಅದೇನೆಂದರೆ ''ಯಾವ್ಯಾವ ಮಂತ್ರಿಗಳು ಎಷ್ಟೆಷ್ಟು ಖರ್ಚು ಮಾಡಿದ್ದಾರೆ ? ಮುಖ್ಯಮಂತ್ರಿಗಳು ಒಂದು ವರ್ಷದಲ್ಲಿ ಎಷ್ಟು ಖರ್ಚು ಮಾಡಿದ್ದಾರೆ ? '' ಎಂಬ ಪ್ರಶ್ನೆಗೆ ಮುಖ್ಯ ಮಂತ್ರಿಗಳು ಒಂದು ವರ್ಷಕ್ಕೆ ೨೬ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆಂದು ಉತ್ತರ ಬಂದಿದೆ. ನಮ್ಮ ಜಿಲ್ಲೆಯ ಅಭಿವೃದ್ಧಿಗೆ ಇವರು ಕೊಡತಕ್ಕ ಹಣವೆಷ್ಟು ? ಹೈದರಾಬಾದ್–ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ಗೆ ಇವರು ಕೊಟ್ಟಿರತಕ್ಕದ್ದು ೨ ಕೋಟಿ ರೂಪಾಯಿ ೩೫೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ವರದಿಯಲ್ಲಿ ಶಿಫಾರಸ್ಸು ಇದೆ. ಅದಕ್ಕೆ ನೀವು ೫ ವರ್ಷ ಅಥವಾ ೭ ವರ್ಷಗಳ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗಿತ್ತು. ಕನಿಷ್ಟ ಪಕ್ಷ ನೀವು ಇದುವರೆಗೆ ೧೦೦ ಕೋಟಿ ರೂಪಾಯಿಗಳನ್ನಾದರೂ ಖರ್ಚು ಮಾಡಬೇಕಾಗಿತ್ತು ನಿಮಗೆ ಏತಕ್ಕೆ ಖರ್ಚು ಮಾಡುವುದಕ್ಕೆ ಆಗುತ್ತಿಲ್ಲ? ಕನಿಷ್ಟ ಪಕ್ಷ ೧೦–೧೫ ಕೋಟಿ ರೂಪಾಯಿಗಳನ್ನಾದರೂ ಇಡಬೇಕಾಗಿತ್ತು. ಇವತ್ತು ಪಾಪುಲೇಷನ್

ವೈಸ್, ಜೋನಲ್ ವೈಸ್ ಲೆಕ್ಕ ತೆಗೆದುಕೊಂಡರೆ ಆಕಡೆ ಇರುವ ರಸ್ತೆಗಳು, ಶಾಲೆಗಳು, ಹೆಲ್ತ್ ಯುನಿಟ್‌ಗಳಿಗೂ ಈ ಭಾಗದಲ್ಲಿ ಇರವವುಗಳಿಗೂ ಹೋಲಿಸಿ ನೋಡಿದರೆ ವ್ಯತ್ಯಾಸ ಕಾಣುತ್ತದೆ. ಈ ವ್ಯತ್ಯಾಸವನ್ನು ತೆಗೆದುಹಾಕುವುದಕ್ಕೆ ಯಾವ ರೀತಿ ಕಾರ್ಯಕ್ರಮ ಹಾಕುತ್ತೀರಿ ಎನ್ನುವುದರ ಬಗ್ಗೆ ತಮ್ಮ ನಿಲುವು ಏನು ಎಂಬುದನ್ನು ತಮ್ಮ ಉತ್ತರದಲ್ಲಿ ಹೇಳಬೇಕು. ಸುಮ್ಮನೆ ೨ ಕೋಟಿ ರೂಪಾಯಿ ಎಂದರೆ ಪ್ರಯೋಜನವಾಗುವುದಿಲ್ಲ. ಇವತ್ತು ಹೈದರಾಬಾದ್-ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡಿಗೆ ಎಷ್ಟು ಹಣವನ್ನು ಇಟ್ಟಿದ್ದೀರಿ ಅದು ಸಮಂಜಸವಾಗಿಲ್ಲ. ಇದನ್ನು ಪುನರ್‌ಪರಿಶೀಲನೆ ಹೆಚ್ಚಿನ ಹಣವನ್ನು ಕೊಡುವುದಕ್ಕೆ ಏರ್ಪಾಡು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಜೆ. ಎಚ್. ಪಟೇಲ್.—ನಾವು ಮಾಡಿದ್ದನ್ನು ಒಪ್ಪಿಕೊಳ್ಳಿ. ನೀವು ಈ ಬಗ್ಗೆ ಏನೂ ಮಾಡಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾವು ಆ ಕಾಲದಲ್ಲೂ ೨ ಕೋಟಿ ೭೫ ಲಕ್ಷರೂಪಾಯಿಗಳನ್ನು ಆ ಭಾಗದ ಅಭಿವೃದ್ಧಿ ಬಗ್ಗೆ ಖರ್ಚುಮಾಡಿದ್ದೇವೆ. ಆಗ ಬೋರ್ಡ್ ಇಲ್ಲದೆ ಇರಬಹುದು. ಬೇರೆ ಬೇರೆ ಇಲಾಖೆಗಳಿಂದ ಬಂದ ಉಳಿತಾಯದ ಹಣವನ್ನು ಆ ಏರಿಯಾಕ್ಕೆ ಖರ್ಚು ಮಾಡಿದ್ದೇವೆ, ನೀವೂ ಮಾಡುತ್ತೇವೆ, ಮಾಡುತ್ತೇವೆ ಎಂದು ೬ ವರ್ಷ ಆಯಿತು ಇವತ್ತು ಈ ಪರಿಸ್ಥಿತಿಗೆ ಬಂದಿದ್ದೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಮ್ಮ ಸರ್ಕಾರ ಅಧಿಕಾರದಲ್ಲಿ ಇದ್ದಾಗ ಬೋರ್ಡ್ ಮಾಡಬೇಕೆಂದು ಒಂದು ದೊಡ್ಡ ರಿಪೋರ್ಟ್ ಬಂತು. ಆಗ ತಾವು ಬೋರ್ಡ್ ಮಾಡಲಿಲ್ಲ, ಇಷ್ಟರ ಮಟ್ಟಿಗೆ ನಾವು ಏನು ಮಾಡಿದ್ದೇವೆ ಅದನ್ನು ಪ್ರಶಂಶೆ ಮಾಡಿದರೆ ಇನ್ನೂ ಹೆಚ್ಚಿನ ಅಭಿವೃದ್ಧಿ ಮಾಡುವುದಕ್ಕೆ ಉತ್ಸಾಹ ಬರುತ್ತದೆ. ನಿಮ್ಮ ಕಾಲದಲ್ಲಿ ಬೋರ್ಡ್ ಮಾಡತಕ್ಕ ನಿರ್ಣಯ ಹಾಗೆ ಉಳಿಯಿತು. ಕೊಟ್ಟ ಹಣ ಕಡಿಮೆ ಎಂದು ಹೇಳಿದ್ದೀರಿ. ಇದನ್ನು ಯಾವ ರೀತಿ ಹೆಚ್ಚು ಮಾಡಬೇಕೆಂಬುದರ ಬಗ್ಗೆ ಆಲೋಚನೆ ಮಾಡೋಣ.

ಶ್ರೀ ಧರ್ಮಸಿಂಗ್.—ಆಗ ಅವರು ರಿಪೋರ್ಟ್ ಅಷ್ಟೆ ಕೊಡಲಿಲ್ಲ. ರಿಪೋರ್ಟ್ ಕೊಟ್ಟಮೇಲೆ ಡೆವಲಪ್‌ಮೆಂಟ್ ಬೋರ್ಡ್ ಮಾಡಬೇಕೆಂದು ೧೯೮೨ರಲ್ಲಿ ಕ್ಯಾಬಿನೆಟ್ ಒಂದು ಡಿಸಿಸನ್ ತೆಗೆದುಕೊಂಡಿತು ಮಾನ್ಯ ಖರ್ಗೆಯವರು ಏನು ಹೇಳುತ್ತಿದ್ದಾರೆ ಅದು ಸರಿಯಿದೆ. ೨೮ ಆಗಸ್ಟ್ ೧೯೮೨ರಲ್ಲಿ ಕ್ಯಾಬಿನೆಟ್ ಸಬ್ ಕಮಿಟಿ ಸೇರಿ ಅಭಿವೃದ್ಧಿ ಕಾರ್ಯಕ್ಕೆ ೧೦ ಕೋಟಿ ರೂಪಾಯಿಗಳನ್ನು ಇಟ್ಟು ಅದರಲ್ಲಿ ೬ ಕೋಟಿ ರೂಪಾಯಿ ಹಾಗೆ ಇದೆ. ಬೇಕಾದರೆ ತಾವು ಕ್ಯಾಬಿನೆಟ್ ಪೇಪರ್ಸ್ ತರಿಸಿ ನೋಡಿ. ಈ ಬಗ್ಗೆ ಕ್ಯಾಬಿನೆಟ್ ಡಿಸಿಷನ್ ಇದೆ. ಇದಕ್ಕೆ ಸ್ಪೆಸಿಫಿಕ್ ಫಂಡ್ ಕೊಟ್ಟಿದ್ದು ಇದೆ. ಈಗಲೂ ಕೂಡಾ ಬೋರ್ಡ್ ಏನು ಮಾಡಿದ್ದೀರಿ, ಅದು ಕೇವಲ ಘೋಷಣೆ ಆಗಿದೆ, ಆ ರಿಪೋರ್ಟ್‌ಗೆ ಮಾನ್ಯತೆ ಕೊಟ್ಟು ಆ ರಿಪೋರ್ಟ್ ಪ್ರಕಾರ, ಫೈನಾನ್ಸಿಯಲ್ ಪ್ಯಾಟ್ರನ್ ಏನಿದೆ ಅದರ ಪ್ರಕಾರ ೩೫೦ ಕೋಟಿ ರೂಪಾಯಿಗಳನ್ನು ಏನು ೧೦ ವರ್ಷಗಳಲ್ಲಿ ಖರ್ಚು ಮಾಡಬೇಕೆಂದಿದೆ ಅದರ ಬಗ್ಗೆ ತಾವು ಗಮನಹರಿಸಬೇಕು. ೬ ವರ್ಷಗಳ ಹಿಂದೆ ಇದನ್ನು ಮಾಡಿದ್ದುದು. ಇವತ್ತು ತಾವು ಇಟ್ಟಿರತಕ್ಕ ಹಣದಲ್ಲಿ ಈ ೪ ಜಿಲ್ಲೆಗಳಿಗೆ ಯಾವ ರೀತಿ ಆರ್ಥಿಕ ವ್ಯವಸ್ಥೆ ಮಾಡುತ್ತೀರಿ, ಅದು ಬಹಳ ಮುಖ್ಯ ಇದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಮ್ಮ ಮಂತ್ರಿಮಂಡಲ ನಿರ್ಣಯ ಮಾಡಿದ್ದುದು ೧ ಕೋಟಿ ರೂಪಾಯಿಗಳಿಗೆ ಬೋರ್ಡ್ ಮಾಡಿರತಕ್ಕ ನಿರ್ಣಯ ಕೂಡ ಇದೆ. ಬೇರೆ ಬೇರೆ ಡಿಪಾರ್ಟ್‌ಮೆಂಟ್‌ಗಳಿಂದ ಖರ್ಚು ಮಾಡಿದ್ದೇವೆಂದು ಹೇಳಿದ್ದೀರಿ. ಇದಕ್ಕೆ ನಾನೂ ಹೇಳುತ್ತೇನೆ. ಜಿಲ್ಲಾ ಪರಿಷತ್ ಬಂದಮೇಲೆ ಪರ್ ಕ್ಯಾಪಿಟ ಹಣ ಕೊಡುವುದರಿಂದ ಆ ಜಿಲ್ಲೆಗೆ ೮ ಕೋಟಿ ರೂಪಾಯಿ ಹೆಚ್ಚು ಸಿಗುತ್ತದೆ. ಇದೂ ಸಾಲದು, ತಾವು ಸಭೆಯಲ್ಲಿ ಕೂಡಾ ಹೇಳಿದ್ದೀರಿ. ಬೋರ್ಡ್‌ಮಾಡತಕ್ಕ ನಿರ್ಣಯ ಮಾಡಿ ಕೇಂದ್ರ ಸರ್ಕಾರದ ಹತ್ತಿರ ನಾವು ನೀವೂ ಜೊತೆಯಲ್ಲಿ ಹೋಗುವ ಎಂದು ಹೇಳಿದ್ದೀರಿ. ಅದಕ್ಕೆ ಅಪ್ರೂವಲ್ ತೆಗೆದುಕೊಳ್ಳಬೇಕಾಗುತ್ತದೆ. ಹೈದರಾಬಾದ್-ಕರ್ನಾಟಕದ ಎಲ್ಲಾ ಶಾಸಕರ ಮನಸ್ಸಿನಲ್ಲಿ ಆ ಭಾಗವನ್ನು ಅಭಿವೃದ್ಧಿ ಪಡಿಸಬೇಕೆಂದು ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ. ತಾವು ಇದನ್ನು ಮಾಡಿದ್ದೀರಿ. ಇದು ಅಸ್ತಿತ್ವಕ್ಕೆ ಬರಬೇಕಾದುದು ಮುಖ್ಯ. ಹೇಳಿದ್ದೆಲ್ಲಾ ಅಸ್ತಿತ್ವಕ್ಕೆ ಬರುತ್ತದೆಂದು ಯಾರೂ ತಿಳಿದು ಕೊಳ್ಳಬಾರದು. ಇದನ್ನು ತಾವು ಎಲೆಕ್ಷನ್ ಸ್ಟಂಟ್ ಆಗಿ ಉಪಯೋಗ ಮಾಡಬಾರದು.

ಎನ್. ಪಿ. ಕೆ. ಸಾಳ್ವರವರು ಅಧಿಕಾರಕ್ಕೆ ಬಂದಮೇಲೆ ಸ್ವತಃ ನಮ್ಮ ಸ್ನೇಹಿತರನ್ನು ಕರೆದುಕೊಂಡು ಹೋಗಿ ಒಂದು ಮೆಮೊರಾಂಡಮ್ ಕೊಟ್ಟಿದ್ದೇವೆ. "ಹೈದರಾಬಾದ್–ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ಗೆ" ವಿಶೇಷವಾದ ಹಣವನ್ನು ಒದಗಿಸಿ ಕೊಡಬೇಕು. ಯಾವರೀತಿ ಒದಗಿಸಬೇಕೆಂದರೆ "ಪಶ್ಚಿಮ ಬಂಗಾಳದಲ್ಲಿರತಕ್ಕ ಸುಂದರಬನ ಡೆವಲಪ್‌ಮೆಂಟ್ ಬೋರ್ಡ್, ಆಂಧ್ರದಲ್ಲಿರತಕ್ಕ ತೆಲಂಗಾಣ ಡೆವಲಪ್‌ಮೆಂಟ್ ಬೋರ್ಡ್ "ಗಳಿಗೆ ಯಾವರೀತಿ ಹಣವನ್ನು ಒದಗಿಸುತ್ತಿರೋ ಅದೇರೀತಿ ನಮ್ಮ "ಹೈದರಬಾನ್–ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್" ಗೂ ಹಣವನ್ನು ಕೊಡಿಯೆಂದು ಕೇಳಿ ಬಂದಿದ್ದೇವೆ. ಅಲ್ಲಿಗೆ ವಿಶೇಷವಾಗಿ ಅಲಾಟ್‌ಮೆಂಟ್ ಕೊಡಲಾಗುತ್ತಿದೆ, ನಾವು ಕೂಡಾ ಒಂದು ಮೆಮೊರಾಂಡಮ್ ಕೊಟ್ಟು ಬಂದಿದ್ದೇವೆ, ಅದು ತಮಗೆ ಗೊತ್ತಿರಬಹುದು. ಸುಮ್ಮನೆ ನಮ್ಮ ಮೇಲೆ ಮಾತನಾಡುವುದು ಸರಿಯಲ್ಲ. ಹಿಂದೆ ಎಸ್. ಬಿ. ಚವಾಣ್‌ರವರು ಪ್ಲಾನಿಂಗ್ ಮಿನಿಷ್ಟರ್ ಆಗಿದ್ದಾಗ ಭೇಟಿ ಆಗಿದ್ದೇವೆ. ಫೈನಾನ್ಸ್ ಮಿನಿಷ್ಟರನ್ನು ಭೇಟಿ ಆಗಿದ್ದೇವೆ, ನಾವು ನಮ್ಮ ಪ್ರಯತ್ನವನ್ನು ಮಾಡಿದೇವೆ. ನಾನು ಹೇಳುವುದೇನೆಂದರೆ, ಆ ಭಾಗ ಏನು ಹಿಂದುಳಿದಿದೆ ಅದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿ, ಮುತುವರ್ಜಿವಹಿಸಿ ಕೆಲಸ ಮಾಡುವುದು ಅವಶ್ಯಕವಿದೆ. ಅನೇಕ ಒತ್ತಡಗಳು ಬರುತ್ತವೆ. ಇರುವವರು ಕೇಳುತ್ತಾರೆ, ಇಲ್ಲದೇ ಇರುವವರಿಗೆ ಕೊಡ ಬೇಕಾದುದು ಧರ್ಮ. ನಮ್ಮ ಕಡೆಯ ಶಾಸಕರು ಒಂದು ಸಾರಿ ಕೇಳಿದರು ಅಂದರೆ ಇನ್ನೊಂದು ಸಾರಿ ಕೇಳುವುದಿಲ್ಲ. ಈ ಕಡೆಯ ಶಾಸಕರು ಒಂದು ಕೆಲಸ ಆಗಬೇಕಾದರೆ ಅನೇಕ ಸಲ ಬರುತ್ತಾರೆ. ಇವತ್ತಿನ ದಿವಸ ಆ ಭಾಗಕ್ಕೆ ನ್ಯಾಯವಾಗಿ ಒಂದು ಅಲಾಟ್‌ಮೆಂಟ್ ಕೊಡಬೇಕು, ಹೆಚ್ಚಿನ ಆಸಕ್ತಿಯನ್ನು ವಹಿಸಿ, ಅದರ ಬಗ್ಗೆ ಕೆಲಸ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಈ ಸರ್ಕಾರ ರೈತರ ಸರ್ಕಾರ, ಬಡವರಿಗೆ ಸಹಾಯ ಮಾಡತಕ್ಕ ಸರ್ಕಾರ ಎಲ್ಲದಕ್ಕಿಂತಲ್ಲೂ ಹೆಚ್ಚಾಗಿ ರೈತರಿಗೋಸ್ಕರವೇ ನಮ್ಮ ಸರ್ಕಾರ ಮೀಸಲಾಗಿದೆಯೆಂದು ಡಂಗೂರ ಸಾರುತ್ತೀರಿ ತಮ್ಮ, ಸ್ಟೇಟ್ ಪ್ಲಾನ್ ಔಟ್‌ಲೇನಲ್ಲಿ ಅನೆಕ್ಸರ್ (೧)ನ್ನು ನೋಡಿದರೆ ಅವರಲ್ಲಿ ೧೯೮೯–೯೦ಕ್ಕೆ ನೀವು ಅಲಾಟ್ ಮಾಡಿರತಕ್ಕದ್ದು ಎಷ್ಟೆಂದರೆ ಅದರಲ್ಲಿ ಪರ್ಸೆಂಟೇಜ್ ೭.೬೩ ಆಗುತ್ತದೆ ೧೦೦ ಕೋಟಿ ರೂಪಾಯಿಗಳಲ್ಲಿ ಇವರು ಕೊಟ್ಟಿರತಕ್ಕದ್ದು ಎಷ್ಟು ರೂರಲ್ ಡೆವಲಪ್‌ಮೆಂಟ್‌ಗೆ ೭.೫೫, ಇಂಡಸ್ಟ್ರೀಸ್ ಅಂಡ್ ಮೈನ್ಸ್ ೬.೮೨ ಇಂಡಸ್ಟ್ರೀಸ್, ಅಗ್ರಿಕಲ್ಚರ್ ಅಂಡ್ ರೂರಲ್ ಡೆವಲಪ್‌ಮೆಂಟ್ ಈ ಮೂರು ಇಲಾಖೆಗಳಿಗೆ ಅಲಾಟ್‌ಮೆಂಟ್ ಏನಿದೆ ಅದು ಸರಿಸಮಾನವಾಗಿದೆ. ರೈತರ ಬಗ್ಗೆ ಮತ್ತು ಎಲ್ಲ ಜನರ ಬಗ್ಗೆ ಮಾತನಾಡತಕ್ಕವರು ನಿಮ್ಮ ವೈಟೇಜ್ ಎಲ್ಲಿದೆ ? ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ಗೆ ಯಾವ ಟ್ರೀಟ್‌ಮೆಂಟ್ ಇದೆ, ಅದೇ ಟ್ರೀಟ್‌ಮೆಂಟ್ ರೂರಲ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್‌ಗೆ ಇದೆ, ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿಗೂ ಅದೇ ಟ್ರೀಟ್‌ಮೆಂಟ್, ಅದೇ ಪ್ರಿಯಾರಿಟಿ. ಹೆಚ್ಚಿನ ಪ್ರಿಯಾರಿಟಿ ಎಲ್ಲಿದೆ ತೋರಿಸಿ ? ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಟ್ಟು ಇಂತಹದಕ್ಕೆ ಹೆಚ್ಚು ಕೊಟ್ಟಿದ್ದೇವೆಂದು ಹೇಳಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ. ನಿಮ್ಮ ಅಲಾಟ್‌ಮೆಂಟ್‌ನಲ್ಲಿ ಯಾವ ಪ್ರಾಧಾನ್ಯತೆಯೂ ಇವತ್ತಿನದಿವಸ ಇಲ್ಲ. ಅಗ್ರಿಕಲ್ಚರ್‌ಗೆ ೭೪ ಕೋಟಿ, ರೂರಲ್ ಡೆವಲಪ್‌ಮೆಂಟ್‌ಗೆ ೭೮ ಕೋಟಿ, ಇರಿಗೇಷನ್‌ಗೆ ೨೧೯ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ, ಸೋಷಿಯಲ್ ಸರ್ವೀಸಸ್‌ಗೆ ೨೪೪ ಕೋಟಿ, ಇಂಡಸ್ಟ್ರೀಸ್‌ಗೆ ೭೫ ಕೋಟಿ ಇದೆ, ಈ ರೀತಿಯಾಗಿ ತಾವು ಹೇಳಿದ್ದು ಒಂದು, ಮಾಡುವಾಗ ಇನ್ನೊಂದು ಮಾಡಿದ್ದೀರಿ. ಅದರಲ್ಲೂ ಕೂಡ ಯಾವ ಜನರಿಗೆ ಆಶ್ವಾಸನೆಯನ್ನು ಕೊಟ್ಟಿದ್ದೀರಿ, ಅದನ್ನು ತಮ್ಮಿಂದ ಈಡೇರಿಸಲಿಕ್ಕೆ ಸಾಧ್ಯವಾಗಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳಲಿಕ್ಕೆ ಬಯಸುತ್ತೇನೆ. ನೀರಾವರಿ ಇಲಾಖೆ ಬಹಳ ಮುಖ್ಯವಾದುದು. ಅದರ ಬಗ್ಗೆ ಸದನದಲ್ಲಿ ವಾದ ವಿವಾದಗಳು ನಡೆದು ಇದರಿಂದ ನಿಮ್ಮ ಪಕ್ಷ ಇಬ್ಭಾಗವಾಯಿತು, ಇದು ತಮಗೆಲ್ಲಾ ಗೊತ್ತಿದೆ. ಮಾನ್ಯ ದೇವೇಗೌಡರು ನೀರಾವರಿಗೆ ೩೦೦ ಕೋಟಿ ರೂಪಾಯಿಗಳನ್ನು ಕೊಡದಿದ್ದರೆ ನಾನು ಒಂದು ಕ್ಷಣ ಕೂಡ ಮಂತ್ರಿಯಾಗಿ ಮುಂದುವರೆಯುವುದಿಲ್ಲವೆಂದು, ಸರ್ಕಾರದಲ್ಲಿರುವುದಿಲ್ಲವೆಂದೂ ಹೇಳಿದ್ದರು. ಅವರು ಪುನಃ ಸರ್ಕಾರಕ್ಕೆ ಬಂದರು, ೩೦೦ ಕೋಟಿ ರೂಪಾಯಿ ನೀರಾವರಿಗೆ ಸಿಗಲಿಲ್ಲವೆಂದು ಮತ್ತೇ ಹೋದರು. ನೀವೇನು ನೀರಾವರಿಗಾಗಿ ಹಣವನ್ನು ಅಲಾಟ್ ಮಾಡಿದ್ದೀರಿ ನಿಮ್ಮ ಅಲಾಟ್‌ಮೆಂಟ್ ಪ್ರಕಾರ ನೀವು ಯಾವರೀತಿಯಲ್ಲಿಯೂ ಖರ್ಚು ಮಾಡಿಲ್ಲ. ನಮ್ಮಲ್ಲಿ ಪ್ರಮುಖವಾಗಿರತಕ್ಕ ತೆಲುಗುಗಂಗಾ ಜಗಳ ಏನಿದೆ ಅದರಿಂದ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಏನಿದೆ ಅದು ಏನಾಗುತ್ತದೋ ಗೊತ್ತಿಲ್ಲ. ಅಪ್ಪರ್ ಕೃಷ್ಣಾ ಅದೇ ನೀರಿನ ಮೇಲೆ ಅವಲಂಬಿಸಿರತಕ್ಕ ಪ್ರಾಜೆಕ್ಟ್. ಬಚಾವತ್ ಅವಾರ್ಡ್ ಅನ್ನು ಮುರಿದು ತೆಲುಗುಗಂಗಾ ಪ್ರಾಜೆಕ್ಟ್‌ಗೆ ಅವರು ನೀರು ತೆಗೆದುಕೊಂಡರೆ ಮುಂದೆ ತೊಂದರೆಯಾಗತಕ್ಕದ್ದು ನಮಗೆ. ಈಗ ಕೃಷ್ಣಾ ಬೇಸಿನ್‌ಗೆ ಪ್ರಾಜೆಕ್ಟ್‌ಗೆ ಇವರು ಏನು ಅಲಾಟ್ ಮಾಡುತ್ತಿದ್ದಾರೆ ಮತ್ತು ಏನು ಖರ್ಚು ಮಾಡುತ್ತಿದ್ದಾರೆ ಎಂಬುದನ್ನು ತಮ್ಮ ಗಮನಕ್ಕೆ

ತರುತ್ತಿದ್ದೇನೆ. ಇದಕ್ಕೆ ಯಾವರೀತಿಯಾಗಿ ಹಣವನ್ನು ಖರ್ಚುಮಾಡಿದ್ದಾರೆ, ಬಜೆಟ್‌ನಲ್ಲಿ ಇಟ್ಟಿದ್ದು ಎಷ್ಟು, ಅಲಾಟ್‌ಮೆಂಟ್ ಮಾಡಿದ್ದು ಎಷ್ಟು ಎನ್ನತಕ್ಕ ವಿಷಯವನ್ನು ತಮ್ಮ ಮೂಲಕ ಅವರಿಗೆ ಹೇಳಬಯಸುತ್ತೇನೆ. ೧೯೮೭–೮೮ರಲ್ಲಿ ಇರಿಗೇಷನ್, ಕೆನಾಲ್ಸ್ ಮತ್ತು ಡ್ಯಾಮ್ಸ್‌ಗೆ ಎಲ್ಲಾ ಸೇರಿ ಹಣ ಇಟ್ಟಿದ್ದು ೮೫ ಕೋಟಿರೂಪಾಯಿಗಳು. ಖರ್ಚು ಮಾಡಿದ್ದು ಎಷ್ಟು ಎಂದರೆ ೪೫ ಕೋಟಿ ರೂಪಾಯಿಗಳುಮಾತ್ರ ೮೫ ಕೋಟಿ ರೂಪಾಯಿಗಳ ಪ್ರಾವಿಷನ್ ಇಟ್ಟು ಖರ್ಚುಮಾಡಿದ್ದು ಎಷ್ಟು. ೧೯೮೮–೮೯ರಲ್ಲಿ ೪೫ ಕೋಟಿ ರೂಪಾಯಿಗಳನ್ನು ಇಟ್ಟು ಖರ್ಚು ಮಾಡಿದ್ದು ಎಷ್ಟು ಎಂದರೆ ೩೫ ಕೋಟಿ ರೂಪಾಯಿಗಳು ಮಾತ್ರ. ಇದು ಫೆಬ್ರುವರಿ ಕೊನೆಯವರೆಗೆ ಖರ್ಚು ಮಾಡಿದ್ದು. ಇದು ಏನು ತೋರಿಸುತ್ತದೆ ಎಂದರೆ, ಬಜೆಟ್‌ನಲ್ಲಿ ಇಡತಕ್ಕಂಥಾದ್ದು ಏನಿದೆ, ಅದಕ್ಕಿಂತ ಖರ್ಚು ಕಡಿಮೆ ಯಾಗಿದೆ. ಅಂದರೆ ಜನರಿಗೆ ತೋರಿಸುವುದಕ್ಕೋಸ್ಕರ ಬಜೆಟ್‌ನಲ್ಲಿ ೮೫ ಕೋಟಿ ಕೊಟ್ಟು ಬಿಟ್ಟಿದ್ದೇವೆ ಎಂದು ಮುದ್ರಿಸಿಬಿಡುವುದು. ನಾನು ಪ್ರಶ್ನೆ ಕೇಳುತ್ತೇನೆ. ಏನೆಂದರೆ, ಆಗ ಇದರ ಬಗ್ಗೆ ಏಕೆ ಅಜಿಜಿಟ್ ಕೊಡಲಿಲ್ಲ, ಚಿಂತನೆ ಮಾಡಲಿಲ್ಲ ? ಆಮೇಲೆ ಕಾಡಾದಲ್ಲಿ ೧೧ ಕೋಟಿ ಪ್ರಾವಿಶನ್ ಇಟ್ಟು ೮ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚುಮಾಡಿದ್ದಾರೆ. ೧೯೮೮–೮೯ರಲ್ಲಿ ೧೬ ಕೋಟಿ ಪ್ರಾವಿಶನ್ ಇಟ್ಟು ೭ ಕೋಟಿ ಮಾತ್ರ ಖರ್ಚುಮಾಡಿದ್ದಾರೆ. ಹೀಗಾದರೆ ಆ ಏರಿಯಾ ಡೆವಲಪ್‌ಮೆಂಟ್ ಹೇಗೆ ಆಗಬೇಕು ? ಇರಿಗೇಶನ್‌ನಲ್ಲೀ ಬ್ಯಾಕ್‌ವರ್ಡ್ ಏರಿಯಾ ಎಂದು ಒಂದು ಕಡೆ ಹೇಳುತ್ತೀರಿ. ಹಾಗೆ ಹೇಳಿದಮೇಲೆ ಅದಕ್ಕಾಗಿ ಬಜೆಟ್‌ನಲ್ಲಿ ಎಷ್ಟು ಹಣವನ್ನು ಇಡುತ್ತೀರಿ. ಅದನ್ನು ಖರ್ಚು ಮಾಡುವುದಿಲ್ಲ. ನಾನು ತಮ್ಮ ಮೂಲಕ ಅವರನ್ನು ಕೇಳುತ್ತೇನೆ. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಇರಿಗೇಶನ್ ಮೇಲೆ ಅವರು ಒಂದು ವೈಟ್ ಪೇಪರನ್ನು ಪಬ್ಲಿಷ್ ಮಾಡಬೇಕು. ಅದಕ್ಕಾಗಿ ಎಷ್ಟು ಹಣ ಇಟ್ಟಿದ್ದೇವೆ, ಖರ್ಚುಮಾಡಿದ್ದು ಎಷ್ಟು, ಟಾರ್ಗೆಟ್ ಎಷ್ಟು ಇತ್ತು, ಸ್ಪೆಷಲ್ ಕಾಂಪೋನೆಂಟ್ ಸ್ಕೀಮ್‌ನಲ್ಲಿ ಶೆಡ್ಯೂಲ್ಡ್ ಕ್ಯಾಸ್ಟ್‌ಗೆ ಎಷ್ಟು ಹಣ ಇತ್ತು, ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎಂಬ ಬಗ್ಗೆ ಸಂಪೂರ್ಣವಾದ ವಿವರಗಳನ್ನು ಕೊಡತಕ್ಕಂಥ ಡಾಕ್ಯುಮೆಂಟ್‌ನ್ನು ಮಾಡಿ. ಇನ್ನು ಮೂರು–ನಾಲ್ಕು ದಿನಗಳಲ್ಲಿ ಈ ಸದನದಲ್ಲಿ ಅದನ್ನು ಕೊಡಬೇಕು. ಅದನ್ನು ಕೊಟ್ಟರೆ ಎಷ್ಟರಮಟ್ಟಿಗೆ ಆ ಭಾಗದ ಜನರಿಗೆ ನೀರಾವರಿ ಬಗ್ಗೆ ಆಸಕ್ತಿ ವಹಿಸಿ ಕೆಲಸ ಮಾಡಿದ್ದಾರೆ ಎನ್ನತಕ್ಕದ್ದು ನಮಗೆಲ್ಲರಿಗೂ ಗೊತ್ತಾಗುತ್ತದೆ. ಕೆಲವು ಕಡೆ ಏನು ಮಾಡಿದ್ದಾರೆ, ಎಂದರೆ ಬರಗಾಲದ ಹೆಸರಿನಲ್ಲಿ ಇಂಡಿ ಬ್ರಾಂಚ್‌ನಲ್ಲಿ ಆರು ತಿಂಗಳಲ್ಲಿ ೧೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಹಿಂದುಳಿದ ಪ್ರದೇಶಕ್ಕೆ ಇನ್ನೂ ಹೆಚ್ಚು ಹಣವನ್ನು ಖರ್ಚು ಮಾಡಬೇಕು. ಸ್ಕೇರ್‌ಸಿಟಿ ಎಂದು ಹೇಳಿ ೧೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅಲ್ಲಿ ಎಷ್ಟು ಮ್ಯಾನ್‌ಪೇಸ್ ಕೆಲಸ ತೆಗೆದುಕೊಂಡಿದ್ದಾರೆ ಎಂದರೆ ಅಲ್ಲಿ ಆಂಧ್ರಪ್ರದೇಶದ ಕಂಟ್ರಾಕ್ಟರುಗಳಿಂದ ಬುಲ್‌ಡೋಜರ್ ಹಚ್ಚಿ ರಾತ್ರಿಹಗಲು ಕೂಡಿ ಕೆಲಸಮಾಡಿ ಇವತ್ತಿನ ದಿವಸ ೧೧ ಕೋಟಿ ಬಿಲ್ ಮಾಡಿದ್ದಾರೆ. ಅಂದರೆ ಇದೇ ವರ್ಷ ಪ್ಲಾನ್‌ನಲ್ಲಿ ರೆಗ್ಯುಲರ್ ಅಲಾಟ್‌ಮೆಂಟ್ ೧೧ ಕೋಟಿ, ಸ್ಕೇರ್‌ಸಿಟಿಯಲ್ಲಿ ೧೦ ಕೋಟಿ, ಅಂದರೆ ಕೇವಲ ಎರಡು ವರ್ಷಗಳಲ್ಲಿ ಮಣ್ಣಿನ ಕೆಲಸಕ್ಕಾಗಿ ೨೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ಅದಕ್ಕಾಗಿ ನಾನು ಹೇಳುವುದು ಏನೆಂದರೆ, ಇರಿಗೇಷನ್ ಬಗ್ಗೆ ವೈಟ್‌ಪೇಪರ್ ಪಬ್ಲಿಷ್ ಮಾಡಿದರೆ ಎಲ್ಲ ವಿಷಯಗಳೂ ಹೊರಗಡೆ ಬರುತ್ತೇದೆ, ಯಾರ್ಯಾರು ಏನೇನು ಮಾಡಿದ್ದಾರೆ, ಎಲ್ಲಿ ದುಡ್ಡು ಲೂಟಿಯಾಗಿದೆ, ಯಾವ್ಯಾವ ಕಂಟ್ರಾಕ್ಟರ್ ಹೊಡೆದುಕೊಂಡಿದ್ದಾನೆ ಎನ್ನುವುದು ಗೊತ್ತಾಗುತ್ತದೆ. ಏಕೆಂದರೆ ಸ್ಕೇರ್‌ಸಿಟಿ ಕೆಲಸ ಎಂದರೆ ಜನರಿಗೆ ಕೆಲಸ ಒದಗಿಸಿ ಕೊಡುವುದಕ್ಕಾಗಿ ಹಣ ಖರ್ಚು ಮಾಡುವುದು. ಸ್ಕೇರ್‌ಸಿಟಿ ಹೆಸರಿನಲ್ಲಿ ಕೆಲವು ಕಂಟ್ರಾಕ್ಟರ್‌ಗಳು ಬದುಕಬೇಕೆಂದು ಕೆಲಸ ಮಾಡಿದರೆ ಅದು ಜನರಿಗೆ ಬಹಳ ದೊಡ್ಡ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ಅದೇ ರೀತಿ ಶಹಪುರ್ ಬ್ರಾಂಚ್‌ನಲ್ಲಿ ಏನಾಗಿದೆ ಎನ್ನುವುದೂ ತಮಗೆ ಕೂಡ ಗೊತ್ತಿದೆ. ಶ್ರೀ ಶಿವಶಂಕರಪ್ಪಗೌಡರು ಇಲ್ಲಿ ಇಲ್ಲ. ಇದೇ ಸದನದಲ್ಲಿ ಅವರು ಒಂದು ಪ್ರಶ್ನೆಯನ್ನು ಹಾಕ್ಕಿದ್ದರು. ಶಹಪರ್ ಬ್ರಾಂಚ್‌ನಲ್ಲಿ ನೀವು ಕೇವಲ ೨ ಕೋಟಿ ೫೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ ೩೫ ಸಾವಿರ ಎಕರೆಗೆ ನೀರಾವರಿ ಆಗುತ್ತದೆ. ಇದಕ್ಕೆ ಎರಡೂವರೆ ಕೋಟಿ ರೂಪಾಯಿಗಳನ್ನು ಡೈವರ್ಟ್‌ಮಾಡುತ್ತೀರಾ ಎಂದು ಅವರು ಪ್ರಶ್ನೆ ಹಾಕ್ಕಿದ್ದಕ್ಕೆ ತತ್‌ಕ್ಷಣ ಬಿಡುಗಡೆ ಮಾಡುತ್ತೇನೆ ಎಂದು ಆಗ ಶ್ರೀ ದೇವೇಗೌಡರು ಹೇಳಿದರು ಆಮೇಲೆ ಶ್ರೀ ಬೊಮ್ಮಾಯಿಯವರು ಕೂಡ ನಾನು ಇದನ್ನು ಮಾಡಿಕೊಡುತ್ತೇನೆ ಎಂದು ಹೇಳಿದರು. ಆದರೆ ಇಲ್ಲಿಯವರೆಗೂ ಎರಡೂವರೆ ಕೋಟಿ ರೂಪಾಯಿಗಳನ್ನು ಮಾತ್ರ ಇದಕ್ಕಾಗಿ ಬಿಡುಗಡೆ ಮಾಡಿದ್ದಾರೆ.ಅದೇ ಸ್ಕೇರ್‌ಸಿಟಿ ಬಗ್ಗೆ, ಆರು ತಿಂಗಳಲ್ಲಿ ೧೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರು. ಇಲ್ಲಿ ಮಾಡುವುದಕ್ಕೆ ಪ್ರಾತಿನಿಧ್ಯ ಕೊಡಬೇಕು ಮಹತ್ವಕೊಡಬೇಕು ಎಂಬುದನ್ನು ಅವರು ತಿಳಿದುಕೊಳ್ಳಬೇಕು. ಈ ರೀತಿಯಾಗಿ ವಿವೇಕ ಇಲ್ಲದೆ ಕೆಲಸ ಮಾಡಿದರೆ, ಖಂಡಿತವಾಗಿಯೂ ರೈತರಿಗೆ ಮೋಸವಾಗುತ್ತದೆ, ಹಾನಿಯಾಗುತ್ತದೆ. ಇದರಿಂದ ಪ್ರೊಡಕ್ಷನ್‌ಗೂ ಕೂಡ ಹೊಡತ ಬಿದ್ದಿದೆ. ರೈತರು ಲಕ್ಷಾಂತರ ರೂಪಾಯಿಗಳ ಬೆಳೆಗಳನ್ನು ಬೆಳೆಯುತ್ತ

ಇದ್ದರು. ಕೇವಲ ಎರಡೂವರೆ ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದರಿಂದ, ಇವತ್ತಿನ ದಿವಸ ಇದರಿಂದಲೂ ಕೂಡ ಲುಕ್ಸಾನು ಆಯಿತು, ಬಡವರಿಗೆ ಉಪಯೋಗ ಆಗಲಿಲ್ಲ. ಇದರಿಂದ ಕೆಲವು ಕಂಟ್ರಾಕ್ಟರುಗಳಿಗೆ ಉಪಯೋಗವಾಗಿದೆ. ಆ ಕಂಟ್ರಾಕ್ಟರುಗಳು ಯಾರು, ಯಾರು, ಅವರ ಹೆಸರುಗಳು ಏನು, ಎಷ್ಟು ಜನರು ಆ ಪೀರಿಯಡ್‌ನಲ್ಲಿ ಕೆಲಸ ಮಾಡಿದ್ದಾರೆ ಎಂಬ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಈ ಸದನದಲ್ಲಿ ಇಡಬೇಕು. ಇರಿಗೇಷನ್ ಬಗ್ಗೆ ಸಂಪೂರ್ಣವಾದ ವರದಿಯನ್ನು ಈ ಸದನದ ಮುಂದೆ ತಾವು ಮಂಡಿಸುವ ವ್ಯವಸ್ಥೆ ಮಾಡಬೇಕೆಂದು ತಮ್ಮ ಮುಖಾಂತರ ಅವರಿಗೆ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ, ಇನ್ನು ಹೆಚ್ಚು ವಿಷಯ ಪ್ರಸ್ತಾಪ ಮಾಡದೇ ಇಷ್ಟು ಮಾತ್ರ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ತಾವು ದಯವಿಟ್ಟು ಅವರಿಗೆ ಆದೇಶ ಕೊಡಬೇಕು. ಇರಿಗೇಷನ್ ಮೇಲೆ ವೈಟ್ ಪೇಪರ್ ಪಬ್ಲಿಷ್ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇದನ್ನು ತಾವು ಕೊಡಿಸಿ ಕೊಡುತ್ತೀರೆಂದು ಕೇಳಿಕೊಂಡು, ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತುಗಳನು ಮುಗಿಸುತ್ತೇನೆ.

† ಶ್ರೀ ಬಿ. ಜಿ. ಕೊಟ್ರಪ್ಪ (ಹರಿಹರ):—ಮಾನ್ಯ ಸಭಾಧ್ಯಕ್ಷರೇ, ಈ ಆಯವ್ಯಯ ಪತ್ರ ಮಂಡನೆ ಮಾಡಿರುವುದನ್ನು ಅನುಮೋದಿಸಿ ಕೆಲವು ಮಾತುಗಳನ್ನು ಹೇಳಬೇಕೆಂದು ಇಷ್ಟಪಡುತ್ತೇನೆ. ನಮ್ಮ ಒಕ್ಕೂಟ ವ್ಯವಸ್ಥೆಯಲ್ಲಿ ಸಂಪನ್ಮೂಲಗಳನ್ನು ನ್ಯಾಯಸಮ್ಮತವಾಗಿ ಹಂಚಿಕೊಳ್ಳುವ ಬಗ್ಗೆ ಆಯವ್ಯಯ ಪತ್ರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ. ಈ ವ್ಯವಸ್ಥೆ ಬದಲಾಗಬೇಕು. ರಾಜ್ಯಾಂಗದತ್ತವಾಗಿ ಇದು ಬದಲಾಗಬೇಕಾಗಿದೆ. ರಾಜ್ಯಸರ್ಕಾರವು ಭಾರತ ಸರ್ಕಾರಕ್ಕೆ ಮಾಡಿದ ಕೋರಿಕೆಗಳಿಗೆ ಅದು ಅನುಕೂಲಕರ ಪ್ರತಿಕ್ರಿಯೆ ಕೊಡುತ್ತಾ ಇಲ್ಲ. ನಮ್ಮ ಹಣವನ್ನು, ನಾವು ಪಡೆಯಲು ಅವರ ಹಂಗಿನಲ್ಲಿ ಪಡೆಯತಕ್ಕ ಪರಿಸ್ಥಿತಿ ಬಂದಿದೆ. ಕೇಂದ್ರ ಸರ್ಕಾರದವರು, ಎಲ್ಲಾ ರಾಜ್ಯಗಳಿಂದ ಹಣವನ್ನು ಪಡೆದು, ಆಯಾ ರಾಜ್ಯಗಳಿಗೆ ಎಷ್ಟೆಷ್ಟು ಹಣವನ್ನು ಕೊಡಬೇಕೋ ಅಷ್ಟನ್ನು ಕೊಡದೇ ರಾಜ್ಯಗಳಿಗೆ ವಂಚನೆ ಮಾಡುತ್ತಿದ್ದಾರೆ. ಈ ಪದ್ಧತಿಯಿಂದ ಅನೇಕ ರಾಜ್ಯಗಳಿಗೆ ಧಕ್ಕೆಯಾಗಿದೆ. ಈ ಮೂಲಕ ಕರ್ನಾಟಕ ರಾಜ್ಯಕ್ಕೆ ಹೆಚ್ಚಿನ ಧಕ್ಕೆಯಾಗಿದೆ. ಈ ವ್ಯವಸ್ಥೆಯಲ್ಲಿ ರಾಜ್ಯಾಂಗ ಬದ್ಧವಾಗಿ ನಮಗೆ ಬರತಕ್ಕ ಪಾಲನ್ನು ಪಡೆಯಲು ಮಾನ್ಯ ರಾಮಕೃಷ್ಣ ಹೆಗಡೆಯವರು ಹೋರಾಟ ಮಾಡಿ, ಮುಖ್ಯಮಂತ್ರಿಗಳ ಸಭೆಯನ್ನು ನಡೆಸಿ ಹೇಳಿದರೂ ಕೂಡ ಕೇಂದ್ರ ಸರ್ಕಾರದವರು ಕಿವಿಗೊಡದೇ ಇರತಕ್ಕ ಪರಿಸ್ಥಿತಿಯಲ್ಲಿದ್ದಾರೆ. ಇದರಿಂದ, ರಾಜ್ಯಗಳಲ್ಲಿ ಹಣಕಾಸಿನ ಅವ್ಯವಸ್ಥೆ ಉಂಟಾಗಿದೆ ಎಂಬುದನ್ನು ನಾನು ಹೇಳಬಯಸುತ್ತೇನೆ. ಇನ್ನು ರವಾನೆ ತೆರಿಗೆಯನ್ನು ವಿಧಿಸಬೇಕೆಂಬ ಉದ್ದೇಶ ಇದ್ದರೂ ಕೂಡ ಇದನ್ನು ರಾಜ್ಯಾಂಗದತ್ತವಾಗಿ ಮಾಡಬೇಕಾಗಿದೆ. ವರಮಾನ ತೆರಿಗೆ ಮತ್ತು ಇತರೆ ತೆರಿಗೆಗಳಿಂದ ಸಾಮಾನ್ಯವಾಗಿ ಆಯಾ ರಾಜ್ಯಗಳಿಂದ ಎಷ್ಟೆಷ್ಟು ಹಣ ಬರಬೇಕೆಂಬುದನ್ನು ಇಲ್ಲಿಯೇ ಅಕೌಂಟ್ ಮಾಡಿ, ರಾಜ್ಯ ಸರ್ಕಾರಗಳಿಗೆ ಕೊಡಬೇಕು. ಇದರಿಂದ ಬಜೆಟ್ ತಯಾರು ಮಾಡಬೇಕಾದರೆ ನಮ್ಮ ವರಮಾನವನ್ನೂ ಗಣನೆಗೆ ತೆಗೆದುಕೊಂಡು. ರಾಜ್ಯದ ಅಭಿವೃದ್ಧಿ ಕಡೆಗೆ ಚಿಂತನೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದರೆ ಇದು ಒಂದು ರೀತಿಯ ಹಂಗಿನ ವ್ಯವಸ್ಥೆಯಲ್ಲಿರುವುದರಿಂದ, ಕರ್ನಾಟಕ ರಾಜ್ಯ ಒಂದೇ ಅಲ್ಲ, ಇತರೇ ರಾಜ್ಯಗಳೂ ಕೂಡ ಈ ಒಂದು ದುರವಸ್ಥೆಗೆ ಬರುವುದಕ್ಕೆ ಅವಕಾಶವಾಗಿದೆ. ಯಾವ ಯಾವ ರಾಜ್ಯಗಳಿಂದ ಎಷ್ಟೆಷ್ಟು ಹಣ ಕಲೆಕ್ಟ್ ಆಗುತ್ತದೆ, ಅದರಲ್ಲಿ ಆಯಾ ರಾಜ್ಯ ಸರ್ಕಾರಕ್ಕೆ ಎಷ್ಟು ಬರುತ್ತದೆ, ಎಂಬುದನ್ನು ಕೂಡಲೇ ನಿರ್ಧಾರ ಮಾಡುವ ವ್ಯವಸ್ಥೆ ಮಾಡುವುದಾದರೆ, ಸುವ್ಯವಸ್ಥಿತವಾದ ಬಜೆಟ್‌ನ್ನು ತಯಾರು ಮಾಡುವುದಕ್ಕೆ ಅನುಕೂಲವಾಗುತ್ತದೆ. ಮಾನ್ಯ ಖರ್ಗೆಯವರು ನಿಮ್ಮ ಬಜೆಟ್‌ನಲ್ಲಿರುವ ೧೨ ಪುಟಗಳಲ್ಲಿ ಕೇಂದ್ರ ಸರ್ಕಾರವನ್ನು ಬೈಯ್ಯುವುದನ್ನೇ ಮಾಡುತ್ತೀದ್ದೀರಿ ಎಂದು ಹೇಳಿದರು ಇದು ಬೈಯ್ಯುವ ಪ್ರಶ್ನೆ ಅಲ್ಲ. ಕೇಂದ್ರದಲ್ಲಿ ಯಾವುದೇ ಸರ್ಕಾರ ಇರಲಿ, ರಾಜ್ಯದಲ್ಲಿ ಯಾವುದೇ ಪಕ್ಷದ ಸರ್ಕಾರ ಇರಲಿ, ನಾವೆಲ್ಲರೂ ಸಹೋದರರಂತೆ ನಡೆದುಕೊಂಡು ಹೋಗಬೇಕು. ಜೊತೆಗೆ ಇವೆಲ್ಲವೂ ಪ್ರಜೆಗಳ ರಾಜ್ಯಾಂಗದತ್ತವಾದ ಹಕ್ಕು ಎಂಬ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಭಾವನೆಯನ್ನು ಇಟ್ಟುಕೊಳ್ಳಬೇಕೇ ಹೊರತು ಪಾಲತಾಯಿ ಧೋರಣೆ ಮಾಡಬಾರದು. ಇದರ ಬಗ್ಗೆ ಪ್ರತಿಯೊಬ್ಬರೂ ಚಿಂತನೆ ಮಾಡಬೇಕಾದ ಅವಶ್ಯಕತೆ ಇದೆ. ಅದು ಕಾಂಗ್ರೆಸ್‌ನವರು ಇರಬಹುದು ಕಮ್ಯುನಿಸ್ಟ್‌ನವರು ಇರಬಹುದು ಅಥವಾ ಬೇರೆ ಯಾರೇ ಇರಬಹುದು. ನಮ್ಮ ಸಂಪನ್ಮೂಲಗಳು ಕೇಂದ್ರೀಕೃತವಾಗಿ, ಬಜೆಟ್ ತಯಾರಾಗತಕ್ಕ ಈ ಒಂದು ವ್ಯವಸ್ಥೆಯಲ್ಲಿ ಭಿನ್ನತೆ ಇರಬಾರದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಹಾಗೆ ಹೇಳಲಿಲ್ಲ. ನಾನು ಏನು ಹೇಳಿದೆ ಎಂದರೆ ರಾಮಕೃಷ್ಣ ಹೆಗಡೆಯವರು ೧೯೮೩-೮೪ರಲ್ಲಿ ಫೈನಾನ್ಸ್ ಮಿನಿಸ್ಟರ್ ಆಗಿದ್ದಂಥ ಕಾಲದಲ್ಲಿ, ಇಷ್ಟು ಪುಟಗಳನ್ನು ಕೇಂದ್ರ ಸರಕಾರವನ್ನು ಕ್ರಿಟಿಸೈಸ್ ಮಾಡುವುದಕ್ಕೆ ರಿಸರ್ವ್‌ಮಾಡಿ ಇಟ್ಟಿರಲಿಲ್ಲ. ಇದು ೧೯೮೩ರಿಂದ ಈಚೆಗೆ ಪ್ರಾರಂಭವಾಗಿದೆ.

ಶ್ರೀ ಬಿ. ಜಿ. ಕೊಟ್ರಪ್ಪ.—ಆಗ ಕೆಲವು ಕಟ್ಟಳೆ ಇತ್ತು. ಆಗ ನಮ್ಮದು ಪ್ರಥಮ ಹೆಜ್ಜೆ. ಆಗ ನಮಗಿರುವ ಸಂಪನ್ಮೂಲಗಳೂ ಬಹಳ ಕಡಿಮೆ. ಬಹಳ ಚಿಕ್ಕ ಸಂಪನ್ಮೂಲ ಇತ್ತು. ಇಷ್ಟೊಂದು ಬೃಹದಾಕಾರವಾಗಿ ಅಭಿವೃದ್ಧಿ ಮಾಡತಕ್ಕಂಥ ಭಾವನೆ ಆಗ ಇರಲಿಲ್ಲ. ಚಿಕ್ಕದಾದ ಬಜೆಟ್‌ನಲ್ಲಿ ಚೊಕ್ಕವಾದ ವ್ಯವಸ್ಥೆ ಮಾಡಿ, ಅಭಿವೃದ್ಧಿ ಮಾಡತಕ್ಕಂಥ ವ್ಯವಸ್ಥೆ ಇತ್ತು. ಆಗಿನ ವ್ಯವಸ್ಥೆಯನ್ನು ಈಗಲೂ ಪರಿಪಾಲನೆ ಮಾಡಬೇಕಾಗಿಲ್ಲ. ಈಗ ನಮ್ಮ ವರಮಾನ ಜಾಸ್ತಿಯಾಗಿದೆ, ವೈಶಾಲ್ಯ ಜಾಸ್ತಿಯಾಗಿದೆ. ಬಡವರ ಬಗ್ಗೆ ಕನಿಕರ ತೋರಿಸುವ ಮನೋಧರ್ಮ ಜಾಸ್ತಿಯಾಗಿರುವುದರಿಂದ ನಮಗೆ ಬರಬೇಕಾದ ಹಣವನ್ನು, ಸಂಪನ್ಮೂಲವನ್ನು ಪಡೆಯಲಿಕ್ಕೆ ಹೋರಾಟ ಮಾಡತಕ್ಕಂಥ ಮನೋಧರ್ಮ ಇರುವುದು ತಪ್ಪಲ್ಲ. ಮಾನ್ಯ ಖರ್ಗೆಯವರೂ ಕಾಂಗ್ರೆಸ್ ಸರಕಾರದಲ್ಲಿ ಮಂತ್ರಿಗಳಾಗಿದ್ದರು. ಆಗ ಅವರು ಇದನ್ನು ಬಿಚ್ಚಿ ಹೇಳಲಿಲ್ಲ. ಆಗ ಹನ್ನೆರಡು ಪುಟಗಳು ಇದಕ್ಕೆ ಬರುತ್ತಿರಲಿಲ್ಲ ಎಂದರೆ, ಆ ಒಂದು ವ್ಯವಸ್ಥೆಯ ಒಳಗೆ ಇದ್ದುದನ್ನು ಇದ್ದ ಹಾಗೆ ಹೇಳುವ ಸ್ವಭಾವ ಇದ್ದುದರಿಂದ ಆಗ ಆ ರೀತಿ ಹೇಳಿದ್ದರು. ಈಗಲೂ ಇದ್ದ ರೀತಿಯಲ್ಲೇ ಹೇಳಿದ್ದಾರೆ. ಕೇಂದ್ರ ಸರಕಾರವನ್ನು ದೂಷಣೆ ಮಾಡತಕ್ಕದ್ದಲ್ಲ. ಕೇಂದ್ರ ಸರಕಾರದಿಂದ ನಮಗೆ ಬರತಕ್ಕಂಥ ಹಣವನ್ನು ಪಡೆಯುವ ವ್ಯವಸ್ಥೆಯಲ್ಲಿ, ರಾಜ್ಯಾಂಗದತ್ತವಾಗಿ ನಾವು ಯಾವರೀತಿ ಹೋರಾಟ ಮಾಡಬೇಕೆನ್ನತಕ್ಕಂಥ ಸೂಚನೆಯನ್ನು ಕೊಟ್ಟಿದ್ದಾರೆ. ಬಹುಶಃ ಕಾಂಗ್ರೆಸ್ ಸದಸ್ಯರೂ ಸಹ ಕೇಂದ್ರದಮೇಲೆ ಒತ್ತಾಯ ಮಾಡಿ, ಬೇರೆ ರಾಜ್ಯಗಳಲ್ಲಿ ನಿಮ್ಮ ಸ್ನೇಹಿತರು ಇದ್ದರೂ ಸಹಾ ಅವರೂ ಒತ್ತಾಯ ಮಾಡಿ, ನಮ್ಮ ನಮ್ಮ ರಾಜ್ಯಗಳಿಗೆ ಬರತಕ್ಕ ಸಂಪನ್ಮೂಲವನ್ನು ಪಡೆಯುವುದಕ್ಕೆ ನಾವು ಒಂದಾಗಬೇಕೆಂಬ ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಅನಾವೃಷ್ಟಿಯ ಕಾಲದಲ್ಲಿ ಏನಾಗುತ್ತಿದೆ ಎಂದರೆ, ಗಡ್ಡಕ್ಕೆ ಬೆಂಕಿ ಹತ್ತಿದ ಕಾಲದಲ್ಲಿ ನಾವು ಬಾವಿ ತೋಡುವ ಪರಿಸ್ಥಿತಿ ಇದೆ. ನೂರಾರು ವರ್ಷಗಳಿಂದ ನಮ್ಮ ದೇಶದಲ್ಲಿ, ನಮ್ಮ ರಾಜ್ಯದಲ್ಲಿ ಬರಗಾಲ ಬರುತ್ತಿದೆ. ನಮಗೆ ಈಗ ಏನಾಗಿದೆ ಎಂದರೆ, ಕೇಂದ್ರ ಸರಕಾರದವರು ಏನಾದರೂ ಕೊಡುತ್ತಾರೆ. ಬರ ಬಿದ್ದಾಗ ನಮ್ಮಲ್ಲಿರತಕ್ಕ ಸಂಪನ್ಮೂಲಗಳನ್ನು ಕ್ರೋಢೀಕರಿಸಿ, ಕೇಂದ್ರದಲ್ಲಿ ಹಣ ಪಡೆಯುವುದಕ್ಕೆ ಹೋಗಿ. ಅವರು ಹಣ ಕೊಡುವುದರೊಳಗೇ, ಬರ ಮುಗಿದುಹೋಗಿ, ಮಳೆ ಬಂದಿರುತ್ತದೆ. ಅಷ್ಟರಲ್ಲಿ ಜನ ಎಷ್ಟೊಂದು ನೊವು ಅನುಭವಿಸಿರುತ್ತಾರೆ ಎಂಬುದನ್ನು ನೋಡಬೇಕು. ಇದನ್ನು ಪರಿಹಾರ ಮಾಡಬೇಕಾದರೆ, ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಸಲಹೆ ಮಾಡುವುದು ಏನೆಂದರೆ, ಪ್ರತ್ಯೇಕವಾದಂಥ, ಶಾಶ್ವತವಾದಂಥ ಒಂದು ಬರ ಪರಿಹಾರ ನಿಧಿಯನ್ನು ಸ್ಥಾಪನೆ ಮಾಡಬೇಕು. ಸ್ಟೇಟ್ ಕಾಂಟ್ರಿಬ್ಯೂಷನ್ ಇಷ್ಟು ಸೆಂಟ್ರಲ್ ಕಾಂಟ್ರಿಬ್ಯೂಷನ್ ಇಷ್ಟು ಎಂದು ಮಾಡಿ, ಶಾಶ್ವತವಾದ ಒಂದು ನಿಧಿ ಇರುವಹಾಗೆ ವ್ಯವಸ್ಥೆ ಮಾಡಿದರೆ ಮಾತ್ರ ಅನುಕೂಲವಾಗುತ್ತದೆ. ಅದು ಯಾವಾಗಲೂ ಪ್ರಯೋಜನಕ್ಕೆ ಬರುತ್ತದೆ. ಬರ ಬಂದಾಗ ವ್ಯವಸ್ಥಿತವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ಬರ ಪರಿಹಾರ ಮಾಡುವುದಕ್ಕೆ ರಾಜ್ಯ ಸರಕಾರಕ್ಕೆ ಒಂದು ಶಕ್ತಿ ಬರುತ್ತದೆ ಎಂದು ಸಲಹೆ ಮಾಡುತ್ತೇನೆ. ಮುಖ್ಯಮಂತ್ರಿಗಳ ಪರಿಹಾರ ನಿಧಿ ಯಾವ ರೀತಿ ಇರುತ್ತದೆ. ಅದೇ ರೀತಿ ಒಂದು ಶಾಶ್ವತವಾದ ಬರ ಪರಿಹಾರ ನಿಧಿಯನ್ನು, ಬರಗಾಲ ಪರಿಹಾರ ಮಾಡಬೇಕೆನ್ನುವ ಉದ್ದೇಶಕ್ಕಾಗಿ ಇಡತಕ್ಕ ವ್ಯವಸ್ಥೆ ಮಾಡಿದರೆ ಒಳ್ಳೆಯದು ಎಂದು ನನ್ನ ಸಲಹೆ. ಇನ್ನು ಪೇ ಜ್ ರಿವಿಜನ್ ವಿಷಯದಲ್ಲಿ ನಮ್ಮ ಮಾಜಿ ಮುಖ್ಯಮಂತ್ರಿಗಳಾಗಿದ್ದ ರಾಮಕೃಷ್ಣ ಹೆಗಡೆಯವರು ಬಹಳ ಧಾರಾಳಿಗಳು. ಅವರಿಗೆ ನೌಕರರ ಬಗ್ಗೆ ಏನು ಮನಸ್ಸು ಇದೆಯೋ ಏನೋ ಗೊತ್ತಿಲ್ಲ. ಕೇಂದ್ರದವರು ಅನೌನ್ಸ್ ಮಾಡುತ್ತಿದ್ದ ಹಾಗೆ ರಾಜ್ಯದಲ್ಲೂ ಕೂಡಾ ನೌಕರರಿಗೆ ಹೆಚ್ಚಿನ ಸವಲತ್ತುಗಳನ್ನು ಕೊಡುತ್ತಾ ಬಂದರು. ನಮ್ಮ ರಾಜ್ಯದಲ್ಲಿ ನೌಕರರಿಗೆ ಹಾಗೂ ಅಧಿಕಾರಿಗಳಿಗೆ ಕೊಟ್ಟಿರತಕ್ಕಂಥ ಹೆಚ್ಚಿನ ಸವಲತ್ತುಗಳು, ಬೇರೆ ಯಾವ ರಾಜ್ಯದಲ್ಲೂ ಕೊಟ್ಟಿಲ್ಲ ಎಂದು ಧೈರ್ಯವಾಗಿ ಹೇಳಬಹುದು.

ಈ ಒಂದು ವ್ಯವಸ್ಥೆಯೊಳಗೆ, ಈಗಿನ ಕಷ್ಟಕಾಲದಲ್ಲಿ, ನೌಕರರು ಜೀವನ ಮಾಡತಕ್ಕ ಪರಿಸ್ಥಿತಿಗೆ ಇದು ಬೇಕೇ ಬೇಕು. ಕೇವಲ ಕೆಲಸ ಮಾಡಿರಿ ಎಂದು ಹೇಳುವುದರ ಜೊತೆಗೆ, ಅವರು ತಮ್ಮ ಸಂಸಾರವನ್ನು ನಿರ್ವಹಿಸಿಕೊಂಡು ಹೋಗತಕ್ಕ ಶಕ್ತಿಯನ್ನು ಅವರಿಗೆ ಕೊಡದೇ ಹೋದರೆ, ಅವರಿಂದ ಕೆಲಸ ತೆಗೆದು ಕೊಳ್ಳುವುದು ಹೇಗೆ ? ಅವರಿಂದ ಕೆಲಸ ತೆಗೆದುಕೊಳ್ಳಲಿಕ್ಕೆ ಇದು ಬೇಕು. ಬೇರೆ ರಾಜ್ಯಗಳಲ್ಲಿ ಹಾಗೂ ಕೇಂದ್ರದಲ್ಲಿ ನೌಕರರಿಗೆ ಸಂಬಳ ಜಾಸ್ತಿ ಮಾಡಿದ್ದಾರೆ, ಇಲ್ಲೂ ಮಾಡಿ ಎಂದು ಅವರು ಹೇಳುತ್ತಾರೆ. ಅಧಿಕಾರಿಗಳು ಮತ್ತು ನೌಕರರು ಸರಿಯಾದ ರೀತಿಯಲ್ಲಿ ಕೆಲಸ ನಿರ್ವಹಿಸ ಬೇಕಾದರೆ, ತಮ್ಮ ಸಂಸಾರದಲ್ಲಿರತಕ್ಕ ಕಷ್ಟಗಳನ್ನು ಪರಿಹರಿಸಿಕೊಂಡು, ಸಂಸಾರ ನಿರ್ವಹಣೆ ಮಾಡತಕ್ಕ ವ್ಯವಸ್ಥೆ ಇರಬೇಕು. ಇದು ಇಲ್ಲದೇ ಹೋದರೆ ರಾಜ್ಯದಲ್ಲಿ ಅಧಿಕಾರಿಗಳು, ನೌಕರರು ಸರಿಯಾದ ಕೆಲಸ ಮಾಡತಕ್ಕ ವ್ಯವಸ್ಥೆ ಹೇಗೆ ಬರುತ್ತದೆ ? ಮಾನ್ಯ ಹೆಗಡೆಯವರು ನೌಕರರಿಗೆ ಸಂಬಳ ಜಾಸ್ತಿ ಮಾಡಿದರು ಎಂದು ಹೇಳತಕ್ಕದ್ದು ಒಂದು ಕಡೆಯಾದರೆ, ಇನ್ನೊಂದು ರೀತಿಯಲ್ಲಿ ಅವರಿಂದ ಕೆಲಸ ತೆಗೆದುಕೊಳ್ಳತಕ್ಕ ವ್ಯವಸ್ಥೆಗೆ ಒಂದು ಮಾರ್ಗಬೇಕಾಗಿದೆ. ಆ ಮಾರ್ಗವನ್ನು ಕಂಡು ಹಿಡಿಯತಕ್ಕ ಸುವ್ಯವಸ್ಥೆಯನ್ನು ರಾಜ್ಯದಲ್ಲಿ ಮಾಡತಕ್ಕದ್ದು ಮತ್ತು ಸರಕಾರಿ ನೌಕರರಿಂದ ಕೆಲಸ ತೆಗೆದುಕೊಳ್ಳತಕ್ಕದ್ದು ಬಹಳ ಮುಖ್ಯ. ಆ ಪರಿಪಾಠ ಬರಬೇಕಾಗಿದೆ. ಈ ರೀತಿ ಸಂಬಳ ಹೆಚ್ಚು ಕೊಡತಕ್ಕದ್ದಕ್ಕೆ, ಕೇಂದ್ರ ಸರಕಾರದವರು ಸಂಪನ್ಮೂಲ ಕೊಡದೇ ಹೋದರೆ ಇವರೆಡೂ ಹೊರೆಯನ್ನು ನಮ್ಮ ರಾಜ್ಯ ಸರಕಾರ ಹೊರತಕ್ಕ ಪರಿಸ್ಥಿತಿ ಬರುತ್ತದೆ. ಈ ನೋವನ್ನು ಅನುಭವಿಸತಕ್ಕ ವ್ಯವಸ್ಥೆ ಇವತ್ತು ರಾಜ್ಯದ ಮೇಲಿದೆ. ಈ ನೋವನ್ನು ಯಾವರೀತಿ ಬಗೆಹರಿಸಬೇಕು ? ಕೇಂದ್ರದವರೇನೋ ಕೊಟ್ಟು ಬಿಡುತ್ತಾರೆ. ಆದರೆ ನಮ್ಮ ರಾಜ್ಯ ಸರಕಾರಕ್ಕೆ ಇರುವ ನೋವನ್ನು ಅವರು ಅರ್ಥಮಾಡಿ ಕೊಳ್ಳಬೇಕು. ಮತ್ತು ಅರಿತುಕೊಳ್ಳಬೇಕು. ಅವರಿಗೆ ಮಾರ್ಗದರ್ಶನ ಕೊಡಬೇಕು, ಅವರ ಸಹಾಯಕ್ಕೆ ಬರಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ನನ್ನ ಸ್ನೇಹಿತರು ಒಂದು ಮಾತು ಹೇಳಿದರು, ಅದಕ್ಕೆ ನಾನು ಹೇಳುವುದೇನೆಂದರೆ, ಕಾಂಗ್ರೆಸೇತರ ಸರ್ಕಾರಗಳೂ ಸಹ ಇದನ್ನು ಜಾರಿಗೆ ತಂದಿವೆ. ಅವರಿಂದ ಕೆಲಸ ತೆಗೆಸಿಕೊಳ್ಳಬೇಕೆನ್ನುವುದರಲ್ಲಿ ನಮ್ಮಲ್ಲಿ ಯಾರಿಗೂ ಬಿನ್ನಾಭಿಪ್ರಾಯವಿಲ್ಲ. ಕೆಲಸ ತೆಗೆಸಿಕೊಳ್ಳುವುದು ಆಯಾಯಾ ಸರ್ಕಾರಗಳ ಭಾಕಿ ಮೇಲೆ ಹೋಗುತ್ತದೆ.

ಶ್ರೀ ಬಿ. ಜಿ. ಕೊಟ್ರಪ್ಪ.—ಇನ್ನು ಒಣ ಭೂಮಿ ಬೇಸಾಯ ಪದ್ಧತಿಯಿಂದ ನಮ್ಮ ಕೃಷಿಕರಿಗೆ ಹೆಚ್ಚು ಅನುಕೂಲವಾಗಿದೆ. ಈ ಒಂದು ಯೋಜನೆಯನ್ನು ತಂದ ಸನ್ಮಾನ್ಯ ಮಾಜಿ ಮುಖ್ಯಮಂತ್ರಿ ಗಳನ್ನು ನಾವು ಅಭಿನಂದಿಸಲೇಬೇಕು. ಈ ಒಣಭೂಮಿ ಬೇಸಾಯ ಪದ್ಧತಿಯು ಇಡೀ ನಮ್ಮ ರಾಷ್ಟ್ರಕ್ಕೆ ಒಂದು ಮಾದರಿಯಾಗಿದೆ. ಬೇರೆ ಬೇರೆ ರಾಜ್ಯದಲ್ಲಿಯೂ ಮೊದಲು ಮೊದಲಲ್ಲಿ, ನಮ್ಮ ರಾಜ್ಯ ದಲ್ಲಿಯೇ ಮೊದಲು ಇದನ್ನು ಜಾರಿಗೆ ತಂದಿದ್ದುದು. ಈ ಯೋಜನೆಯಿಂದ ಮಾನ್ಯ ಅಧ್ಯಕ್ಷರ ಕ್ಷೇತ್ರದಲ್ಲಿಯೂ ಸಹ ತುಂಬಾ ಅನುಕೂಲವಾಗಿರಬಹುದು, ಈ ಒಣ ಬೇಸಾಯ ಪದ್ಧತಿಯಲ್ಲಿ ನೀರನ್ನು ಸಂಗ್ರಹಣೆ ಮಾಡಿ ಬೆಳೆಗಳಿಗೆ ಬಳಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಈ ಯೋಜನೆಯಿಂದ ಎಣ್ಣೆ ಕಾಳುಗಳನ್ನು ಬೆಳೆಯಲು ಸಾಕಷ್ಟು ಅನುಕೂಲವಾಗುರತ್ತದೆ. ಎಣ್ಣೆಕಾಳುಗಳು ಈ ಯೋಜನೆಯಿಂದ ಬಹಳ ಸೊಗಸಾಗಿ ಬೆಳೆಯುತ್ತವೆ. ಎಣ್ಣೆಕಾಳುಗಳ ಉತ್ಪತ್ತಿ ಸಹ ಚೆನ್ನಾಗಿ ಬರುತ್ತದೆ ಈ ಯೋಜನೆಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳೆರಡೂ ಸಹಾಯಮಾಡುತ್ತಿವೆ. ಈ ಯೋಜನೆಯಿಂದ ರಾಜ್ಯದ ಸಂಪನ್ಮೂಲ ಜಾಸ್ತಿಯಾಗುವುದಕ್ಕೆ ಅನುಕೂಲವಾಗುತ್ತವೆ. ಈ ಯೋಜನೆಯ ಒಂದು ಕೀರ್ತಿ ನಮ್ಮ ಮಾಜಿ ಮುಖ್ಯ ಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರಿಗೆ ಸಲ್ಲಬೇಕಾಗಿದೆ.

ಇನ್ನು ನಾನು ಸಹಕಾರ ಸಂಘಗಳ ಬಗ್ಗೆ ಮತ್ತು ಮಾರಾಟದ ಬಗ್ಗೆ ಒಂದು ಮಾತನ್ನು ಹೇಳುವುದಾದರೆ, ರೈತರು ಬೆಳೆದಂತಹ ಮಾಲು ಸರಿಯಾದ ಕಾಲದಲ್ಲಿ ಒಳ್ಳೆಯ ಬೆಳೆ ಸಿಗದೆ ಕಡಿಮೆ ಬೆಲೆಗೆ ಮಾರಾಟವಾಗುವಂತಹ ಪರಿಸ್ಥಿತಿ ಇದೆ. ಈ ಮಾರಾಟ ಮಾಡುವ ಹಂತದಲ್ಲಿ ರೈತರು ದಳ್ಳಾಳಿಗಳ ಕಾಟವನ್ನು ಸಹ ಅನುಭವಿಸಬೇಕಾಗಿದೆ. ದಳ್ಳಾಳಿಗಳು ಕೇಳಿದ ಬೆಲೆಗೆ ರೈತರು ತಮ್ಮ ಮಾಲನ್ನು ಮಾರಾಟ ಮಾಡಬೇಕಾದ ಪರಿಸ್ಥಿತಿ ಒಂದೊಂದು ಸಾರಿ ಬರುತ್ತದೆ. ಅದಕ್ಕೋಸ್ಕರ ನಾನು ತಮಗೆ ಸಲಹೆ ಮಾಡುವುದೇನೆಂದರೆ, ರೆಗ್ಯುಲೇಟೆಡ್ ಮಾರು ಕಟ್ಟೆಗಳಲ್ಲಿ ಒಂದು ಏಜೆನ್ಸಿಯನ್ನು ತೆರೆದು ರೈತರು ತಂದ ಮಾಲನ್ನು ತಾವೇ ಖರೀದಿ ಮಾಡಿ ಒಳ್ಳೆಯ ಬೆಲೆ ಬರುವವರಿಗೂ ಆ ಮಾಲನ್ನು ಸ್ಟಾಕ್ ಮಾಡಿಟ್ಟುಕೊಂಡು ಒಳ್ಳೆಯ ಬೆಲೆ ಬಂದಾಗ

ಮಾರಾಟ ಮಾಡಿ ಆ ಹಣವನ್ನು ರೈತರಿಗೆ ಕೊಡುವ ವ್ಯವಸ್ಥೆಯಾಗಬೇಕು. ಇದರಿಂದ ರೈತರು ದಳ್ಳಾಳಿಗಳಿಗೆ ಕೊಡುವ ದಳ್ಳಾಳಿ ಹಣ ಸರ್ಕಾರಕ್ಕೆ ಬರುತ್ತದೆ. ರೈತರಿಗೂ ಅನುಕೂಲವಾಗುತ್ತದೆ ರೈತರು ತಮ್ಮ ಮಾಲನ್ನು ತಂದಾಗ ಅವರಿಗೆ ೭೦-೮೦ ಪರ್ಸೆಂಟ್‌ನಷ್ಟು ಹಣ ಮೊದಲು ಕೊಟ್ಟು ಉಳಿದ ಹಣ ಆಮೇಲೆ ಕೊಟ್ಟರೂ ಸಹ ನಡೆಯುತ್ತದೆ. ಇದರಿಂದ ನಿಜವಾಗಿಯೂ ರೈತರಿಗೆ ಅನುಕೂಲವಾಗುತ್ತದೆ. ಈ ಬಗ್ಗೆ ಮಾನ್ಯ ಜಾಲಪ್ಪನವರು ಒಂದು ಕಾಯ್ದೆಯನ್ನು ಸಹ ತಂದರು. ಆದರೆ ಅವರ ಕಲ್ಪನೆಯಂತೆ ಕೆಲಸ ನಡೆಯುತ್ತಿಲ್ಲ. ಇದರಿಂದ ಇನ್ನೂ ದುರುಪಯೋಗವಾಗುವುದು ಜಾಸ್ತಿಯಾಗಿದೆ. ಈಗ ಎರಡೂ ಕಡೆಯಿಂದ ರೈತರ ಸುಲಿಗೆಯಾಗುತ್ತಿದೆ. ಬರವಣಿಗೆಯಲ್ಲಿ ಇಲ್ಲದೇ ಇರಬಹುದು. ಆದರೆ ಹಣ ವಸೂಲಿ ಯಾಗುವುದಂತೂ ವಸೂಲಿಯಾಗುತ್ತಿದೆ. **ಆದ್ದರಿಂದ ನಾ**ನು ಮೊದಲೇ ಕೊಟ್ಟಂತಹ ಸಲಹೆಯ ಬಗ್ಗೆ ಸರ್ಕಾರ ಯೋಚನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಹಾಲು ಉತ್ಪಾದನೆಯ ಬಗ್ಗೆ ಹೇಳುವುದಾದರೆ. ನಮ್ಮ ರಾಜ್ಯದಿಂದ ಬಂಗಾಳಕ್ಕೆ ಹಾಲು ಕೊಡುವಂತಹ ಮಟ್ಟದಲ್ಲಿ ನಾವು ಹಾಲು ಉತ್ಪಾದನೆಯನ್ನು ಮಾಡುತ್ತಿದ್ದೇವೆ. ಹಾಲು ಉತ್ಪಾದನೆ ಜಾಸ್ತಿಯಾಗಿದ್ದರಿಂದ ನಮ್ಮ ಸರ್ಕಾರ ರೈತರಿಗೆ ಒಂದು ಲೀಟರ್ ಹಾಲಿಗೆ ರೂ. ೪-೫೦ ಪೈಸೆ ಕೊಡುತ್ತಿದೆ. ಇವತ್ತು ಹಸುಗಳನ್ನು ಸಾಕ ಬೇಕಾದರೆ ಅವುಗಳಿಗೆ ಮೇವು ಕೊಡಬೇಕು, ಇನ್ನಿತರೆ ಯಾವುದೇ ರೀತಿಯಲ್ಲಿ ನೋಡಿದರೂ ಸಹ ಅದು ದುಬಾರಿಯಾಗುತ್ತದೆ, ಹಸುಗಳನ್ನು ಮೇಯಿಸಲು ರೈತ ತುಂಬಾ ಕಷ್ಟಪಡಬೇಕಾಗಿದೆ. ಆದ್ದರಿಂದ ಅವನಿಗೆ ಈಗ ಏನು ೪-೫೦ ಪೈಸೆ ಒಂದು ಲೀಟರ್ ಹಾಲಿಗೆ ಕೊಡುತ್ತಿದ್ದೇವೆ ಅದೂ ಸಹ ಕಡಿಮೆ ಎಂದು ನನಗನಿಸುತ್ತದೆ. ಇವತ್ತು ಇದು ಪಟ್ಟಣಗಳಲ್ಲಿರುವವರಿಗೆದು ಭಾರಿಯಾಗಿರಬಹುದು. ಹಸುಗಳು ಹೆಚ್ಚು ಹಾಲು ಕೊಡುವಂತೆ ಮಾಡಲು ರೈತರಿಗೂ ತುಂಬಾ ಕಷ್ಟ ಇದೆ ಎನ್ನುವುದನ್ನು ಅವರು ಅರ್ಥ ಮಾಡಿಕೊಳ್ಳಬೇಕು. ರೈತರು ಹೆಚ್ಚು ಹೆಚ್ಚು ಹಾಲು ಉತ್ಪಾದನೆ ಮಾಡಲು ಸರ್ಕಾರದವರು ಉತ್ತೇಜನ

೧೨-೦೦ ಮಧ್ಯಾಹ್ನ

ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಆಮೇಲೆ ಮರಗಳನ್ನು ನೆಡುವ ವಿಚಾರದಲ್ಲಿ ಹೇಳಬೇಕಾದರೆ, ಮರಗಳನ್ನು ನೆಡುವುದಕ್ಕಾಗಿ ಸೋಷಿಯಲ್ ಫಾರೆಸ್ಟ್ರಿಸ್ಕೀಂ ಮಾಡಿ ಸರ್ಕಾರ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಇದರ ಬಗ್ಗೆ ಅನೇಕ ಸಾರಿ ನಾವು ಹೇಳಿದ್ದೇವೆ. ಫಸಲು ಬಿಡತಕ್ಕಂಥ, ಹಣ್ಣು ಹಂಪಲು ಬಿಡತಕ್ಕಂಥ ಮರಗಳನ್ನು ಮಾತ್ರ ಈ ಸೋಶಿಯಲ್ ಫಾರೆಸ್ಟ್ರಿನವರು ಬೆಳೆಸುತ್ತಿಲ್ಲ. ಇವರು ನೆಡುತ್ತಿರುವುದು ಯಾವ ಜಾತಿಯ ಮರಗಳೋ ಒಂದೂ ಗೊತ್ತಾಗುವುದಿಲ್ಲ. ರಸ್ತೆಗಳ ಉದ್ದಕ್ಕೂ ಬೇರೆ ಯಾವುದೋ ಜಾತಿಯ ಮರಗಳನ್ನು ನೆಡುವ ಬದಲು ಹಣ್ಣು ಹಂಪಲು ಬಿಡುವ ಮರಗಳನ್ನು ನೆಡುವ ಕಡೆ ಗಮನ ಕೊಡಬೇಕು. ನೀರಾವರಿ ಅನುಕೂಲಕ್ಕಾಗಿ ಚಾನಲ್‌ಗಳನ್ನು ಮಾಡಿದ್ದಾರೆ. ಈ ಚಾನಲ್‌ಗಳ ಎರಡೂ ಬದಿಯಲ್ಲಿ ಹಣ್ಣಿನ ಮರಗಳನ್ನು ಹಾಗೂ ಇತರೆ ಫಸಲು ಬಿಡುವ ಮರಗಳನ್ನು ನೆಡಬಹುದು. ಸೋಶಿಯಲ್ ಫಾರೆಸ್ಟ್ರಿಯವರು ಈ ನೀರಾವರಿ ಚಾನಲ್‌ಗಳ ಬದಿಗಳಲ್ಲಿ ಇದುವರೆಗೂ ಒಂದು ಮರವನ್ನೂ ಬೆಳೆಸಿಲ್ಲ. ಫಾರೆಸ್ಟ್ ಇಲಾಖೆಯವರು ಈಗ ನೆಡುತ್ತಿರುವ ಮರಗಳು ಯಾವುದಕ್ಕೂ ಉಪಯೋಗವಾಗುವುದಿಲ್ಲ, ಒಲೆಗೆ ಉರುವಲಾಗಿ ಕೂಡ ಉಪಯೋಗಿಸುವುದಕ್ಕಾಗುವುದಿಲ್ಲ. ಮನೆಬಳಕೆಗೆ ಉಪಯೋಗಿಸುವುದಕ್ಕೆ ಬೇಕಾಗುವ ಸಾಮಗ್ರಿಗಳೂ ಕೂಡ ಇದರಿಂದ ಬರುವುದಿಲ್ಲ. ಎಲ್ಲೆಲ್ಲಿ ನೀರಾವರಿ ಇದೆಯೋ ಅಲ್ಲೆಲ್ಲಾ ಹಣ್ಣು ಹಂಪಲು ಮರಗಳನ್ನು ಬೆಳೆಸಬೇಕು. ಹಣ್ಣು ಹಂಪಲು ಬಿಡುವ ಮರಗಳ ಜೊತೆ ಟೀಕ್ ಮುಂತಾದ ಮರಗಳನ್ನೂ ಬೆಳೆಸಬಹುದು. ಹಿಂದೆ ಎಲ್ಲಾ ಕಡೆ ಬೆಳೆಯುತ್ತಿದ್ದ ಬೇವಿನ ಮರಗಳನ್ನು ನಾವು ನೋಡಿದ್ದೇವೆ. ಇವುಗಳು ನೂರಾರು ವರ್ಷಗಳ ಕಾಲ ಬೆಳೆಯುತ್ತವೆ. ಇವುಗಳಿಂದ ಬರುವ ವಸ್ತುಗಳನ್ನು ಮನೆಕಟ್ಟಲಿಕ್ಕೆ ಸಾಮಾನುಗಳಾಗಿ ಉಪಯೋಗಿಸಬಹುದು. ಇಂಥ ಬೇವಿನ ಮರಗಳನ್ನು ರಸ್ತೆಗಳ ಬದಿಯಲ್ಲಿ ನೆಡುವ ಕೆಲಸವನ್ನು ಸೋಶಿಯಲ್ ಫಾರೆಸ್ಟ್‌ನವರು ಮಾಡುತ್ತಿಲ್ಲ. ಈ ಸೋಶಿಯಲ್ ಫಾರೆಸ್ಟ್ ಇಲಾಖೆಯವರು ಇನ್ನು ಮುಂದೆ ಎಲ್ಲಾಕಡೆ ಹಣ್ಣು ಹಂಪಲು ಬಿಡುವ ಮರಗಳನ್ನು ಹಾಗೂ ಮನೆ ಬಳಕೆಗೆ ಉಪಯೋಗವಾಗುವ ಮರಗಳನ್ನು ಬೆಳೆಸಿದರೆ ಸರ್ಕಾರವು ಮಾಡುವ ಖರ್ಚು ಸಾರ್ಥಕವಾಗುತ್ತದೆ. ಈ ದಿಸೆಯಲ್ಲಿ ಸರ್ಕಾರದವರು ಗಮನ ಹರಿಸಬೇಕೆಂದು ಸಲಹೆ ಮಾಡಲಿಕ್ಕೆ ನಾನು ಬಯಸುತ್ತೇನೆ.

ಇನ್ನು ಗ್ರಾಮೀಣಾಭಿವೃದ್ಧಿ ವಿಚಾರದಲ್ಲಿ ಜನತೆಗೆ ನೇರ ಅಧಿಕಾರವನ್ನು ಕೊಟ್ಟಿರುವುದರಲ್ಲಿ ನಮ್ಮ ಕರ್ನಾಟಕ ಸರ್ಕಾರ ಇಡೀ ದೇಶದಲ್ಲೇ ಪ್ರಥಮ ಎನಿಸಿಕೊಂಡಿದೆ. ಈ ಸುಧಾರಣೆ ತಂದಿರುವಲ್ಲಿ ಕೆಲವು ಎಡರು ತೊಡರುಗಳು ಇರಬಹುದು. ಅದರ ಬಗ್ಗೆ ಅನೇಕ ಜನರು ಅನೇಕ ರೀತಿಯಲ್ಲಿ

ಮಾತನಾಡಿಕೊಳ್ಳುತ್ತಿರಲೂ ಬಹುದು. ಆದರೆ, ಗ್ರಾಮೀಣ ಪ್ರದೇಶದ ಜನರು ತಮ್ಮ ಕೈಗೆ ಗ್ರಾಮೀಣಾಭಿವೃದ್ಧಿಯ ಬಗ್ಗೆ ಅಧಿಕಾರ ಸಿಕ್ಕಿರುವ ಬಗ್ಗೆ ಖುಷಿಪಟ್ಟಿದ್ದಾರೆ. ಗ್ರಾಮೀಣ ಪ್ರದೇಶದ ಜನರುಗಳು ತಮ್ಮ ಗ್ರಾಮವನ್ನು ತಾವೇ ಅಭಿವೃದ್ಧಿ ಪಡಿಸಿಕೊಳ್ಳುವ ಅಧಿಕಾರವನ್ನು ಅವರುಗಳಿಗೇ ಕೊಡಬೇಕೆಂಬ ಮಹಾತ್ಮ ಗಾಂಧೀಜಿಯವರ ಕನಸನ್ನು ನನಸು ಮಾಡಿರತಕ್ಕ ಕೆಲಸವನ್ನು ನಮ್ಮ ಕರ್ನಾಟಕಸರ್ಕಾರ ಮಾಡಿದೆ. ಇದರ ಕಾನೂನಿನಲ್ಲಿ ಕೆಲವು ಲೋಪದೋಷಗಳು ಇರಬಹುದು, ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ವತಿಯಿಂದ ನಡೆಯುವ ಕೆಲಸಗಳನ್ನು ಯಾವುದೇ ಒಬ್ಬ ಜಿಲ್ಲಾಪರಿಷತ್ತಿನ ಸದಸ್ಯ ಹಾಗೂ ಮಂಡಲ ಪಂಚಾಯಿತಿಯ ಸದಸ್ಯ ಒಬ್ಬನೇ ಹೋಗಿ ಇನ್‌ಸ್ಪೆಕ್ಟ್ ಮಾಡುವುದಕ್ಕೂ ಈ ಕಾನೂನಿನಲ್ಲಿ ಅವಕಾಶವನ್ನು ಮಾಡಿ ಕೊಡಬೇಕು. ಜಿಲ್ಲಾಪರಿಷತ್ತಿನ ಕಾರ್ಯದರ್ಶಿಯಾಗಲೀ, ಅಧ್ಯಕ್ಷರಾಗಲೀ ಯಾರಾದರೂ ಹೋಗಿ ಇನ್‌ಸ್ಪೆಕ್ಟ್ ಮಾಡಲಿಕ್ಕೆ ಅಧಿಕಾರ ವನ್ನು ಕೊಡತಕ್ಕಂಥ ಒಂದು ಕಾನೂನನ್ನು ತಿದ್ದುಪಡಿ ಮಾಡಬೇಕು. ಇಲ್ಲದೇ ಹೋದರೆ, ಜಿಲ್ಲಾಪರಿಷತ್ತಿನ ಮತ್ತು ಮಂಡಲ ಪಂಚಾಯಿತಿಯ ಅನೇಕ ಸದಸ್ಯರುಗಳು ಒಂದೇ ಸಾರಿ ಹೋಗಿ ನೋಡುವುದಕ್ಕೆ ನಿಧಾನವಾಗಬಹುದು. ಈಗ ಒಬ್ಬ ಸದಸ್ಯ ಮಾತ್ರ ಹೋಗಿ ಅಲ್ಲಿ ಮಾಡಿರುವ ಕೆಲಸಗಳನ್ನು ಇನ್‌ಸ್ಪೆಕ್ಟ್ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ಆದ್ದರಿಂದ ಈ ಸಲಹೆ ಯನ್ನು ಸರ್ಕಾರ ಜಾರಿಗೆ ತಂದರೆ ಬಹಳ ಅನುಕೂಲವಾಗುತ್ತದೆಂದು ತಮ್ಮ ಮೂಲಕ ಸರ್ಕಾರಕ್ಕೆ ಹೇಳುವುದಕ್ಕೆ ಬಯಸುತ್ತೇನೆ. ಇನ್ನು ಕಲಿಕೆಯೊಡನೆ ಗಳಿಕೆ ಎನ್ನುವ ಯೋಜನೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ಮಾಡಿದ್ದಾರೆ. ಕಲಿಕೆ ಮುಗಿದ ಮೇಲೆ ನೇರವಾಗಿ ಉದ್ಯೋಗಕ್ಕೆ ಹೋಗ ತಕ್ಕಂಥ ವ್ಯವಸ್ಥೆಯನ್ನು ಸರ್ಕಾರದವರು ಏನು ಮಾಡಿದ್ದಾರೋ ಇದು ಬಹಳ ಒಳ್ಳೆಯದು. ಈ ಯೋಜನೆಯು ನಮ್ಮ ರಾಜ್ಯಕ್ಕೆ ಒಂದು ಮಾದರಿಯಾಗಿದೆ. ಇದನ್ನು ಪ್ರತಿಯೊಬ್ಬರೂ ಅನುಸರಿ ಸಿದರೆ ನಮ್ಮ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ಪರಿಹಾರವಾಗುತ್ತದೆಂದು ನನ್ನ ಭಾವನೆ ಇದೆ. ಈ ಯೋಜನೆಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಸರ್ಕಾರ ಪ್ರೋತ್ಸಾಹ ಕೊಡಬೇಕು. ಬಹಳ ಜಾಣತನದ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಇನ್ನು ವಿದ್ಯುತ್ ಉತ್ಪಾದನೆ ಮಾಡುವ ಬಗ್ಗೆ ಹೇಳಬೇಕಾದರೆ, ಕೈಗಾ ಅಣು ವಿದ್ಯುತ್ ಸ್ಥಾವರವನ್ನು ಯಾರೇ ಎಷ್ಟೇ ಪ್ರತಿಭಟಿಸಿದರೂ ನಾವು ಅದನ್ನು ಪ್ರಾರಂಭ ಮಾಡದೇ ಬಿಡುತ್ತೇವೆಂದು ಹೇಳಿದ್ದಾರೆ. ಕೇಂದ್ರ ಸರ್ಕಾರವೂ ಸಹ ಈ ಯೋಜನೆಗೆ ಅನುಮತಿಯನ್ನು ಕೊಟ್ಟಿದೆ. ಈಗಾಗಲೇ ನಮ್ಮ ರಾಜ್ಯದಲ್ಲಿ ವಿದ್ಯುತ್ತಿನ ಕೊರತೆ ಉಂಟಾಗಿರುವುದರಿಂದ ಈ ಕೊರತೆಯನ್ನು ನೀಗಿಸಲು ಈ ಯೋಜನೆಯನ್ನು ಮಾಡಬೇಕು. ಇದರ ಜೊತೆಗೆ ನಮ್ಮ ರಾಜ್ಯದಲ್ಲಿ ಹರಿಯುತ್ತಿರುವ ನದಿಗಳು ಏನಿವೆ ಇವುಗಳಲ್ಲಿ ಹೆಚ್ಚು ಪ್ರಮಾಣದ ನೀರು ಸಮುದ್ರಕ್ಕೆ ಸೇರ್ಪಡೆಯಾಗುತ್ತಿದೆ. ಪ್ರಯೋಜನವಿಲ್ಲದೆ ಸಮುದ್ರಕ್ಕೆ ಸೇರುತ್ತಿರುವ ಈ ನದಿಗಳ ನೀರನ್ನು ಉಪಯೋಗ ಮಾಡಿಕೊಂಡು ಇನ್ನೂ ಹೆಚ್ಚಿನ ರೀತಿಯಲ್ಲಿ ವಿದ್ಯುತ್ ಉತ್ಪಾದನೆ ಮಾಡುವುದಕ್ಕೆ ಸರ್ಕಾರ ಹೆಚ್ಚು ಗಮನ ಕೊಡಬೇಕು. ವಿದ್ಯುತ್ ಉತ್ಪಾದನೆ ಮಾಡುವಲ್ಲಿ ನಾವು ಪ್ರಗತಿಯನ್ನು ಸಾಧಿಸಿದರೆ ಕರ್ನಾಟಕ ರಾಜ್ಯ ಪ್ರಗತಿಯಾಗಲಿಕ್ಕೆ ಅನುಕೂಲ ವಾಗುತ್ತದೆ. ಆದ್ದರಿಂದ, ಸಮುದ್ರಕ್ಕೆ ಸೇರುತ್ತಿರುವ ನದಿಗಳ ನೀರನ್ನು ವಿದ್ಯುತ್ ತಯಾರಿಸುವುದಕ್ಕೆ ಬಳಕೆ ಮಾಡಿಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳು ಮಿನಿ ವಿದ್ಯುತ್ ಉತ್ಪಾದನೆ ಬಗ್ಗೆ ಒಂದು ಲಸಹೆಯನ್ನು ಮಾಡಿದ್ದಾರೆ. ಅದು ಬಹಳ ಒಳ್ಳೆಯ ಸಲಹೆಯಾಗಿದೆ ಎಂದು ನಾನು ಹೇಳ ಬಯಸು ತ್ತೇನೆ. ಇಂಥ ಒಂದು ಯೋಜನೆಯನ್ನು ನಮ್ಮ ತಾಲ್ಲೂಕಿನಲ್ಲಿಯೂ ಕೂಡ ಮಾಡಿದ್ದೇವೆ. ಇದನ್ನು ಆಯಾಯ ತಾಲ್ಲೂಕುಗಳಲ್ಲಿ ಮಾಡಿದರೆ ಅವರ ಬಳಕೆ ಮೀರಿ ಉಳಿದರೆ ಅದನ್ನು ಬೇರೆಯವರಿಗೆ ಸಹ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇದರಿಂದ ವಿದ್ಯುಚ್ಛಕ್ತಿಯ ಅಭಿವೃದ್ಧಿಯಾಗಿ ಕೈಗಾರಿಕೆಗಳಿಗೆ ಮತ್ತು ನೀರಾವರಿಗೆ ಸಹಾಯಕವಾಗುತ್ತದೆ. ಈ ವಿದ್ಯುಚ್ಛಕ್ತಿಯ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಗೆ ಮಾಡತಕ್ಕಂಥ ಒಂದು ಮನಸ್ಸನ್ನು ಸರಕಾರದವರು ಮಾಡ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದಕ್ಕೆ ಬೇಕಾದ ಹಣವನ್ನು ಕೇಂದ್ರ ಸರಕಾರದವರಿಂದ ಅಥವಾ ಇನ್ನಾವುದೇ ಮೂಲಗಳಿಂದ ತಂದು ಈ ಬಗ್ಗೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳ ಬೇಕಾದ ಅವಶ್ಯಕತೆ ಇದೆ ಎಂದು ನಾನು ಭಾವಿಸುತ್ತೇನೆ.

ನಮ್ಮ ಸರಕಾರದವರು ನೀರಾವರಿ ವಿಚಾರದಲ್ಲಿ ಹಿಂದಿನ ಸರಕಾರದವರಿಗಿಂತಲೂ ಹೆಚ್ಚಿನ ಒಂದು ಆಸಕ್ತಿಯನ್ನು ವಹಿಸಿ ಅವರಿಗಿಂತ ಮೂರು ಪಟ್ಟು ಹೆಚ್ಚಿಗೆ ಕೆಲಸಗಳನ್ನು ಮಾಡಿದ್ದಾರೆ. ಆದರೆ ಇಷ್ಟರಲ್ಲಿಯೇ ನಾವು ಹೆಮ್ಮೆ ಪಟ್ಟುಕೊಳ್ಳುವಂತಿಲ್ಲ. ಏಕೆಂದರೆ, ಇವರಿಂದ 2000ನೇ ಸಾಲಿಗೆ ನಾವು ನೀರಿನ ಬಳಕೆ ಮಾಡತಕ್ಕಂಥ ಒಂದು ವ್ಯವಸ್ಥೆಗೆ ಹೋಗುವುದಿಲ್ಲ ಎಂದು ಅನ್ನಿಸುತ್ತದೆ. ಆದ್ದರಿಂದ ನಾವು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಕೋ-ಆಪರೇಟಿವ್ ಸೆಕ್ಟರ್‌ನಲ್ಲಿ ನೀರಾವರಿ ಯೋಜನೆಗಳನ್ನು

ಮಾಡಬೇಕಾಗಿದೆ. ಮಾನ್ಯ ಮಾಜಿ ಮುಖ್ಯಮಂತ್ರಿಯವರಾದ ರಾಮಕೃಷ್ಣ ಹೆಗಡೆಯವರ ಸಲಹೆಯ ಮೇರೆಗೆ ನಾನು ನಮ್ಮ ಪ್ರದೇಶದಲ್ಲಿ ಒಂದು ಲಿಫ್ಟ್ ಇರಿಗೇಶನ್ ವ್ಯವಸ್ಥೆಯನ್ನು ಮಾಡಿಕೊಂಡಿದ್ದೇನೆ. ಸುಮಾರು ೩ ಸಾವಿರ ಎಕರೆ ಪ್ರದೇಶಕ್ಕೆ ಅದು ನೀರನ್ನು ಉಣಿಸುತ್ತದೆ. ಇದನ್ನು ಕೇವಲ ೧೬ ಸಾವಿರ ರೂಪಾಯಿಗಳ ಶೇರು ಹಣವನ್ನು ಕಲೆಕ್ಟ್ ಮಾಡಿ ಸರಕಾರದ ವತಿಯಿಂದ ಸಿಗುವ ಸೌಲಭ್ಯಗಳನ್ನು ಪಡೆದುಕೊಂಡು ೫೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಈ ಯೋಜನೆಯನ್ನು ಮಾಡಿದ್ದೇವೆ. ಅದು ಇಷ್ಟರಲ್ಲಿಯೇ ಕಾರ್ಯಾಚರಣೆ ಮಾಡತಕ್ಕಂಥ ವ್ಯವಸ್ಥೆಯಲ್ಲಿ ಇದೆ: ಮಾನ್ಯ ರಾಮಕೃಷ್ಣ ಹೆಗಡೆಯವರು ಹೇಳುತ್ತಾ ಇದ್ದರು "ಯಾರೂ ಸಹಕಾರಿ ಸಂಘಗಳ ಕಡೆಗೆ ಗಮನ ಕೊಡುವುದಿಲ್ಲ. ಬ್ಯಾಂಕ್‌ಗಳಿಂದ ಸಾಲ ಪಡೆದು ಅಭಿವೃದ್ಧಿ ಕಾರ್ಯಗಳಿಗೆ ಸಹಕಾರಿ ತಳಹದಿಯಲ್ಲಿ ಹೋಗುವುದಿಲ್ಲ. ಪ್ರತಿಯೊಂದಕ್ಕೂ ಸರಕಾರದವರನ್ನೇ ಕೇಳುತ್ತಾ ಇರುತ್ತಾರೆ" ಎಂದು ಹೇಳುತ್ತಾ ಇದ್ದರು ನಾನು ಅವರ ಸಲಹೆ ಪಡೆದು ಆ ಪ್ರಕಾರ ಈ ಒಂದು ಯೋಜನೆಯನ್ನು ಕಾರ್ಯಗತಮಾಡಿ ಸಫಲನಾಗಿದ್ದೇನೆ. ಇರುವ ಸ್ವಲ್ಪ ಹಣದಲ್ಲಿ ಬ್ಯಾಂಕಿನ ನೆರವು ಪಡೆದು ಈ ಯೋಜನೆಯನ್ನು ಸುಲಭವಾಗಿ ಮಾಡಿಕೊಳ್ಳಬಹುದು. ಸರಕಾರದವರು ಲಿಫ್ಟ್ ಇರಿಗೇಶನ್‌ಗೆ ೫೦ ಕೋಟಿ ರೂಪಾಯಿಗಳನ್ನು ಕೊಟ್ಟರೆ ಬ್ಯಾಂಕ್‌ನವರು ೯೦ ಪರ್ಸೆಂಟ್‌ನಷ್ಟು ಹಣವನ್ನು ಕೊಡುತ್ತಾರೆ. ಆ ಮೂಲಕ ೫೦ ಕೋಟಿಗೆ ೫೫೦ ಕೋಟಿ ರೂಪಾಯಿಗಳ ಹಣದಿಂದ ಲಿಫ್ಟ್ ಇರಿಗೇಷನ್ ಮಾಡಬಹುದಾಗಿದೆ. ಇದನ್ನು ಕೋ–ಆಪ್ ಸೆಕ್ಟಾರ್‌ನಲ್ಲಿ ಮಾಡಬಹುದಾಗಿದೆ. ಆದುದರಿಂದ ಇಂಥ ಯೋಜನೆಗಳನ್ನು ಅಳವಡಿಸಿಕೊಂಡು ಲಿಫ್ಟ್ ಇರಿಗೇಷನ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಲಿಫ್ಟ್–ಇರಿಗೇಷನ್ ಮತ್ತು ಕೋ–ಆಪ್ ಸೆಕ್ಟಾರ್–ಇವೆರಡನ್ನೂ ಹೊಂದಾಣಿಸಿ ೧೦ ಪರ್ಸೆಂಟ್‌ನಷ್ಟು ಹಣವನ್ನು ರೈತರಿಂದ ಪಡೆದು, ಉಳಿದುದನ್ನು ಬ್ಯಾಂಕಿನಿಂದ ಪಡೆದು ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳನ್ನು ಕೈಗೆತ್ತಿಕೊಳ್ಳಬೇಕು. ಬ್ಯಾಂಕ್‌ನವರಿಗೆ ಹಣ ವಾಪಸಾತಿಯ ಬಗ್ಗೆ ಗ್ಯಾರಂಟಿ ಇರುವುದರಿಂದ ಅವರ ಹಣ ಸಹಾಯ ಮಾಡುವುದಕ್ಕೆ ಮುಂದೆ ಬರುತ್ತಾರೆ. ಈ ಮಾತನ್ನು ನಾನು ಸ್ವತಃ ನನ್ನ ಅನುಭವದ ಮೂಲಕ ಹೇಳುತ್ತಾ ಇದ್ದೇನೆ. ಆದುದರಿಂದ ಬ್ಯಾಂಕ್‌ನವರ ಸಹಕಾರದಿಂದ ಸರಕಾರದವರು ಇಂಥ ಯೋಜನೆಗಳನ್ನು ಕೈಗೆತ್ತಿಕೊಂಡು ರೈತರುಗಳಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಸರಕಾರವನ್ನು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಸಾರಿಗೆ ವ್ಯವಸ್ಥೆಯ ಬಗ್ಗೆ ಹೇಳುವುದಾದರೆ, ಸಾರಿಗೆ ವ್ಯವಸ್ಥೆಯು ಸಮರ್ಪಕವಾಗಿ ನಡೆಯುತ್ತಾ ಇರುವುದರ ಜೊತೆಗೆ ಕೆಲವು ತೊಂದರೆಗಳು ಕೂಡ ಇವೆ. ನಮ್ಮ ಸರಕಾರದವರು ಅನೇಕ ರೀತಿಯಲ್ಲಿ ವಿದ್ಯಾಭ್ಯಾಸಕ್ಕೆ ಉತ್ತೇಜನ ನೀಡಿರುವುದರಿಂದ ಅಂದರೆ ಪುಕ್ಕಟೆ ಪುಸ್ತಕಗಳ ವಿತರಣೆ, ಬಟ್ಟೆಗಳ ವಿತರಣೆ ಮುಂತಾದ ಸೌಲಭ್ಯಗಳನ್ನು ಕೊಟ್ಟ ಕಾರಣದಿಂದಾಗಿ ವಿದ್ಯಾಭ್ಯಾಸ ಮಾಡುವವರ ಸಂಖ್ಯೆಯು ಜಾಸ್ತಿಯಾಗಿರುತ್ತದೆ. ಹಳ್ಳಿಗಾಡುಗಳಿಂದ ಪಟ್ಟಣಗಳಿಗೆ ದೊಡ್ಡ ಸಂಖ್ಯೆಯಲ್ಲಿ ಹುಡುಗರು ಕಾಲೇಜುಗಳಿಗೆ ಬರುತ್ತಾರೆ. ದೂರದ ಹಳ್ಳಿಗಳಿಂದ ಬಂದವರು ಪಟ್ಟಣದಲ್ಲಿ ಇದ್ದು ಅಭ್ಯಾಸಿಸುವುದಕ್ಕೆ ಆರ್ಥಿಕ ಅನುಕೂಲಗಳು ಅವರಿಗೆ ಇಲ್ಲವಾದ ಕಾರಣ ತಮ್ಮ ಹಳ್ಳಿಗಳಿಗೆ ಹಿಂದಿರುಗಿ ಹೋಗಬೇಕಾಗುತ್ತದೆ. ಅಂಥ ಸಂದರ್ಭದಲ್ಲಿ ಅವರಿಗೆ ಬಸ್ ಸಂಚಾರ ಸೌಲಭ್ಯಗಳು ಸಾಲದು. ಈ ಬಗ್ಗೆ ಸಾರಿಗೆ ವ್ಯವಸ್ಥೆಯವರು ಸೂಕ್ತ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ ಈ ಸವಲತ್ತುಗಳನ್ನು ಪಡೆದು ಇನ್ನೂ ಹೆಚ್ಚು ಜನರು ವಿದ್ಯಾಭ್ಯಾಸ ಮಾಡಲು ಅನಕೂಲವಾಗುತ್ತದೆ.

ಇನ್ನು ಗ್ರಾಮ ನೈರ್ಮಲ್ಯದ ಬಗ್ಗೆ ನನ್ನ ಒಂದು ಚಿಂತನೆಯನ್ನು ತಮ್ಮ ಮೂಲಕ ಹೇಳಬಯಸುತ್ತೇನೆ. ಇವೊತ್ತು ಒಳಚರಂಡಿ ಹಾಗೂ ಶೌಚಾಲಯಗಳನ್ನು ನಿರ್ಮಾಣ ಮಾಡಬೇಕೆಂದು ಸರಕಾರದವರು ಹೇಳುತ್ತಿದ್ದಾರೆ. ಅವುಗಳನ್ನು ಮಾಡಬೇಕು. ಆದರೆ ನಮ್ಮಲ್ಲಿ ಕೆಲವು ಕಡೆಗಳಲ್ಲಿ ನೀರಿನ ಉಪಲಭ್ಯತೆಯು ಬಹಳ ಕಡಿಮೆ ಇದೆ. ಶೌಚಾಲಯಗಳಿಗೆ ನೀರು ಪೂರೈಕೆಯು ಸರಿಯಾಗಿ ಇಲ್ಲದಿದ್ದರೆ ಅಲ್ಲಿ ವಾಸನೆ ಹುಟ್ಟಿ, ಅಕ್ಕಪಕ್ಕದವರಿಗೆ ಅನಾರೋಗ್ಯಕ್ಕೆ ಕಾರಣವಾಗಬಹುದಾಗಿದೆ. ನೀರಿನ ಸೌಲಭ್ಯದೊಂದಿಗೆ ಅಂಡರ್‌ಗ್ರೌಂಡ್ ಡ್ರೈನೇಜ್ ವ್ಯವಸ್ಥೆ ಇದ್ದರೆ ಅದು ಯಶಸ್ವಿಯಾಗುತ್ತದೆ. ಅದನ್ನು ಬಿಟ್ಟು ಕೇವಲ ಶೌಚಾಲಯಗಳನ್ನು ಮಾತ್ರ ಕಟ್ಟಿದರೆ ಸಾರ್ವಜನಿಕರ ಆರೋಗ್ಯಕ್ಕೆ ಹಾನಿಯಾಗುವ ಸಂದರ್ಭವೂ ಇದೆ. ಆದುದರಿಂದ ಈ ಬಗ್ಗೆ ಸೂಕ್ತ ರೀತಿಯಲ್ಲಿ ಶೌಚಾಲಯಗಳನ್ನು ನಿರ್ಮಿಸುವ ಬಗೆ ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ. ಶೌಚಾಲಯಗಳಿಗೆ ಡ್ರೈನೇಜ್ ವ್ಯವಸ್ಥೆ ಇಲ್ಲದಿದ್ದರೆ ವಾಸನೆ ಬಂದು ದುರ್ವ್ಯವಸ್ಥೆಯಾಗುತ್ತದೆ. ಈ ಬಗ್ಗೆ ಸರ್ಕಾರ ಚಿಂತನೆ ಮಾಡಲಿ. ಸಾರ್ವಜನಿಕ ಶೌಚಾಲಯಗಳನ್ನು ಹಳ್ಳಿಗಳಲ್ಲಿ ಕಟ್ಟುವ ಬದಲು ವೈಯಕ್ತಿಕವಾಗಿ ಮನೆಗಳಲ್ಲಿ ಕಟ್ಟಿಕೊಳ್ಳುವವರಿಗೆ ಹಣ ಸಹಾಯ ಮಾಡಲಿ ಈ ಬಗ್ಗೆ ಸರ್ಕಾರ ಯೋಚಿಸಲಿ ಎಂದು ಸಲಹೆ ಕೊಡುತ್ತೇನೆ.

ಆರೋಗ್ಯ ಇಲಾಖೆಯ ವೈದ್ಯಾಧಿಕಾರಿಗಳ ಬಗ್ಗೆ ನಾನು ಇಲ್ಲಿಗೆ ಬಂದಂದಿನಿಂದಲೂ ಸಲಹೆ ಮಾಡುತ್ತಿದ್ದೇನೆ. ಇಲ್ಲಿ ಏನಾಗುತ್ತಿದೆ ಎಂದರೆ ವೈದ್ಯಾಧಿಕಾರಿಗಳು ರಜೆ ಹಾಕಿ ಪರದೇಶಗಳಿಗೆ ಹೋಗಿಬಿಡುತ್ತಾರೆ. ಆಗ ಆ ಜಾಗ ಖಾಲಿ ಬೀಳುತ್ತದೆ. ಆ ಜಾಗಕ್ಕೆ ಬೇರೆ ವೈದ್ಯರನ್ನು ಭರ್ತಿ ಮಾಡಲು ಸರ್ಕಾರಕ್ಕೆ ಆಗುವುದಿಲ್ಲ. ರಜೆ ಮೇಲೆ ಹೋದ ಅಧಿಕಾರಿಗಳು ೫ ಅಥವಾ ೧೦ ವರ್ಷಗಳ ನಂತರ ಕೆಲಸಕ್ಕೆ ಸೇರುವವರೆಗೂ ಆ ಹುದ್ದೆ ಖಾಲಿಯೇ ಬಿದ್ದಿರುತ್ತದೆ ಇದರಿಂದ ಹಳ್ಳಿಗಾಡಿನ ಜನರಿಗೆ ವೈದ್ಯಕೀಯ ಸೇವೆ ಲಭಿಸುವಲ್ಲಿ ಅಪಾರ ಅನಾನುಕೂಲಉಂಟಾಗಿದೆ. ಇದನ್ನು ತಡೆಗಟ್ಟಬೇಕಾದರೆ ನಮ್ಮಲ್ಲಿರುವ ಪಾಸ್‌ಪೋರ್ಟ್ ಆಫೀಸಿಗೆ ಹೋದರೆ ಯಾವ್ಯಾವ ಡಾಕ್ಟರ್‌ಗಳು ಇಲ್ಲಿ ರಜೆ ಹಾಕಿ ಪರದೇಶಗಳಿಗೆ ಹೋಗಿದ್ದಾರೆ ಎಂಬ ಲಿಸ್ಟ್ ಸಿಗುತ್ತದೆ. ಅಂತಹ ವೈದ್ಯಾಧಿಕಾರಿಗಳಿಗೆಲ್ಲ ಸರ್ಕಾರ ನೋಟೀಸ್ ಕೊಟ್ಟರೆ ಸರಿಹೋಗುತ್ತದೆ. ಆಗ ಅವರ ಹುದ್ದೆ ತೆರವಾಗುವುದರಿಂದ ಬೇರೆ ಡಾಕ್ಟರನ್ನಾದರೂ ಗ್ರಾಮಾಂತರ ಪ್ರದೇಶಗಳಿಗೆ ಕಳಿಸಿದಾಗ ರೈತರಿಗೆ ಶುಶ್ರೂಷೆ ದೊರಕುತ್ತದೆ. ಆದ್ದರಿಂದ ನಿರ್ದಾಕ್ಷಿಣ್ಯವಾಗಿ ಇಲ್ಲಿ ಯಾರು ಡಾಕ್ಟರುಗಳು ರಜೆ ಹಾಕಿ ಪರದೇಶಗಳಿಗೆ ಹೋಗಿದ್ದಾರೋ ಅವರ ಮೇಲೆ ಕ್ರಮ ಕೈಗೊಳ್ಳಬೇಕು. . ರಜೆ ಮೇಲೆ ಡಾಕ್ಟರುಗಳು ಪರದೇಶಗಳಿಗೆ ಹೋಗುವುದು ತಪ್ಪಬೇಕು. ಇದರಿಂದ ನಮ್ಮಲ್ಲಿರುವ ನಿರುದ್ಯೋಗಿ ವೈದ್ಯರಾದರೂ ದುಡಿಯಲು ಅವಕಾಶವಾಗುತ್ತದೆ. ನಗರದಲ್ಲಿರುವವರು ಹಳ್ಳಿಗಳಿಗೆ ಹೋದರೆ ಹೊಸಬರು ಆ ಸ್ಥಳಕ್ಕೆ ಬರುತ್ತಾರೆ. ಆಮೇಲೆ ಔಷದಗಳ ಬಗ್ಗೆ ಯಂತೂ ಕಷ್ಟ ಹೇಳತೀರದಷ್ಟು ಇದೆ, ಇಲ್ಲಿಂದ ಔಷದಗಳನ್ನು ಕಳಿಸಿಕೊಡುವಾಗ ಯಾವ್ಯಾವುದೋ ಪೌಡರ್‌ಗಳನ್ನೋ, ಇನ್ನಾವುದನ್ನೋ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಿಗೆ ಕಳಿಸುತ್ತಾರೆ, ಅವು ಜನರಿಗೆ ಉಪಯೋಗಕ್ಕೇ ಬರುವುದಿಲ್ಲ. ಮೇಲ್ಪಟ್ಟದಲ್ಲಿರುವವರು ಅಲ್ಲಿ ಅವಶ್ಯಕತೆಯಾವುದಿದೆಯೋ ಅದೇ ಔಷದಗಳನ್ನು ಖರೀದಿಸುವಂತೆ ಸೂಚಿಸಬೇಕು ಮತ್ತು ಅವಶ್ಯಕ ಔಷದಗಳನ್ನೇ ಕಳಿಸಿಕೊಡಬೇಕು. ಈಗೇನಾಗುತ್ತಿದೆ ಎಂದರೆ ಬಡ ರೈತರು ಕಾಯಿಲೆಯಾಗಿ ಆಸ್ಪತ್ರೆಗೆ ಹೋದರೆ ಇಂಥಾ ಔಷದ ಹೊರಗಡೆಯಿಂದ ತೆಗೆದುಕೊಂಡುಬನ್ನಿ ಎಂದು ಅಲ್ಲಿನ ಡಾಕ್ಟರು ಚೀಟಿ ಬರೆದುಕೊಡುತ್ತಾರೆ ಇದರಿಂದ ಬಡವರಿಗೆ ತೊಂದರೆಯಾಗುತ್ತಿದೆ. ಸ್ಥಳೀಯ ಡಾಕ್ಟರು ಕೋರುವ ಔಷದಗಳನ್ನೇ ಇಲ್ಲಿಂದ ಕಳಿಸಬೇಕು. ಇಲ್ಲವಿದ್ದರೆ ಸರ್ಕಾರದ ಔಷದಗಳೆಲ್ಲ ಬಿಡಲಾಗಿ ಮೂಲೆಯಲ್ಲಿ ಬಿದ್ದಿರುತ್ತದೆ. ಇಂತಹ ಔಷದ ಕಳಿಸಿ ಬಜೆಟ್‌ನಲ್ಲಿ ಹಣ ಖರ್ಚಾಯಿತೆನ್ನುತ್ತಾರೆ. ನಮ್ಮ ಮಾನ್ಯ ದೇಶಮುಖ್‌ರವರು ಬಂದಿದ್ದಾರೆ. ಅವರು ಬಿಗಿಯಾಗಿ ಇದನ್ನು ಸಕ್ರಮಗೊಳಿಸುತ್ತಾರೆಂದು ನಾನು ಅಂದುಕೊಂಡಿದ್ದೇನೆ.

ಆಮೇಲೆ ಗ್ರಾಮೀಣ ಕಾರ್ಮಿಕರ ಬಗ್ಗೆ ಒಂದು ಯೋಜನೆ ಮಾಡಿದ್ದಾರೆ. ೬೦ ರೂಪಾಯಿ ಮಾಸಿಕ ವೇತನ ಕೊಡುವುದು ಅವರು ಸತ್ತರೆ ೨೫೦೦ ರೂಪಾಯಿಗಳ ಸಹಾಯಧನ ಕೊಡುವುದೆಂದು ಯೋಜನೆ ಮಾಡಿದ್ದಾರೆ. ಪ್ರತಿಯೊಂದು ರಾಜ್ಯವೂ ಈ ಬಗ್ಗೆ ಕಣ್ಣು ತೆರೆಯಬೇಕು. ಮಾತಿಗೆ ಮುಂಚೆ ರೈತರು ಈ ದೇಶದ ಬೆನ್ನುಮೂಳೆ ಎನುತ್ತೇವೆ. ಅವನಿಗೆ ದುಡಿದು ದುಡಿದು ಬೆನ್ನು ಮೂಳೆಯೇ ಹೋಗಿಬಿಟ್ಟಿರುತ್ತದೆ. ಅಂಥವರಿಗೆ ಮಾಸಿಕ ೬೦ ರೂಪಾಯಿ ಮತ್ತು ಸತ್ತಲ್ಲಿ ೨೫೦೦ ರೂಪಾಯಿಗಳನ್ನು ಕೊಡುವ ಈ ಯೋಜನೆ ಮಾದರಿಯದು ಎಂದು ಹೇಳಲು ಇಷ್ಟಪಡುತ್ತೇನೆ. ದೇಶದ ತುಂಬೆಲ್ಲಾ ಇದು ವ್ಯವಸ್ಥೆಯಾಗಬೇಕು. ವೋಟಿಗಾಗಿ ರೈತರ ಹೆಸರನ್ನು ಹೇಳುವುದನ್ನು ಬಿಡಬೇಕು. ಕರ್ನಾಟಕ ಸರ್ಕಾರದ ಮಾರ್ಗದರ್ಶನವನ್ನು ಪ್ರತಿಯೊಂದು ರಾಜ್ಯವೂ ಅನುಸರಿಸಿ, ಕೇಂದ್ರವೂ ಕಣ್ಣುತೆರೆದು ದೇಶಾದ್ಯಂತ ಈ ಯೋಜನೆಯನ್ನು ರೈತರಿಗೋಸ್ಕರ ಮಾಡಲಿ ಎಂದು ತಮ್ಮ ಮೂಲಕ ಸಲಹೆ ಮಾಡುತ್ತೇನೆ. ಇನ್ನು ಮೀಸಲಾತಿಯ ಬಗ್ಗೆ ಆಗಲೇ ಮಾನ್ಯ ಖರ್ಗೆಯವರು ಷೆಡ್ಯೂಲ್ಡ್ ಕ್ಯಾಸ್ಟನವರು ಫಸ್ಟ್ ಕ್ಲಾಸ್‌ನಲ್ಲಿ ತೇರ್ಗಡೆಯಾದ ಕೂಡಲೇ ಅವರಿಗೆ ನೇರವಾಗಿಯೇ ಸರ್ಕಾರೀ ನೌಕರಿ ಕೊಡುತ್ತೇವೆಂದು ಈ ಸರ್ಕಾರ ಹಿಂದೆ ಹೇಳಿತ್ತು. ಆ ಪ್ರಕಾರ ಒಂದು ಕೇಸೂ ಮಾಡಲಿಲ್ಲ ಎಂದು ಹೇಳಿದರು. ಏನು ಮಾಡುವುದು ? ಅದು ಇಂಪ್ಲಿಮೆಂಟಾಗುವುದರಲ್ಲಿಯೇ ಯಾರೋಬ್ಬರು ಕೋರ್ಟಿಗೆ ಹೋಗಿ ಅದರ ವಿರುದ್ಧ ಸ್ಟೇ ತೆಗೆದುಕೊಂಡನು, ಅದು ಇನ್ನೂ ಇತ್ಯರ್ಥವಾಗದಿದ್ದುದರಿಂದ ಹಾಗೇ ನಿಂತುಹೋಗಿದೆ. ಈ ಬಗ್ಗೆ ಸ್ಟೇಯನ್ನು ವೆಕೇಟ್ ಮಾಡಿಸುವಲ್ಲಿ ಹೆಗಡೆಯವರು ಏನೂ ಕೆಲಸ ಮಾಡಲಿಲ್ಲ ಎಂದು ಹೇಳಬಾರದು, ಹರಿಜನ ಗಿರಿಜನರ ಬಗ್ಗೆ ಬರೀ ಬಾಯಿಯಲ್ಲಿ ಮಾತನಾಡುವುದನ್ನು ಬಿಟ್ಟು ಮಾನ್ಯ ಹೆಗಡೆಯವರು ಅವರಿಗೆ ಅನುಕೂಲವಾಗುವಂತಹ ರೀತಿಯಲ್ಲಿ ಕಾನೂನನ್ನು ತಂದು ತೋರಿಸಿದ್ದಾರೆ. ಕೋರ್ಟಿನಲ್ಲಿ ಕೆಲವು ಸ್ಟೇ ಆರ್ಡರ್ ಇದೆ, ಅದನ್ನೇ ಮುಂದಿಟ್ಟುಕೊಂಡು ಮಾನ್ಯ ಖರ್ಗೆಯವರು ಈ ರೀತಿ ಹೇಳಬಾರದು ಎಂದು ನಾನು ಅವರಲ್ಲಿ ವಿನಂತಿಸುತ್ತೇನೆ. ಇಷ್ಟು ಕಾಳಜಿಯಿಂದ ಬೇರೆ ಯಾವ ಸರಕಾರವೂ ಕೂಡ ಮಾಡಿಲ್ಲ. ಮಹಿಳೆಯರಿಗೆ ಹೆಚ್ಚಿನ ಪ್ರೋತ್ಸಾಹಗಳನ್ನು ನಮ್ಮ ಕರ್ನಾಟಕ ರಾಜ್ಯ ಕೊಡುತ್ತದೆ. ಅವರಿಗೆ ಹೆಚ್ಚಿನ ಪ್ರೋತ್ಸಾಹ, ಉದ್ಯೋಗ

ಕೊಡತಕ್ಕಂತಹ ವ್ಯವಸ್ಥೆಯನ್ನು ಮಾಡಿ ಈ ಬಜೆಟ್‌ನಲ್ಲಿ ಅವರಿಗೆ ಉದ್ಯೋಗ ಮೀಸಲಾತಿಯನ್ನೂ ಕೂಡ ಕೊಡಬೇಕೆಂದು ಮಾಡಿದ್ದಾರೆ. ಬಸವಣ್ಣನವರು ಹೇಳಿದಂತೆ ಕಾಯಕವೇ ಕೈಲಾಸ ಎಂಬ ತತ್ವಕ್ಕೆ ಅನುಗುಣವಾಗಿ ಮಹಿಳೆಯರೂ ಕೂಡ ಕಾಯಕ ಮಾಡಬೇಕು, ಉತ್ಪನ್ನವನ್ನು ಮಾಡಬೇಕು ಆ ಮೂಲಕ ಸಂಸಾರವನ್ನು ನಡೆಸಬೇಕೆಂದು ಮಾಡಿದ್ದಾರೆ, ಗಂಡು ಹೆಣ್ಣು ಇಬ್ಬರೂ ದುಡಿದು ಸಂಸಾರವನ್ನು ತೂಗಿಸಬೇಕು, ಆ ಮೂಲಕ ಸಂಸಾರದ ಅಭಿವೃದ್ಧಿಯನ್ನು, ದೇಶದ ಅಭಿವೃದ್ಧಿಯನ್ನು ರೂಢಿಸಬೇಕು ಎಂಬ ಉದ್ದೇಶದಿಂದ ಈ ರೀತಿ ನಮ್ಮ ಸರಕಾರದವರು ಮಾಡಿದ್ದಾರೆ, ಇದು ಮಾರ್ಗದರ್ಶನವಾದಂತಹ ಬಜೆಟ್ ಎಂದು ನಾನು ಹೇಳುತ್ತೇನೆ. ಇನ್ನು ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಕೆಲವು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಹೆಗಡೆಯವರ ಮನೆತನದವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ದುಡಿದವರು, ಹೆಗಡೆಯವರೂ ಕೂಡ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದವರು. ಅವರಿಗೆ ಸ್ವಾತ್ರಂತ್ಯ ಯೋಧರ ಬಗ್ಗೆ ಬಹಳ ಅಭಿಮಾನ ಇದೆ. ಆ ಮನೆತನದವರು ಯಾವುದೇ ಪ್ರತಿಫಲವಿಲ್ಲದೆ ಹೋರಾಟ ಮಾಡಿದಂತಹವರು. ಸ್ವಾತಂತ್ರ್ಯ ಹೋರಾಟಗಾರರಿಗೆ ಕೇಂದ್ರ ಸರ್ಕಾರ ೭೫೦ ರೂಪಾಯಿಗಳನ್ನು ನೀಡುತ್ತಿದೆ. ನಮ್ಮ ಸರಕಾರ ಕನಿಷ್ಠ ಪಕ್ಷ ೪೦೦ ರೂಪಾಯಿಗಳನ್ನಾದರೂ ನೀಡಬೇಕೆಂದು ನಾನು ಸರಕಾರವನ್ನು ಒತ್ತಾಯ ಮಾಡುತ್ತೇನೆ. ಇನ್ನು ಹಿಂದೆ ಮಾನ್ಯ ಹೆಗಡೆಯವರು ಸ್ವಾತ್ರಂತ್ರ್ಯ ಯೋಧರಿಗೆ ಬಸ್ ಪಾಸ್ ಅನ್ನು ಕೊಡುತ್ತೇವೆಂದು ಘೋಷಣೆ ಮಾಡಿದ್ದರು ಮತ್ತು ಉಚಿತವಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಕೊಡುವ ಬಗ್ಗೆ ಕೂಡ ಘೋಷಣೆ ಮಾಡಿದ್ದರು. ಸ್ವಾತಂತ್ರ್ಯ ಯೋಧರು ನಮಗೆ ಏನಾದರೂ ಸವಲತ್ತು ಸಿಗಬೇಕೆಂದಿದ್ದರೆ ಅದು ಹೆಗಡೆಯವರ ಕಾಲದಲ್ಲಿ ಸಿಗಬೇಕು, ಇಲ್ಲದಿದ್ದರೆ ಇಲ್ಲವೆಂದು ಹೇಳುತ್ತಿದ್ದಾರೆ, ಆ ರೀತಿ ಆಗಬಾರದು. ಇವರೂ ಕೂಡ ಅವರಿಗೆ ಸೌಲಭ್ಯವನ್ನು ಒದಗಿಸಬೇಕು, ಸ್ವಾತಂತ್ರ್ಯ ಯೋಧರಿಗೆ ೩೦೦೦ ರೂಪಾಯಿ ಇನ್‌ಕಂ ಬಂದರೆ ಅವರಿಗೆ ಆಸ್ಪತ್ರೆಯಲ್ಲಿ ಉಚಿತವಾಗಿ ಔಷಧಿಗಳನ್ನು ನೀಡತಕ್ಕಂತಹ ಸೌಲಭ್ಯ ಇಲ್ಲ, ಅವರಿಗೆ ಕೊಡಬಾರದೆಂಬ ನಿರ್ಬಂಧ ಇದೆ. ಇದು ಏತಕ್ಕೋ ಗೊತ್ತಿಲ್ಲ. ಶಾಸಕರಿಗೆ ಇಂತಹ ನಿರ್ಬಂಧ ಇಲ್ಲ. ಅವರಿಗೆ ವಯಸ್ಸಾಗಿರುವುದರಿಂದ ಇಂತಹ ನಿರ್ಬಂಧವನ್ನು ಹಾಕುವುದು ಸರಿಯಿಲ್ಲ. ಅದನ್ನು ತೆಗೆದುಹಾಕಿ, ಅವರು ಎಲ್ಲಿ ಹೋದರೂ ಕೂಡ ಆಸ್ಪತ್ರೆಯಲ್ಲಿ ಔಷಧಿಯನ್ನು ಕೊಡತಕ್ಕಂತಹ ವ್ಯವಸ್ಥೆಯನ್ನು ಮಾಡಬೇಕು. ಈ ಲಿಮಿಟ್ ಅನ್ನು ತೆಗೆದುಹಾಕಬೇಕು. ಮಾನ್ಯ ಸಾರಿಗೆ ಮಂತ್ರಿಗಳು ಹೇಳಿದಂತೆ ಅವರಿಗೆ ಬಸ್ ಪಾಸ್ ಅನ್ನು ನೀಡಬೇಕು. ಅವರು ಅವರ ಜಿಲ್ಲೆಗೆ ಇಲ್ಲವೇ ಬೆಂಗಳೂರಿಗೆ ಒಮ್ಮೊಮ್ಮೆ ಬರುತ್ತಾರೆ, ಇನ್ನೆಲ್ಲಿಗೆ ಅವರು ಹೋಗುತ್ತಾರೆ. ಅವರು ಓಡಾಡುವುದಕ್ಕೆ ಬಸ್‌ಪಾಸ್‌ನ ಸವಲತ್ತನ್ನು ನೀಡಬೇಕು. ಬಸವಣ್ಣನವರು ಸೋಷಿಯಲ್ ಪ್ಯಾಟ್ರನ್ ಆಫ್ ಸೊಸೈಟಿಯನ್ನು ೧೨ನೇ ಶತಮಾನದಲ್ಲಿಯೇ ತಂದರು. ಅವರು ಬರೀ ಭಾಷಣ ಮತ್ತು ಬರವಣಿಗೆಯಲ್ಲಿ ತಂದು ಇದನ್ನು ಕಾರ್ಯಗತ ಮಾಡಿ ಮಾದರಿ ಸಮಾಜವನ್ನು ಕಟ್ಟಿದರು. ಅವರು ಜಾತಿ ಆಧಾರದಮೇಲೆ ಮಾಡಲಿಲ್ಲ. ಹುಟ್ಟಿನಲ್ಲಿ ಅವರು ಬ್ರಾಹ್ಮಣರಾಗಿದ್ದು ಲಿಂಗವನ್ನು ಕಟ್ಟಿಕೊಂಡರು, ಅವರು ಎಲ್ಲಾ ಜಾತಿಯವರನ್ನೂ ಕೂಡಿಸಿಕೊಂಡು ಸಮಾಜವನ್ನು ಕಟ್ಟಿದರು ಅಂತಹ ಮಹಾನುಭಾವನ ಫೋಟೋವನ್ನು ವಿಧಾನಸೌಧದಲ್ಲಿ ಇಟ್ಟರೆ ಅವರ ನೆನಪು ಮಾಡಿಕೊಂಡು ಅವರ ತತ್ವಗಳನ್ನು ಪರಿಪಾಲನೆ ಮಾಡಿ, ಸಮಾಜದಲ್ಲಿ ಎಲ್ಲರೂ ಒಂದೇರೀತಿ ಸಮಾನವಾಗಿ ಬಾಳತಕ್ಕಂತಹ ಬಾಳುವುದಕ್ಕೆ ಅನುವು ಆಗತಕ್ಕಂತಹ, ಸಮಾನತೆಯನ್ನು ರೂಢಿಸತಕ್ಕಂತಹ ಮನೋಧರ್ಮ ಬೆಳೆಯುತ್ತದೆಂದು ನನಗನ್ನಿಸುತ್ತದೆ. ಅವರ ಫೋಟೋವನ್ನು ಇಲ್ಲಿ ಇಡಲಿಕ್ಕೆ ಸರಕಾರಕ್ಕೆ ತಾವು ಒತ್ತಾಯ ಮಾಡಬೇಕು ಇವತ್ತಿನ ಬಡ್ಜೆಟ್ ಏನು ಇದೆ ಇದು ಬಹಳ ಆಕರ್ಷಣೀಯವಾಗಿದೆ. ಪ್ರತಿಯೊಬ್ಬ ರಾಜ್ಯದವರೂ ಕೂಡ ಇದನ್ನು ಅನುಮೋದನೆ ಮಾಡತಕ್ಕಂಥಾದ್ದಾಗಿದೆ. ಎಲ್ಲರೂ ಒಗ್ಗಟ್ಟಾಗಿ ರಾಜಕೀಯ ವ್ಯವಹಾರವನ್ನು ಮರೆತು ನಮ್ಮ ರಾಜ್ಯಕ್ಕೆ ಬರಬೇಕಾದಂತಹ ಪಾಲನ್ನು ನಾವು ಪಡೆದುಕೊಂಡು ಜನರಿಗೆ ಎಲ್ಲ ಸವಲತ್ತನ್ನು ಒದಗಿಸಿಕೊಡತಕ್ಕಂತಹ ಪರಿಪಾಠ ಪ್ರಾರಂಭವಾಗಲಿ, ಅದರ ಪ್ರತಿಫಲ ಜನರಿಗೆ ಸಿಗಲಿ ಆ ಮೂಲಕ ಎಲ್ಲರೂ ಒಂದಾಗಿ ಹೋಗೋಣವೆಂದು ಹೇಳುತ್ತಾ, ಈಗ ಇಟ್ಟಿರತಕ್ಕಂತಹ ಬಡ್ಜೆಟ್ ಬಡವರಿಗೆ ವ್ಯಾಪಾರಸ್ಥರಿಗೆ ಮತ್ತು ಪ್ರತಿಯೊಂದು ಜನಾಂಗದವರಿಗೂ ಅನುಕೂಲವಾಗಿದೆ ಎಂದು ಶ್ಲಾಘನೆ ಮಾಡುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ಅಭಿನಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ನಾರಾಯಣರಾವ್ (ಗಾಂಧೀನಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಅರ್ಥ ಸಚಿವರೂ ಸಹ ಆಗಿದ್ದಾರೆ. ಅವರು ತಮ್ಮ ಮೊದಲ ಮುಂಗಡ ಪತ್ರ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ವನ್ನು ಈ ಸಭೆಯಲ್ಲಿ ಇಟ್ಟಿದ್ದಾರೆ. ಆದುದರಿಂದ ಅವರನ್ನು ಬೇರೆಯವರು ಅಭಿನಂದಿಸಿರುವ ರೀತಿಯಲ್ಲಿ ನಾನೂ ಕೂಡಾ ಅಭಿನಂದಿಸುತ್ತೇನೆ. ಆದರೆ, ಅವರೇನು ಈ ಮುಂಗಡ ಪತ್ರವನ್ನು ಇಟ್ಟಿದ್ದಾರೆ, ಅದರಲ್ಲಿರುವ ಯಾವ ವಿಚಾರದಲ್ಲಿಯೂ ಸಹ ಹೊಗಳುವಂಥ ಒಂದು ಅಂಶವೂ ಇಲ್ಲ ಎಂದು ಹೇಳುವುದಕ್ಕೆ ಬಹಳ ವಿಷಾದವಾಗುತ್ತದೆ. ಇವತ್ತು ಮುಂಗಡ ಪತ್ರದ ಮುಖಾಂತರ ರಾಜ್ಯದ ಹಣಕಾಸಿನ ನಿಜವಾದ ಪರಿಸ್ಥಿತಿಯನ್ನು ಜನಗಳ ಮುಂದೆ ಇಡದೇ ಕರ್ನಾಟಕದ ಜನತೆಗೆ ಒಂದು ದೊಡ್ಡ ಮೋಸವನ್ನು ಮಾಡುತ್ತಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು ಎಂದು ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇವತ್ತು ಎಕನಾಮಿಕ್ ಸರ್ವೆಯನ್ನು ಸದನದಲ್ಲಿ ಇಟ್ಟಿದ್ದಾರೆ. ಈಗಾಗಲೇ ಅದರ ಬಗ್ಗೆ ಅನೇಕ ವಿರೋಧ ಪಕ್ಷದ ಸದಸ್ಯರುಗಳು ಹೇಳಿದ್ದಾರೆ. ಎಕನಾಮಿಕ್ ಸರ್ವೆಯನ್ನು ಅವರೂ ಸಹ ಒಪ್ಪಿಕೊಂಡಿದ್ದಾರೆ. ಇವರು ರಾಷ್ಟ್ರದ ಬೇರೆ ರಾಜ್ಯಗಳಿಗಿಂತ ಕರ್ನಾಟಕದಲ್ಲಿ ಬೆಲೆ ಏರಿಕೆ ಜಾಸ್ತಿಯಾಗಿದೆ ಎಂದು ಒಪ್ಪಿಕೊಂಡಿದ್ದಾರೆ. ಅದರಲ್ಲಿಯೂ ಸಹಾ ಬೆಂಗಳೂರು ನಗರದಲ್ಲಿ ಎಲ್ಲಕ್ಕಿಂತ ಹೆಚ್ಚಾಗಿ ಅಂದರೆ ಸುಮಾರು ಶೇಕಡ ೧೫ ಕ್ಕೂ ಹೆಚ್ಚಿಗೆ ಬೆಲೆ ಏರಿಕೆಯಾಗಿದೆ ಎಂದು ಒಪ್ಪಿಕೊಂಡಿದ್ದಾರೆ. ಅದೇ ರೀತಿ ಅಗ್ರಿಕಲ್ಚರ್ ಸೆಕ್ಟರ್‌ನಲ್ಲಿ ಪ್ರೊಡಕ್ಷನ್ ಎಷ್ಟು ಆಗಿಬೇಕೋ ಅಷ್ಟು ಆಗಿಲ್ಲ. ಹೋದ ವರ್ಷಕ್ಕಿಂತ ೧.೨ ರಷ್ಟು ನೆಗೆಟೀವ್ ಆಗಿದೆ. ಆದರೆ ಈ ವರ್ಷವೂ ಕೂಡಾ ಬಹಳ ಕಡಿಮೆಯಾಗಿದೆ ಎಂದು ಅದನ್ನು ಕೂಡಾ ಒಪ್ಪಿಕೊಂಡಿದ್ದಾರೆ. ಅದೇ ರೀತಿ ಎಂಪ್ಲಾಯ್‌ಮೆಂಟ್ ಜನರೇಷನ್ ಏನು ಇದೆ, ಅದರ ಬಗ್ಗೆಯೂ ಸಹಾ ಅವರು ತಮ್ಮ ವಿಫಲತೆಯನ್ನು ಅವರ ಎಕಾನಾಮಿಕ್ ಸರ್ವೆಯಲ್ಲಿ ಒಪ್ಪಿಕೊಂಡಿದ್ದಾರೆ. ಪವರ್ ಜನರೇಷನ್‌ನಲ್ಲಿಯೂ ಸಹಾ ತಮ್ಮ ವಿಫಲತೆಯನ್ನು ಅವರ ಎಕಾನಾಮಿಕ್ ಸರ್ವೆಯಲ್ಲಿ ಒಪ್ಪಿಕೊಂಡಿದ್ದಾರೆ. ಪವರ್ ಜನರೇಷನ್‌ನಲ್ಲಿಯೂ ಸಹಾ ತಮ್ಮ ವಿಫಲತೆಯನ್ನು ಒಪ್ಪಿಕೊಂಡಿದ್ದಾರೆ., ನಾವು ಮಾಡುವುದಕ್ಕೆ ಆಗಲಿಲ್ಲ ಎಂದು ಹೇಳಿ ಒಪ್ಪಿಕೊಂಡಿದ್ದಾರೆ. ಆದುದರಿಂದ ನಾವು ಮುಂಗಡಪತ್ರದ ಬಗ್ಗೆ ಏನು ಅಂದುಕೊಂಡಿದ್ದೆವೋ ಏನು ನಿರೀಕ್ಷೆ ಮಾಡಿದ್ದೆವೋ ಆ ರೀತಿಯಲ್ಲಿ ಅದು ಇಲ್ಲ. ಎಕಾನಾಮಿಕ್ ಸರ್ವೆಯಲ್ಲಿ ಎಲ್ಲಾ ವಿಫಲತೆಗಳು ಬಂದಿದೆ. ಯಾವ ಯಾವ ಸೆಕ್ಟರ್‌ನಲ್ಲಿ ವಿಫಲತೆಗಳು ಬಂದಿವೆ. ಯಾವ ಯಾವ ಬಾಬಿನಲ್ಲಿ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿತ್ತೋ ಆ ರೀತಿಯ ಕ್ರಮಗಳನ್ನು ಅವರು ತೆಗೆದುಕೊಂಡಿಲ್ಲ. ನಿಜವಾಗಿಯೂ ಮುಂಗಡ ಪತ್ರದ ಬಗ್ಗೆ ಏನು ನಾವು ಅಂದುಕೊಂಡಿದ್ದೆವೋ ಆ ರೀತಿ ಇಲ್ಲದೇ ಇರುವುದರಿಂದ ಈ ಮುಂಗಡ ಪತ್ರವನ್ನು ನೋಡಿದರೆ ಖಂಡಿತವಾಗಿಯೂ ಬಹಳ ವಿಷಾದವೆನಿಸುತ್ತದೆ. ಎಕಾನಾಮಿಕ್ ಸರ್ವೆಯಲ್ಲಿ ವಿಫಲತೆಯನ್ನು ಎತ್ತಿ ತೋರಿಸಿದ್ದಾರೆ. ಆ ವಿಫಲತೆಗಳನ್ನು ಸರಿಪಡಿಸುವುದಕ್ಕೆ ಮತ್ತು ಅದನ್ನು ಸರಿಪಡಿಸುವುದರ ಮುಖೇನ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಬಹಳ ಚೆನ್ನಾಗಿ ಮಾಡುವುವಕ್ಕೆ ಯಾವ ಒಂದು ಸೂಚನೆಯೂ ಸಹಾ ಮುಂಗಡ ಪತ್ರದಲ್ಲಿ . ಕಾಣುತ್ತಿಲ್ಲ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮೊಟ್ಟ ಮೊದಲನೆಯದಾಗಿ, ಬೆಲೆ ಏರಿಕೆ ಬಹಳ ಜಾಸ್ತಿ ಯಾಗಿದೆ ಎಂದು ಅವರೇ ಹೇಳುತ್ತಾರೆ ಬೆಲೆ ಏರಿಕೆಯ ವಿಷಯ ತೆಗೆದುಕೊಂಡಾಗ ಬೆಲೆ ಏರಿಕೆಯ ಬಗ್ಗೆ ಅವರೇ ಒಪ್ಪಿಕೊಂಡಿದ್ದಾರೆ, ಆದರೆ ಇನ್ನು ಯಾವ ಕ್ರಮದ ಮುಖಾಂತರವಾಗಿ ಬೆಲೆ ಏರಿಕೆಯನ್ನು ತಪ್ಪಿಸಬೇಕು ಎನ್ನುವ ಬಗ್ಗೆ, ಯಾವ ರೀತಿಯಾದ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆಯೂ ಈ ಮುಂಗಡ ಪತ್ರದಲ್ಲಿ ಯಾವ ಸೂಚನೆಯೂ ಇಲ್ಲ. ಇದಕ್ಕಿಂತ ಹೆಚ್ಚಾಗಿ ಇವತ್ತು ಬೆಲೆ ಏರಿಕೆ ಜಾಸ್ತಿಯಾಗುವ ಸಂಭವ ಇದೆಯೋ ಹೊರತು ಅದನ್ನು ಕಡಿಮೆ ಮಾಡುವ ಯಾವ ಒಂದು ಕ್ರಮವನ್ನೂ ಮುಂಗಡ ಪತ್ರದಲ್ಲಿ ಸೂಚಿಸಿಲ್ಲ ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇವತ್ತು ಸುಮಾರು ೨೬೮ ಕೋಟಿ ರೂಪಾಯಿಯಷ್ಟು ಕೊರತೆ ಇದೆ, ಡೆಫಿಸಿಟ್ ಫೈನಾನ್ಸ್ ಇದೆ ಎಂದು ಅವರೇ ಒಪ್ಪಿಕೊಂಡಿದ್ದಾರೆ ಇದು ನಿಜ ಪರಿಸ್ಥಿತಿಯಲ್ಲ ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇವತ್ತು ಏನು ಡೆಫಿಸಿಟ್ ಅಮೌಂಟ್ ೨೬೮ ಕೋಟಿ ರೂಪಾಯಿ ಆಗುತ್ತದೆ ಎಂದು ಒಪ್ಪಿಕೊಂಡಿದ್ದಾರೆ, ಅದರ ಎರಡರಷ್ಟು ಆಗುತ್ತದೆ ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇದರ ಒಂದು ನಿಜವಾದ ಪರಿಸ್ಥಿತಿಯನ್ನು ಅವರು ಈ ಸದನದ ಮುಂದೆ ಇಟ್ಟಿಲ್ಲ. ಇವರ ಮುಂಗಡ ಪತ್ರವನ್ನು ಸರಿಯಾಗಿ ತೆಗೆದುಕೊಂಡು ನೋಡಿದರೆ, ಈ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ತೆಗೆದುಕೊಂಡು ನೋಡಿದರೆ ಖಂಡಿತವಾಗಿ ಈ ಡೆಫಿಸಿಟ್ ಫೈನಾನ್ಸ್ ಸುಮಾರು ೫೦೦ ಕೋಟಿ ರೂಪಾಯಿಗಳಿಗೂ ದಾಟುವ ಒಂದು ಪರಿಸ್ಥಿತಿ ಇದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಒಂದು ರಾಜ್ಯದಲ್ಲಿ ಸುಮಾರು ೫೦೦ ಕೋಟಿ ರೂಪಾಯಿಗಳ ಡೆಫಿಸಿಟ್ ಫೈನಾನ್ಸ್ ಇದೆ ಎಂದು ಹೇಳಿದರೆ ಅಲ್ಲಿ ಬೆಲೆ ಏರಿಕೆಯನ್ನು ಯಾವ ರೀತಿಯಲ್ಲಿ ತಡೆಗಟ್ಟಬಹುದೋ ನನಗಂತೂ ಅರ್ಥವಾಗುವುದಿಲ್ಲ. ಅವರು ಹೇಳುವ ರೀತ್ಯಾ ೨೬೮ ಕೋಟಿ ರೂಪಾಯಿ ಡೆಫಿಸಿಟ್ ಫೈನಾನ್ಸ್ ಎಂದು ಒಪ್ಪಿಕೊಂಡರೂ ಸಹಾ ಈ ಬೆಲೆ ಏರಿಕೆಯನ್ನು ಯಾವ ರೀತಿ ತಡೆಗಟ್ಟುತ್ತಾರೋ ನನಗಂತೂ ಅರ್ಥವಾಗುವುದಿಲ್ಲ. ಖಂಡಿತವಾಗಿಯೂ ಹೋದ ವರ್ಷ ಏನು ಬೆಲೆ ಏರಿಕೆ ಇತ್ತು, ಅದಕ್ಕಿಂತಲೂ ಈ

ವರ್ಷ ಜಾಸ್ತಿಯಾಗುವ ಸಾಧ್ಯತೆ ಹೆಚ್ಚಾಗಿ ಕಾಣಬರುತ್ತಿದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ನಮ್ಮ ಬೆಂಗಳೂರಿನ ಸುತ್ತಮುತ್ತ ಏನು ವ್ಯವಹಾರ ನಡೆಯುತ್ತಿದೆ ಎನ್ನುವುದನ್ನು ನೋಡಬೇಕು. ಬಿಲ್ಡಿಂಗ್ ಕನ್‌ಸ್ಟ್ರಕ್ಷನ್ ಆಕ್ಟಿವಿಟೀಸ್ ವಿಪರೀತ ನಡೆಯುತ್ತಿವೆ. ನೆಲವನ್ನು ಕೊಡುವ ಬಗ್ಗೆ ಕಾರ್ಯಕ್ರಮಗಳೂ ನಡೆಯುತ್ತಿವೆ. ಇವರಿಂದ ಸುಮಾರು ಹಣ ಅರ್ಥ ವ್ಯವಸ್ಥೆಗೆ ಬರುತ್ತದೆ. ಹಣ ಬರುವುದನ್ನೇ ನಿಯಂತ್ರಣ ಮಾಡುವುದಕ್ಕೋಸ್ಕರ ಅಥವಾ ನಿಯಂತ್ರಣ ಮಾಡದೆ ಹೋದರೆ ಕಷ್ಟವಾಗುತ್ತದೆ ನಿಯಂತ್ರಣದ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಮುಂಗಡ ಪತ್ರದಲ್ಲಿ ಏನೂ ಹೇಳಿಲ್ಲ. ನಮ್ಮ ರಾಷ್ಟ್ರದ ಅನೇಕ ಕಡೆಗಳಿಂದ, ಹೊರ ದೇಶಗಳಿಂದ ನಮ್ಮ ರಾಜ್ಯಕ್ಕೆ ಬಂದು ಬೆಂಗಳೂರು ಹಾಗೂ ಸುತ್ತಮುತ್ತ ನೆಲವನ್ನು ತೆಗೆದುಕೊಳ್ಳುತ್ತಿದ್ದಾರೆ. ಇದರಿಂದ ಸಾವಿರಾರು ಕೋಟಿ ರೂಪಾಯಿಗಳು ಬರುತ್ತಿದೆ. ಇದನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲವೆಂದು ಹೇಳುತ್ತೇನೆ ಈಗ ಪರಿಸ್ಥಿತಿ ಏನು ಇದೆ, ಇದನ್ನು ಯಾವ ರೀತಿ ಹತೋಟಿ ಮಾಡಬೇಕು ಎಂಬುದರ ಬಗ್ಗೆ ಮುಂಗಡ ಪತ್ರದಲ್ಲಿ ಅಥವಾ ನಗರಾಭಿವೃದ್ಧಿ ವಿಷಯದಲ್ಲಿ ಮಾತನಾಡುವಾಗ ಅವರು ಏನೂ ಹೇಳಿಲ್ಲವೆಂಬುದನ್ನು ನಾನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ನೋಡಿದರೆ ನಮಗೆ ಗೊತ್ತಾಗುತ್ತದೆ. ನಮ್ಮ ರಾಜ್ಯದಲ್ಲಿ ಸುಮಾರು ೧೮೦ ಕೋಟಿ ರೂಪಾಯಿಗಳ ಬಿಲ್ಸ್ ಪೆಂಡಿಂಗ್ ಇವೆ. ಇನ್ನೂ ಕಂಟ್ರಾಕ್ಟರ್‌ಗಳಿಗೆ ಹಣವನ್ನು ಕೊಡಬೇಕಾಗಿದೆ. ಕೊಟ್ಟಿರತಕ್ಕ ಚೆಕ್‌ಗಳು ಆನರ್ ಆಗಿಲ್ಲ. ಹೀಗೆ ನೂರು ಕೋಟಿ ರೂಪಾಯಿಗಳ ಬಿಲ್ಸ್ ಪೆಂಡಿಂಗ್ ಇವೆ. ಈ ಪರಿಸ್ಥಿತಿಯಲ್ಲಿ ಬೆಲೆ ಏರಿಕೆಯನ್ನು ಯಾವ ರೀತಿ ತಡೆಯುತ್ತೀರಿ, ಇದು ಖಂಡಿತವಾಗಿಯೂ ಬಹಳ ವಿಷಾದನೀಯವಾದ ಸಂಗತಿ ಹಾಗೂ ಖಂಡನೀಯವಾದ ಸಂಗತಿ ಎಂದು ಹೇಳಬೇಕಾಗಿದೆ, ಇವತ್ತು ಜನಗಳ ಜೀವನವನ್ನು ಖಂಡಿತವಾಗಿಯೂ ಬಹಳ ಕಷ್ಟಮಯವಾದ ಪರಿಸ್ಥಿತಿಗೆ ತರುತ್ತಿದ್ದೀರಿ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದುದರಿಂದ ಈಗಲಾದರೂ ಎಚ್ಚೆತ್ತುಕೊಂಡು ಬೆಲೆ ಏರಿಕೆಯನ್ನು ತಡೆಗಟ್ಟಬೇಕಾದರೆ ಏನು ಕ್ರಮ ತೆಗೆದುಕೊಳ್ಳಬೇಕೋ ಆ ಕ್ರಮವನ್ನು ತೆಗೆದುಕೊಳ್ಳುವುದು ಬಹಳ ಗುರುತರವಾದ ಜವಾಬ್ದಾರಿ ಎಂದು ತಿಳಿದುಕೊಂಡು ಅಗತ್ಯವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ಬಹಳವಾಗಿ ಹೇಳಬೇಕಾದ ವಿಷಯವೆಂದರೆ, ಅರ್ಬನ್ ಡೆವಲಪ್‌ಮೆಂಟ್ ವಿಷಯ. ಅರ್ಬನ್ ಡೆವಲಪ್‌ಮೆಂಟ್ ವಿಷಯವಾಗಿ ಮಾತನಾಡುವುದಾದರೆ ಅರ್ಬನ್ ಡೆವಲಪ್‌ಮೆಂಟ್ ವಿಷಯದಲ್ಲಿ ಸರ್ಕಾರ ಪೂರ್ತಿಯಾಗಿ ವಿಫಲವಾಗಿವೆ ಎಂದು ಹೇಳಿದರೆ ತಪ್ಪಾಗಲಾರದು ಎಂದು ನಾನು ಅಂದುಕೊಂಡಿದ್ದೇನೆ. ನಗರಾಭಿವೃದ್ಧಿ ವಿಚಾರವಾಗಿ ಯಾವುದೇ ಒಂದು ಸರಿಯಾದ ನೀತಿಯನ್ನಾಗಲಿ ಅಥವಾ ನಿಯಮವನ್ನಾಗಲಿ ಮಾಡಿಲ್ಲವೆಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇವೊತ್ತು ನಗರಾಭಿವೃದ್ಧಿ ವಿಚಾರವಾಗಿ ಲ್ಯಾಂಡ್ ಯುಟಿಲೈಸೇಷನ್ ಪಾಲಿಸಿ ಬಗ್ಗೆ ಬೆಂಗಳೂರು ಹಾಗೂ ಸುತ್ತಮುತ್ತ ಇರುವ ಪ್ರದೇಶದಲ್ಲಿ ಸರ್ಕಾರ ಖಂಡಿತವಾಗಿ ನಿರ್ದಿಷ್ಟವಾದ ಪಾಲಿಸಿಯನ್ನು ಮಾಡಿಲ್ಲವೆಂದು ನಾನು ಹೇಳಬೇಕಾಗುತ್ತದೆ. ಮೊಟ್ಟ ಮೊದಲನೆಯದಾಗಿ ಗ್ರೀನ್ ಬೆಲ್ಟ್ ಏರಿಯಾ ಬಗ್ಗೆ ಹೇಳಬೇಕಾಗುತ್ತದೆ. ವರ್ಷ ವರ್ಷ ಗ್ರೀನ್‌ಬೆಲ್ಟ್ ಏರಿಯಾ ಚಿಕ್ಕದೂ ಆಗುತ್ತಿದೆ. ದೊಡ್ಡದೂ ಆಗುತ್ತಿದೆ. ಇದರ ಬಗ್ಗೆ ನಿಜವಾದ ಪರಿಸ್ಥಿತಿ ಯಾವ ರೀತಿ ಇದೆ ಎನ್ನುವುದು ಗೊತ್ತಿಲ್ಲ ಇದು ಅಮೀಬ ಜಂತುವಿನ ತರಹ ಆಗಿದೆ. ಅಮೀಬ ಅಂದರೆ ಒಂದೇ ಆಕಾರವನ್ನು ಬದಲಾವಣೆ ಮಾಡುವುದು. ಇವೊತ್ತು ಗ್ರೀನ್ ಬೆಲ್ಟ್ ಕೂಡ ಅದೇ ತರಹ ಆಗುತ್ತಿದೆ. ಇದು ಬಹಳ ಶೋಚನೀಯವಾದ ಸಂಗತಿ. ಕರ್ನಾಟಕ ಸರ್ಕಾರ ಗ್ರೀನ್ ಬೆಲ್ಟ್ ಏರಿಯಾ ಮಾಡಿ ತಮ್ಮ ನೀತಿಗೆ ವಿರುದ್ಧವಾದ ಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಗ್ರೀನ್ ಬೆಲ್ಟ್ ಏರಿಯಾ ವ್ಯಾನಿಷಿಂಗ್ ಬೆಲ್ಟ್ ಆಗುತ್ತಿದೆ ಎನ್ನುವುದು ನನಗೆ ಅರ್ಥವಾಗುವುದಿಲ್ಲ. ಅರ್ಬನ್ ಡೆವಲಪ್‌ಮೆಂಟ್ ಬಗ್ಗೆ ಮಾತನಾಡುವುದಾದರೆ ಲ್ಯಾಂಡ್ ಯುಟಿಲೈಸೇಷನ್ ಪಾಲಿಸಿ ಬಗ್ಗೆ ಸರ್ಕಾರದವರು ಪೂರ್ಣವಾಗಿ ವಿಫಲರಾಗಿದ್ದಾರೆ ಎಂದು ಹೇಳುತ್ತೇನೆ. ಇದರ ಬಗ್ಗೆ ಇನ್ನೂ ಮಾತನಾಡುವುದು ಬಹಳ ಇತ್ತು, ನಾಳೆ ಪುನಃ ಈ ವಿಷಯ ಬರುವುದರಿಂದ ಈಗ ನಾನು ಇದರ ಬಗ್ಗೆ ಹೆಚ್ಚಿಗೆ ಹೇಳುವುದಿಲ್ಲ. ಈ ಒಂದು ಗ್ರೀನ್ ಬೆಲ್ಟ್ ಏರಿಯಾ ಏನು ಇದೆ, ಇದನ್ನು ಸರಿಯಾಗಿ ಮಾಡದೇ ಇರುವುದರಿಂದ, ಇದರ ಬಗ್ಗೆ ಸರಿಯಾದ ನೀತಿ ನಿಯಮಗಳನ್ನು ಮಾಡದೇ ಇರುವುದರಿಂದ ನಗರಾಭಿವೃದ್ಧಿ ಸರಿಯಾಗಿ ಆಗುತ್ತಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮುಖ್ಯವಾಗಿ ಆಯವ್ಯಯದ ವಿಚಾರದಲ್ಲಿ ಮಾತನಾಡುವಾಗ ಎರಡು ವಿಚಾರಗಳನ್ನು ಅವರು ಹೇಳಿದ್ದಾರೆ. ಅದು ಏನೆಂದರೆ ಸೈಟ್‌ಗಳನ್ನು ಹಂಚುವುದು ಮತ್ತು ವಸತಿಗಳನ್ನು ಹಂಚುವುದು. ಇದರಲ್ಲಿ ಬಹಳ ಶೋಚನೀಯವಾದ ಪರಿಸ್ಥಿತಿ ಎಂದರೆ ಸರ್ಕಾರ ಹೇಳುವುದು ಒಂದು, ಮಾಡುವುದು ಇನ್ನೊಂದು. ಇವೊತ್ತು ಬೆಂಗಳೂರಿನಲ್ಲಿ ನಿವೇಶನಗಳನ್ನು ಹಂಚಲಿಕ್ಕೆ ಬಿ.ಡಿ.ಎ. ಗೆ ಪೂರ್ಣ ಅಧಿಕಾರ ಇದೆ. ಆದರೆ ಇವೊತ್ತು ಬಿ.ಡಿ.ಎ. ಕೈಕಟ್ಟಿಕೊಂಡು ಕುಳಿತಿದೆ ಎಂದು ಹೇಳಿದರೆ ತಪ್ಪಾಗಲಾರದು. ಸುಮಾರು ೧೦ ವರ್ಷಗಳಿಂದ ಅರ್ಜಿಗಳನ್ನು ಹಾಕಿದ್ದರೂ

ಬೆಂಗಳೂರಿನ ಜನರಿಗೆ ಸೈಟುಗಳು ಸಿಕ್ಕದೇ ಇರುವುದು ಬಹಳ ಶೋಚನೀಯವಾದ ವಿಚಾರ. ಜನರಿಗೆ ನಿವೇಶನಗಳನ್ನು ಹಂಚತಕ್ಕಂಥ ಬಹಳ ಗುರುತರವಾದ ಜವಾಬ್ದಾರಿಯನ್ನು ಹೊತ್ತಿರತಕ್ಕ ಸರ್ಕಾರ ಮತ್ತು ಬಿ.ಡಿ.ಎ. ಇದರಲ್ಲಿ ವಿಫಲವಾಗಿದೆ. ೧೦,೮೦೦ ಜನ ನಿವೇಶನಗಳಿಗಾಗಿ ಅಪ್ಲಿಕೇಶನ್ ಗಳನ್ನು ಹಾಕಿದ್ದಾರೆ, ಅವರಿಂದ ಸೈಟ್‌ಗಳಿಗಾಗಿ ಪೂರ್ತಿಯಾಗಿ ಹಣವನ್ನು ಕಟ್ಟಿಸಿಕೊಳ್ಳಲಾಗಿದೆ. ಆದರೆ ಅವರಿಗೆ ಸೈಟ್‌ಗಳನ್ನು ಕೊಟ್ಟಿಲ್ಲ. ಕೆಲವರಿಗೆ ಎರಡು ಮೂರು ಸೈಟ್‌ಗಳನ್ನು ತೋರಿಸಲಾಗಿದೆ. ಎಂಡಾರ್ಸ್‌ಮೆಂಟ್ ಕೊಟ್ಟಿದ್ದೀರಿ, ಆದರೆ ಅಲ್ಲಿ ಸೈಟ್‌ಗಳು ಇರುವುದಿಲ್ಲ.

೧೨.೩೦ ಪಿ. ಎಂ.

ಪುನಃ ಇನ್ನೊಂದು ನಂಬರ್ ಕೊಡುತ್ತಾರೆ, ಅದರಲ್ಲಿ ಹಳ್ಳ ಮತ್ತೊಂದು ಇರುತ್ತದೆ ಅಥವಾ ಸೈಟೇ ಇರುವುದಿಲ್ಲ. ಈ ರೀತಿ ಇರತಕ್ಕವರು ೧೦,೮೦೦ ಜನ ಇದ್ದಾರೆ. ಇವರು ೧೯೭೭ನೇ ಇಸವಿಯಿಂದ ಇದ್ದಾರೆ, ಕೆಲವರು ೧೯೭೬ನೇ ಇಸವಿಯಿಂದ ಇದ್ದಾರೆ, ೧೯೭೮ರಿಂದ ಕೆಲವರಿದ್ದಾರೆ. ಈ ರೀತಿ ೧೦–೧೫ ವರ್ಷಗಳಿಂದ ಬರೀ ದುಡ್ಡನ್ನು ಕಟ್ಟಿ ಸುಮ್ಮನೆ ಇದ್ದಾರೆ ಬಡವರು ಸಾಲ ಮಾಡಿ ದುಡ್ಡನ್ನು ಕಟ್ಟಿದ್ದಾರೆ. ಆ ಹಣಕ್ಕೆ ಅವರು ಬಡ್ಡಿ ಕಟ್ಟಿಕೊಂಡು ಇವತ್ತು ದಿವಾಳಿಯಾಗುವ ಪರಿಸ್ಥಿತಿಯಲ್ಲಿದ್ದಾರೆ. ಬಿ.ಡಿ.ಎ.ನವರು ಆಲ್ಟರ್‌ನೇಟೀವ್ ಸೈಟುಗಳನ್ನು ಕೊಡಬೇಕು ಎಂಬ ಪಾಲಿಸಿಯನ್ನು ಇಟ್ಟುಕೊಂಡಿದ್ದಾರೆ, ಆದರೆ ಇವತ್ತಿನತನಕ ಆ ಕೆಲಸವನ್ನು ಮಾಡಲಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಇದು ಬಹಳ ಶೋಚನೀಯವಾದ ಸಂಗತಿ. ಅವರು ಸೈಟುಗಳನ್ನು ಕೊಡುತ್ತೇವೆ ಎಂದು ಹೇಳುವುದು ಒಂದು, ಮಾಡುತ್ತಾ ಇರುವುದು ಮತ್ತೊಂದು. ಸರ್ಕಾರದ ಅರ್ಬನ್ ಡೆವಲಪ್‌ಮೆಂಟ್ ಪಾಲಿಸಿ ಏನಿದೆ ಅದನ್ನು ಸರಿಯಾಗಿ ಹಾಕಿಕೊಂಡು ಮಾಡುತ್ತಾ ಇಲ್ಲ ಇದರಲ್ಲಿ ಪೂರ್ಣವಾಗಿ ವಿಫಲರಾಗಿದ್ದಾರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಬಿ.ಡಿ.ಎ. ಮತ್ತು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ ಈ ೧೦ ಸಾವಿರದ ೮೦೦ ಜನರಿಗೆ ಆಲ್ಟರ್‌ನೇಟೀವ್ ಸೈಟುಗಳನ್ನು ಏನು ಕೊಡಬೇಕಾಗಿದೆ ಮೊದಲು ಅವರಿಗೆ ಆಲ್ಟರ್‌ನೇಟೀವ್ ಸೈಟುಗಳನ್ನು ಕೊಡಬೇಕು. ದುಡ್ಡನ್ನು ಕಟ್ಟಿಸಿಕೊಂಡವರಿಗೆ ಮೊದಲು ಸೈಟುಗಳನ್ನು ಕೊಡದೇ ಬೇರೆಯವರಿಗೆ ಸೈಟುಗಳನ್ನು ಅಲಾಟ್ ಮಾಡುವುದಕ್ಕೆ ಹೋಗಬಾರದು. ಈ ಬಗ್ಗೆ ಸರ್ಕಾರದವರು ಬಿ.ಡಿ.ಎ.ಗೆ ಸರಿಯಾದ ಡೈರೆಕ್ಷನ್ ಕೊಡಬೇಕು. ಇವತ್ತು ೮೧ ಸಾವಿರಕ್ಕೆ ಮೇಲ್ಪಟ್ಟು ಸೈಟುಗಳಿಗಾಗಿ ಬಂದಿರುವ ಅಪ್ಲಿಕೇಷನ್ಸ್ ಪೆಂಡಿಂಗ್ ಇವೆ. ಸೈಟುಗಳಿಗೋಸ್ಕರ, ಮನೆಗಳಿಗೋಸ್ಕರ ಬಿ.ಡಿ.ಎ.ಗೆ ಮತ್ತು ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್‌ಗೆ ಅಪ್ಲಿಕೇಷನ್ಸ್ ಹಾಕಿಕೊಂಡಿರುವುದು ಏನಿದೆ ಇವೆಲ್ಲವನ್ನೂ ತೆಗೆದುಕೊಂಡರೆ ೨ ಲಕ್ಷಕ್ಕೆ ಮೇಲೆ ಇದೆ. ಅವರಿಗೆಲ್ಲಾ ಸೈಟುಗಳನ್ನು, ಮನೆಗಳನ್ನು ಕೊಡುವುದಕ್ಕೆ ಸರ್ಕಾರದಲ್ಲಿ ಯಾವ ನೀತಿಯೂ ಇಲ್ಲ ಬಿ.ಡಿ.ಎ. ಅಕ್ವೈರ್ ಮಾಡಿಕೊಂಡ ಜಮೀನನ್ನು ಸೊಸೈಟಿಗಳಿಗೆ ಕೊಡುವಂಥ ನೀತಿಯನ್ನು ಹಾಕಿಕೊಂಡಿದ್ದೀರಿ. ಇವತ್ತು ಸರಿಯಾಗಿ ಸೈಟುಗಳನ್ನು ಜನರಿಗೆ ಹಂಚುವ ವ್ಯವಸ್ಥೆಯನ್ನು ಬಿ.ಡಿ.ಎ. ಇಟ್ಟುಕೊಂಡಿಲ್ಲ, ಅದನ್ನು ಸರಿಯಾಗಿ ನೋಡಿಕೊಳ್ಳುವಂಥ ನೀತಿಯನ್ನು ಸರ್ಕಾರ ಇಟ್ಟುಕೊಂಡಿಲ್ಲ. ಹೀಗಾಗಿ ಜನಗಳಿಗೆ ವಸತಿಗಳನ್ನು, ಸೈಟುಗಳನ್ನು ಹಂಚುವುದರಲ್ಲಿ ಸರ್ಕಾರ ಪೂರ್ಣವಾಗಿ ವಿಫಲವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಇವತ್ತಿನ ದಿವಸ ಇದಕ್ಕೆ ವಿರುದ್ಧವಾಗಿ ಬಡವರು ಕಟ್ಟಿಕೊಂಡಿರತಕ್ಕ ಮನೆಗಳನ್ನು ಒಡೆದು ಹಾಕುತ್ತಾ ಇದ್ದಾರೆ, ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಸರ್ಕಾರದವರು ಅನಿವಾಸಿಗಳಿಗೆ ಸೈಟುಗಳನ್ನು ಕೊಡಲಿಕ್ಕೆ ಹೊರಟಿದ್ದಾರೆ. ಬೇರೆ ರಾಜ್ಯದವರಿಗೆ ಸೈಟುಗಳನ್ನು ಕೊಡಲಿಕ್ಕೆ ಹೋಗಿದ್ದಾರೆ. ಸೊಸೈಟಿಗಳಿಗೆ ಲ್ಯಾಂಡನ್ನು ಅಲಾಟ್ ಮಾಡುವುದಕ್ಕೆ ಹೋಗಿದ್ದಾರೆ. ನಂದಿನಿ ಬಡಾವಣೆಯಲ್ಲಿ ರೆವಿನ್ಯೂ ಸೈಟುಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿರುವವರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಇವರು ತಯಾರಾಗಿಲ್ಲ, ಇದು ಬಹಳ ವಿಷಾದಕರವಾದ ಸಂಗತಿ. ಬೇರೆ ಬೇರೆ ಸೊಸೈಟಿಗಳಿಗೆ ೪೦೦ ಎಕರೆ, ೧,೦೦೦ ಎಕರೆ ಜಮೀನು ಕೊಡುತ್ತಾ ಇದ್ದಾರೆ ರೆವಿನ್ಯೂ ಸೈಟ್‌ಗಳಲ್ಲಿ ೪೦೦ ಚಿಕ್ಕ ಚಿಕ್ಕ ಜಾಗಗಳಲ್ಲಿ ಚಿಕ್ಕ ಚಿಕ್ಕ ಮನೆಗಳನ್ನು ಏನು ಕಟ್ಟಿಕೊಂಡಿದ್ದಾರೆ ಅದನ್ನು ಅವರಿಗೇ ವಾಪಸ್ ಕೊಡುವುದಕ್ಕೆ ಸರ್ಕಾರ ತಯಾರಾಗಿಲ್ಲ. ನಂದಿನಿ ಬಡಾವಣೆಯಲ್ಲಿ ಬುಲ್ಡೋಜರ್ ತೆಗೆದುಕೊಂಡು ಹೋಗಿ ಎರಡು ಸಾರಿ ಮನೆಗಳನ್ನು ಉರುಳಿಸಿದರು. ಇದು ಸರ್ಕಾರದ ನೀತಿಯೇ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರದವರು ತಮ್ಮ ನೀತಿ ನಿಯಮದಂತೆ ನಡೆದುಕೊಂಡು ಹೋಗುತ್ತಾ ಇಲ್ಲ, ಇಷ್ಟಬಂದ ಹಾಗೆ ಕೆಲಸವನ್ನು ಮಾಡುತ್ತಾ ಇದ್ದಾರೆ. ನೀತಿ ನಿಯಮವನ್ನು ಅನುಸರಿಸುತ್ತಾ ಇಲ್ಲ ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಾ ಇದ್ದೇನೆ. ರೆವಿನ್ಯೂ ಸೈಟ್ ಹೋಲ್ಡರ್ಸ್ ಏನು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅದನ್ನು ತಕ್ಷಣ ಸಕ್ರಮಗೊಳಿಸಬೇಕು ೪೦೦ ಸಾವಿರ ಎಕರೆಯನ್ನು ಸೊಸೈಟಿಗಳಿಗೆ ಕೊಡುವುದಕ್ಕೆ ಮುಂಚಿತವಾಗಿ ರೆವಿನ್ಯೂ ಸೈಟುಗಳನ್ನು

ಏನು ಕಸಿದುಕೊಂಡಿದ್ದಾರೆ ಅದನ್ನು ಸಕ್ರಮಗೊಳಿಸಿ ಅವರವರಿಗೇ ಅದನ್ನು ಕೊಡಬೇಕು, ಆ ರೀತಿ ಅದನ್ನು ಕೊಡದೇಹೋದರೆ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತದೆ. ನಂದಿನಿ ಬಡಾವಣೆಯಲ್ಲಿ ಪುನಃ ಮನೆಗಳನ್ನು ಒಡೆಯುವುದಕ್ಕೆ ಸಿದ್ಧತೆ ಮಾಡಿಕೊಂಡಿದ್ದಾರೆ ಎಂದು ಕಾಣುತ್ತಿದೆ. ಪುನಃ ಮನೆಗಳನ್ನು ಒಡೆದರೆ ಬೆಂಗಳೂರು ನಗರದಲ್ಲಿ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತದೆ, ಇದಕ್ಕೆ ಸರ್ಕಾರವೇ ಜವಾಬ್ದಾರಿಯಾಗಬೇಕಾಗುತ್ತದೆ. ಆದ್ದರಿಂದ ನಾನು ಸರ್ಕಾರವನ್ನು ಎಚ್ಚರಿಸುವುದಕ್ಕೆ ಇಷ್ಟಪಡುತ್ತೇನೆ. ಅರ್ಬನ್ ಡೆವಲಪ್‌ಮೆಂಟ್ ಪಾಲಿಸಿಯಲ್ಲಿ ಸರ್ಕಾರ ಪೂರ್ಣವಾಗಿ ವಿಫಲವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು.

ಮತ್ತೊಂದು ವಿಚಾರವನ್ನು ಹೇಳುವುದಾದರೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದರಲ್ಲಿ ಸರ್ಕಾರ ಏನು ಮಾಡುತ್ತಿದೆಯೆಂದರೆ, ಉದಾಹರಣೆಗೆ ಬೆಂಗಳೂರನ್ನು ತೆಗೆದುಕೊಂಡರೆ ಬೆಂಗಳೂರು ಜಲಮಂಡಲಿಗೆ ಸರ್ಕಾರ ದುಡ್ಡನ್ನು ಕೊಡುವುದಕ್ಕೆ ಒಪ್ಪಿಕೊಂಡು ಹೋದವರ್ಷ ೧೦ ಕೋಟಿ ಅದಕ್ಕಾಗಿ ಪ್ರೊವೈಡ್ ಮಾಡಿದರು. ಆ ೧೦ ಕೋಟಿಯನ್ನು ಕೊಟ್ಟಿಲ್ಲ. ಬೇರೆ ದುಡ್ಡನ್ನು ಕೊಡಲಿಕ್ಕೆ ತಯಾರಾಗಿಲ್ಲ, ಕಾವೇರಿ ಎರಡನೇ ಹಂತಕ್ಕೆ ಕೊಡಬೇಕಾದ ಹಣ ಕೊಟ್ಟಿಲ್ಲ. ೩ನೇ ಹಂತಕ್ಕೆ ಕೊಡುತ್ತಾರೊ ಇಲ್ಲವೋ ಗೊತ್ತಿಲ್ಲ. ಸರ್ಕಾರ ಒಂದು ನೀತಿಯನ್ನು ಹಾಕಿಕೊಂಡಮೇಲೆ ಆ ಪ್ರಕಾರ ನಡೆಯಬೇಕಾದದ್ದು ಬಹಳ ಮುಖ್ಯ. ಬೆಂಗಳೂರು ಜಲಮಂಡಲಿಗೆ ಇವರು ಕೊಡಬೇಕಾದಂಥ ಹಣವನ್ನು ಏತಕ್ಕೆ ಕೊಡಲಿಲ್ಲ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಕಾವೇರಿ ಮೂರನೇ ಹಂತದ ಯೋಜನೆಗೆ ಇವರು ಎಷ್ಟು ಹಣ ಕೊಡುತ್ತಾರೋ ಅಷ್ಟು ಮ್ಯಾಚಿಂಗ್ ಗ್ರ್ಯಾಂಟ್ಸ್ ಎಲ್.ಐ.ಸಿ. ಯವರು ಕೊಡುತ್ತಾರೆ ಎಲ್.ಐ.ಸಿ.ಯವರು ಹಣ ಕೊಡಲಿಕ್ಕೆ ಸಿದ್ಧರಾಗಿದ್ದಾರೆ. ನಮ್ಮ ಸರ್ಕಾರ ದವರು ದುಡ್ಡು ಕೊಡುವುದಿಲ್ಲ. ಕಾವೇರಿ ಮೂರನೇ ಹಂತದ ಕೆಲಸ ಇವೊತ್ತು ನಿಂತುಹೋಗುವ ಪರಿಸ್ಥಿತಿಗೆ ಬರುತ್ತಿದೆ. ಆದ್ದರಿಂದ, ಇದರ ಬಗ್ಗೆ ಸರ್ಕಾರ ಶೀಘ್ರ ಗಮನ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ಬೆಂಗಳೂರು ನಗರದವರಿಗೆ ೩೦೦-೪೦೦ ಕೋಟಿ ರೂಪಾಯಿ ಕೊಡುತ್ತಿದ್ದಾರೆ ಹಳ್ಳಿಯ ಜನರಿಗೆ ಕೊಡುತ್ತಿಲ್ಲ ಎಂದು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಬೆಂಗಳೂರು ಜಲಮಂಡಲಿಗೆ ಕಾವೇರಿ ಮೂರನೇ ಹಂತಕ್ಕೆ ಸಂಬಂಧಪಟ್ಟಂತೆ ಸರ್ಕಾರದವರು ಏನು ಹಣ ಕೊಡುತ್ತಿದ್ದಾರೆ ಇದನ್ನು ಸಾಲದ ರೂಪದಲ್ಲಿ ಕೊಡುತ್ತಿದ್ದಾರೆಯೇ ಹೊರತು ಬೇರೆ ಯಾವುದೇ ಹಣ ಕೊಟ್ಟಿಲ್ಲ: ಇವೊತ್ತು ಸರ್ಕಾರ ಎಷ್ಟೇ ಹಣ ಕೊಟ್ಟಿರಲಿ ೧೦ ಕೋಟಿ ರೂಪಾಯಿ ಇರಲಿ, ೨೦ ಕೋಟಿ ರೂಪಾಯಿ ಇರಲಿ ಅದು ಸಾಲದ ಹಣ, ಅದನ್ನು ವಾಪಸ್ಸು ಪಡೆಯುತ್ತಾರೆ. ಕಾವೇರಿ ೨ನೇ ಹಂತ, ೩ನೇ ಹಂತಕ್ಕೆ ಖರ್ಚು ಮಾಡುವ ಹಣ ಏನಿದೆ ಇದು ಬೆಂಗಳೂರು ಜನತೆಯ ದುಡ್ಡೇ ಹೊರತು ಬೇರೆ ಯಾವುದೂ ಅಲ್ಲ. ಈ ಒಂದು ಪರಿಸ್ಥಿತಿಯಲ್ಲಿ ಸರ್ಕಾರ ಇದಕ್ಕೆ ದುಡ್ಡು ಕೊಡುತ್ತೇವೆಂದು ವಾಗ್ದಾನ ಮಾಡಿದ್ದು, ಕೊಡದೇ ಇರುವುದು ಶೋಚನೀಯವಾದ ವಿಚಾರ ಸರ್ಕಾರ ಮಾಡಬೇಕಾದ ಕೆಲಸ ಇದಲ್ಲ. ಆದ್ದರಿಂದ ಸರ್ಕಾರ ತಕ್ಷಣ ಈ ವಿಷಯವನ್ನು ಗಮನಕ್ಕೆ ತೆಗೆದುಕೊಂಡು ಬೆಂಗಳೂರು ಜಲಮಂಡಲಿಗೆ ಏನು ದುಡ್ಡು ಕೊಡಬೇಕೋ ಅದನ್ನು ಕೊಡಬೇಕು ಎಂದು ಹೇಳುತ್ತೇನೆ, ಇನ್ನು ನಗರಾಭಿವೃದ್ಧಿ ವಿಚಾರ ತೆಗೆದುಕೊಂಡರೆ, ಕಾರ್ಪೊರೇಷನ್, ಮುನಿಸಿಪಾಲಿಟಿಗಳಿಗೆ ಕೊಡಬೇಕಾದಂಥ ಹಣವನ್ನು ಕೊಟ್ಟಿಲ್ಲ. ಬೆಂಗಳೂರು ನಗರಪಾಲಿಕೆಯನ್ನು ಉದಾಹರಣೆಯಾಗಿ ತೆಗೆದುಕೊಂಡರೆ, ಆಕ್ಟ್ರಾಯಿ ಕಾಂಪನ್‌ಸೇಷನ್ ೩೦ ಕೋಟಿ ರೂಪಾಯಿ. ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ಷೇರು ೧೦ ಕೋಟಿ ರೂಪಾಯಿಗಳಿಗೆ ಮೇಲ್ಪಟ್ಟು ಇದೆ, ಈ ಹಣವನ್ನು ಕೊಟ್ಟಿಲ್ಲ, ಹೋದವರ್ಷವೂ ಕೂಡ ಬೆಂಗಳೂರು ನಗರಪಾಲಿಕೆಗೆ ಹಣ ಕೊಡದೆ ಕೆಲಸಗಳು ಸ್ಥಗಿತವಾಗಿದ್ದವು ಈ ವರ್ಷವೂ ಕೆಲಸಗಳು ಸ್ಥಗಿತವಾಗುವ ಪರಿಸ್ಥಿತಿಗೆ ಬಂದಿದೆ. ಬೆಂಗಳೂರು ನಗರಪಾಲಿಕೆಗೆ ಕೊಡಬೇಕಾದ ೩೦ ಕೋಟಿ ರೂಪಾಯಿಗಳನ್ನು ಕೊಡದೇ ಸರ್ಕಾರ ಉಳಿಸಿಕೊಂಡರೆ ಬೆಂಗಳೂರು ನಗರಪಾಲಿಕೆಯವರು ಏನು ಕೆಲಸ ಮಾಡಬೇಕು ? ಬೆಂಗಳೂರು ನಗರದ ನೈರ್ಮಲ್ಯದ ಕಡೆಗೆ ಗಮನ ಕೊಡಲಿಕ್ಕೆ ಆಗುತ್ತದೆಯೋ ? ವಿದ್ಯುತ್ ದೀಪಗಳನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆಯೋ ? ಹಣ ಇಲ್ಲದೇ ಇದ್ದರೆ ಅವರು ಯಾವ ಕಡೆ ಗಮನ ಕೊಡಲಿಕ್ಕೆ ಆಗುತ್ತದೆ ಎನ್ನುವುದನ್ನು ತಾವೇ ಹೇಳಿ. ಇವೊತ್ತು ಸರ್ಕಾರದವರು ನಗರಾಭಿವೃದ್ಧಿಯ ಬಗ್ಗೆ ಏನು ನೀತಿನಿಯಮಗಳನ್ನು ಹಾಕಿಕೊಂಡಿದ್ದಾರೆ ಆ ನೀತಿ ನಿಯಮಗಳಂತೆ ನಡೆಯುವಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ, ಆದ್ದರಿಂದ ಈಗಲಾದರೂ ಸರ್ಕಾರ ಈ ವಿಷಯವನ್ನು ಗಮನಕ್ಕೆ ತೆಗೆದುಕೊಂಡು ಬೆಂಗಳೂರು ನಗರಪಾಲಿಕೆಗೆ ಏನು ದುಡ್ಡು ಕೊಡಬೇಕೋ ಆ ದುಡ್ಡನ್ನು ಕೊಡ ಬೇಕೆಂದು ಹೇಳುತ್ತೇನೆ. ಈಗ ಸರ್ಕಾರದವರು ಹಣ ಕೊಡಲಿಕ್ಕೆ ಮೂರು ನಾಲ್ಕು ದಿವಸಗಳು ಮಾತ್ರ ಉಳಿದಿದೆ. ಈ ಮಾರ್ಚಿ ತಿಂಗಳು ೩೧ರೊಳಗೆ ದುಡ್ಡು ಕೊಡದೇ ಇದ್ದರೆ ಆ ಹಣವನ್ನು ಉಪ ಯೋಗಿಸಲಿಕ್ಕೆ ಆಗುವುದಿಲ್ಲ. ಕೆಲಸಗಳು ಸ್ಥಗಿತವಾಗುವುದರಿಂದ ಜನಗಳ ಬೈಗಳು ಜಾಸ್ತಿಯಾಗುತ್ತದೆ.

ಆದ್ದರಿಂದ, ಇನ್ನು ಮೂರು ದಿವಸಗೊಳಗಾದರೂ ಆಕ್ಟ್ರಾಯ್ ಕಾಂಪನೇಷನ್ ದುಡ್ಡು ಮತ್ತು ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ಷೇರು ಹಣವನ್ನು ಅವರಿಗೆ ಕೊಡಬೇಕೆಂದು ಹೇಳುತ್ತೇನೆ. ಅದೇ ರೀತಿ ಮುನಿಸಿಪಾಲಿಟಿಗಳಿಗೆ ಏನೇನು ದುಡ್ಡು ಕೊಡಬೇಕು. ಅದನ್ನು ಸರ್ಕಾರ ಕೊಡಬೇಕು. ಆಜವಾಬ್ದಾರಿಯನ್ನು ಸರ್ಕಾರ ನಿರ್ವಹಿಸದೇ ಹೋದರೆ ಬೇಜವಾಬ್ದಾರಿ ಸರ್ಕಾರ ಆಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಒಂದು ನಗರಾಭಿವೃದ್ಧಿಯ ವಿಚಾರದಲ್ಲಿ ನಾನು ಇಷ್ಟು ಮಾತ್ರ ಹೇಳಿ. ಇಂಡಸ್ಟ್ರಿಯಲ್ ಪಾಲಿಸಿ ಮತ್ತು ಎಂಪ್ಲಾಯ್‌ಮೆಂಟ್ ಸಿಚುಯೇಷನ್ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೆ, ಇದನ್ನು ನಾನು ಎಷ್ಟು ಕಡಿಮೆ ಹೇಳಿದರೆ ಅಷ್ಟು ಒಳ್ಳೆಯದು ಇವತ್ತು ಬೆಳಿಗ್ಗೆ ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರು ೧೩ ಟೆಕ್ಸ್‌ಟೈಲ್ ಮಿಲ್ಲುಗಳು ಕ್ಲೋಸ್ ಆಗಿವೆ, ಅಲ್ಲಿ ಕೆಲಸ ಮಾಡುತ್ತಿದ್ದ ಸುಮಾರು ಸಾವಿರ ಕಾರ್ಮಿಕರು ಕೆಲಸವಿಲ್ಲದೆ ಪಿಕೆಟಿಂಗ್ ಮಾಡುತ್ತಿದ್ದಾರೆ ಎಂದು ಹೇಳಿದರು ಸ್ವಾಮಿ, ಇದಕ್ಕೆಲ್ಲಾ ಕಾರಣ ಎಂದರೆ, ಇವತ್ತು ಯಾವುದೇ ಒಂದು ನಿರ್ದಿಷ್ಟವಾದ ಪಾಲಿಸಿ ಈ ಸರ್ಕಾರದಲ್ಲಿ ಇಲ್ಲದೇ ಇರುವುದು ಮೊದಲು ಮಿನರ್ವ ಮಿಲ್‌ನ್ನು ಕ್ಲೋಸ್ ಮಾಡಿದರು. ನಂತರ ಬಿನ್ನಿ ಮಿಲ್‌ನ್ನು ಕ್ಲೋಸ್ ಮಾಡಿದರು ಇದೇ ರೀತಿ ಇನ್ನೂ ೨-೩ ಮಿಲ್‌ಗಳವರು ಕ್ಲೋಸ್ ಮಾಡಿದರು, ಆದರೆ ಇದರ ಬಗ್ಗೆ ಈ ಸರ್ಕಾರ ಏನು ಮಾಡುತ್ತಿದೆ ? ಮಿಲ್ ಮಾಲೀಕರು ತಮ್ಮ ಇಷ್ಟಬಂದಂತೆ ನಡೆದುಕೊಳ್ಳುವುದಕ್ಕೆ ಏನಾದರೂ ಬಿಟ್ಟಿದ್ದೀಯೋ ? ಮಿಲ್ ಮಾಲೀಕರನ್ನು ತಮ್ಮ ಮನಸ್ಸಿಗೆ ಬಂದಂತೆ ನಡೆದುಕೊಳ್ಳಲು ಬಿಟ್ಟು ಈ ಸರ್ಕಾರ ಏನಾದರೂ ಕಣ್ಣುಮುಚ್ಚಿಕೊಂಡು ಕೈ ಕಟ್ಟಿಕೊಂಡು ಕುಳಿತಿದೆಯೆ ? ಮಾಲೀಕರು ಕಾರ್ಮಿಕರ ರಕ್ತವನ್ನು ಹೀರಿ ಅವರ ಶೋಷಣೆಯನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ ಮೊದಲು ೨ ತಿಂಗಳು, ೪ ತಿಂಗಳು ೬ ತಿಂಗಳು ಮಿಲ್‌ಗಳನ್ನು ನಡೆಸಿ ಅನಂತರ ಯಾವುದೋ ಒಂದು ನೆಪವನ್ನು ತೆಗೆದು ಕ್ಲೋಸ್ ಮಾಡುತ್ತಿದ್ದಾರೆ. ಅವರು ಆಡಿದಂತೆ ಆಡಲು ಬಿಡುವುದೇ ಈ ಸರ್ಕಾರದ ನೀತಿಯೋ ? ಈ ರೀತಿ ಮಿಲ್‌ಗಳನ್ನು ಪ್ರಾರಂಭಮಾಡಿ ಕೆಲವಾರು ತಿಂಗಳ ನಂತರ ಕ್ಲೋಸ್ ಮಾಡುತ್ತಿರುವವರ ಮೇಲೆ ಸರ್ಕಾರ ಏತಕ್ಕೆ ಕ್ರಮವನ್ನು ತೆಗೆದುಕೊಂಡಿಲ್ಲ. ಮಿನರ್ವ ಮಿಲ್, ಬಿನ್ನಿಮಿಲ್‌ನವರ ಮೇಲೆ ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ ? ಮ್ಯಾನೇಜ್‌ಮೆಂಟ್‌ನವರು ಹಠ ಹಿಡಿದು ಕುಳಿತು ಕಾರ್ಮಿಕರ ಶೋಷಣೆಯನ್ನು ಮಾಡುತ್ತಿದ್ದಾರೆ. ಈ ಕಾರ್ಮಿಕರು ಯಾರು ಎಂದರೆ ದುರ್ಬಲ ವರ್ಗದವರು ಇವರು ಮ್ಯಾನೇಜ್‌ಮೆಂಟ್‌ನವರು ಹೇಳಿದ್ದನ್ನು ಕೇಳಿಕೊಂಡು ಅದಕ್ಕೆ ಒಪ್ಪಿಕೊಂಡು ಕೆಲಸಕ್ಕೆ ಹೋಗಬೇಕಾದ ಪರಿಸ್ಥಿತಿ ಬಂದಿದೆ ಇದರ ಬಗ್ಗೆ ಸರ್ಕಾರದ ನೀತಿ ಏನಿದೆ, ನಿಯಮ ಏನಿದೆ ಎಂಬುದನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಸರ್ಕಾರ ಇದರ ಬಗ್ಗೆ ಬಹಳ ಜವಾಬ್ದಾರಿಯುತವಾಗಿ ಯೋಚನೆ ಮಾಡಬೇಕು. ನಮ್ಮ ರಾಜ್ಯದಲ್ಲಿ ದಾವಣಗೆರೆ ಮುಂತಾದ ಅನೇಕ ಕಡೆಗಳಲ್ಲಿ ಹಲವಾರು ಟೆಕ್ಸ್‌ಟೈಲ್ ಮಿಲ್‌ಗಳು ಕ್ಲೋಸ್ ಆಗಿವೆ ಕಾರ್ಖಾನೆಗಳನ್ನು ನಡೆಸಿಕೊಂಡು ಹೋಗುವುದಕ್ಕಾಗಲಿ, ಕ್ಲೋಸ್ ಮಾಡುವುದಕ್ಕಾಗಲಿ ರೀತಿ ನೀತಿಗಳಿವೆ. ಅದನ್ನು ಮೀರಿ ಹೋಗದಂತೆ ಮಿಲ್ ಮಾಲೀಕರನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದು ಸರ್ಕಾರದ ಜವಾಬ್ದಾರಿ ಎನ್ನತಕ್ಕ ಮಾತನ್ನು ನಾನು ಹೇಳಬಯಸುತ್ತೇನೆ.

ಇನ್ನು ಎಂಪ್ಲಾಯ್‌ಮೆಂಟ್ ಸಿಚುಯೇಷನ್‌ಗೆ ಸಂಬಂಧಪಟ್ಟಂತೆ ಹೇಳುವುದಾದರೆ ಇದು ಒಂದು ಶೋಚನೀಯ ಪರಿಸ್ಥಿತಿ ಜನರೇಷನ್ ಆಫ್ ಎಂಪ್ಲಾಯ್‌ಮೆಂಟ್ ನಮ್ಮಲ್ಲಿ ಬಹಳ ಕಡಿಮೆ ಇದೆ ಎಂಬುದನ್ನು ಅವರೇ ಒಪ್ಪಿಕೊಂಡಿದ್ದಾರೆ ಎಂಪ್ಲಾಯ್‌ಮೆಂಟ್ ಜನರೇಷನ್ ಬಗ್ಗೆ ಏನು ಮಾಡಬೇಕೆಂಬ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಮುಂಗಡ ಪತ್ರದಲ್ಲಿ ಯಾವುದೇ ಮಾತನ್ನು ಹೇಳಿಲ್ಲ ಇಂಡಸ್ಟ್ರೀಸ್‌ನ್ನು ಓಪನ್ ಮಾಡುವ ವಿಚಾರವನ್ನು ನಾನು ಒಪ್ಪಿಕೊಳ್ಳುತ್ತೇನೆ ಇವತ್ತು ಏನಾಗಿದೆ ಎಂದರೆ, ಲಕ್ಷಾಂತರ ಯುವಕರು ಕೆಲಸವಿಲ್ಲದೆ ಬೀದಿ ಬೀದಿಗಳಲ್ಲಿ ಅಲೆದಾಡುತ್ತಿದ್ದಾರೆ. ಇವರಿಗೆ ಉದ್ಯೋಗವನ್ನು ಒದಗಿಸುವ ಬಗ್ಗೆ ಸರ್ಕಾರ ಏನು ನೀತಿಯನ್ನು ಅನುಸರಿಸುತ್ತಿದೆ ಎಂಬುದನ್ನು ಕೇಳಲಿಕ್ಕೆ ಇಚ್ಛೆಪಡುತ್ತೇನೆ. ಒಟ್ಟಿನಲ್ಲಿ ಹೇಳುವುದಾದರೆ ಇದೊಂದು ಖಂಡನೀಯವಾದ ಮುಂಗಡ ಪತ್ರವೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ನನ್ನ ಗಮನಕ್ಕೆ ಬಂದಿರುವ ಪ್ರಕಾರ ಸುಮಾರು ೧೦ ಲಕ್ಷಕ್ಕಿಂತ ಹೆಚ್ಚು ಯುವಕರು ಕೆಲಸವಿಲ್ಲದೆ ಅಲೆಯುತ್ತಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸುವುದಕ್ಕೆ ಏನು ಯೋಜನೆ ಹಾಕಿಕೊಳ್ಳಬೇಕು? ಎಂಪ್ಲಾಯ್‌ಮೆಂಟ್ ಜನರೇಷನ್ ಹೆಚ್ಚು ಮಾಡುವುದಕ್ಕೆ ಏನು ಯೋಜನೆ ಹಾಕಿಕೊಳ್ಳಬೇಕು. ಇವತ್ತು ಎಂಪ್ಲಾಯ್‌ಮೆಂಟ್ ಜನರೇಷನ್‌ನ್ನು ಹೆಚ್ಚು ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡದಿದ್ದರೆ ರಾಜ್ಯದಲ್ಲಿ ಅಲ್ಲೋಲ ಕಲ್ಲೋಲವಾಗುತ್ತದೆ. ಇದನ್ನು ತಪ್ಪಿಸಬೇಕಾದರೆ ಸರ್ಕಾರ ಮುನ್ನೆಚ್ಚರಿಕೆಯನ್ನು ತೆಗೆದುಕೊಂಡು ತಕ್ಷಣವೇ ಕಾರ್ಯೋನ್ಮುಖವಾಗಬೇಕು.

ಇನ್ನು ಇಂಡಸ್ಟ್ರಿಯಲ್ ಪಾಲಿಸಿಯ ಬಗ್ಗೆ ಮಾತನಾಡುವುದಾದರೆ ಸ್ಟೇಟ್ ಗೌರ್ವಮೆಂಟ್ ಅಂಡರ್‌ಟೇಕಿಂಗ್ಸ್ ಗತಿ ಏನು ಎಂಬುದನ್ನು ಸರ್ಕಾರ ಇದುವರೆಗೂ ಯೋಚನೆಯನ್ನೇ ಮಾಡಿಲ್ಲ. ಇವತ್ತು ಈ ಅಂಡರಟೇಕಿಂಗ್ಸ್‌ನ ಗತಿ ಬಹಳ ಶೋಚನೀಯವಾದ ಪರಿಸ್ಥಿತಿಯಲ್ಲಿವೆ. ಮಾನ್ಯ ಕೈಗಾರಿಕಾ ಸಚಿವರು ಈಗ್ಗೆ ಒಂದು ವರ್ಷದ ಹಿಂದೆ ಒಂದು ಮಾತನ್ನು ಏನು ಹೇಳಿದರೆಂದರೆ, ನಾವು ಸ್ಟೇಟ್ ಅಂಡರ್ ಟೇಕಿಂಗ್ಸ್‌ನ್ನು ರೀವ್ಯಾಂಪ್ ಮಾಡುತ್ತೇವೆ. ರಿಜುವನೇಟ್ ಮಾಡುತ್ತೇವೆ. ಇದಕ್ಕೆ ಪ್ರತ್ಯೇಕವಾದ ಸ್ಕೀಮನ್ನು ತರುತ್ತೇವೆಂದು ಹೇಳಿದರು. ಆದರೆ ಇದುವರೆವಿಗೂ ಯಾವ ಸ್ಕೀಮ್ ಅನ್ನು ಇವರು ತರಲಿಲ್ಲ. ಗೌರ್ವಮೆಂಟ್ ಅಂಡರ್ ಟೇಕಿಂಗ್ಸ್ ಇವತ್ತು ಬಹಳ ಲಾಸ್‌ನಲ್ಲಿ ನಡೆಯುತ್ತಿವೆ. ಇವು ಏತಕ್ಕೆ ಲಾಸ್‌ನಲ್ಲಿ ನಡೆಯುತ್ತಿವೆ ಎಂಬುದನ್ನು ಕಂಡುಹಿಡಿದು ಸೂಕ್ತ ಕ್ರಮ ಕೈಗೊಳ್ಳಬೇಕು. ಉತ್ತಮವಾದ ಡೈನಮಿಕ್ ಮ್ಯಾನೇಜಿಂಗ್ ಡೈರೆಕ್ಟರ್‌ರವರನ್ನು ಇವುಗಳಿಗೆ ಹಾಕದೇ ಹೋದರೆ ಸ್ಟೇಟ್ ಗೌರ್ವಮೆಂಟ್ ಅಂಡರ್ ಟೇಕಿಂಗ್ಸ್ ಕೂಡ ಲಾಸ್ ಆಗೇ ಆಗುತ್ತವೆ. ಯಾವವು ಕೂಡ ಲಾಭದಾಯಕವಾಗಿ ನಡೆಯುವುದಿಲ್ಲ ಎಂದು ಹೇಳಬಯಸುತ್ತೇನೆ. ಉದಾಹರಣೆಗೆ ಹೇಳುವುದಾದರೆ, ನಮ್ಮ ಗೌರ್ವಮೆಂಟ್ ಸೋಪ್ ಫ್ಯಾಕ್ಟರಿ ಇದೆ. ಇದು ಬಹಳ ವರ್ಷಗಳಿಂದ ಲಾಸ್‌ನಲ್ಲೇ ನಡೆದುಕೊಂಡು ಬರುತ್ತಿತ್ತು. ಈಗ ಅಲ್ಲಿಗೆ ಒಬ್ಬ ಡೈನಮಿಕ್ ಅವಂಥ ಒಬ್ಬ ಮ್ಯಾನೆಜಿಂಗ್ ಡೈರೆಕ್ಟರ್‌ರವರನ್ನು ಹಾಕಿದಮೇಲೆ ಅದು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ, ಈಗ ಒಳ್ಳೆಯ ಲಾಭ ಬರುತ್ತಿದೆ. ಮೊದಲು ಈ ಸೋಪ್ ಫ್ಯಾಕ್ಟರಿಯಲ್ಲಿ ತಯಾರಾದ ಸೋಪನ್ನು ಎಂ.ಎಸ್.ಐ.ಎಲ್ ನವರ ಮುಖಾಂತರ ಮಾರಾಟ ಮಾಡಿಸುವ ವ್ಯವಸ್ಥೆ ಇತ್ತು ಆದರೆ ಈ ವ್ಯವಸ್ಥೆ ಸರಿಯಲ್ಲ, ಈ ವ್ಯವಸ್ಥೆಯನ್ನು ಆ ಸೋಪ್ ಫ್ಯಾಕ್ಟರಿಯವರಿಗೇ ಕೊಡಿ ಎಂದು ನಾನು ಮಾನ್ಯ ಮುಖ್ಯ ಮಂತ್ರಿಯವರಿಗೂ ಮತ್ತು ಮಾನ್ಯ ಕೈಗಾರಿಕಾ ಮಂತ್ರಿಯವರಿಗೂ ಸುಮಾರು ೪-೫ ಪತ್ರಗಳನ್ನು ಬರೆದಿದ್ದೇನೆ ಆದರೆ ಒಂದು ವರ್ಷದವರೆಗೂ ಯಾವ ಕ್ರಮವನ್ನೂ ತೆಗೆದುಕೊಂಡಿರಲಿಲ್ಲ. ಕಳೆದ ವರ್ಷ ಅಲ್ಲಿಗೆ ಒಬ್ಬ ಡೈನಮಿಕ್ ಮ್ಯಾನೇಜಿಂಗ್ ಡೈರೆಕ್ಟರ್‌ರವರನ್ನು ಹಾಕಿದ ಮೇಲೆ ಈಗ ಆ ಸೋಪ್ ಫ್ಯಾಕ್ಟರಿ ಬಹಳ ಚೆನ್ನಾಗಿ ನಡೆಯುತ್ತಿದೆ. ಅಲ್ಲಿ ಉತ್ಪಾದನೆಯಾದ ಸುಮಾರು ೨ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿನ ಮಾಲು ಮಾರಾಟವಾಗದೆ ಹಾಗೆಯೇ ಉಳಿದಿತ್ತು. ಆದರೆ ಈಗ ಹೊಸ ಮ್ಯಾನೇಜಿಂಗ್ ಡೈರೆಕ್ಟರ್‌ರವರನ್ನು ಅಲ್ಲಿಗೆ ಹಾಕಿ ಅವರಿಗೆ ಆ ಸೋಪನ್ನು ಮಾರಾಟ ಮಾಡುವ ಅಧಿಕಾರವನ್ನು ಕೊಟ್ಟ ಮೇಲೆ ಸ್ಟಾಕ್ ಇದ್ದ ಸೋಪ್ ಎಲ್ಲ ಸಂಪೂರ್ಣವಾಗಿ ಖರ್ಚಾಗಿದೆ, ಅಲ್ಲದೆ ಈಗ ಹೆಚ್ಚು ಹೆಚ್ಚು ಮಾಲನ್ನು ಉತ್ಪಾದನೆ ಮಾಡುತ್ತಿದ್ದಾರೆ. ಆದ್ದರಿಂದ ಸರ್ಕಾರದ ನಿರ್ಣಯ ಏನು ಇದೆಯೋ ಆ ನಿರ್ಣಯದಂತೆ ಸರ್ಕಾರ ಆ ಕೈಗಾರಿಕೆಗಳನ್ನು ಕೈಗೆ ತೆಗೆದುಕೊಂಡು ನಡೆಸುವ ಆಲೋಚನೆಯನ್ನು ಮಾಡಬೇಕು ಉದಾಹರಣೆಗೆ ಎಂ.ಇ.ಐ. ಕಾರ್ಖಾನೆ ಇದೆ. ಈ ಕಾರ್ಖಾನೆಗೆ ಸರಿಯಾದ ಒಬ್ಬ ಮ್ಯಾನೇಜಿಂಗ್ ಡೈರೆಕ್ಟರನ್ನು ಹಾಕಿ ಆ ಕಾರ್ಖಾನೆಯನ್ನು ಸರಿಯಾಗಿ ನಡೆಸಿಕೊಂಡು ಹೋಗುವುದಕ್ಕೆ ಸರ್ಕಾರದವರು ಯೋಚನೆ ಮಾಡಿದ್ದರೆ ಖಂಡಿತವಾಗಿಯೂ ಇದು ಲಾಭದಾಯಕವಾಗಿ ನಡೆಯುತ್ತಿತ್ತು. ಈ ಕಾರ್ಖಾನೆಯ ವಿಷಯವನ್ನು ಸರ್ಕಾರದವರು ತಲೆಗೆ ಹಚ್ಚಿಕೊಳ್ಳದಿರುವುದರಿಂದ ಬಹುಶಃ ಮುಂದಿನ ತಿಂಗಳು ಈ ಕಾರ್ಖಾನೆಯಲ್ಲಿ ನೌಕರರಿಗೆ ಸಂಬಳವನ್ನು ಕೊಡುವುದಕ್ಕೆ ಆಗುತ್ತದೋ ಇಲ್ಲವೋ ಎನ್ನುವ ಪರಿಸ್ಥಿತಿಗೆ ಹೋಗುತ್ತದೆಂದು ಹೇಳಬೇಕಾಗಿದೆ, ಈ ಎಲ್ಲ ವಿಚಾರಗಳನ್ನು ತೆಗೆದುಕೊಂಡು ನೋಡಿದರೆ ಸರ್ಕಾರ ತನ್ನ ನೀತಿಯನ್ನು ಬದಲಾಯಿಸಿಕೊಂಡು ಬೇರೆ ನೀತಿಯನ್ನು ಅನುಸರಿಸುತ್ತಿದೆ ಎಂದು ಹೇಳಬೇಕಾಗಿದೆ, ಕೈಗಾರಿಕಾ ನೀತಿ ಏನು ಇದೆ. ನಿಜವಾಗಿಯೂ ಕೈಗಾರಿಕೆಗಳು ಬೆಳೆಯಬೇಕಾದರೆ ಏನು ಮಾಡಬೇಕು, ಕಾರ್ಖಾನೆಗಳನ್ನು ಉತ್ತಮಗೊಳಿಸುವುದಕ್ಕೆ ಏನು ಮಾಡಬೇಕು ಎನ್ನುವುದರ ಬಗ್ಗೆ ಸರ್ಕಾರದವರು ಯೋಚನೆ ಮಾಡುತ್ತಿಲ್ಲ ಎಂ.ಇ.ಎಲ್.ನಲ್ಲಿ ನಡೆಯುತ್ತಿರುವ ಅವ್ಯವಹಾರಗಳನ್ನು ನೋಡಿದರೆ ಎಲ್ಲಾ ಕಾರ್ಖಾನೆಗಳಲ್ಲಿಯೂ ಇದೇ ರೀತಿ ನಡೆಯುತ್ತಿದೆ ಎಂದು ಹೇಳಬೇಕಾಗುತ್ತದೆ. ಇದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಕೈಗಾರಿಕಾ ಇಲಾಖೆ ಬಗ್ಗೆ ಚರ್ಚೆಗೆ ಬಂದಾಗ ಹೆಚ್ಚು ಮಾತನಾಡುವುದಕ್ಕೆ ಇಷ್ಟಪಡುತ್ತೇನೆ.

ಇದಾದಮೇಲೆ ಎಕ್ಸೈಸ್ ಪಾಲಿಸಿಯ ಬಗ್ಗೆ ಬಹಳವಾಗಿ ಹೇಳಿದ್ದಾರೆ. ಇದರ ಬಗ್ಗೆ ಮುಂಗಡ ಪತ್ರದಲ್ಲಿ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಅಲ್ಲಿ ಆಗತಕ್ಕಂಥ ಹಲವಾರು ಪ್ರಸಂಗಗಳನ್ನು ಅವರೇ ಹೇಳಿರುತ್ತಾರೆ. ಪರಿಶಿಷ್ಟ ಜಾತಿ ಪರಿಶಿಷ್ಟ ಜನಾಂಗದವರು ಇರತಕ್ಕಂಥ ಕಡೆ ಆಸ್ಪತ್ರೆಗಳು, ಶಾಲಾ ಕಾಲೇಜುಗಳು ನಡೆಯತಕ್ಕಂಥ ಸ್ಥಳಗಳಲ್ಲಿ ಮದ್ಯದ ಮಾರಾಟ ಮಳಿಗೆಗಳನ್ನು ತೆರೆಯುವುದಿಲ್ಲವೆಂದು ಹೇಳಿದ್ದಾರೆ. ಇವತ್ತು ಬೆಂಗಳೂರು ನಗರವನ್ನೇ ತೆಗೆದುಕೊಂಡರೆ ಪರಿಶಿಷ್ಟ ಜಾತಿ ಪರಿಶಿಷ್ಟ ಜನಾಂಗದವರು ಎಲ್ಲಿ ಜಾಸ್ತಿ ವಾಸ ಮಾಡುತ್ತಾರೋ ಅಲ್ಲಿಯೇ ಬಹಳ ಹೆಚ್ಚಾಗಿ ಮದ್ಯದ ಅಂಗಡಿಗಳನ್ನು ತೆರೆದಿರುತ್ತಾರೆ. ಸ್ಕೂಲ್‌ಗಳ ಪಕ್ಕದಲ್ಲಿ ದೇವಸ್ಥಾನದ ಪಕ್ಕದಲ್ಲಿ ಮಸೀದಿಗಳ ಪಕ್ಕದಲ್ಲಿಯೋ ಮದ್ಯದ

ಅಂಗಡಿಗಳನ್ನು ತೆರೆದಿರುವುದನ್ನು ನೋಡಿದರೆ ಇದು ಎಂಥ ಒಂದು ಒಣಗೇಡಿತನ ಎನ್ನುವುದು ಅರ್ಥವಾಗುತ್ತದೆ. ಗಾಂಧೀನಗರದಲ್ಲಿ ಒಂದು ದೊಡ್ಡ ಮದ್ಯದ ಅಂಗಡಿ ಅರಕ್‌ಶಾಪ್ ಇತ್ತು, ಗುಬ್ಬಿ ಥಿಯೇಟರ್ ಪಕ್ಕದಲ್ಲಿಯೇ ಇತ್ತು. ಅದನ್ನು ೫ ವರ್ಷಗಳ ಹಿಂದೆಯೇ ತೆಗೆಯಬೇಕೆಂದು ಒತ್ತಾಯ ಮಾಡಿದ್ದೆವು. ಅದರ ಪಕ್ಕದಲ್ಲಿಯೇ ಆರ್. ವಿ. ವಿದ್ಯಾಮಂಡಲಿ ಹೈಸ್ಕೂಲ್ ಮತ್ತು ಗರ್ಲ್ಸ್ ಹೈಸ್ಕೂಲ್ ಎಲ್ಲ ಇದೆ, ಐದು ವರ್ಷಗಳಿಂದಲೂ ಮದ್ಯದ ಅಂಗಡಿಯನ್ನು ಅಲ್ಲಿಂದ ತೆಗೆಯಬೇಕೆಂದು ಹೊಡೆದಾಡುತ್ತಲೇ ಇದ್ದೇವೆ. ಅದರ ಬಗ್ಗೆ ಸತ್ಯಾಗ್ರಹವನ್ನೂ ಕೂಡ ಮಾಡಿದೆವು ಆದರೂ ಅದನ್ನು ತೆಗೆಯಲಿಕ್ಕೆ ಸಾಧ್ಯವಾಗಲಿಲ್ಲ. ಅಲ್ಲಿ ಒಂದು ದೊಡ್ಡ ತಂತ್ರವೇ ನಡೆಯುತ್ತಿದೆ. ಅವರಿಗೆ ಇರತಕ್ಕಂಥ ಇನ್‌ಫ್ಲುಯನ್ಸ್ ನಮಗೆ ಇಲ್ಲ. ಅಲ್ಲಿ ಗುಬ್ಬಿ ಥಿಯೇಟರ್‌ನ್ನು ಕಟ್ಟುತ್ತಿರುವುದರಿಂದ ಅಲ್ಲಿ ಮಣ್ಣು, ಇಟ್ಟಿಗೆ ರಾಶಿ ಬೀಳುತ್ತಿರುವ ಕಾರಣದಿಂದಾಗಿ ಬೇರೆ ಕಡೆ ಶಿಫ್ಟ್ ಮಾಡುತ್ತೇವೆಂದು ಹೇಳಿ ಮಾಡಿದ್ದಾರೆ. ಅದನ್ನು ಮನೆಗಳ ಮಧ್ಯದಲ್ಲಿಯೇ ಶಾಲೆ, ಅಂಗಡಿಗಳು ಇರುವ ಕಡೆಯೇ ಶಿಫ್ಟ್ ಮಾಡಿರುತ್ತಾರೆ. ಇದರಿಂದಾಗಿ ಜನರು ಪ್ರೊಟೆಸ್ಟ್ ಮಾಡಿದರು. ಅವರು ಕೋರ್ಟಿಗೆ ಹೋಗಿ ಕೋರ್ಟಿನಿಂದ ಸ್ಟೇ ಆರ್ಡರ್ ತಂದಿರುತ್ತಾರೆ. ಸರ್ಕಾರದವರು ಹೇಳುವುದು ಒಂದು ನೀತಿಯಾದರೆ ಮಾಡುವುದೇ ಇನ್ನೊಂದು ನೀತಿಯಾಗಿದೆ. ಕಾನೂನಿಗೆ ವಿರುದ್ಧವಾಗಿ ಮಾಡುತ್ತಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಸರ್ಕಾರದವರು ಮುಂದೆ ಕೊಡುವ ಎಲ್ಲ ಲೈಸೆನ್ಸ್‌ಗಳನ್ನು ಕಟ್ಟುನಿಟ್ಟಾಗಿ ನಿಯಂತ್ರಣ ಮಾಡುತ್ತೇವೆಂದು ಹೇಳುವುದನ್ನು ನೋಡಿದರೆ ಇನ್ನೂ ಹೆಚ್ಚು ಲೈಸೆನ್ಸ್‌ಗಳನ್ನು ಕೊಡಲು ಇವರು ತಯಾರಾಗಿದ್ದಾರೆಂದು ಹೇಳಬೇಕಾಗುತ್ತದೆ. ಹೆಂಡ, ಬೀರು, ಬ್ರಾಂದಿ ಮಾರಾಟ ಮಾಡುವುದಕ್ಕೆ ಉತ್ತೇಜನ ಕೊಡುತ್ತೇವೆಂದು ಹೇಳಿದ್ದಾರೆ. ಇದರಿಂದ ಸಾಕಷ್ಟು ಲೈಸೆನ್ಸ್ ಕೊಡುವುದಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆಂದು ನಾವು ತಿಳಿದುಕೊಳ್ಳಬೇಕಾಗುತ್ತದೆ. ಜವಾಬ್ದಾರಿ ಸರ್ಕಾರ ಸ್ಥಾಪಿತವಾದಮೇಲೆ ಜವಾಬ್ದಾರಿಯನ್ನು ಹೊತ್ತು ತಕ್ಷಣ ಎಲ್ಲೆಲ್ಲಿ ಲೈಸೆನ್ಸ್‌ಗಳನ್ನು ನಿಯಮಗಳಿಗೆ ವಿರೋಧವಾಗಿ ಕೊಟ್ಟಿದ್ದಾರೆ ಅದನ್ನೆಲ್ಲಾ ತೆಗೆದುಹಾಕಬೇಕಾದ ಅವಶ್ಯಕತೆ ಬಹಳವಾಗಿ ಇದೆ. ನಿಯಮಗಳನ್ನು ಅನುಸರಿಸದೆ ಮದ್ಯದ ಅಂಗಡಿಗಳಿಗೆ ಲೈಸೆನ್ಸ್ ಕೊಟ್ಟಿರುವುದರಿಂದ ಬೆಂಗಳೂರಿನಲ್ಲಿ ಜನ ರೊಚ್ಚಿಗೆದ್ದಿದ್ದಾರೆ. ಇದು ಮುಂದೆ ಯಾವ ಪರಿಸ್ಥಿತಿಗೆ ಹೋಗುತ್ತದೋ ಗೊತ್ತಾಗುವುದಿಲ್ಲವೆಂಬ ಎಚ್ಚರಿಕೆಯನ್ನು ಈ ಸಂದರ್ಭದಲ್ಲಿ ಕೊಡುತ್ತಿದ್ದೇನೆ.

ಇನ್ನು ಕೊನೆಯದಾಗಿ, ಶ್ರೀಮತಿ ಸರೋಜಿನಿ ಮಹಿಷಿಯವರ ಶಿಫಾರಸ್ಸಿನ ಬಗ್ಗೆ ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ, ಇದರ ಬಗ್ಗೆ ಈ ಒಂದು ಮುಂಗಡ ಪತ್ರದಲ್ಲಿ ಏನೂ ಹೇಳಿಲ್ಲ. ಅವರು ಕರ್ನಾಟಕದವರಿಗೆ ಉದ್ಯಮಗಳನ್ನು ಕೊಡುವುದರಲ್ಲಿ ಆಸಕ್ತಿ ವಹಿಸಬೇಕೆಂದು ಹೇಳಿದ್ದಾರೆ. ಅದಕ್ಕಾಗಿಯೇ ಒಂದು ಉದ್ಯಮ ಸಮಿತಿಯನ್ನು ಮಾಡಿದ್ದಾರೆ. ಅವರು ಮಧ್ಯಂತರ ವರದಿಯನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ. ಡಾ॥ ಸರೋಜಿನಿ ಮಹಿಷಿಯವರು ವರದಿ ಕೊಟ್ಟು ಒಂದು ವರ್ಷವಾಯಿತು. ಅದಕ್ಕೆ ಇನ್ನೊಂದು ಸಮಿತಿ ಬೇಕಾಗಿಲ್ಲ. ಅವರು ಕೊಟ್ಟಿರುವ ವರದಿಯೇ ಸ್ಪಷ್ಟವಾಗಿದೆ. ಇಲಾಖೆಯಲ್ಲಿ ಕಾರ್ಯದರ್ಶಿಗಳು ಇದ್ದಾರೆ. ಅವರಿಗೆ ಕೊಟ್ಟರೆ ಅವರು ಕ್ರಮ ಕೈಗೊಳ್ಳುತ್ತಾರೆಂದು ಹೇಳಿದರೂ ಅದನ್ನೂ ಮಾಡಲಿಲ್ಲ. ಈಗ ಇನ್ನೊಂದು ಸಮಿತಿಯನ್ನು ಮಾಡಿದ್ದಾರೆ. ಅದು ಮಧ್ಯಂತರ ವರದಿಯನ್ನು ಕೊಡುತ್ತಿದೆ. ಇನ್ನು ಯಾವಾಗ ಅಂತಿಮ ವರದಿಯನ್ನು ಕೊಡುತ್ತದೋ ಗೊತ್ತಿಲ್ಲ. ಮಹಿಷಿಯವರ ವರದಿ ಬಂದು ಎರಡು ವರ್ಷಗಳಾಗುತ್ತಿದೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆಂಬ ಬಗ್ಗೆ ಈ ಆಯವ್ಯಯ ಭಾಷಣದಲ್ಲಿ ಒಂದು ಚಕಾರ ಶಬ್ದ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಹೇಳುವಾಗಲಾದರೂ ಇದರ ಬಗ್ಗೆ ಹೇಳುತ್ತಾರೆಯೇ? ಇವತ್ತಿನ ದಿವಸ ಬೆಂಗಳೂರು ನಗರದಲ್ಲಿ ಕನ್ನಡ ಸಂಘ ಸಂಸ್ಥೆಗಳ ಅನೇಕ ಅಜಿಟೇಷನ್ ನಡೆಯುತ್ತಿದೆ. ಇದನ್ನು ಹೀಗೇ ಬಿಟ್ಟರೆ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಜವಾಬ್ದಾರಿಯುತವಾದ ಸರ್ಕಾರ ವಿಕೋಪಕ್ಕೆ ಹೋಗಿ ಒಂದು ಕಮಿಷನ್ ಮುಂದೆ ಇನ್ನೊಂದು ತಂದು ಜನರ ನಡುವೆ ತಿಕ್ಕಾಟಕ್ಕೆ ಅವಕಾಶ ಕೊಡಬಾರದು. ಕನ್ನಡಿಗರಿಗೆ ಉದ್ಯೋಗ ಕೊಡಿಸುವುದಕ್ಕೆ ಏನೇನು ಕ್ರಮ ಕೈಗೊಳ್ಳಬೇಕೋ ಅದನ್ನೆಲ್ಲ ಬಹಳ ಮುಖ್ಯವಾಗಿ ತೆಗೆದುಕೊಂಡು ಜನರ ನಡುವೆ ಘರ್ಷಣೆ ಬಾರದಂತೆ ನೋಡಿಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ. ಡಾ॥ ಮಹಿಷಿಯವರ ವರದಿಯ ಬಗ್ಗೆ ಸರ್ಕಾರದ ನಿಲುವು ಏನಿದೆ ಮತ್ತು ಏನು ಕ್ರಮ ಕೈಗೊಳ್ಳುತ್ತಾರೆಂಬುದನ್ನು ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟಪಡಿಸಬೇಕೆಂದು ಹೇಳುತ್ತೇನೆ.

ಇನ್ನು ಪ್ರೊಫೆಷನಲ್ ಟ್ಯಾಕ್ಸ್ ಬಗ್ಗೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ವೃತ್ತಿ ತೆರಿಗೆಯನ್ನು ತೆಗೆದುಹಾಕಿ ಎಂದು ನಾವೂ ಸಹ ಹೇಳಿ ಬಂದೆವು. ಆದರೆ ಇವತ್ತಿನ ದಿವಸ ೨೫೦೦ ರೂಪಾಯಿ

ವೃತ್ತಿ ತೆರಿಗೆಯನ್ನು ಮಾಡಿದ್ದಾರೆ. ವೃತ್ತಿ ತೆರಿಗೆಯನ್ನು ಡಿಯರ್‌ನೆಸ್ ಅಲೋಯನ್ಸ್ ಮುಂತಾದ ಭತ್ಯಗಳನ್ನೊಳಗೊಂಡ ಸಂಬಳದ ಮೇಲೂ ಹೇರುವುದಕ್ಕೆ ತಯಾರು ಮಾಡಿದ್ದಾರೆ. ಆದುದರಿಂದ ಇದು ಹೀಗೆ ಮುಂದುವರಿಯುತ್ತಾ ಹೋದರೆ ೪ನೇ ದರ್ಜೆ ನೌಕರನೂ ಕೂಡ ಪ್ರೊಫೆಷನಲ್ ಟ್ಯಾಕ್ಸ್‌ನ್ನು ಕೊಡಬೇಕಾದ ಪರಿಸ್ಥಿತಿ ಬರುತ್ತೆಂದು ಅಂದುಕೊಂಡಿದ್ದೇನೆ. ಆದಕಾರಣ ಈ ವೃತ್ತಿ ತೆರಿಗೆಯನ್ನು ಕೂಡಲೇ ತೆಗೆದುಹಾಕಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ. ವೃತ್ತಿ ತೆರಿಗೆಯನ್ನು ಹಾಕಲೇಬೇಕೆಂದರೆ ವರ್ಷಕ್ಕೆ ೫೦ ಸಾವಿರ ರೂಪಾಯಿಗಳಿಗಿಂತ ಹೆಚ್ಚು ವರಮಾನ ಯಾರಿಗೆ ಇದೆ ಅಂಥವರ ಮೇಲೆ ಮಾತ್ರ ಹಾಕಿ. ಅದಕ್ಕಿಂತ ಕಡಿಮೆ ಇರತಕ್ಕ ನೌಕರ ವರ್ಗದವರ ಮೇಲೆ ಇರತಕ್ಕ ವೃತ್ತಿ ತೆರಿಗೆಯನ್ನು ತೆಗೆದು ಹಾಕಬೇಕೆಂದು ಒತ್ತಾಯ ಮಾಡುತ್ತೇನೆ. ಅದಾದಮೇಲೆ ಈ ಒಂದು ಮುಂಗಡ ಪತ್ರದಲ್ಲಿ ಮುಖ್ಯ ಮಂತ್ರಿಗಳು ಏನು ಹೇಳಿದ್ದಾರೆಂದರೆ, ಕೇಂದ್ರ ಸರ್ಕಾರದಿಂದ ಸಾಕಷ್ಟು ಹಣ ಬರುತ್ತಿಲ್ಲ. ರಾಜ್ಯ ಸರ್ಕಾರಕ್ಕೆ ಬರಬೇಕಾದ ಹಣ ಸೋರಿ ಹೋಗುತ್ತಿದೆ ಎಂದು ಆಪಾದನೆ ಮಾಡಿದ್ದಾರೆ. ನಾನು ಇದನ್ನು ನಗೆ ಪಾಟಿನ ಆಪಾದನೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯ ಸರ್ಕಾರ ಸಂಪನ್ಮೂಲಗಳನ್ನು ಕ್ರೋಢೀಕರಿಸಿದರೆ ಕೇಂದ್ರ ಸರ್ಕಾರ ಸಹಾಯ ಮಾಡುತ್ತಿಲ್ಲ ಎಂದು ಖಂಡಿತ ಹೇಳಬಹುದು ಈ ಮದ್ಯ ಮಾರಾಟದಲ್ಲಿ ಸೆಕೆಂಡ್ಸ್ ಏನು ನಡೆಯುತ್ತಿದೆ ಅದನ್ನು ನಿಲ್ಲಿಸಿದರೆ ೧೫೦ ಕೋಟಿ ರೂಪಾಯಿಗಳ ಆದಾಯ ಬರುತ್ತದೆಂದು ಮಾನ್ಯ ಬೈರೇಗೌಡರೂ ಸಹ ನಿರ್ದಿಷ್ಟ ನಿಲುವು ತೆಗೆದುಕೊಂಡಿದ್ದರು. ಮಾನ್ಯ ಮುಖ್ಯ ಮಂತ್ರಿಗಳಿಗೆ ಕೂಡಹೇಳಿದ್ದರು. ಆದರೆ ಸೆಕೆಂಡ್ಸ್ ಮಾರಾಟವನ್ನು ತಪ್ಪಿಸುವುದಕ್ಕೆ ಏನು ಕ್ರಮ ಕೈಗೊಳ್ಳುತ್ತಾರೆಂಬುದು ಈ ಮುಂಗಡ ಪತ್ರದಲ್ಲಿಯೂ ಇಲ್ಲ, ಯಾವುದೇ ಕ್ರಮವನ್ನು ಇದುವರೆಗೆ ಕೈಗೊಂಡಿಲ್ಲ. ಆದುದರಿಂದ ರಾಜ್ಯ ಸರ್ಕಾರದವರು, ತಾವು ಮಾಡಬೇಕಾದ ಕೆಲಸವನ್ನು ಮಾಡಿ, ತಮಗೆ ಬರಬೇಕಾದ ೧೫೦ ಕೋಟಿ ರೂಪಾಯಿಗಳನ್ನು ಬರುವಂತೆ ಮಾಡಿಕೊಳ್ಳದೆ ಕೇಂದ್ರ ಸರ್ಕಾರದವರು ದುಡ್ಡು ಕೊಡುತ್ತಿಲ್ಲವೆಂದರೆ ಅದು ನಗೆಪಾಟಿನ ಮಾತು ಎಂದು ಹೇಳುತ್ತೇನೆ. ಕೇಂದ್ರ ಸರ್ಕಾರದ ಕಡೆ ಬೊಟ್ಟು ಮಾಡಬೇಕಾದರೆ ತಾವು ಮೊದಲು ಸರಿಯಾಗಿರಬೇಕು. ಇಲ್ಲದಿದ್ದರೆ ಅವರ ಬಗ್ಗೆ ಹೇಳುವುದು ಸರಿಯಲ್ಲವೆಂದು ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳುತ್ತೇನೆ. ಸೆಕೆಂಡ್ಸ್ ಮಾರಾಟದಲ್ಲಿ ಏನು ಅವ್ಯವಹಾರ ನಡೆಯುತ್ತಿದೆ, ಅದನ್ನು ನಿಲ್ಲಿಸುವುದಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಖಂಡಿತವಾಗಿ ಏನು ಸಂಪನ್ಮೂಲಗಳನ್ನು ಕ್ರೋಢೀಕರಿಸುವ ವಾಗ್ದಾನ ಇದೆ ಅದು ಸರಿಹೋಗುವುದಿಲ್ಲ. ಮತ್ತು ಅದು ಜಾರಿಗೆ ಬರುವುದಿಲ್ಲ, ಬರೀ ಜನತೆಗೆ ಮೋಸ ಮಾಡುವುದಕ್ಕೆ ತೆರಿಗೆಯ ಹೊರೆಯನ್ನು ಜನತೆಯ ಮೇಲೆ ಹೇರುತ್ತಿದ್ದಾರೆಂದು ತಿಳಿದುಕೊಳ್ಳಬೇಕಾಗುತ್ತದೆ. ಮೊನ್ನೆ ತಾನೇ ಮುಖ್ಯ ಮಂತ್ರಿಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಹೋಗಿ ಜಿಲ್ಲಾಪರಿಷತ್ತಿನ ಎಸ್. ಸಿ ಎಸ್. ಟಿ. ಹಾಸ್ಟೆಲ್ ಒಂದನ್ನು ಉದ್ಘಾಟಿಸುತ್ತಾ ಭಾಷಣ ಮಾಡಿದ್ದಾರೆ. ಅದು ಒಂದು ಸರ್ಕಾರಿ ಸಮಾರಂಭ. ಆ ಸಮಾರಂಭ. ಆ ಸಮಾರಂಭದಲ್ಲಿ ಮುಖ್ಯ ಮಂತ್ರಿಗಳು ಏನು ಭಾಷಣ ಮಾಡಬಹುದು ? ಇನ್ನೊಂದು ಪಕ್ಷವನ್ನು ಬೈಯುವ ಭಾಷಣವನ್ನು ಅಲ್ಲಿ ಮಾಡುತ್ತಾರೆಯೆ ? ಇದು ಶೋಚನೀಯವಾದ ಸಂಗತಿ ಮುಖ್ಯ ಮಂತ್ರಿಗಳು ತಮ್ಮ ಜವಾಬ್ದಾರಿಯನ್ನು ತಿಳಿದುಕೊಂಡಿದ್ದಾರೆಯೇ ? ಜನತಾ ಪಕ್ಷದವರು ಬಿಟ್ಟು ಹೋಗಿದ್ದಾರೆಂದು ಆ ಸಮಾರಂಭದಲ್ಲಿ ಭಾಷಣ ಮಾಡಿದರೆ ಜನ ಏನನ್ನುತ್ತಾರೆ ? ಒಂದು ಸರ್ಕಾರಿ ಸಮಾರಂಭದಲ್ಲಿ ಇನ್ನೊಂದು ರಾಜಕೀಯ ಪಕ್ಷವನ್ನು ಬೈಯ್ಯುವ ಕೆಲಸವನ್ನು ಮಾಡಿದರೆ ಯಾವ ರೀತಿ ಮುಖ್ಯ ಮಂತ್ರಿಗಳು ತಮ್ಮ ಕೆಲಸ ಮಾಡುತ್ತಿದ್ದಾರೆಂದು ನನಗೆ ಅರ್ಥವಾಗುವುದಿಲ್ಲ. ಬೆಳಿಗ್ಗೆ ತಾನೇ ಮಾನ್ಯ ಮಲ್ಲಿಕಾರ್ಜುನ ಖಾರ್ಗೆಯವರು ಕೂಡ ಕಾಂಗ್ರೆಸ್ ಪಕ್ಷವನ್ನು ಬೈದಿದ್ದಾರೆ ಎಂದು ಹೇಳಿದರು. ಇದನ್ನು ನೋಡಿದರೆ ಇದನ್ನೇ ಪರಿಪಾಠವಾಗಿ ಮಾನ್ಯ ಮುಖ್ಯಮಂತ್ರಿಗಳು ಮಾಡಿಕೊಂಡಿದ್ದಾರೋ ಏನೋ ಅರ್ಥವಾಗುತ್ತಿಲ್ಲ. ಈ ತರಹ ಅವರು ಮಾಡಿದರೆ ಅವರು ಯಾವ ಸ್ಥಾನವನ್ನು ಅಲಂಕರಿಸಿದ್ದಾರೆ ಅದಕ್ಕೆ ಅವಮಾನ ಮಾಡಿದಂತಾಗುತ್ತದೆ. ಈ ತರಹ ಸನ್ನಿವೇಶಮುಂದೆ ಬರದಹಾಗೆ ನೋಡಿಕೊಳ್ಳಬೇಕಾದುದು ಮುಖ್ಯವಾದುದು ಎಂದು ಹೇಳುತ್ತೇನೆ. ಎಲ್ಲಾ ಸ್ನೇಹಿತರೂ ಇದನ್ನು ಎಲೆಕ್ಷನ್ ಬಜೆಟ್ ಎಂದು ಹೇಳಿದರು. ನಾನು ಆರೀತಿ ಹೇಳುವುದಿಲ್ಲ. ಇದೊಂದು ಡಿಸಲ್ಯೂಷನ್ ಬಜೆಟ್ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದನ್ನು ನೋಡಿದರೆ ಮುಂದೆ ೧೨ ತಿಂಗಳು ಇವರು ಸರ್ಕಾರ ನಡೆಸಿಕೊಂಡು ಹೋಗುತ್ತಾರೆ ಎಂಬ ಭರವಸೆ ಇಲ್ಲ ಎಂದು ತೋರಿಬರುತ್ತಿದೆ. ಆದ್ದರಿಂದ ಓಟ್ ಆನ್ ಅಕೌಂಟ್ ತೆಗೆದುಕೊಂಡು ಡಿಸಾಲ್ವ್ ಮಾಡಿ ಮುಂದೆ ಚುನಾವಣೆಗೆ ಹೋಗತಕ್ಕ ತೀರ್ಮಾನ ತೆಗೆದುಕೊಂಡಿದ್ದಾರೆ, ಅದಕ್ಕಾಗಿ ಈ ಮುಂಗಡ ಪತ್ರವನ್ನು ತಂದಿದ್ದಾರೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಮುಂಗಡ ಪತ್ರದ ಪ್ರಕಾರ ೧೨ ತಿಂಗಳು ನಡೆಸಿಕೊಂಡು ಹೋದರೆ ಖಂಡಿತವಾಗಿ ಸೆಪ್ಟಂಬರ್ ಅಥವಾ ನವೆಂಬರ್‌ನಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿ ಶೋಚನೀಯವಾಗುತ್ತದೆ.

ಫೈನಾನ್ಷಿಯಲ್ ಕ್ರೈಸಿಸ್‌ನಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೆ. ಆದ್ದರಿಂದ ಇದೊಂದು ಡಿಸಲ್ಯೂಷನ್ ಬಜೆಟ್ ಎಂದು ಹೇಳಿ ನನಗೆ ಭಾಷಣ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಚ್. ಶ್ರೀನಿವಾಸ್ (ಶಿವಮೊಗ್ಗ) —ಸನ್ಮಾನ್ಯ ಅಧ್ಯಕ್ಷರೆ, ತಮಗೆ ತಿಳಿದಂತೆ ಸರ್ಕಾರದ ವ್ಯವಹಾರಗಳಲ್ಲಿ ಬಜೆಟ್ ಬಹಳ ಪ್ರಾಮುಖ್ಯತೆಯನ್ನು ಹೊಂದಿರತಕ್ಕ ವಿಚಾರ. ನಮ್ಮ ಸದನದ ವ್ಯವಹಾರಗಳಲ್ಲೂ ಕೂಡ ಈ ಸದನಕ್ಕಿರುವ ಜವಾಬ್ದಾರಿ ಮುಖ್ಯವಾದದು. ಸರ್ಕಾರ ಹೇಳಿಕೊಂಡಿರತಕ್ಕ ಗೊತ್ತುಗುರಿಗೆ ಅನುಸಾರವಾಗಿ ಸರಿಯಾದ ರೀತಿಯಲ್ಲಿ ಅದು ನಡೆದು ಕೊಳ್ಳುವಂತೆ ನೋಡಿಕೊಳ್ಳುವ ಜವಾಬ್ದಾರಿ ಈ ಸದನಕ್ಕೆ ಸಮಗ್ರವಾಗಿದೆ. ಇದರಲ್ಲಿ ಈ ಪಕ್ಷ ಆ ಪಕ್ಷ ಎಂಬ ಪ್ರಶ್ನೆಯಿಲ್ಲ. ಅದಕ್ಕಿರುವಂಥ ಪ್ರಾಮುಖ್ಯವಾದ ಅಸ್ತ್ರ ಕೂಡ ಬಜೆಟ್. ಸರ್ಕಾರ ಮನಸ್ಸು ಮಾಡಿದರೆ ಬಜೆಟ್ಟನ್ನು ತುಂಬಾ ಪ್ರಭಲವಾದ, ಸಮಗ್ರವಾದ ಅಸ್ತ್ರವಾಗಿ ಉಪಯೋಗಿಸುವುದಕ್ಕೆ ಸಾಧ್ಯವಿದೆ. ಸರ್ಕಾರದ ನೀತಿ ಮತ್ತು ಕಾರ್ಯಕ್ರಮಗಳನ್ನು ಕಾರ್ಯಗತ ಮಾಡುವ ವಿಚಾರದಲ್ಲಿ ಸರ್ಕಾರ ಏನು ಉದ್ದೇಶ ಇಟ್ಟುಕೊಂಡಿದೆಯೋ ಆ ಎಲ್ಲಾ ಪ್ರತಿಫಲಗಳು ಯಾರಿಗೆ ತಲುಪಬೇಕೋ ಅವರಿಗೆ ತಲುಪಿ ರಶೀದಿ ಬರುವಂಥ ವಿಚಾರದಲ್ಲಿ ಹಾಗೆಯೇ ಆಡಳಿತವನ್ನು ದಕ್ಷವಾಗಿ, ಶುಚಿಯಾಗಿ ಇಡುವ ವಿಚಾರದಲ್ಲಿ ಪ್ರತಿಯೊಂದರಲ್ಲೂ ಕೂಡ ಬಜೆಟ್ಟನ್ನು ಮಹಾ ಅಸ್ತ್ರವನ್ನಾಗಿ ಸರ್ಕಾರ ತನಗೆ ಮನಸಿದ್ದರೆ, ಶಕ್ತಿ ಇದ್ದರೆ ಬಳಸುವುದಕ್ಕೆ ಸಾಧ್ಯ ಇದೆ. ಮಾನ್ಯ ಅಧ್ಯಕ್ಷರೇ, ಒಂದೇ ಒಂದು ದುರದೃಷ್ಟಕರವಾದ ವಿಷಯು ಎಂದರೆ, ಇತ್ತೀಚಿನ ದಿವಸಗಳಲ್ಲಿ ಈ ಬಜೆಟ್ಟಿಗೆ ಯಾವ ಮಹತ್ವವೂ ಉಳಿದಿಲ್ಲ. ಬಜೆಟ್ಟಿನಲ್ಲಿ ಯಾವುದು ಹೇಳಿದರೆ ಏನು ಬಿಟ್ಟರೆ ಏನು ? ಬಜೆಟ್ಟಿನಲ್ಲಿ ಹಣಕೊಟ್ಟಿದ್ದಾರೆ, ಅದನ್ನು ಖರ್ಚು ಮಾಡುತ್ತಾರೆ ಎನ್ನುವ ಹಾಗಿಲ್ಲ. ಖರ್ಚುಮಾಡಬೇಕು ಎಂಬ ಪ್ರಜ್ಞೆಯೂ ಇಲ್ಲ. ಖರ್ಚು ಮಾಡದೇಹೋದರೆ ಏತಕ್ಕೆ ಖರ್ಚು ಮಾಡಿಲ್ಲ ಎಂದು ಕೇಳುವ ವ್ಯವಸ್ಥೆ ಇಲ್ಲ. ಸಾರ್ವಜನಿಕ ಲೆಕ್ಕಪತ್ರ ಸಮಿತಿಯಲ್ಲಿ ವರದಿಗಳನ್ನು ಹೊರಡಿಸುತ್ತಾ ಇರುತ್ತಾರೆ. ಹಿಂದೆ ನಾನು ಹೇಳಿದಂತೆ ಆ ವರದಿಗಳು ಬರೀ ಕಪಾಟಿನಲ್ಲಿ ಶೃಂಗಾರಕ್ಕಾಗಿ ಸಲ್ಲುತ್ತಿವೆಯೇ ಹೊರತು ಅದರ ಮೇಲೆ ಯಾವ ಚರ್ಚೆಯೂ ಆಗುವುದಿಲ್ಲ. ಆಕ್ಷನ್ ಟೇಕನ್ ರಿಪೋರ್ಟ್ ನೋಡಿದರೆ ಮೊದಲು ಹೇಳಿದ್ದನ್ನೇ ಅದರಲ್ಲೂ ಹೇಳಿರುತ್ತಾರೆ. ಮೊದಲು ಸಾರ್ವಜನಿಕ ಲೆಕ್ಕಪತ್ರ ಸಮಿತಿ ಮುಂದೆ ಏನು ಉತ್ತರ ಕೊಟ್ಟಿರುತ್ತಾರೋ ಅದೇ ಉತ್ತರಗಳನ್ನೇ ಮತ್ತೊಂದು ಸಾರಿ ಅಚ್ಚು ಹೊಡೆದು ಕೊಡುತ್ತಾರೆ. ಹಳೇ ಕಾಲದಲ್ಲಿ ಪುಸ್ತಕಗಳನ್ನು ಪ್ರಿಂಟ್ ಮಾಡುತ್ತಿದ್ದರು. ಆಗ ಪ್ರಿಂಟಿಂಗ್ ಅಷ್ಟು ಸರಿಯಿರಲಿಲ್ಲ. ಅದರಲ್ಲಿ ಮದನಮೋಹನ ರಾಜನ ಚರಿತ್ರೆ ಎಂದು ಕೊಡುತ್ತಿದ್ದರು. ಅದರಲ್ಲಿ ರಾಜ ಕುಳಿತಿರುವ ಒಂದು ಚಿತ್ರ ಕೊಡುತ್ತಿದ್ದರು. ಮುಂದೆ ಮಲಗಿರುವ ಚಿತ್ರ ಕೊಡಬೇಕಾದರೆ ಕುಳಿತಿರುವ ಫೋಟೋವನ್ನೇ ಅಡ್ಡಡ್ಡಾಗಿ ಇಟ್ಟು ಪ್ರಿಂಟ್ ಮಾಡಿಬಿಡುತ್ತಿದ್ದರು. ಅದನ್ನೇ ತಿರುಗಮುರು ಮಾಡಿದರೆ ಮಲಗಿರುವಫೋಟೊ ಆಗುತ್ತಿತ್ತು. ಆ ತರಹ ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ಆಡಳಿತ ಯಂತ್ರ ಒದಗಿಸುವ ಗೌರವ ಇದೆ. ಮೊದಲು ಏನು ಆಗಲಿಲ್ಲ ಎಂದು ಹೇಳುತ್ತಾರೋ ಅದನ್ನೇ ಮತ್ತೆ ಆಕ್ಷನ್ ಟೇಕನ್ ರಿಪೋರ್ಟ್‌ನಲ್ಲೂ ಪ್ರಿಂಟ್ ಮಾಡಿ ಕಳುಹಿಸುತ್ತಾರೆ. ಹೀಗಾಗಿ ಬಜೆಟ್ ತನ್ನ ಅರ್ಥವನ್ನು ಕಳೆದು ಕೊಂಡಿದೆ. ಬಜೆಟ್ ಭಾಷಣಕ್ಕೂ ಅರ್ಥ ಇಲ್ಲ, ಬಜೆಟ್ ಮೇಲೆ ನಾವು ಮಾಡುವ ಭಾಷಣಕ್ಕೂ ಯಾವುದೇ ಅರ್ಥವಾಗಲೀ. ಸಾರ್ಥಕತೆಯಾಗಲೀ ಇಲ್ಲದಿರುವ ಪರಿಸ್ಥಿತಿಯಲ್ಲಿ ಇಂದು ನಾವಿದ್ದೇವೆ.

೧–೦೦ ಪಿ. ಎಂ.

ಪ್ರಸ್ತುತ ಮಾನ್ಯ ಶ್ರೀ ಬೊಮ್ಮಾಯಿಯವರು ರಾಜ್ಯದ ಮುಖ್ಯ ಮಂತ್ರಿ ಹಾಗೂ ಆರ್ಥಿಕ ಸಚಿವರಾಗಿ ಮಂಡಿಸಿರತಕ್ಕ ಬಜೆಟ್ ನನ್ನ ದೃಷ್ಟಿಯಲ್ಲಿ ಅತ್ಯಂತ ನೀರಸವಾದ ಒಂದು ಕಾಗದವಾಗಿದೆ. ಇದರಲ್ಲಿರುವ ಯಾವ ಒಂದು ಪ್ಯಾರಾದಲ್ಲೂ ರಸವೂ ಇಲ್ಲ, ಒಂದು ರೀತಿ ಒಣ ಕಿತ್ತಳೆ ಹಣ್ಣಿನ ಸಿಪ್ಪೆ ಸುಲಿದ ಹಾಗೆ ಇದೆ. ಅದರಲ್ಲಿ ಆ ಗಂಧವೂ ಇಲ್ಲ, ತಿರುಳೂ ಇಲ್ಲ. ಆ ಪರಿಸ್ಥಿತಿಯ ಬಜೆಟ್ ಇಟ್ಟಿದ್ದಾರೆ, ಒಂದೇ ಒಂದು ವಿಷಯು ಏನೆಂದರೆ, ನಮ್ಮ ವೆಂಕಟರಾಮಯ್ಯನವರು ಈಗ ಇಲ್ಲಿ ಇಲ್ಲ. ತೆಲುಗಿನಲ್ಲಿ ಒಂದು ಗಾದೆ ಇದೆ. '' ಐಯಂಗಾರಿಕಿ ಗರ್ವಮೂ ಲೇದು, ವಿದ್ಯೆಮೂ ಲೇದು'' ಎಂದು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಇದೆ. ಇದು ಆ ರೀತಿ ಇದೆ. ಇದರಲ್ಲಿ ಅವರು ವಿಶೇಷ ಪರಾಕ್ರಮ ಏನೂ ತೋರಿಸುವುದಕ್ಕೆ ಹೋಗಲಿಲ್ಲ. ಬಂಡವಾಳ ಇಲ್ಲದ ಬಡಾಯಿ ಎಂದು ಹೇಳಿಕೊಳ್ಳುವುದಕ್ಕೂ ಹೋಗಿಲ್ಲ, ಬಂಡವಾಳವೂ ಇಲ್ಲ. ಬಡಾಯಿಯೂ ಇಲ್ಲ. ಆ ಮಟ್ಟಿಗೆ ಮಾನ್ಯ ಶ್ರೀ ಬೊಮ್ಮಾಯಿಯವರನ್ನು ಮೆಚ್ಚಿಕೊಳ್ಳುತ್ತೇನೆ. ಬಂಡವಾಳ ಇಲ್ಲದಿದ್ದರೆ ಏನೂ ಮಾಡುವುದಕ್ಕಾಗುವುದಿಲ್ಲ. ಬಡಾಯಿಯನ್ನು ಜಾಸ್ತಿ ಮಾಡುವುದರಿಂದ ಅದು ಅಷ್ಟು ಅಸಂಬದ್ಧವಾಗಿ ಕಾಣುವುದರಿಂದ ಆ ಕೆಲಸವನ್ನು ಮಾಡುವುದಕ್ಕೆ ಹೋಗಲಿಲ್ಲ ಎನ್ನುವ ಮಟ್ಟಿಗೆ ನನ್ನ ಮೆಚ್ಚುಗೆ ಇದೆ. ಇದು ಸಂಪೂರ್ಣವಾಗಿ ಬಂಡವಾಳ ಇಲ್ಲದ ಬಡಾಯಿ ಇಲ್ಲದೇ ಇರತಕ್ಕ ನೀರಸ ಕಾಗದ ಪತ್ರವಾಗಿದೆ. ಈಗಾಗಲೇ ಮಾನ್ಯ ಸ್ನೇಹಿತರು ಹೇಳಿದ ಹಾಗೆ ಈ ಬಜೆಟ್‌ನಲ್ಲಿ ೭೭ ಪ್ಯಾರಾಗ್ರಾಫ್‌ಗಳಿದ್ದು, ೧೪ ಪ್ಯಾರಾಗ್ರಾಫ್‌ಗಳು ಕೇಂದ್ರಕ್ಕೆ ಸಂಬಂಧಪಟ್ಟಂತೆ ಇದೆ. ನಮ್ಮ ಕರ್ನಾಟಕ ರಾಜ್ಯದ ವಿಚಾರಗಳ ಬಗ್ಗೆ ನಾವು ಮಾತನಾಡುವುದನ್ನು ಬಿಟ್ಟು ಪ್ರತಿ

(ಉಪಾಧ್ಯಕ್ಷರು ಪೀಠವನ್ನಲಂಕರಿಸಿದರು)

ಸಂದರ್ಭದಲ್ಲೂ ಕೂಡ ಕೇಂದ್ರ ಸರ್ಕಾರದ ಮೇಲೆ ಬೊಟ್ಟು ಮಾಡಿ ತೋರಿಸತಕ್ಕದ್ದು ಒಂದು ರೋಗ. ಇದಕ್ಕೆ ಏನು ಹೆಸರು ಇಡಬೇಕೆಂದರೆ, ಈ ರೋಗ ಶ್ರೀಮಾನ್ ರಾಮಕೃಷ್ಣ ಹೆಗಡೆಯವರಿಂದ ಶುರುವಾಗಿದೆ. ಅದಕ್ಕಾಗಿ ಇದನ್ನು ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ರೋಗ ಎಂದು ಹೇಳಬೇಕಾಗಿದೆ. ಈ ೧೪ ಪ್ಯಾರಾಗಳು ಅಂತಹವುಗಳೇ ಅದರ ಮೆರಿಟ್ಸ್ ಬಗ್ಗೆ ನಾನು ಹೋಗುವುದಿಲ್ಲ. ಇದರಲ್ಲಿ ಹೇಳಿರತಕ್ಕ ವಿಷಯ ತಪ್ಪು ಎಂದು ನಾನು ಹೇಳುತ್ತಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಬಂಧ ಜನತಾಪಕ್ಷ ಕಾಂಗ್ರೆಸ್ ಪಕ್ಷದ ಸಂಬಂಧ ಅಲ್ಲ. ಇದು ರಾಜ್ಯಾಂಗದಲ್ಲೇ ಉಂಟಾಗಿರತಕ್ಕ ಸಂಬಂಧ. ರಾಜ್ಯಾಂಗವನ್ನು ರಚನೆ ಮಾಡುವಂತಹ ಕಾಲದಲ್ಲಿ ಆವತ್ತಿನ ವರ್ತಮಾನ ಕಾಲಕ್ಕನುಸಾರವಾಗಿ ಮತ್ತು ಮುಂದೆ ಭವಿಷ್ಯತ್ತಿನಲ್ಲಿ ಬರಬಹುದಾದಂತಹ ಸಮಸ್ಯೆಗಳನ್ನೂ ಲೆಕ್ಕದಲ್ಲಿಟ್ಟುಕೊಂಡು ಗಮನದಲ್ಲಿಟ್ಟುಕೊಂಡು ಆವತ್ತಿನ ದಿವಸ ರಾಜ್ಯಾಂಗದ ಕರ್ತೃಗಳು They have proposed a scheme of things. ರಾಜ್ಯಗಳ ಮತ್ತು ಕೇಂದ್ರದ ಸಂಬಂಧ ಏನು ಇದೆ, ಅದು ಹೇಗೆ ಇರಬೇಕು ಆರ್ಥಿಕ ಸಂಬಂಧ ಯಾವ ರೀತಿ ಇರಬೇಕು ಯಾವ ರೀತಿ ಹಣ ಕೇಂದ್ರಕ್ಕೆ ಜಮಾ ಆಗಬೇಕು. ಅಲ್ಲಿಂದ ಯಾವ ರೀತಿ ರಾಜ್ಯಕ್ಕೆ ಹಣ ಬರಬೇಕು ಇವೆಲ್ಲಾ ಪ್ರಸ್ತಾವನೆಗಳು ರಾಜ್ಯಾಂಗದಲ್ಲಿರತಕ್ಕ ವಿಚಾರಗಳು. ನಾನು ಏನು ಹೇಳುತ್ತೇನೆಂದರೆ, ಯಾವ ಸರ್ಕಾರ ತನ್ನ ರಾಜ್ಯದ ಹಿತಕ್ಕೋಸ್ಕರ ಹೋರಾಟ ಮಾಡುವುದರಲ್ಲಿ ಏನೂ ತಪ್ಪು ಇಲ್ಲ. ಆದರೆ ಆ ರೀತಿಯ ಹೋರಾಟ ಎಲ್ಲಿ ಮಾಡಬೇಕು ? ವಿಧಾನ ಸಭೆಯಲ್ಲಿ ಅಲ್ಲ. ಏಕೆಂದರೆ, ಈ ವಿಧಾನ ಸಭೆಯಲ್ಲಿ ಕೇಂದ್ರ ಸರ್ಕಾರದವರನ್ನು ನಮ್ಮ ಎದುರಿಗೆ ಇಟ್ಟುಕೊಂಡಿಲ್ಲ. ಅಥವಾ ಅವರು ನಮಗೇನೂ ಪವರ್ ಆಫ್ ಅಟಾರ್ನಿಯನ್ನೂ ಕೊಟ್ಟಿಲ್ಲ. ಇವರು ಏನೇನು ಹೇಳುತ್ತಾರೆ, ಅದಕ್ಕೆಲ್ಲಾ ಉತ್ತರ ಹೇಳುವುದಕ್ಕೆ ಇದು ಫ್ಲಾಟ್‌ಫಾರಂ ಅಲ್ಲ. ಕಾನೂನಿನಲ್ಲೂ ಅದಕ್ಕೆ ಅವಕಾಶ ಇಲ್ಲ. ಇಲ್ಲಿ ಕೇಂದ್ರ ಸರ್ಕಾರದ ಪರವಾಗಿ ವಕಾಲತ್ತು ಮಾಡುವುದಕ್ಕೆ ಯಾರಿಗೂ ವಕಾಲತ್ತನ್ನೂ ಕೂಡ ಕೊಟ್ಟಿಲ್ಲ. ಹೀಗಿರುವಾಗ ಈ ರೀತಿ ಮಾಡಿರುವಂತಹ ಉದ್ದೇಶವೇನು ? ಕೇಂದ್ರ ಮತ್ತು ರಾಜ್ಯಗಳ ಸಂಬಂಧದ ವಿಚಾರದಲ್ಲಿ ಬದಲಾವಣೆ ಮಾಡುವ ದಿಸೆಯಲ್ಲಿ ಪ್ರಯತ್ನ ಮಾಡಲಾಗುತ್ತಿದೆ. ಅದು ಯಾವ ರೀತಿ ಎಂಬುದನ್ನು ನೋಡಬಹುದು. ಹಿಂದಿನ ಎಲ್ಲಾ ರಾಜ್ಯಗಳ ಮುಖ್ಯ ಮಂತ್ರಿಗಳೂ, ನಮ್ಮ ರಾಜ್ಯ ಒಂದೇ ಅಲ್ಲ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳು ಪ್ರತಿ ವರ್ಷ ಸಂದರ್ಭಾನುಸಾರ ಈ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಯಾವಾಗ ಮಾಡಬೇಕೆಂದರೆ, ಯಾವಾಗ ವಿತ್ತ ಆಯೋಗ ಬರುತ್ತದೆಯೋ ಆಗ ರಾಜ್ಯ ಸರ್ಕಾರದ ಪರಿಯಿಂದ ಮೆಮೋರ್ಯಾಂಡವನ್ನು ಕೊಡತಕ್ಕ ಕಾಲದಲ್ಲಿ ಇವನ್ನೆಲ್ಲಾ ಹೇಳುತ್ತಾರೆ. ಅದು ಬೇಡ ಅಂದರೆ ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯ ಸಭೆಯನ್ನು ಕೇಂದ್ರ ಸರ್ಕಾರದವರು ಕರೆಯುತ್ತಾರೆ. ಅಲ್ಲಿ ಮುಖ್ಯಮಂತ್ರಿಗಳು ಮತ್ತು ಅರ್ಥ ಮಂತ್ರಿಗಳು ಹಾಗೂ ಯೋಜನ ಸಚಿವರು ಆ ಒಂದು ಅಭಿವೃದ್ಧಿ ಮಂಡಲಿಯಲ್ಲಿ ಮಾತನಾಡುವ ಅವಕಾಶ ಇದೆ. ಅಲ್ಲಿ ನಿಮ್ಮ ವಾದವನ್ನು ಮಂಡಿಸುವುದಕ್ಕೆ ಅವಕಾಶ ಇದೆ. ಯಾವುದೋ ಹಿಂದಿನದನ್ನು ಅಂದರೆ ೧೯೬೭ರಲ್ಲಿ ಇದ್ದಂತಹದ್ದನ್ನು ಹೋಲಿಸಿಕೊಂಡು ಈಗ ಮಾತನಾಡುವುದಲ್ಲ. ಇವತ್ತು ಕೇಂದ್ರ ಮತ್ತು ರಾಜ್ಯಗಳ ಆರ್ಥಿಕ ಸಂಬಂಧವಾಗಿ ಬೇಕಾದಷ್ಟು ಬದಲಾವಣೆಯಾಗಿದೆ. ಇತ್ತೀಚೆಗೆ ವಿತ್ತ ಆಯೋಗಗಳು ಬೇಕಾದಷ್ಟು ಶಿಫಾರಸ್ಸುಗಳನ್ನು ಮಾಡಿವೆ. ರಾಜ್ಯ ಸರ್ಕಾರಗಳಿಗೆ ವಿದೇಶದಿಂದ ಸಹಾಯವಾಗಿ ಬರತಕ್ಕ ೧೦೦ಕ್ಕೆ ನೂರರಷ್ಟು ವರ್ಗಾವಣೆಯಾಗುತ್ತಾ ಇರಲಿಲ್ಲ. ಅವರಿಗೇ ಕೊಡಬೇಕೆಂಬುದಾಗಿಯೂ ಶಿಫಾರಸ್ಸು ಮಾಡಿದ್ದಾರೆ. ಅದನ್ನು ಕೇಂದ್ರ ಸರ್ಕಾರ ಒಪ್ಪಿಕೊಂಡಿದೆ. ಅದರಿಂದ ನಮ್ಮ ರಾಜ್ಯಕ್ಕೆ ೩೦-೩೫ ಕೋಟಿ ರೂಪಾಯಿಗಳವರೆಗೆ ಲಾಭವಾಗುತ್ತದೆ. ಅಂದರೆ ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಿರುವುದು ಅಯೋಗ್ಯವಾದುದಲ್ಲವೆಂದು ಹೇಳುತ್ತಿಲ್ಲ. ಆದರೆ ಎಲ್ಲಿ ಮಾಡಬೇಕು ? ಇದನ್ನು ನಿಮ್ಮ ಬಜೆಟ್

ಭಾಷಣದಲ್ಲಿ ಪ್ರಸ್ತಾಪ ಮಾಡಿರುವ ಉದ್ದೇಶವೇನು ? ಇಲ್ಲಿ ಚರ್ಚೆ ಮಾಡತಕ್ಕಂತಹದು ಏನು ? ಈಗಿರುವ ರಾಜ್ಯಾಂಗದ ಅಡಿಯಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳೇ ಆಗಲಿ, ಯೋಜನೆಗಳ ಇತಿಮಿತಿಯಲ್ಲಿ ಅವು ಅಷ್ಟು ಸಮರ್ಪಕವಾಗಿ ಕೆಲಸ ಮಾಡಿದ್ದೇವೆಯೋ ಎಂಬುದನ್ನು ಹೇಳುವುದನ್ನು ಬಿಟ್ಟುಬಿಟ್ಟು ಪ್ರತಿಯೊಂದಕ್ಕೂ ಕೂಡ ಕೇಂದ್ರದ ಬಗ್ಗೆ ಹೇಳಿದ್ದಾರೆ. ನೀವು ಪ್ರತಿಯೊಂದಕ್ಕೂ ಕೂಡಾ ಕೇಂದ್ರ ಸರ್ಕಾರವನ್ನು ಎಳೆದು, ನಿಮ್ಮ ವೈಫಲ್ಯಗಳೆಲ್ಲಕ್ಕೂ ಕೇಂದ್ರ ಸರ್ಕಾರ ಜವಾಬ್ದಾರಿ ಎಂದರೆ ಹೇಗೆ? ಹಾಗಾದರೆ, ಕೇಂದ್ರ ಸರ್ಕಾರವನ್ನು ತೆಗೆದುಹಾಕಿದರೆ ನೀವು ಚೆನ್ನಾಗಿ ರಾಜ್ಯ ಆಳುತ್ತೀರೋ ? ಅಲ್ಲಿ ಸರ್ಕಾರ ಇಲ್ಲದಿದ್ದರೆ ನೀವು ಬಹಳ ಚೆನ್ನಾಗಿ ರಾಜ್ಯ ಆಳುತ್ತೀರಾ ? ಎಲ್ಲಿ ಈ ವಾದವನ್ನು ಮಂಡಿಸಬೇಕೋ ಅಲ್ಲಿ ಇದನ್ನು ಮಂಡಿಸದೇ ವಿಧಾನಸಭೆಯ ಮುಂದೆ ವಾದವನ್ನು ಮಂಡಿಸುವುದು ಸರಿಯಾದ ವಿಚಾರವಲ್ಲ. ಇದರಿಂದ ಏನೂ ಪ್ರಯೋಜನ ಇಲ್ಲ. ನಿಮ್ಮ ವೈಫಲ್ಯಗಳನ್ನು ನಿಮ್ಮ ಸಂಪೂರ್ಣ ವಿಫಲತೆಯನ್ನು ಮುಚ್ಚಿಕೊಳ್ಳುವುದಕ್ಕೆ ಮಾಡುವ ತಂತ್ರ ಇದು. ಇದನ್ನು ಮಾನ್ಯ ರಾಮಕೃಷ್ಣ ಹೆಗ್ಡೆಯವರು ಸಾಕಷ್ಟು ಚೆನ್ನಾಗಿ ಬಳಸಿಕೊಂಡಿದ್ದಾರೆ. ಈಗ ಬೊಮ್ಮಾಯಿಯವರು ನಾನು ಬೇರೆ ಮಾಡುತ್ತೇನೆ ಎಂದು ಹೇಳುತ್ತಾ ಅದೇ ಹಳಿಯ ಮೇಲೆ ಹೋಗುತ್ತಿದ್ದಾರೆ. ಬೇರೆ ಮಾಡಿದ್ದು ಕಾಣಿಸುತ್ತಾ ಇಲ್ಲ, ಆ ಹಳಿ ಒಂದೇ. ಇದನ್ನು ಬದಲಾವಣೆ ಮಾಡತಕ್ಕ ಶಕ್ತಿ ಇಲ್ಲ ಎಂದು ಹೇಳುವುದಕ್ಕೆ ಈ ಆಯವ್ಯಯ ಭಾಷಣವೇ ಸಾಕ್ಷಿ.

ಶ್ರೀ ಬಿ. ಆರ್. ನೀಲಕಂಠಪ್ಪ.—ನಾವು ಹಳಿ ಬದಲಾವಣೆ ಮಾಡುವುದಕ್ಕೆ ಹೋಗುವುದಿಲ್ಲ. ಅದೇ ಹಳಿಯ ಮೇಲೆ ಹೋಗಿ ಚೆನ್ನಾಗಿ ಕೆಲಸ ಮಾಡುತ್ತೇವೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಹಳಿ ಬದಲಾವಣೆ ಮಾಡುತ್ತೇವೆಂದು ಬೊಮ್ಮಾಯಿಯವರು ಹೇಳಿದ್ದಾರೆ. ನೀವು ಪೇಪರ್ ಗೀಪರ್ ಓದುವುದಿಲ್ಲವಾದ್ದರಿಂದ ಇದೆಲ್ಲಾ ನಿಮಗೆ ಗೊತ್ತಾಗುವುದಿಲ್ಲ. ಮುಂದೆ ನಾನು ಅದನ್ನು ಓದಿ ಹೇಳುತ್ತೇನೆ. ಆದುದರಿಂದ ಮಾನ್ಯ ಅಧ್ಯಕ್ಷರೇ, ಈಗ ಪ್ಯಾರಾ ೧೪ರ ವರೆಗೆ ಏನು ಪ್ರಸ್ತಾಪ ಮಾಡಿದ್ದಾರೆ, ಈ ಪ್ಯಾರಾಗ್ರಾಫ್‌ಗಳು ಅಪ್ರಸ್ತುತ ಎಂದು ನಾನು ಹೇಳುತ್ತೇನೆ. ಇವನ್ನು ಈ ಬಜೆಟ್ ಭಾಷಣದಲ್ಲಿ ಸೇರಿಸುವುದಕ್ಕೆ ಯೋಗ್ಯವಲ್ಲವಾಗಿದ್ದು ಇವನ್ನು ಸೇರಿಸುವ ವಿಚಾರದಲ್ಲಿ ತಪ್ಪು ಮಾಡಿದ್ದಾರೆ ಮತ್ತು ನಮ್ಮನ್ನು ಹಳಿ ತಪ್ಪಿಸುವುದಕ್ಕೆ ಇದನ್ನು ಮಾಡಿದ್ದಾರೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇವುಗಳ ಮೆರಿಟ್ಸ್ ಬಗ್ಗೆ ನಾನು ಹೋಗುವುದಿಲ್ಲ ಹಾಗೂ ಅವರು ಈ ಬಗ್ಗೆ ಉತ್ತರ ಹೇಳುವುದೂ ಬೇಡ. ನಾನೂ ಕೂಡಾ ಯೋಜನಾ ಸಚಿವನಾಗಿದ್ದೆ. ವೇತನಾ ಆಯೋಗಕ್ಕೆ ಮೆಮೊರ್ಯಾಂಡಮ್ ಕೊಟ್ಟಿದ್ದೇವೆ ಹಾಗೂ ಅವರ ಜೊತೆ ಪ್ರಸ್ತಾಪ ಮಾಡಿದ್ದೇವೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವೆ ಕೆಲವೊಂದು ವಿಚಾರಗಳು ನಡೆಯುತ್ತವೆ. ಕೆಲವೊಂದು ಬದಲಾವಣೆ ಆಗುತ್ತವೆ. ಇದರಲ್ಲೂ ಕೂಡಾ ಆಗಬಹುದು ಆದರೆ ರಾಜ್ಯ ಸರ್ಕಾರಗಳು ಪಟ್ಟು ಹಿಡಿದಷ್ಟು ವೇಗದಲ್ಲಿ ಎಲ್ಲವೂ ಬರುವುದಿಲ್ಲ. ಅಲ್ಲೂ ಕೂಡಾ ಸರ್ಕಾರ ತನ್ನ ಜವಾಬ್ದಾರಿಯನ್ನು ನೋಡುತ್ತದೆ. ಕೇಂದ್ರದಲ್ಲಿ ಕೂಡಾ ೩ ವರ್ಷ ಬೇರೆ ಸರ್ಕಾರ ಇದ್ದಾಗ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಂಬಂಧದಲ್ಲಿ ಏನು ಬದಲಾವಣೆಗಳು ಆದುವು ? ಯಾವ ಬದಲಾವಣೆಯೂ ಆಗಿಲ್ಲ. ಏಕೆಂದರೆ ಕೇಂದ್ರದಲ್ಲಿ ಆ ಸರ್ಕಾರ ಬಂದಾಗ ತನ್ನ ಹಿತವನ್ನು ನೋಡಿತೇ ಹೊರತು ರಾಜ್ಯ ಸರ್ಕಾರಗಳ ಹಿತ ನೋಡಲಿಲ್ಲ. ಅವರವರ ಹಿತವನ್ನು ಅವರವರು ನೋಡಬೇಕು. ಎರಡೂ ಸರ್ಕಾರಗಳ ಹಿತ ಸಮನ್ವಯವಾಗಬೇಕು. ಅದಕ್ಕೆ ಈ ರೀತಿಯ ಘರ್ಷಣೆಗಳು ಅಗತ್ಯ. ಆದರೆ ಇದನ್ನು ಎಲ್ಲಿ ಮಾಡಬೇಕೋ ಅಲ್ಲಿ ಮಾಡದೆ ವಿಧಾನಸೌಧದಲ್ಲಿ ಮಾಡಿದರೆ ಅಗತ್ಯವಾಗುವುದಿಲ್ಲ. ಅದಕ್ಕೆ ಇರುವ ವೇದಿಕೆಯಲ್ಲಿ ಅದನ್ನು ಮಾಡಬೇಕೇ ಹೊರತು ಈ ಬಡ್ಜೆಟ್‌ನಲ್ಲಿ ಸೇರಿಸಿದರೆ ಯಾವುದೇ ರೀತಿಯ ಪ್ರಯೋಜನವಾಗುವುದಿಲ್ಲ. ಇನ್ನು ೧೫ನೇ ಪ್ಯಾರಾಗ್ರಾಫ್‌ನಲ್ಲಿ ''ನಾವು ಆರ್ಥಿಕ ಮಿತವ್ಯಯ ಕ್ರಮಗಳನ್ನು ವಿಧಿಸಬೇಕಾಯಿತು'' ಎಂದು ಹೇಳಿದ್ದಾರೆ. ಈ ಸರ್ಕಾರದವರು ಯಾವ ಮಿತವ್ಯಯ ಮಾಡಿದ್ದಾರೆ, ಹಲವಾರು ಕಾರಣಗಳಿಂದ ಆರ್ಥಿಕ ಮಿತವ್ಯಯ ಕ್ರಮಗಳನ್ನು ವಿಧಿಸಬೇಕಾಯಿತೆಂದಿದ್ದಾರೆ. ಇದಕ್ಕೆ ಕಾಂಗ್ರೆಸ್ ಸರ್ಕಾರ ಜವಾಬ್ದಾರಿ ಅಲ್ಲ. ಹಲವಾರು ಕಾರಣಗಳಿಂದ ಆರ್ಥಿಕ ಪರಿಸ್ಥಿತಿ ಸರಿಯಿರಲಿಲ್ಲ, ಆದ್ದರಿಂದ ಆರ್ಥಿಕ ಮಿತವ್ಯಯ ವಿಧಿಸಬೇಕಾಯಿತು ಎಂದಿದ್ದಾರೆ. ಇವರು ಏನೇನು ಮಿತವ್ಯಯ ಮಾಡಿದ್ದಾರೆ ? ಇದನ್ನು ವಿಧಾನಸಭೆಗೆ ಈ ಸರ್ಕಾರ ಹೇಳಬೇಕು. ಇಂತಿಂತಹದ್ದರಲ್ಲಿ ಈ ರೀತಿ ಮಾಡಿದ್ದೇವೆ ಎಂದು ಹೇಳಬೇಕು. ಯಾವುದರಲ್ಲೂ ಕೂಡಾ ಇವರು ಆರ್ಥಿಕ ಮಿತವ್ಯಯ ಸಾಧಿಸುವುದಕ್ಕೆ ಪ್ರಯತ್ನ ಮಾಡುವುದಕ್ಕೆ ಕೂಡಾ ಹೋಗಿಲ್ಲ ಒಂದೇ ಒಂದು ಮಾಡಿದ್ದು ಎಂದರೆ Informal Treasury Ban. ಮಾನ್ಯ ಅಧ್ಯಕ್ಷರೇ, ಸರ್ಕಾರಕ್ಕೆ ಈ ಸದನದ ಬಗ್ಗೆ ಕೊನೇ ಪಕ್ಷ ಇಷ್ಟಾದರೂ ಶ್ರದ್ಧೆ ಇರಬೇಕು. ನಿಜವಾದ ಆರ್ಥಿಕ ಪರಿಸ್ಥಿತಿ ಏನಿದೆಯೆಂಬುದನ್ನು ಈ ಸದನಕ್ಕೆ ತಿಳಿಸಬೇಕಾದುದು

ಸರ್ಕಾರದ ಜವಾಬ್ದಾರಿ. ಇದರ ಬಗ್ಗೆ ಮುಚ್ಚುಮರೆ ಮಾಡಿದರೆ ಆಗುವುದಿಲ್ಲ. ಅಳಿಯನ ಕುರುಡು ಬೆಳಗಾಗುವುದರೊಳಗೆ ಕಾಣುತ್ತದೆಯೆಂಬಂತೆ ನಿಮ್ಮ ಕಷ್ಟವನ್ನು ಮುಚ್ಚಿದರೆ ಅದರಿಂದ ಏನೂ ಬಗೆಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಒಂದು ಸಂದರ್ಭದಲ್ಲಿ ಟ್ರೆಜರಿ ಬ್ಯಾನ್ ಆಗಬೇಕಾದ ಅಗತ್ಯ ಇದ್ದರೆ ಇಂತಹ ಕಾರಣಕ್ಕೋಸ್ಕರ ಇಷ್ಟು ದಿವಸ ಇಂತಿಂತಹ ಕ್ಯಾಟಗರಿ ಬಿಲ್ಸ್ ಪೇ ಮಾಡುವುದಕ್ಕಾಗುವುದಿಲ್ಲ ದಯವಿಟ್ಟು You have to co-operate with us ಎಂದು ಆರ್ಡರ್ ಹೊರಡಿಸಿದರೆ ನಮ್ಮ ಅಭ್ಯಂತರವಿಲ್ಲ. ಆದರೆ ಒಂದೇ ಕ್ಯಾಟಗರಿಯ ಬಿಲ್ ಅದು, 'ಎ' ಮನುಷ್ಯನದ್ದಾಗಿದ್ದರೆ ಪಾಸ್ ಆಗುತ್ತದೆ, 'ಬಿ' ಮನುಷ್ಯನದ್ದಾಗಿದ್ದರೆ ಪಾಸ್ ಆಗುವುದಿಲ್ಲ. ಇದರ ಬಗ್ಗೆ ಅಲ್ಲಿನ ಅಧಿಕಾರಿಗಳನ್ನು ಕೇಳಿದರೆ, ಇದನ್ನು ಕೇಳಬೇಡಿ ನಮಗೆ ಈ ಬಗ್ಗೆ ದೂರವಾಣಿ ಮೂಲಕ ಹೇಳಿದ್ದಾರೆಂದು ಹೇಳುತ್ತಾರೆ. ಇಂತಹ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ೨-೩ ತಿಂಗಳ ಕಾಲ ಕಾಡಿತು. ಬೇಕಾದವರ ಬಿಲ್ ಪಾಸ್ ಆಗುತ್ತದೆ. ಇದು ವೃದ್ಧಾಪ್ಯವೇತನದವರೆಗೂ ಬಂತು. ಯಾವ ಕ್ಯಾಟಗಿರಿ, ಯಾವುದಕ್ಕೆ ಬೇಡ, ಯಾವುದಕ್ಕೆ ಬೇಕು ಎಂಬ ಪ್ರಶ್ನೆಯಿಲ್ಲ. ಇದು ಎಲ್ಲಿಯವರೆಗೂ ಬಂತೆಂದರೆ ಜನತಾ ಪಕ್ಷದ ಸರ್ಕಾರ ಡಿಸ್-ಕ್ರೆಡಿಟ್ ಆಗುವುದು, ಬಿಡುವುದು ಅದು ಅವರ ಹಣೆಬರಹ, ಅದರ ಬಗ್ಗೆ ನಾನು ಹೇಳುವುದಿಲ್ಲ. Here, Government as an institution gets discredited. ಸರ್ಕಾರ ಅಂದರೆ ಹಾಗೆ ಆಗಬಹುದು, ಸರ್ಕಾರದ ಚೆಕ್ ನಂಬುವುದಕ್ಕಾಗುವುದಿಲ್ಲ, ಟ್ರಜರಿಯನ್ನು ನಂಬುವುದಕ್ಕಾಗುವುದಿಲ್ಲ, ಎನ್ನುವ ಸ್ಥಿತಿಗೆ ಇವರು ತೆಗೆದುಕೊಂಡು ಹೋಗಿದ್ದಾರೆ. ನಮ್ಮ ಇಷ್ಟ ನಾವು ಹೇಗಾದರೂ ಡಿಸ್-ಕ್ರೆಡಿಟ್ ಮಾಡಿಕೊಳ್ಳುತ್ತೇವೆ, ನೀವು ಯಾರು ಕೇಳುವುದಕ್ಕೆ ? ನಾವು ಹೇಗಾದರೂ ಹಾಳು ಮಾಡಿಕೊಳ್ಳುತ್ತೇವೆಂದರೆ ನೀವು ಸರ್ಕಾರದಲ್ಲಿದ್ದೀರಿ ಆ ಕಾರಣಕ್ಕೋಸ್ಕರವಾಗಿ it is not just one cheque getting bounced. It is the Government's credibility that is getting bounced. ಕರ್ನಾಟಕ ರಾಜ್ಯವನ್ನು ಇಂತಹ ಪರಿಸ್ಥಿತಿಗೆ ದೂಡಿದರು. ಪ್ರಾಮಾಣಿಕವಾಗಿ ಎಲ್ಲರನ್ನು ನೀವು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿತ್ತು. ಜನಗಳಿಗೆ ಕಷ್ಟ ಬರುತ್ತದೆ, ರಾಜ್ಯಕ್ಕೆ ಕಷ್ಟ ಬರುತ್ತದೆ, ಸರ್ಕಾರಕ್ಕೆ ಕಷ್ಟ ಬರುತ್ತದೆ. ನಮಗೆ ಈಗ ಇಂತಹ ಕಷ್ಟವಿದೆ, ನಮ್ಮ ಆರ್ಥಿಕ ಪರಿಸ್ಥಿತಿ ಹೀಗಿದೆ, ಇಂತಿಂಥ ಬಿಲ್‌ಗಳಿಗೆ ಹಣವನ್ನು ಕೊಡುವುದಕ್ಕಾಗುವುದಿಲ್ಲ, ಆದ್ದರಿಂದ ತಾತ್ಕಾಲಿಕವಾಗಿ ಟ್ರಜರಿ ಬ್ಯಾನ್ ಮಾಡಿದ್ದೇವೆಂದು ಹೇಳಿದರೆ ಅದು ಬೇರೆ ವಿಚಾರ. ಟೆಲಿಫೋನ್ ಮುಖಾಂತರ ಈ ವ್ಯವಹಾರಗಳನ್ನು ಮಾಡಿದರೆ ಮರ್ಯಾದೆ ಇರುವುದಿಲ್ಲ, ಟ್ರೆಜರಿ ಅಧಿಕಾರಿಗಳಿಗೆ ಹೊಡೆಯೋಣವೆಂದು ಟ್ರಜರಿ ಅಧಿಕಾರಿಗಳಿಗೆ ಏನಾದರೂ ಹೊಡೆದಿದ್ದರೆ ಮಂತ್ರಿಯನ್ನಾದರೂ ಮಾಡುತ್ತಿದ್ದೀರಿ. ನಮಗೆ ಆ ಸ್ಕೋಪ್ ಕೂಡ ಇಲ್ಲ, ನಾವು ಹೊಡೆಯುವುದಕ್ಕೆ ಹೋಗುವುದಿಲ್ಲ. ಇಲ್ಲಿ ಪ್ರಶ್ನೆ ಏನೆಂದರೆ, ಆರ್ಥಿಕ ಮಿತವ್ಯಯದ ಕ್ರಮಗಳನ್ನು ಘೋಷಣೆ ಮಾಡಲಿಲ್ಲ, ನೀವು ಕಾರ್ಯಗತವನ್ನೂ ಸಹ ಮಾಡಲಿಲ್ಲ. ಇದು ಮನಸ್ಸಾಯಿಚ್ಛೆ ಬಜೆಟ್ ಆಗಿದೆ ದುಡ್ಡು ಇದೆಯೋ ಇಲ್ಲವೋ ನಾಳೆ ನೋಡಿಕೊಳ್ಳೋಣವೆಂದು ಅಂಡಾಗುಂಡಿಯಾಗಿ ನಡೆಸಿ ಇಲ್ಲ ಒಂದು ಪ್ಯಾರಾಗ್ರಾಫ್ ಹಾಕಿದ್ದೀರಿ. ಆರ್ಥಿಕ ಮಿತವ್ಯಯದ ಬಗ್ಗೆ ಮಾನ್ಯ ಹೆಗಡೆಯವರು ''ಜೀರೋ'' ಬಜೆಟ್ ಮಾಡುತ್ತೇವೆಂದು ಹೇಳುತ್ತಿದ್ದರು. Zero Budgeting is very important. ಯಾವು ಯಾವುದೋ ಸ್ಕೀಮ್‌ಗಳಿಗೆ ಅನಾವಶ್ಯಕವಾಗಿ ಹಣ ವೆಚ್ಚ ಮಾಡದೆ, ಯಾವುದು ಸರಿಯಿಲ್ಲ ಅಂತಹ ಸ್ಕೀಮ್‌ಗಳನ್ನು ವೈಂಡಪ್ ಮಾಡಿ, ಯಾವುದಕ್ಕೆ ಜೀವವಿದೆ ಅಂತಹ ಸ್ಕೀಮ್‌ಗಳನ್ನು ಇಟ್ಟುಕೊಂಡರೆ ಅದಕ್ಕೆ ಜೀರೋ ಬಜೆಟ್ ಎಂದು ಹೆಸರು. ಇದು ಬರುಬರುತ್ತಾ ಜೀರೋ ಆಗುತ್ತಿದೆ. ಜೀರೋ ಬಜೆಟ್‌ನ ತತ್ವವೇನು ? ಯಾವ ಸ್ಕೀಮ್‌ಗಳನ್ನು ಕ್ಯಾನ್ಸಲ್ ಮಾಡಿದ್ದೀರಿ ? ಹೋದ ವರ್ಷ ಎಷ್ಟು ಹಣವನ್ನು ಸೇವ್ ಮಾಡಿದ್ದೀರಿ ? ಅದರ ಯಾವ ಚಿತ್ರವೂ ಇಲ್ಲ. ಅದರ ಬಗ್ಗೆ ಪ್ರಸ್ತಾಪ ಸಹ ಮಾಡಿಲ್ಲ. ಆದ್ದರಿಂದ ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ, The minimum that the Government should do is, to give us a clear picture of the economy of the State. ಎಮ್ಮೆಯನ್ನು ನೀರಿನಲ್ಲಿ ಮುಳುಗಿಸಿ ಬಹಳ ದಿವಸ ವ್ಯಾಪಾರ ಮಾಡಿದರೆ ಅದರಿಂದ ಪ್ರಯೋಜನವಿಲ್ಲ. ಇಲ್ಲಿ ನಿಜವಾದ ಚಿತ್ರವನ್ನು ಕೊಡತಕ್ಕದ್ದು ಸರ್ಕಾರದ ಆದ್ಯ ಕರ್ತವ್ಯ. You must come out with a clear picture. ರಾಜ್ಯದ ಸಮಗ್ರ ಭೂ ಬಳಕೆ ನಿರ್ವಹಣಾ ಯೋಜನೆ ರೂಪಗೊಂಡಿದೆ. ಇದು ''ಕ್ಲಂಪ್'' ಎಂದು ಜನಪ್ರಿಯವಾಗಿದೆಯೆಂದು ಹೇಳಿದ್ದಾರೆ. ಅದೇರೀತಿ ಕೃಷಿ ಉತ್ಪಾದನೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸುವ ಸಲುವಾಗಿ ೧೯೮೮-೮೯ನೇ ಸಾಲಿನಲ್ಲಿ ''ಹಸಿರು ಕಿರಣ'' ಕಾರ್ಯಕ್ರಮ ಜಾರಿಗೆ ತಂದಿದ್ದೇವೆಂದು ಹೇಳಿದ್ದಾರೆ. ಇದಕ್ಕೆಲ್ಲ ಏಡೆ ಶೃಂಗಾರವೆಂದು ಹೆಸರು. ನಮ್ಮ ಊರುಗಳಲ್ಲಿ ತಿಥಿ ಊಟ ಎಂದು ಮಾಡುತ್ತಾರೆ. ಇದು ಬಹಳ ಮುಖ್ಯ. ತಿಥಿ ಊಟಕ್ಕೆ ಬಹಳ ಪದಾರ್ಥಗಳನ್ನು ಮಾಡಿರುತ್ತಾರೆ. ಕೋಸಂಬರಿ, ಪಲ್ಯ ಉಪ್ಪಿನಕಾಯಿ ಮತ್ತೊಂದು-ಮಗದೊಂದು ಹೀಗೆ ಬಹಳಷ್ಟು ಪದಾರ್ಥ

ಗಳನ್ನು ಬಡಿಸುತ್ತಾರೆ. ಎರಡನೇ ಸಾರಿ ಕೇಳಿದರೆ ಅದು ಇಲ್ಲ. ಅದು ಇರುವುದು ಮೊದಲನೇ ಸಾರಿ ಬಡಿಸುವುದಕ್ಕೆ ಮಾತ್ರ, ಅದಕ್ಕೆ ಎಡೆ ಶೃಂಗಾರದ ವಸ್ತುಗಳು ಎಂದು ಹೇಳುತ್ತಾರೆ. ಇಂತಹ ವಿಚಾರಗಳನ್ನು ಇದರಲ್ಲಿ ಪ್ರಸ್ತಾಪ ಮಾಡಿದ್ದಾರೆಯೇ ಹೊರತು ಈ ರಾಜ್ಯದ ಜನಗಳಿಗೆ ನಿಜವಾಗಿಯೂ ಯಾವುದು ಬೇಕೋ ಅದು ದಿಲ್ಲ, ಅವರ ಕೈಗೆ ಯಾವುದು ಎಟುಕಬೇಕು, ಅವರ ಕಣ್ಮುಂದೆ ಯಾವುದು ಇರಬೇಕು ಅದ್ಯಾವುದು ಇದರಲ್ಲಿ ಇಲ್ಲ. ಸಣ್ಣ ಸಣ್ಣ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಕ್ಲಂಪ್ ಬಗ್ಗೆ ತೀವ್ರ ಆಸಕ್ತಿಯನ್ನು ವಹಿಸಲಾಗಿದೆ, ಇದನ್ನು ೧೫ ಮಂಡಲಗಳಲ್ಲಿ ಪ್ರಾಯೋಗಿಕವಾಗಿ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ ಎಂದು ಹೇಳಿದ್ದಾರೆ. ಯಾವುದೇ ಕಾರ್ಯಕ್ರಮದ ಬಗ್ಗೆ ಬಜೆಟ್‌ನಲ್ಲಿ ದೊಡ್ಡದಾಗಿ ಪ್ಯಾರಾಗ್ರಾಫ್ ಹಾಕಿದರೆ it is not worth the paper on which it is written. ಈ ರೀತಿಯ ಕಾರ್ಯಕ್ರಮಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದು ಯಾವುದೂ ಕೃಷಿಗೆ ಪ್ರಾಮುಖ್ಯವಾದುದಲ್ಲ ರೈತರಿಗೆ ಅನೇಕ ರಿಯಾಯಿತಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ, ರೈತರು ಹಲವಾರು ವರ್ಷಗಳಿಂದ ಒಂದು ರೀತಿಯ ಗೊಂದಲದಲ್ಲಿ ಸಿಕ್ಕಿ ಆಂದೋಳನದಲ್ಲಿ ತೊಡಗಿದ್ದಾರೆ. ನಾನು ಆ ಪಕ್ಷ ಈ ಪಕ್ಷ ಎಂದು ಹೇಳುವುದಿಲ್ಲ. ನಾನು ಸ್ಪಷ್ಟವಾಗಿ ಹೇಳುವುದಾದರೆ ಇದರಲ್ಲಿ ನಮ್ಮೆಲ್ಲರ ಜವಾಬ್ದಾರಿಯಿದೆ. ರೈತರ ನಿಜವಾದ ಸಮಸ್ಯೆಗಳೇನು, ಅವರಿಗೆ ಯಾವ ರೀತಿಯ ಯೋಜನೆಗಳನ್ನು ಹಾಕಿಕೊಳ್ಳಬೇಕು ಎನ್ನುವುದನ್ನು ಯೋಚನೆ ಮಾಡಬೇಕು. There should be a new deal. ಏಕೆಂದರೆ, ನಾನು ಕೇಳಿದಹಾಗೆ ಸಮಸ್ಯೆಗಳು ಕಗ್ಗಂಟಾಗಿವೆ. ರೈತನಿಗೆ ಕೃಷಿ ಸಾಲ ಕೊಡುತ್ತಾರೆ. ಇಂಡಸ್ಟ್ರೀಸ್‌ಗೆ ಯಾವರೀತಿ ಸಾಲ ಕೊಡುತ್ತಾರೆ. ಆ ಕ್ರಮದಲ್ಲಿ ರೈತರಿಗೆ ಸಾಲ ಕೊಟ್ಟರೆ ಹೇಗೆ ? ಕೃಷಿಕ ತಾನುಬೆಳೆದ ಬೆಳೆಗೆ ತಾನು ಬೆಲೆ ನಿಗದಿ ಮಾಡುವ ಸಾಮರ್ಥ್ಯವಿಲ್ಲ. ನೀವು ಹೇಳುತ್ತಿರುವ ಸಾಲದ ಬಡ್ಡಿ ಎಲ್ಲಾ it goes into the price structure of Industrialists. ರೈತರಿಗೆ ಅದು ಇಲ್ಲ ರೈತರು ಕೊಂಡುಕೊಳ್ಳುವ ವಸ್ತುಗಳನ್ನೆಲ್ಲಾ ಅವನು ಹೇಳಿದಷ್ಟಕ್ಕೆ ಕೊಂಡುಕೊಳ್ಳ ಬೇಕು. ಆದರೆ ರೈತನು ಬೆಳೆದುದ್ದನ್ನೆಲ್ಲಾ ಅವರು ಕೇಳಿದಷ್ಟಕ್ಕೆ ಮಾರಾಟ ಮಾಡಬೇಕು. ಇದಕ್ಕೆ ಡಬಲ್ ಜಿಯೋ ಫಾರ್ಡಿಸ್ ಎಂದು ಹೆಸರು ಇವತ್ತು ಇಂತಹ ದುರಾವಸ್ಥೆಯಲ್ಲಿ ರೈತ ಇರುವಾಗ ಇದರ ಬಗ್ಗೆ ಮೂಲಭೂತವಾದ ಚಿಂತನೆಯನ್ನು ಈ ಸರ್ಕಾರ ಮಾಡಿದೆಯೋ ? ರೈತ ಚಳುವಳಿಯ ಬೆನ್ನಮೇಲೆ ಏರಿ ಬಂದಂತ ಸರ್ಕಾರ ಇದು, ತನ್ನಷ್ಟಕ್ಕೇ ಬರಲಿಲ್ಲ. ನಿಮ್ಮ ಸ್ವಂತ ಬಲದ ಮೇಲೆ ನೀವು ಬರಲಿಲ್ಲ. ನೀವು ಇನ್ನೊಬ್ಬರ ಹೆಗಲ ಮೇಲೆ ಹತ್ತಿಕೊಂಡು ಅಧಿಕಾರಕ್ಕೆ ಬಂದು ಈಗ ಅವರಿಗೆ ಸೊಂಟ ಮುರಿಯುತಕ್ಕ ಕೆಲಸಗಳ ಬಗ್ಗೆ ಕಾಳಜಿ ವಹಿಸಿದರೆ ಇದು ಧರ್ಮಅಲ್ಲ, ನೀತಿ ಅಲ್ಲ. ಇದರಿಂದ ನಿಮಗೆ ಮೋಕ್ಷ ಖಂಡಿತವಾಗಿಯೂ ಸಿಗುವುದಿಲ್ಲ. ನೀವು ಏನು ರೈತರ ಬಗ್ಗೆ ಸುಮ್ಮನೆ ಕಣ್ಣೀರು ಸುರಿಸುತ್ತೀರಿ, ಇದರಿಂದ ಯಾವ ಪ್ರಯೋಜನವಿಲ್ಲ. “ಕಲಿಕೆಯೊಡನೆ ಗಳಿಕೆ” ಇದು ಉದ್ಯೋಗದ ಒಂದುತರಬೇತಿ ಪ್ರೋಗ್ರಾಂ ನಮ್ಮನ್ನು ಕಾಡುತ್ತಿರುವ ದೊಡ್ಡ ಪೆಡಂಭೂತ ಸಮಸ್ಯೆಗಳಲ್ಲಿ ನಿರುದ್ಯೋಗ ಸಮಸ್ಯೆ ಒಂದು. ಈ ಒಂದು ನಿರುದ್ಯೋಗ ಸಮಸ್ಯೆಯನ್ನು ವೈಟ್ ಕಾಲರ್ ಜಾಬ್ ಎಂದು ಕ್ರಿಯೇಟ್ ಮಾಡಿ ಅದನ್ನು ಬಗೆಹರಿಸಲು ಸಾಧ್ಯವಿಲ್ಲ. ಒಂದು ಕಡೆ ಎಷ್ಟು ಸಾಧ್ಯವಿದೆ ಅಷ್ಟನ್ನು ಕೊಡಬೇಕು. ಈ ಬಗ್ಗೆ ಒಂದು ಅಂಟೆಪ್ಟ್ ಮಾಡಿದ್ದಾರೆ. ಅದನ್ನು ನಾನು ಸ್ವಾಗತಿಸುತ್ತೇನೆ. ಆದರೆ ನಾನು ಮೊದಲೇ ಹೇಳಿದಂತೆ ಇದರಲ್ಲಿ ತಾತ್ಪರ್ಯವಿದೆ. ಒಂದು ವರ್ಷ ತರಬೇತಿಯಾದ ಕೊನೆಯಲ್ಲಿ ರಸ್ತೆಗಳು, ಅಡಿಗಾಲುವೆಗಳು, ಸೇತುವೆಗಳು, ಕಟ್ಟಡ ನಿರ್ಮಾಣ ಇತ್ಯಾದಿಗಳಲ್ಲಿ ತರಬೇತಿ ಪಡೆಯಬೇಕು. ಇದು ಹೇಗೆ ಸಾಧ್ಯ ? ಕುಶಲತೆಯನ್ನು ಒಂದು ವರ್ಷದಲ್ಲಿ ಹೇಗೆ ಪಡೆಯುತ್ತಾರೆ. ಇವರಿಗೆ ಒಂದು ವರ್ಷದಲ್ಲಿ ಒಂದು ಕರಣಿಯನ್ನು ಹಿಡಿಯುವುದಕ್ಕೂ ಬರುವುದಿಲ್ಲ. ಕಸ ಹೊಡೆಯುವುದಕ್ಕೂ ಬರುವುದಿಲ್ಲ. ಸರಿಯಾಗಿ ಒಂದು ವರ್ಷದಲ್ಲಿ ತರಬೇತಿಯಲ್ಲಿ ಇವರು ಎಲ್ಲಾ ಸ್ವಾವಲಂಬಿಯಾಗಿ ಬಿಡುತ್ತಾರೆಂದು ಹೇಳಿದರೆ ಇದು ಸುಮ್ಮನೆ ನಮ್ಮ ಕಣ್ಣಿನಲ್ಲಿ ಮಣ್ಣು ಎರೆಚಿಕೊಳ್ಳುವಂತಹ ಯೋಜನೆಯಾಗುತ್ತದೆಯೇ ಹೊರತು ನಿಜವಾಗಿಯೂ ಇದರಲ್ಲಿ ಸಾರ್ಥಕತೆ ಇಲ್ಲ. ಆದ್ದರಿಂದ ಈ ನಿರುದ್ಯೋಗ ಸಮಸ್ಯೆಯನ್ನು ಗಂಭೀರವಾಗಿ ಬಗೆಹರಿಸುವುದಕ್ಕೆ ಯೋಚನೆ ಮಾಡಬೇಕು. ಇವತ್ತು ಯುವಕರ ಮುಂದೆ ಯಾವ ಆದರ್ಶವಿದೆ ? ಯುವಕರಿಗೆ ಜೀವನ ಕಲ್ಪನೆ ಇದೆಯೇ ? ಪ್ರತಿಯೊಬ್ಬ ಯುವಕನ ಮುಂದೆ ಏನಿದೆ ಅಂದರೆ ಅವನು ಡಿಗ್ರಿ ಪಾಸ್ ಮಾಡಿಕೊಂಡ ಕೂಡಲೇ ಕೆಲಸ ಹುಡುಕುವುದೇ ಅವನ ಕೆಲಸ. ಅವನು ೧–೨–೩– ಅಟೆಂಪ್ಟ್‌ನಲ್ಲಿ ಪಾಸ್ ಮಾಡಿರ ಬಹುದು, ಅವನ ಅಪ್ಪನೋ ಅಥವಾ ಹೆಣ್ಣು ಕೊಡುವ ಮಾವನೋ ಅವನಿಗೆ ಕೆಲಸ ಕೊಡಬೇಕು. ಅವನು ಸ್ವಂತ ಅರ್ಜಿಯನ್ನು ಇಟ್ಟುಕೊಂಡು ಹೋಗುವುದಿಲ್ಲ. ನೀವು ಅರ್ಜಿಯನ್ನು ಟೈಪ್ ಮಾಡಿಸಿಕೊಂಡು ಬಂದು ರುಜು ಹಾಕಿ ಎಂದರೆ ಅಲ್ಲಿ ರುಜು ಹಾಕುತ್ತಾನೆ. ನೀವು ಅವರಿಗೆ ಖುರ್ಚಿ ಮಾಡಿಕೊಡಬೇಕು. ಒಂದು ಖುರ್ಚಿ ತಯಾರು ಮಾಡತಕ್ಕ ಶಕ್ತಿ ಅವನಿಗೆ ಇಲ್ಲದೆ ಇರತಕ್ಕ ಒಂದು

ನಿರುಪಯುಕ್ತವಾದ ವಿದ್ಯಾಭ್ಯಾಸವನ್ನು ದೊಡ್ಡ ಪ್ರಮಾಣದಲ್ಲಿ ಪೂರೈಕೆ ಮಾಡಿ ಈ ರೀತಿ ಒಂದು ಸಣ್ಣ ಕಾರ್ಯಕ್ರಮವನ್ನು ಅದಕ್ಕೆ ಜೋಡಿಸಿ ಬಿಟ್ಟರೆ ಅದರಿಂದ ಏನೂ ಫಲ ಬರುವುದಕ್ಕೆ ಸಾಧ್ಯವಿಲ್ಲ. ಕಾನ್ಸೆಪ್ಟ್ ಆಫ್ ಲೈಫ್ ಏನು? ಅವನು ಏನಾದರೂ ಪಾಸ್ ಮಾಡಿ ಕೊಂಡಿರಲಿ, ಅವನಿಗೆ ಯೋಗ್ಯತೆ ಇರಲಿ, ಬಿಡಲಿ, ಅವನಿಗೆ ಇನ್‌ಫ್ಲೂಯನ್ಸ್ ಮೇಲೆ ಸರಿಯಾದ ಕೆಲಸ ಸಿಗಬೇಕು. ಸರಿಯಾದ ಸಂಬಳವಿರಬೇಕು. ಅದರ ಜೊತೆಗೆ ಸರಿಯಾದ ಗಿಂಬಳವಿರಬೇಕು. ಅವನಿಗೆ ಕಾರು ಇರಬೇಕು. ಅವನ ಮನೆಗೆ ಟೆಲಿಫೋನ್ನು ಇರಬೇಕು. ಇವೆಲ್ಲಾ ಹಾಕಿ ಅವರ ಅಪ್ಪ ಅಮ್ಮ ಊರು ತುಂಬ ತಿರುಗಿ ಒಂದು ಕನ್ಯೆಯನ್ನು ಹುಡುಕಿ, ವರದಕ್ಷಿಣೆಯನ್ನು ತೆಗೆದುಕೊಂಡು ಮದುವೆ ಮಾಡಬೇಕು. ಅದೇ ರೀತಿ ಇವರ ಆದರ್ಶವನ್ನು ಇಟ್ಟುಕೊಂಡು ಕಸ ಹೊಡೆಯುವುದು ಏನೂ ತಪ್ಪಿಲ್ಲ. ಕಸ ಹೊಡೆಯುವುದು, ಸಿಮೆಂಟ್ ಕಲೆಸುವುದು, ಜಲ್ಲಿ ಹೊಡೆಯುವುದು ಏನೂ ತಪ್ಪಿಲ್ಲ. ಬಾಯಲ್ಲಿ ಹೇಳಿದರೆ ಆಗುವುದಿಲ್ಲ. we should come out with the idea of changing the life style of our youth. ನಮ್ಮ ಯೋಗ್ಯತೆಗೆ ಸರಿಯಾಗಿ ಒಂದು ದೊಡ್ಡ ಫ್ಯಾಕ್ಟರಿ ಮಾಡಬೇಕೆ . ಇದು ನಮ್ಮ ಕೆಲಸವಲ್ಲ. ಕಸ ಹೊಡೆಯುವ ಕೆಲಸ ಬಹಳ ಸಣ್ಣ ಕೆಲಸವೆಂದು ಭಾವಿಸುತ್ತಾರೆ ಇದರ ಬಗ್ಗೆ ಸರ್ಕಾರ ಸರಿಯಾದ ಚಿಂತನೆ ಮಾಡದೇ ಹೋದರೆ ಮುಂದೆ ಕೆಲವು ವರ್ಷಗಳಲ್ಲಿ ಈ ಸಮಸ್ಯೆ ಪೆಡಂಭೂತದ ಸ್ವರೂಪ ತಾಳಿ ನಮ್ಮನ್ನೇ ತಿನ್ನುವಂತಹ ಪರಿಸ್ಥಿತಿ ಬರುತ್ತದೆ. ಆದರೆ ಸರ್ಕಾರದ ವ್ಯವಸ್ಥೆಯನ್ನು ನುಂಗುವಂತಹ ಪೆಡಂಭೂತವಾಗಿ ಆಗುತ್ತದೆಂದು ನಾನು ಹೇಳಬಯಸುತ್ತೇನೆ. ಇನ್ನು ವಿದ್ಯುಚ್ಛಕ್ತಿ ಬಡ್ಜೆಟ್‌ನಲ್ಲಿ ವಿದ್ಯುಚ್ಛಕ್ತಿ ಬಗ್ಗೆ ಬಹಳ ಮುಖ್ಯವಾಗಿ ಹೇಳಿದ್ದು ಎಂದರೆ "ಈ ದಿಸೆಯಲ್ಲಿನ ನಮ್ಮ ಪ್ರಯತ್ನಗಳನ್ನು ಬಲಗೊಳಿಸುವ ದೃಷ್ಟಿಯಿಂದ ೧೯೮೮-೮೯ನೇ ಸಾಲಿನಲ್ಲಿ ಹೊಸ ವಿದ್ಯುಚ್ಛಕ್ತಿ ಇಲಾಖೆಯೊಂದನ್ನು ರಚಿಸಿದ್ದೇವೆ" ಎಂದು ಇದೆ. ಇದರಲ್ಲಿ ಏನು ತಾತ್ಪರ್ಯ ಇದೆ ? ನೀವು ಮಾಡಿದ್ದೀರಿ. ಅದೇನೂ ತಪ್ಪಲ್ಲ. ಇನ್ನೊಂದು ಇಲಾಖೆಯಾದರೆ ಜಾಸ್ತಿಯೇನೂ ಆಗುವುದಿಲ್ಲ. ಆದರೆ ಇಲಾಖೆಯನ್ನು ಮಾಡಿದ್ದರಿಂದ ವಿದ್ಯುಚ್ಛಕ್ತಿ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಅಧ್ಯಕ್ಷರೇ, ವಿದ್ಯುಚ್ಛಕ್ತಿಯಲ್ಲಿ ಸುಮಾರು ಮೂರು ಭಾಗಗಳನ್ನು ಮಾಡಿ ಕೊಳ್ಳಬೇಕು. One is generation, another is maintenance and another is management of the existing power. ಈ ಸರ್ಕಾರ ಬಂದಲಾಗಾಯ್ತು ಇದರ ಬಗ್ಗೆ ನಿಜವಾಗಿಯೂ ಗಮನಹರಿಸಿಲ್ಲ. ನಾನು ವಿದ್ಯುಚ್ಛಕ್ತಿ ಇಲಾಖೆಯ ಮಂತ್ರಿಯಾಗಿದ್ದುರಿಂದ ಅದರ ಅನುಭವದ ಆಧಾರದ ಮೇಲೆ ಹೇಳುತ್ತೇನೆ. ನಿಜವಾಗಿಯೂ ಕೂಡ ವಿದ್ಯುಚ್ಛಕ್ತಿ ವಿಷಯದಲ್ಲಿ ನಾವು ಕಷ್ಟದಲ್ಲಿದ್ದೇವೆ. ನಮಗೆ ಬೇಕಾಗಿರುವುದಕ್ಕಿಂತ ಬಹಳ ಕಡಿಮೆ ವಿದ್ಯುಚ್ಛಕ್ತಿ ಇದೆ. ಆದರೆ ಇವತ್ತು ಕೂಡ, ನಾನು ಆತ್ಮವಿಶ್ವಾಸದಿಂದ ಹೇಳಬಲ್ಲೆ. ಇದರ ಬಗ್ಗೆ ಸರಿಯಾದ ರೀತಿಯಲ್ಲಿ ಗಮನಕೊಟ್ಟು ನಿರ್ವಹಣೆ ಮಾಡಿದರೆ ಇಷ್ಟೊಂದು ಅಧ್ವಾನ ಆಗುವ ಅಗತ್ಯ ಇಲ್ಲ. ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿ ವಲಯದಲ್ಲಿ ಇಷ್ಟೊಂದು ಅಧ್ವಾನದ ಪರಿಸ್ಥಿತಿಯನ್ನು ಇಟ್ಟುಕೊಂಡಿದ್ದೀರಿ. ಇದಕ್ಕೆ ಮುಖ್ಯವಾದ ಕಾರಣ ಸರ್ಕಾರದ ಬೇಜವಾಬ್ದಾರಿತನವೇ ಹೊರತು ವಿದ್ಯುಚ್ಛಕ್ತಿ ಅಭಾವ ಅಷ್ಟೆ ಅಲ್ಲ ಎಂದು ಈ ಸಭೆಯಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಉಪಾಧ್ಯಕ್ಷರು.—ತಾವು ಬೇಗ ಮುಗಿಸಿ.

ಶ್ರೀ ಕೆ. ಎಚ್. ಶ್ರೀನಿವಾಸ್.—ನಾನು ಇನ್ನೂ ಶುರುನೇ ಮಾಡಿಲ್ಲ. ನಾನು ಮಾತನಾಡುವುದೇ ಬಹಳ ಅಪರೂಪ. ಆದಷ್ಟು ಬೇಗ ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೨ ಗಂಟೆಗೆ ಮುಖ್ಯಮಂತ್ರಿಗಳಿಂದ ರಿಪ್ಲೈ ಪ್ರಾರಂಭವಾಗುತ್ತದೆ.

ಉಪಾಧ್ಯಕ್ಷರು.— ಇನ್ನೂ ಕೆಲವರು ಸದಸ್ಯರು ಮಾತನಾಡುವವರು ಇದ್ದಾರೆ, ಆದ್ದರಿಂದ ಬೇಗ ಮುಗಿಸಿ.

ಶ್ರೀ ಕೆ. ಎಚ್. ಶ್ರೀನಿವಾಸ್.— ಆಗಲಿ, ಮುಗಿಸುತ್ತೇನೆ. ಆಮೇಲೆ ಮಿನಿ ಹೈಡ್ರೋಎಲೆಕ್ಟ್ರಿಕ್–ಇದನ್ನೆಲ್ಲಾ ಮಾಡುತ್ತೇವೆ. ಎಂದು ಒಂದೊಂದು ಬಜೆಟ್‌ನಲ್ಲಿ ಪ್ರಸ್ತಾಪ ಇತ್ತು. ಅದು ಈಗ ಏನಾಯಿತು, ಒಂದಾದರೂ ನೆಟ್ಟಗೆ ಪ್ರೊಡಕ್ಷನ್ ಆಯಿತೇ ಎಂಬ ಬಗ್ಗೆ ಪ್ರಸ್ತಾಪ ಇಲ್ಲ. ಒಂದೊಂದು ಭಾಷಣದಲ್ಲಿ ಒಂದೊಂದು ವಿಷಯವನ್ನು ಬೇರೆ ಬೇರೆಯಾಗಿ ಹೇಳಿಕೊಂಡು ಹೋದರೆ ನಿಮ್ಮ ರಥ ಎಲ್ಲಿಗೆ ಹೋಗಿದೆ ಎಂದು ನಮಗೆ ಹೇಗೆ ಗೊತ್ತಾಗಬೇಕು ? ಒಂದೇ ದಾರಿಯಲ್ಲಿ ಹೋದರೆ ಇಷ್ಟು ದೂರ ಹೋಗಿದೆ ಎಂದು ಹೇಳುವುದಕ್ಕೆ ಸಾಧ್ಯ. ಎಲ್ಲೆಂದರಲ್ಲಿ ಎಳೆದುಕೊಂಡು ಹೋದರೆ ನಿಮ್ಮ

ರಥ ಎಲ್ಲಿಯವರೆಗೆ ಹೋಗಿದೆ ಎನ್ನುವ ಕಲ್ಪನೆ ನಮಗೆ ಹೇಗೆ ಬರಬೇಕು ? ನೀವಂತೂ ಹೇಳುವುದಿಲ್ಲ, ನಮಗಂತೂ ಅಂದಾಜು ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ವಿದ್ಯುಚ್ಛಕ್ತಿ ಎಷ್ಟು ಮುಖ್ಯವೋ ಅದರ ನಿರ್ವಹಣೆ ಕೂಡ ಅಷ್ಟೇ ಮುಖ್ಯವಾದುದು ಆದ್ದರಿಂದ ಇದರ ಬಗ್ಗೆ ಸರಿಯಾದ ಕಾರ್ಯಕ್ರಮ ಇಲ್ಲ. ಎರಡು ಕಡೆ ಎರಡು ಪೆಡಂಭೂತಗಳು ಇವೆ ಒಂದು ಕಡೆ ಪವರ್ ಕಾರ್ಪೊರೇಷನ್ ಇದೆ. ಇನ್ನೊಂದು ಕಡೆ ಕೆ.ಇ.ಬಿ.ಇದೆ. ಇವರದ್ದು ಏನೂ ಇಲ್ಲ ನಾನು ಹಿಂದೊಮ್ಮೆ ಶ್ರೀ ಜೆ. ಎಚ್. ಪಟೇಲರಿಗೆ, ನಿಮ್ಮದು ಬರೇ ಉಡುಪಿ ಪಾರುಪತ್ಯ ಬೇರೆ ಏನೂ ಇಲ್ಲ ಎಂದು ಹೇಳಿದ್ದೆ ಈಗ ಆ ಪಾರುಪತ್ಯವೂ ಇಲ್ಲ. ಈಗ ಇಬ್ಬರಿಗೆ ಹಂಚಿಕೊಟ್ಟುಬಿಟ್ಟಿದ್ದೀರಿ. ಅವರಿಗೆ ನಾವು ಕ್ಯಾಬಿನೆಟ್ ಮಿನಿಷ್ಟರ್ ಆಗಿದ್ದೇವೆ ಎಂದು ಸಂತೋಷ ದೊಡ್ಡ ಪೋರ್ಟ್‌ಫೋಲಿಯೋ ಸಿಕ್ಕಿದೆ ಎಂದು ಅವರಿಗೆ ಸಂತೋಷ ಇರಬಹುದು. ಆದರೆ ತಾತ್ಪರ್ಯ ಏನು ಎಂದರೆ ವಿದ್ಯುಚ್ಛಕ್ತಿ ಇಲಾಖೆಯ ಒಳಗೆ ಏನಿದೆ ಅಂದರೆ ಏನೂ ಇಲ್ಲ. ಅವರ ಮಾತನ್ನು ಇವರು ಕೇಳುವುದಿಲ್ಲ, ಇವರ ಮಾತನ್ನು ಅವರು ಕೇಳುವುದಿಲ್ಲ. ಅವರವರ ಲೈನುಗಳು ಬೇರೆ ಇವೆ, ಲಿಂಕ್‌ಗಳು ಬೇರೆ ಇವೆ. ಹೀಗೆ ಇರುವಂಥ ಪರಿಸ್ಥಿತಿಯಲ್ಲಿ ನಾವು ಈ ಇಲಾಖೆಯಿಂದ ಏನು ನಿರೀಕ್ಷೆ ಮಾಡುವುದಕ್ಕೆ ಸಾಧ್ಯವಿದೆ ? ಈ ಎರಡು ಸಂಸ್ಥೆಗಳು ಹೇಗೆ ಬೃಹದಾಕಾರವಾಗಿ ಬೆಳೆದಿವೆ ಎಂದರೆ ಇದರ ಬಾಲ ಯಾವುದು, ಸೊಂಡಿಲು ಎಲ್ಲಿದೆ ಎಂದು ಯಾರೂ ನೋಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುವಷ್ಟು ಬೆಳೆದುಕೊಂಡು ಹೋಗಿದೆ. ಬರೀ ಕೆ. ಇ. ಬಿ. ಯ ಇನ್‌ವೆಂಟರಿ ಮಾಡುವುದಕ್ಕೆ ಆ ಡಿಪಾರ್ಟ್‌ಮೆಂಟಿನಿಂದ ಸಾಧ್ಯವಿಲ್ಲ. ಕೆ. ಇ. ಬಿ. ಯೊಳಗೆ ಅನುಪಯುಕ್ತವಾದ ವಸ್ತುಗಳು ಎಷ್ಟು ಇವೆ, ಅವುಗಳ ಲೆಕ್ಕ ಸಿಗದೇ ಇರುವ ಪರಿಸ್ಥಿತಿ ಇದೆ, ಆದ್ದರಿಂದ ಬೇರೆ ಇಲಾಖೆ ಮಾಡಿದ್ದೇವೆ ಎಂದು ಹೇಳುವುದರಿಂದ ನನಗಂತೂ ಯಾವುದೇ ಸಮಾಧಾನ ಪಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಭಾರಿ ನೀರಾವರಿ ಅವರೇ ಹೇಳಿಬಿಟ್ಟಿದ್ದಾರೆ. "ಭಾರಿ ನೀರಾವರಿ ಸಂಬಂಧದಲ್ಲಿ ನಮ್ಮ ದ್ವಿಮುಖ ಗುರಿಯೇನೆಂದರೆ, ಈ ಶತಮಾನದ ಅಂತ್ಯದೊಳಗೆ ಜಲಾಶಯಗಳಲ್ಲಿ ಸಂಗ್ರಹಿಸಿಟ್ಟಿರುವ ನೀರನ್ನು ಗರಿಷ್ಟ ಪ್ರಮಾಣದಲ್ಲಿ ಬಳಸಿಕೊಳ್ಳುವುದು ಹಾಗೂ ನಮ್ಮ ಪಾಲಿನ ನದಿ ನೀರನ್ನು ಸಂಪೂರ್ಣವಾಗಿ ಬಳಸಿಕೊಳ್ಳುವುದು " ಎಂದು ಹೇಳಿದ್ದಾರೆ ದ್ವಿಮುಖ ಗುರಿ ಏನೋ ಸರಿ. ಆದರೆ ಗುರಿಯನ್ನು ಸಾಧಿಸುವುದರಲ್ಲಿ ಪರಿಪೂರ್ಣವಾಗಿ ವಿಮುಖವಾಗಿದ್ದೀರಿ ಎಂದು ಹೇಳಬಯಸುತ್ತೇನೆ. ಯಾವರೀತಿಯಲ್ಲಿ ಎಂದರೆ. ಶ್ರೀ ಬೊಮ್ಮಾಯಿಯವರು ಒಂದು ಕಡೆ, ಬೇಕಾದ್ದು ಆಗಲಿ, ನೀರಾವರಿಗೆ ಮುನ್ನೂರು ಕೋಟಿ ಕೊಡುತ್ತೇನೆ ಎಂದು ಹೇಳುವುದು ಇನ್ನೊಂದು ಕಡೆ ಶ್ರೀ ದೇವೇಗೌಡರು "ಎಲ್ಲಿ ಕೊಟ್ಟಿದ್ದೀರಿ, ಕೊಟ್ಟಿಲ್ಲ" ಎಂದು ಹೇಳುವುದು ಇದು ಏನೆಂದರೆ. ನಾಲ್ಕು ವರ್ಷ ಸರ್ಕಾರ ನಡೆಸಿಬಿಟ್ಟು, ಈಗ ಸರ್ಕಾರದ ಪಕ್ಷವೂ ಇವರೇ, ವಿರೋಧ ಪಕ್ಷವೂ ಆಗಿದ್ದಾರೆ ಅದೇನೋ " tweedledum and tweedledee " ಅಂದಹಾಗೆ Dr. Jekly & Mr. Hyde ತರಹ ದೇವೇಗೌಡರು ಒಂದು ಕಡೆಗೆ ಮತ್ತು ಶ್ರೀ ಬೊಮ್ಮಾಯಿಯವರು ಒಂದು ಕಡೆಗೆ ಹೊರಟುಬಿಟ್ಟಿದ್ದಾರೆ. ನಾನು ಇವರಿಬ್ಬರನ್ನೂ ಜವಾಬ್ದಾರರನ್ನಾಗಿ ಮಾಡಿ ಕೇಳುತ್ತೇನೆ. ಈ ಸರ್ಕಾರದಲ್ಲಿ ಒಟ್ಟಿನಲ್ಲಿ ನೀರಾವರಿ ಬಗ್ಗೆ ಇಷ್ಟೆಲ್ಲ ಪರಾಕ್ರಮದಿಂದ ಹೇಳಿದರು ತಾತ್ಪರ್ಯದಲ್ಲಿ ಏನು ಮಾಡಿದ್ದೀರಿ ? ಯಾವುದೋ ಅಂಕಿಅಂಶಗಳನ್ನು ಕೊಟ್ಟು, ಅವತ್ತಿನ ತಾರೀಖಿಗೆ ಇಷ್ಟು ಕೊಟ್ಟಿದ್ದೇವೆ, ಇವತ್ತು ಇಷ್ಟು ಕೊಟ್ಟಿದ್ದೇವೆ ಎಂದರೆ ಅದಲ್ಲ. ಇವತ್ತು ಇರತಕ್ಕಂಥ ಬೆಲೆಗಳನ್ನು ಗಮನದಲ್ಲಿಟ್ಟುಕೊಂಡು ಎಷ್ಟು ದುಡ್ಡು ಜಾಸ್ತಿ ಕೊಟ್ಟಿದ್ದೀರಿ ಎನ್ನುವುದು ಮುಖ್ಯ ಇನ್ನೊಂದು ವಿಷಯವೇನೆಂದರೆ, ಪ್ರಾಜೆಕ್ಟ್‌ಗಳು ಯಾವ ಹಂತವನ್ನು ತಲುಪಿವೆ ಎನ್ನುವುದರ ಮೇಲೆ ಹಣದ ಅವಶ್ಯಕತೆ ಬೀಳುತ್ತದೆ. ಪ್ರಾಜೆಕ್ಟ್ ಶುರು ಆಗಬೇಕಾದರೆ, ಬರೀ ಲ್ಯಾಂಡ್ ಮತ್ತೊಂದಕ್ಕೆ ದುಡ್ಡು ಕೊಟ್ಟಿರುತ್ತಾರೆ- ಆದರೆ ಅಲ್ಲಿ ಗೋಡೆ ಎದ್ದಮೇಲೂ ನಾವು ಅದಕ್ಕಿಂತ ಜಾಸ್ತಿ ೧೦ ರೂಪಾಯಿ ಕೊಟ್ಟಿದ್ದೇವೆಂದು ಹೇಳಿದರೆ ಏನು ಅರ್ಥ ಇದೆ ? ಈ ನೀರಾವರಿಯಲ್ಲಿ ಇವತ್ತು ನಮ್ಮ ಮುಂದಿಟ್ಟಿರತಕ್ಕ ಸವಾಲು ಏನಿದೆ, ಈ ಸವಾಲಿಗನುಸಾರವಾಗಿ ಹಣ ಕೊಟ್ಟಿದ್ದೀರಾ ? ಡ್ಯಾಮ್‌ಗಳನ್ನು ಕಟ್ಟುವುದಕ್ಕೆ ಮುಂಚೆ ಚಾನಲ್‌ಗೋ ಮತ್ತೊಂದಕ್ಕೋ ದುಡ್ಡು ಕಡಿಮೆಯಾಗಿ ಕೊಟ್ಟಿದ್ದರೆ ನಡೆದಿರಬಹುದು. ಈಗ ಡ್ಯಾಮ್‌ನಲ್ಲಿ ನೀರು ನಿಲ್ಲಿಸಿದ ಮೇಲೆ, ಕಾಲುವೆ ಮಾಡುವುದಕ್ಕೆ ಹಣ ಇಲ್ಲ ಎಂದು ಸುಮ್ಮನೆ ಕುಳಿತುಕೊಂಡರೆ ಏನು ಪ್ರಯೋಜನ ? ಇದು ವಿವರಣೆ ಆಗುವುದಕ್ಕೆ ಸಾಧ್ಯವಿಲ್ಲ. ಈ ಪೇಪರ್ ಮೇಲೆ ನೀವು ಏನು ವಿವರಣೆ ಕೊಡುತ್ತೀರಿ ಅದು ಸರಿಯಲ್ಲ. ಆದ್ದರಿಂದ ಈ ವಿಷಯದಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಇನ್ನು ನಜೀರ್ ನಿವಾಸ ಯೋಜನೆ. ೧೭,೫೦೦ ಮನೆಗಳನ್ನು ನಿರ್ಮಾಣ ಮಾಡುತ್ತೇವೆಂದು ಹೇಳಿದ್ದಾರೆ. ದಿವಂಗತ ನಜೀರ್‌ಸಾಬ್‌ರವರು ಶ್ರದ್ಧಾವಂತ ರಾಜಕಾರಣಿಗಳಾಗಿದ್ದರು. ಅವರು ಈ ಸದನದಲ್ಲಿಯೂ ಅಪಾರವಾದ ಗೌರವವನ್ನು ಹೊಂದಿದ್ದರು. ಹೊರಗಡೆಯ ಜನರಿಂದಲೂ ಕೂಡ ಗೌರವವನ್ನು ಹೊಂದಿದ್ದರು. ಅವರ

ಪ್ರಾಮಾಣಿಕತೆಯ ಬಗ್ಗೆ ಯಾರೂ ಪ್ರಶ್ನೆ ಮಾಡುವ ಹಾಗಿಲ್ಲ. ಈ ಗ್ರಾಮೀಣ ಅಭಿವೃದ್ಧಿಯ ಬಗ್ಗೆ ಅವರ ಶ್ರದ್ಧೆಯನ್ನು ಅನುಸರಿಸಿ, ನಜೀರ್ ನಿವಾಸ್ ಯೋಜನೆಯನ್ನು ಇಟ್ಟಿದ್ದಾರೆ. ನಾನು ಇದನ್ನು ಸ್ವಾಗತ ಮಾಡುತ್ತೇನೆ. ಆದರೆ ಪ್ರಶ್ನೆ ಏನೆಂದರೆ, ನೀವು ಇದನ್ನು ಕಾರ್ಯಗತ ಮಾಡುತ್ತೀರಾ ಎನ್ನುವುದು ಮುಖ್ಯವಾದ ಪ್ರಶ್ನೆ. ಹಿಂದೆ ಈ ಮನೆಗಳನ್ನು ಕಟ್ಟುವ ವಿಷಯದಲ್ಲಿ ನಾನು ಒಂದು ಪ್ರಶ್ನೆ ಎತ್ತಿದ್ದೆ. ಅದರ ಬಗ್ಗೆ ಅರ್ಧ ಗಂಟೆ ಚರ್ಚೆ ಮಾಡಿದ್ದೆ. ಸನ್ಮಾನ್ಯ ಸಿಂಧ್ಯರವರು ಸರ್ಕಾರದ ವೈಫಲ್ಯವನ್ನು ಒಪ್ಪಿ ಜೂನ್ ತಿಂಗಳ ಹೊತ್ತಿಗೆ ಸರಿಪಡಿಸುತ್ತೇವೆಂದು ಹೇಳಿದರು. ಆದರೆ ಜೂನ್ ಹೊತ್ತಿಗೆ ಅವರು ಮಂತ್ರಿಗಳೇ ಆಗಲಿಲ್ಲ. ಮತ್ತೆ ಏನೇನೋ ಆಯಿತು. ಈಗಲೂ ನನಗೆ ತಿಳಿದ ಮಟ್ಟಿಗೆ ಬಡ ಜನರಿಗೆ ಮನೆ ನಿರ್ಮಾಣ ಮಾಡತಕ್ಕ ವಿಚಾರದಲ್ಲಿ ನಿಮ್ಮ ಸರ್ಕಾರದ ಶ್ರದ್ಧೆ ಅತ್ಯಂತ ಕನಿಷ್ಟ ಮಟ್ಟದಲ್ಲಿದೆ, ಈಗ ನೀವು ನಜೀರ್ ನಿವಾಸ್ ಯೋಜನೆ ಎಂದು ಮಾಡಿ ನಾಳೆ ದಿವಸ ಹಾಸ್ಯಾಸ್ಪದ ಮಾಡಬೇಡಿ. ಇದಕ್ಕೆ ಇಂತಿಷ್ಟು ಟೈಮ್ ಎಂದು ನಿರ್ಧಾರ ಮಾಡಿ ಆ ಟೈಮಿನಲ್ಲಿ ಮನೆಗಳು ನಿರ್ಮಾಣ ಆಗುವಂತೆ ಮಾಡಿ, ಅವರ ಹೆಸರಿಗೆ ನಿಜವಾದ ಕೀರ್ತಿಯನ್ನು, ಗೌರವವನ್ನು ತನ್ನಿ. ಇಷ್ಟು ಮಾತ್ರ ಈ ಸಂದರ್ಭದಲ್ಲಿ ಸೂಚನೆ ಮಾಡುತ್ತೇನೆ.

ಇನ್ನು ನಗರಾಭಿವೃದ್ಧಿ ಬಗ್ಗೆ ದೊಡ್ಡ ಮಾತನ್ನು ಬಜೆಟ್‌ನಲ್ಲಿ ಹೇಳಿದ್ದಾರೆ. ಮಾನ್ಯ ನಾರಾಯಣರಾವ್‌ರವರು ಹೇಳಿದಂತೆ ಈ ನಗರಗಳ ಸಮಸ್ಯೆ ಏನು ಇದೆ ಎನ್ನುವುದನ್ನು ಗುರುತಿಸದೇ ಯೋಜನೆಗಳನ್ನು ಹೇಳುತ್ತಿದ್ದಾರೆ. ಮುನಿಸಿಪಾಲಿಟಿಗಳಿಗೆ ಆಕ್ಟ್ರಾಯಿ ತೆರಿಗೆ ಆದಾಯ ಹೋದ ಮೇಲೆ ಅವರಿಗೆ ಸ್ವಂತದ ಆದಾಯಗಳು ಇಲ್ಲ. ಬೆಂಗಳೂರು ನಗರ ಕಾರ್ಪೊರೇಷನ್‌ನವರೇ ಮಾತ ನಾಡಿದ್ದಾರೆ, ಚೆನ್ನಾಗಿ ಹೇಳಿದ್ದಾರೆ. ಈ ನಗರಸಭೆಗಳ ಪರಿಸ್ಥಿತಿ ಏನಾಗಿದೆ ಎಂದು ಹೇಳಿದರೆ, ಈ ನಗರಸಭೆಗಳಿಗೆ ತಮ್ಮದೇ ಆದಂಥ ವರಮಾನ ಇಲ್ಲ. ಸರ್ಕಾರದ ಸಹಾಯಧನ ಇದೆ. ಆದರೆ ಇದರಲ್ಲಿ ನಿಯಮವಾಗಲೀ, ನೀತಿಯಾಗಲೀ, ಶಿಸ್ತಾಗಲೀ ಇಲ್ಲ. ಅಥವಾ ಸಮಯಕ್ಕೆ ಸರಿಯಾಗಿ ಸಹಾಯಧನ ಕೊಡುವುದೂ ಇಲ್ಲ. ಆದ್ದರಿಂದ ಸಮಸ್ಯೆಗಳು ಇವತ್ತು ಬೃಹದಾಕಾರವಾಗಿ ಬೆಳೆಯುತ್ತಿವೆ. ಇವತ್ತು ಈ ನಿವೇಶನಗಳ ಸಮಸ್ಯೆಯನ್ನು ಪರಿಹರಿಸಲು ಡೆವೆಲಪ್‌ಮೆಂಟ್ ಅಥಾರಿಟಿ ಎಂದು ಮಾಡಿ ದ್ದಾರೆ. ಮೊದಲು ಸಿ.ಐ.ಟಿ.ಬಿ. ಮತ್ತು ಪ್ಲಾನಿಂಗ್ ಅಥಾರಿಟಿ ಎಂದು ಇದ್ದುದನ್ನು ತೆಗೆದು, ಡೆವೆಲಪ್‌ಮೆಂಟ್ ಅಥಾರಿಟಿ ಎಂದು ಮಾಡಿದ್ದಾರೆ. ಆದರೆ ಇದರ ರಚನೆಯನ್ನೇ ಪೂರ್ತಿ ಮಾಡಿಲ್ಲ. ಏಕೆಂದರೆ, ಈ ಡೆವೆಲಪ್‌ಮೆಂಟ್ ಅಥಾರಿಟಿ ಏನು ಇದೆ, ಇದಕ್ಕೂ ಡೆಪ್ಯುಟಿ ಕಮೀಷನರ್ ಇದ್ದಾರೆ, ಮುನಿಸಿಪಾಲಿಟಿಗೂ ಅಡ್ಮಿನಿಸ್ಟ್ರೇಟರ್ ಡೆಪ್ಯುಟಿ ಕಮೀಷನರ್ ಇದ್ದಾರೆ, ಪ್ಲಾನಿಂಗ್ ಅಥಾರಿಟಿಗೂ ಡೆಪ್ಯುಟಿ ಕಮೀಷನರ್ ಇದ್ದಾರೆ, ಎಲ್ಲದಕ್ಕೂ ಡೆಪ್ಯುಟಿ ಕಮೀಷನರ್ ಇದ್ದಾರೆ. ಹೀಗಾಗಿ ನಾವು ಇವತ್ತು ಡೆಪ್ಯುಟಿ ಕಮೀಷನರ್ ಜಿಂದಾಬಾದ್ ಎಂದು ಕೂಗಿಕೊಂಡು ಹೋಗಬೇಕಾಗಿದೆ. ಪ್ರತಿ ದಿವಸ ಅವರು ಎಲ್ಲೆಲ್ಲಿ ಏನೇನು ಮಾಡುತ್ತಾರೆ ? ಅವರೇನು ಬ್ರಹ್ಮನೇ, ಅವರಿಗೆ ನಾಲ್ಕು ಕೈ ಇದೆಯೋ ? ಇದರಲ್ಲಿ ಈ ಭಾಗವನ್ನು ಪ್ರತಿನಿಧಿಸುವಂಥ ಶಾಸನ ಸಭೆಯ ಸದಸ್ಯರೂ ಸದಸ್ಯರಾಗಿರು ತ್ತಾರೆ ಎಂದು ಹೇಳಿದ್ದಾರೆ. ಆದರೆ, he is to be nominated again by the Government., ಇವತ್ತಿನವರೆಗೂ ಡೆಪ್ಯುಟಿ ಕಮೀಷನರ್ ಒಬ್ಬರು, ಪ್ಲಾನಿಂಗ್ ಅಥಾರಿಟಿ, ಸಿ.ಐ.ಟಿ.ಬಿ. ಮತ್ತು ಮುನಿಸಿಪಾಲಿಟಿಗೆ ಎಂದು ಇದ್ದಾರೆ. Today Deputy Commissioner is the Planning authority, CITB and he is also looking after the Municipality. How do you expect anything to happen ನಗರದ ಸಮಸ್ಯೆಗಳು ಇವತ್ತು ತುಂಬಾ ವೇಗವಾಗಿ ಬೆಳೆಯುತ್ತಾ ಇವೆ. ಈ ಸಮಸ್ಯೆಗಳನ್ನು ತುಂಬಾ ವೇಗವಾಗಿ ಓವರ್ ಟೇಕ್ ಮಾಡಿದರೆ ಮಾತ್ರ ಬಗೆಹರಿಸಲು ಸಾಧ್ಯವಿದೆಯೇ ಹೊರತು, we are being overtaken by the problems.

ಇನ್ನು ಕೊಳಚೆ ನಿರ್ಮೂಲನೆ, ಈ ಕೊಳಚೆ ಪ್ರದೇಶಗಳು ಏಕೆ ಬರುತ್ತವೆ ? ಸಮಯಕ್ಕೆ ಸರಿಯಾಗಿ ಸಾಕಷ್ಟು ನಿವೇಶನಗಳನ್ನು ನಿರ್ಮಾಣ ಮಾಡಿಕೊಡುವುದಕ್ಕೆ ಶಕ್ತಿ ಇಲ್ಲದೇ ಇರುವುದರಿಂದ, ಇವತ್ತು ಕೊಳಚೆ ಪ್ರದೇಶಗಳು ಎಲ್ಲೆಂದರಲ್ಲಿ ತಾಂಡವವಾಡುತ್ತವೆ. ಆದ್ದರಿಂದ, ಮುನಿಸಿಪಾಲಿಟಿ ಗಳಲ್ಲಿಯೇ ಅಲ್ಲ ಇಡೀ ಕರ್ನಾಟಕ ರಾಜ್ಯದಲ್ಲಿ ಈ ಪರಿಸ್ಥಿತಿ ಇದೆ. ಇವು ಮುನಿಸಿಪಾಲಿಟಿಗಳ ಅವಿಭಾಜ್ಯ ಅಂಗವಾಗಿವೆ. ಇವತ್ತು ಬಡಾವಣೆಗಳಾಗಿವೆ, ರಸ್ತೆಗಳಾಗಿವೆ, ದೀಪ ಕೊಟ್ಟಾಗಿದೆ, ನೀರು ಕೊಟ್ಟಿದೆ. ಮನೆಗಳನ್ನು ಸುಸಜ್ಜಿತವಾಗಿ ಕಟ್ಟಿ ಆಗಿದೆ. ಆದರೆ ಇವು ಮುನಿಸಿಪಾಲಿಟಿ ಖಾತೆಯಲ್ಲಿ ಇಲ್ಲ, ಏಕೆ ? Originally these lands were revenue lands. ಅದಕ್ಕೋಸ್ಕರ ಮುನಿಸಿಪಾಲಿಟಿ ಖಾತೆಯಲ್ಲಿ ಇಲ್ಲ. ಇದು ಹತ್ತಾರು ವರ್ಷಗಳಿಂದ ನಡೆಯುತ್ತಾ ಇದೆ. ಈ ಖಾತೆಯನ್ನು ಯಾರು ಮಾಡಬೇಕು ? ಮುನಿಸಿಪಾಲಿಟಿಯವರು ಮಾಡು

ವುದಕ್ಕೆ ಹೋದರೆ, ರೆವಿನ್ಯೂನವರು ನಾವು ಮಾಡಬೇಕೆಂದು ಹೇಳುತ್ತಾರೆ, ರೆವಿನ್ಯೂನವರು, ಅವರೇ ಸ್ವತಃ ಮಾಡುವುದಕ್ಕೆ ತಯಾರಿಲ್ಲ. ಏಕೆಂದರೆ, ಮುನಿಸಿಪಲ್ ಲಿಮಿಟ್ಸ್‌ನಲ್ಲಿ ಇವು ಬರುತ್ತವೆ. ಈ ಸಮಸ್ಯೆ ಹಲವಾರು ವರ್ಷಗಳಿಂದ ಇದ್ದೇ ಇದೆ. ಮಾನ್ಯ ಚಂದ್ರಶೇಖರ್ ಅವರು ಹೋದ ಅಸೆಂಬ್ಲಿಯಲ್ಲಿ ಅರ್ಬನ್ ಡೆವಲಪ್‌ಮೆಂಟ್ ಖಾತೆಯ ಸಚಿವರಾಗಿದ್ದರು. ಈ ಅಸೆಂಬ್ಲಿಯಲ್ಲಿ ಅವರು ಎಜುಕೇಷನ್ ಖಾತೆಗೆ ಹೊರಟುಹೋಗಿದ್ದಾರೆ. ಈ ಅರ್ಬನ್ ಡೆವಲಪ್‌ಮೆಂಟ್ ಮೇಲೆ ನಮಗೆ ಅವರು ಎಜುಕೇಷನ್ ಮಾಡಿಬಿಟ್ಟು, ಈ ಖಾತೆಗೆ ಹೋದರು.

೧–೩೦ ಪಿ.ಎಂ.

ಅಂದೇ ನಾನು ಹೇಳಿದ್ದೆ. ಇದಕ್ಕೆ ಅಮೆಂಡ್‌ಮೆಂಟ್ ತನ್ನಿ ಎಂದು ಹೇಳಿದ್ದೆ. ಯಾವುದಾದರೂ ಒಂದು ಕಾನೂನಿಗೆ ಅಮೆಂಡ್‌ಮೆಂಟ್ ತಂದು ಇವತ್ತು ಖಾತೆ ಮಾಡುವುದಕ್ಕೆ ಅವಕಾಶ ಕೊಟ್ಟರೆ ನಮ್ಮ ಒಂದು ಶಿವಮೊಗ್ಗ ಮುನಿಸಿಪಾಲಿಟಿಗೇ ಒಂದು ಕೋಟಿ ರೂಪಾಯಿ ಆದಾಯ ಬರುತ್ತದೆ. ಖಾತೆ ಮಾಡಿಪರೇ ಇಷ್ಟು ಹಣ ಬರುತ್ತದೆ. ಪ್ರತಿವರ್ಷ ೩೦ ರಿಂದ ೪೦ ಲಕ್ಷ ರೂಪಾಯಿಗಳು ರೆಕರಿಂಗ್ ಆಗಿ ನಮ್ಮ ಮುನಿಸಿಪಾಲಿಟಿಗೆ ಬರುವುದಕ್ಕೆ ಸಾಧ್ಯ ಇದೆ. ಇಂತಹದರಲ್ಲೂ ಕೂಡಾ ಸರಕಾರ ಕಣ್ಣುಮುಚ್ಚಿ ಕುಳಿತಿರುವುದರಿಂದ ನಗರಗಳ ಸಮಸ್ಯೆ ಏನು ಎಂದು ಅರ್ಥ ಮಾಡಿಕೊಳ್ಳಲು ಇವರಿಗೆ ಆಗಿಲ್ಲ. ರೋಗ ಡಯಾಗ್ನೈಸಸ್ ಮಾಡದೆ ಯಾವುದೋ ಏಜೆಂಟ್ ಔಷಧಿ ಕೊಟ್ಟ ಎಂದು ಕಂಡಕಂಡ ಔಷಧಿಯನ್ನು ರೋಗಿಗೆ ಕುಡಿಸಿದರೆ ಹೇಗೆ? ಏಜೆಂಟ್ ಕೊಟ್ಟ ಔಷಧಿ ತಂದು ಕುಡಿಸಿದರೆ ಏನು ಪ್ರಯೋಜನ? ಅವನು ಕೊಟ್ಟ ಔಷಧಿ ನಮ್ಮ ರೋಗಕ್ಕೆ ಹೊಂದುತ್ತದೋ ಇಲ್ಲವೋ ಎಂಬುದನ್ನು ನೋಡಬೇಕಾದುದು ಸರಕಾರದ ಕೆಲಸ. ನಗರಾಭಿವೃದ್ಧಿ ವಿಷಯದಲ್ಲಿ ಖಂಡಿತವಾಗಿ ಸಮಸ್ಯೆಗಳು ದಿನೇದಿನೇ ಜಟಿಲವಾಗಿ ನಮ್ಮನ್ನೇ ನುಂಗಿ ಹಾಕುವ ಪರಿಸ್ಥಿತಿ ಬರುತ್ತದೆ. ಅದಕ್ಕೆ ಸರಕಾರ ಅವಕಾಶ ಕೊಡಕೂಡದು ಎಂದು ಹೇಳುತ್ತೇನೆ.

ಇನ್ನು ಗ್ರಾಮಗಳಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟುವುದಕ್ಕೆ ಬೇರೆ ಎಲ್ಲಾ ಯೋಜನೆಗಳನ್ನು ಬಿಟ್ಟು, ಆ ಊರಿನವರು ಐವತ್ತು ಪರ್ಸೆಂಟ್ ಕೊಟ್ಟರೆ, ಉಳಿದ ಐವತ್ತು ಪರ್ಸೆಂಟ್ ಸರಕಾರ ಕೊಡುತ್ತದೆ ಎಂದು ಹೇಳಿದ್ದೀರಿ. ಇದು ಒಳ್ಳೆಯ ಯೋಜನೆ. ದಯವಿಟ್ಟು ಇದಕ್ಕೆ ಹಣವನ್ನು ಸರಿಯಾದ ರೀತಿಯಲ್ಲಿ ಬಿಡುಗಡೆ ಮಾಡಿದರೆ ಒಂದಿಷ್ಟು ಮಕ್ಕಳಿಗಾದರೂ ಕೂಡಾ ಸರಿಯಾದ ಶಾಲಾ ಕಟ್ಟಡ ಗಳನ್ನು ಕೊಡಬಹುದು. ನಮ್ಮ ಎಂಜಿನಿಯರ್‌ಗಳಿಗೆ ಮತ್ತೊಬ್ಬರಿಗೆ ಕೊಡುವುದಕ್ಕಿಂತ ಊರಿನವರಿಗೇ ಶಾಲಾ ಕಟ್ಟಡವನ್ನು ಕಟ್ಟಿಕೊಳ್ಳಿ ಎಂದು ದುಡ್ಡು ಕೊಟ್ಟರೆ, ಇದು ಒಳ್ಳೆಯ ಕೆಲಸ ಆಗುವುದಕ್ಕೆ ಸಾಧ್ಯ ಇದೆ ಎಂದು ನನ್ನ ಅನಿಸಿಕೆ.

ಇನ್ನು ಪಂಚಾಯತ್ ರಾಜ್ಯ ಹೆಮ್ಮೆಯಿಂದ ಸರಕಾರ ಹೇಳಿಕೊಳ್ಳತಕ್ಕಂಥ ವಿಚಾರ. ಇದೇನೂ ಮೊದಲು ಇರಲೇ ಇಲ್ಲ, ಜಗತ್ತಿನಲ್ಲೇ ನಾವು ಬಂದಮೇಲೆ ಶುರುವಾಯಿತು ಎಂದು ಹೇಳಿಕೊಳ್ಳು ತ್ತಿದ್ದೀರಿ. ಹೇಳಿಕೊಳ್ಳಿ, ನಿಮ್ಮ ಸಂತೋಷ. ನಮಗೆ ಗೊತ್ತಿದ್ದ ಹಾಗೆ, ಮೊದಲು ಇದ್ದ ತಾಲ್ಲೂಕು ಅಭಿವೃದ್ಧಿ ಮಂಡಲಿಗಳು, ಈಗಿರುವ ಸಂಸ್ಥೆಗಳಿಗಿಂತ ಬಹಳ ಚೆನ್ನಾಗಿ ಕೆಲಸ ಮಾಡಿವೆ, ಅದರಲ್ಲೇನೂ ಸಂಶಯ ಇಲ್ಲ. ಇದನ್ನು ಬದಲಾವಣೆ ಮಾಡಿದ್ದೇ ತಪ್ಪು ಎಂದು ನಾನು ಹೇಳು ವುದಿಲ್ಲ. ಆದರೆ ನೀವು ಏನು ಮಾಡಿದ್ದೀರಿ? ಒಂದು ಸಂದರ್ಭದಲ್ಲಿ ಮಾನ್ಯ ನಜೀರ್ ಸಾಹೇಬರು ಒಂಭೈನೂರು ಕೋಟಿ ರೂಪಾಯಿಗಳನ್ನು ನಾವು ಜಿಲ್ಲಾ ಪರಿಷತ್ತಿಗೆ ಕೊಡುತ್ತೇವೆ ಎಂದಾಗ ಎಲ್ಲಾ ಜಿಲ್ಲಾಪರಿಷತ್‌ನವರೂ ಮೊದಲ ಸಾರಿ ತಿಳಿದುಕೊಂಡಿದ್ದೇನು ಎಂದರೆ, ಬರೀ ಅಭಿವೃದ್ಧಿ ಕಾರ್ಯ ಗಳಿಗಾಗಿ ಒಂಭೈನೂರು ಕೋಟಿ ರೂಪಾಯಿಗಳನ್ನು ಕೊಡುತ್ತಾರೆ ಎಂದು. ಇದರಲ್ಲಿ ಸಂಬಳ ಸಾರಿಗೆ ಎಲ್ಲಾ ಸೇರಿ ಬರುತ್ತದೆ ಎಂದು ಗೊತ್ತಿರಲಿಲ್ಲ. ಆದರೆ ಜುಮ್ಲಾ ನೋಡಿದರೆ ಅಭಿವೃದ್ಧಿಗೆ ಏನೂ ಇಲ್ಲ. ಅಧಿಕಾರ ವಿಕೇಂದ್ರೀಕರಣ ಅಲ್ಲ ನೀವು ಮಾಡಿರುವುದು. ನೀವು ಏನು ಮಾಡಿದ್ದೀರಿ ಎಂದರೆ, ನಿಮ್ಮ ತಲೆನೋವಿನ ವಿಕೇಂದ್ರೀಕರಣ ಮಾಡಿದ್ದೀರಿ. ಸರಕಾರದ ತಲೆನೋವಿನ ವಿಕೇಂದ್ರೀಕರಣವಾಗಿದೆಯೋ ಹೊರತು ಬೇರೆ ಏನೂ ಆಗಿಲ್ಲ. ಇಲ್ಲಿ ಯಾರು ಮಂತ್ರಿಯಾಗಿ ಬಂದು, ಏನು ಕೇಳಿದರೂ ಸಹ ಹೋಗ್ರಿ ಜಿಲ್ಲಾ ಪರಿಷತ್‌ನವರನ್ನು ಕೇಳಿರಿ ಎನ್ನುವುದು, ಜಿಲ್ಲಾ ಪರಿಷತ್‌ನವರನ್ನು ಕೇಳಿದರೆ ಅವರು ಸರಕಾರ ವನ್ನು ಕೇಳಿ ಎಂದು ಹೇಳುವುದು ಆಯಿತು. ನಿಮ್ಮ ತಲೆನೋವಿನ ವಿಕೇಂದ್ರೀಕರಣವಾಗಿದೆ. ಇನ್ನು ಕೆಲವು ದಿವಸದಲ್ಲಿ ಇವು ಹಾಸ್ಯಾಸ್ಪದ ಸಂಸ್ಥೆಗಳಾಗುತ್ತವೆ. ಏನೂ ಕೆಲಸ ಆಗುತ್ತಿಲ್ಲ ಎಂದಲ್ಲ. ಸಣ್ಣಪುಟ್ಟ ಕೆಲಸಗಳು ಆಗುತ್ತಿವೆ, ಕೆರೆ ಆಗಿರಬಹುದು, ರಸ್ತೆ ಆಗಿರಬಹುದು. ಆದರೆ ನೀವೇನು ಫಿಲಾಸಫಿ, ದೊಡ್ಡ ತತ್ವಜ್ಞಾನ ಬೋಧನೆ ಮಾಡಿ, ಇದನ್ನು ತಂದಿದ್ದೇವೆ ಎಂದು ಹೇಳಿದ್ದೀರಿ ಅದನ್ನು ಖಂಡಿತವಾಗಿ ಮಾಡುವುದಕ್ಕೆ ಸಾಧ್ಯ ಇಲ್ಲ.

ಪ್ರಧಾನ ಮಂತ್ರಿಗಳು ಇದನ್ನು ರಾಜ್ಯಾಂಗ ಬದ್ಧವಾದ ಸಂಸ್ಥೆಗಳನ್ನಾಗಿ ಮಾಡುತ್ತೇವೆ ಎಂದು ಹೇಳಿದರು. ಆದರೆ ಇದರ ಬಗ್ಗೆ ನಿಮ್ಮ ರಾಜ್ಯಪಾಲರ ಭಾಷಣದಲ್ಲಿ ಒಂದು ಅಪಸ್ವರವನ್ನು ಎತ್ತಿದ್ದೀರಿ. ಇದರಲ್ಲಿ ರಾಜ್ಯಗಳ ಹಕ್ಕಿನ ಪ್ರಶ್ನೆ ಬರುತ್ತದೆ ಎಂದಿದ್ದೀರಿ, ಇದು ಏತಕ್ಕೆ? ನಿಮ್ಮ ಅಧಿಕಾರದ ಪ್ರಶ್ನೆ ಬಂದಾಗ ಪ್ರಜಾಪ್ರಭುತ್ವ ಇದೆ ಕೆಳಗಡೆ ಇರತಕ್ಕಂಥ ಈ ಮುನಿಸಿಪಾಲಿಟಿಗಳು, ಜಿಲ್ಲಾಪರಿಷತ್‌ಗಳು, ಮಂಡಲ್ ಪಂಚಾಯತ್‌ಗಳು, ನಿಮ್ಮಷ್ಟೇ ಸಮರ್ಥವಾಗಿರಲಿಕ್ಕೆ ಹೇಳಿದಾಗ, ನಿಮ್ಮ ಪ್ರಶ್ನೆ ಮುಖ್ಯವಾಗುತ್ತದೆ. ಏತಕ್ಕೆ ಈ ಅಪಸ್ವರ? ಈ ಎಲ್ಲಾ ಸಂಸ್ಥೆಗಳನ್ನೂ ರಾಜ್ಯಾಂಗ ಬದ್ಧವಾದಂಥ ಸಂಸ್ಥೆಗಳನ್ನಾಗಿ ಮಾಡುವುದಕ್ಕೆ ನಾವು ಪ್ರಯತ್ನ ಪಡಬೇಕಾದುದು ಅಗತ್ಯ ಇದೆ. ಕೆಳಗಿನ ಮಟ್ಟದಲ್ಲಿ ಇವುಗಳಿಗೆ ರಾಜಕಾರಣದ ಲೇಪ ಹಾಕದೇ ಇದ್ದರೆ ಒಳ್ಳೆಯದು. ಮಂಡಲ ಪಂಚಾಯತಿಗಳಲ್ಲಿ ಆಗಲೇ ಏನಾಗಿದೆ ಎಂದರೆ, ಜನತಾದಳ ಯಾವುದು, ಜನತಾ ಪಕ್ಷ ಯಾವುದು ಎಂಬ ಗೊಂದಲದಲ್ಲಿ ಬಿದ್ದಿದೆ. ಏತಕ್ಕೆಂದರೆ, ರಾಜಕೀಯ ಪಕ್ಷಗಳ ಜನರ ಕೈಯಲ್ಲಿರತಕ್ಕಂಥ ಒಂದು ಪೊಲಿಟಿಕಲ್ ಇನ್‌ಸ್ಟಿಟ್ಯೂಟ್ಸ್ ಆಗಬೇಕೇ ಹೊರತು ಜನಗಳ ತಲೆಯ ಮೇಲೆ ಹೊತ್ತುಕೊಳ್ಳಲಾಗದಿರುವ ಒಂದು ಹೊರೆ ಆಗಬಾರದು. ಎಲ್ಲಾ ಜನಕ್ಕೆ ಒಂದು ರಾಜಕೀಯ ಪಕ್ಷದ ಮುದ್ರೆಯನ್ನು ಹೊಡೆದು ಇಟ್ಟಮೇಲೆ ಪ್ರಜಾಪ್ರಭುತ್ವ ಏನು ಬಂತು? ಆದದರಿಂದ ಇವತ್ತು ರಾಜಕೀಯ ಪಕ್ಷಗಳು ಒಂದು ಪ್ರಬುದ್ಧವಾದ ತೀರ್ಮಾನಕ್ಕೆ ಬರಬೇಕು. ಎಲ್ಲಿ ನೀತಿಯ ಪ್ರಶ್ನೆ ಬರುತ್ತದೆ, ಆ ಹಂತಕ್ಕೆ ಮಾತ್ರ ಪಕ್ಷಗಳನ್ನು ಸೀಮಿತ ಮಾಡಿಕೊಂಡು, ನೀತಿಯ ಕೆಳಗೆ ಯಾರೊಬ್ಬರಲ್ಲಿ ಕೆಲಸ ಮಾಡಬೇಕಾಗಿದೆ, ಕಾರ್ಯಗತ ಮಾಡಬೇಕಾಗಿದೆ ಅಲ್ಲಿ ಪಕ್ಷಗಳನ್ನು ತರದೇ ಇದ್ದರೆ ಒಳ್ಳೆಯದಾಗುತ್ತದೆ. ಇವತ್ತು ಪಕ್ಷಗಳ ಹಾವಳಿಯಿಂದ ಅರ್ಧ ಮಂಡಲ್ ಪಂಚಾಯತ್‌ಗಳು ದುರವಸ್ಥೆಯಲ್ಲಿವೆ. ಇನ್ನು ಅರ್ಥದಲ್ಲಿ ಹಣ ಇಲ್ಲ. ಜವಾಬ್ದಾರಿ ಜಾಸ್ತಿಯಾಗಿದೆ. ಸಂಪನ್ಮೂಲ ಕಡಿಮೆಯಾಗಿದೆ. ಈ ಎಲ್ಲ ಪರಿಸ್ಥಿತಿ ಇರುವಂತಹ ಸಂದರ್ಭದಲ್ಲಿ ಇದರ ಬಗ್ಗೆ ಬೇರೆ ರೀತಿಯ ಭಾವನೆಯಿಂದ ಸರಕಾರ ಹೋಗತಕ್ಕದ್ದು ಸಾಧು ಅಲ್ಲ ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಇನ್ನು ಕರ್ನಾಟಕ ಹೈದ್ರಾಬಾದ್ ಅಭಿವೃದ್ಧಿ ಮಂಡಲಿ ಬಗ್ಗೆ ಮಾನ್ಯ ಸದಸ್ಯರಾದ ಹಾಗೂ ಸ್ನೇಹಿತರಾದ ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆಯವರು ಮತ್ತು ಶ್ರೀ ಧರ್ಮಸಿಂಗ್‌ರವರು ದೀರ್ಘವಾಗಿ ಮಾತನಾಡಿದ್ದಾರೆ. ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಯಾವ ಯಾವ ಪ್ರದೇಶಗಳಲ್ಲಿ ವಿಶಿಷ್ಟವಾದ ಸಮಸ್ಯೆಗಳು ಇವೆ ಅವನ್ನು ಬಗೆಹರಿಸಲು ಒಂದೊಂದು ಅಭಿವೃದ್ಧಿ ಮಂಡಲಿಗಳನ್ನು ಮಾಡುವುದಕ್ಕೆ ಏನೂ ಅಭ್ಯಂತರವಿಲ್ಲ. ಅದಕ್ಕೆ ನನ್ನ ಬೆಂಬಲ ಸಹ ಇದೆ. Micro Planning and Micro Planning. This comes under the concept of Micro Planning. ಆ ರೀತಿ ಮಾಡುವುದರಲ್ಲಿ ತಪ್ಪು ಇಲ್ಲ. ಅದೇ ರೀತಿಯಲ್ಲಿ ಬೇರೆ ಭಾಗಗಳಲ್ಲಿ ಅಂದರೆ ಬಹಳ ಮುಖ್ಯವಾಗಿ ಮಲೆನಾಡಿನ ಭಾಗಗಳಲ್ಲಿ ಈ ರೀತಿಯಾದ ಸುಮಾರು ೯೨ ತಾಲ್ಲೂಕುಗಳನ್ನು ಗುರುತಿಸಿ ಆ ಏರಿಯಾದಲ್ಲಿರತಕ್ಕಂಥ ವಿಶಿಷ್ಟ ಸಮಸ್ಯೆಗಳನ್ನು ಪರಿಹರಿಸಲು ಅಭಿವೃದ್ಧಿ ಮಂಡಲಿಗಳನ್ನು ಕೊಡುವುದಕ್ಕೆ ಅವಕಾಶ ಇದೆ. ಬಯಲು ನಾಡು ಪ್ರದೇಶವನ್ನು ಈ ಮಲೆನಾಡು ಪ್ರದೇಶಗಳಿಗೆ ಹೋಲಿಕೆ ಮಾಡಿ ನೋಡುವುದಕ್ಕಾಗುವುದಿಲ್ಲ. ಅದರಿಂದ ಏನೂ ಪ್ರಯೋಜನವಿಲ್ಲ. ಆದ್ದರಿಂದ ವಿಶಿಷ್ಟವಾಗಿ ಮಲೆನಾಡಿನ ಅಭಿವೃದ್ಧಿಗೆ ಒಂದು ಮಂಡಲಿ ಮಾಡಬೇಕು ಎಂದು ಹಿಂದೆಯೇ ಅಂದರೆ ಮಹಾರಾಜರ ಕಾಲದಲ್ಲಿ ನೇಮಿಸಿದಂತಹ ಒಂದು ಸಮಿತಿ ತನ್ನ ವರದಿಯಲ್ಲಿ ಶಿಫಾರಸ್ಸು ಮಾಡಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಅದು ಏನಾಗಿದೆ ಎಂದರೆ ತಾತ್ಸಾರವಾಗಿದೆ. ಮಲೆನಾಡು ಪ್ರದೇಶದಲ್ಲಿ ಲೀಡರ್ಸ್ ಜಾಸ್ತಿ ಜನ ಇದ್ದಾರೆ. ಆದರೆ ಲೀಡರ್‌ಶಿಪ್ ಕಡಿಮೆ, They do not have a feeling of Leadership. ಅದೇ ಬಯಲುನಾಡಿನ ಪ್ರದೇಶವಾದ ಗುಲ್ಬರ್ಗದವರು ಎಲ್ಲಾ ಪಾರ್ಟಿಯವರು ಒಟ್ಟುಗೂಡಿ ಮಂತ್ರಿಗಳ ಜೊತೆ ಹೋಗಿ ಅವರಿಗೆ ಬೇಕಾದ ಕೆಲಸ ಮಾಡಿಸಿಕೊಳ್ಳುತ್ತಾರೆ. ಮಲೆನಾಡಿನಲ್ಲಿ ಆ ರೀತಿ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬರಗಾಲದಲ್ಲಿರುವವರ ಮೇಲೆ ಏತಕ್ಕೆ ತಮ್ಮ ಕಣ್ಣು ?

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ನಾನು ಹಿಂದೆ ಎರಡು ಮೂರು ಸಾರಿ ಹೇಳಿದ್ದೇನೆ. ಅದಕ್ಕೆ ಮಾನ್ಯ ದಿವಂಗತ ನಜೀರ್‌ಸಾಬ್‌ರವರು ಮಲೆನಾಡಿನ ಶಾಸಕರನ್ನು ಕರೆದು ಒಂದು ಸಭೆ ಮಾಡುತ್ತೇನೆಂದು ಹೇಳಿದ್ದರು. ನಂತರ ಮಾನ್ಯ ಪ್ರಕಾಶ್‌ರವರೂ ಸಹ ಒಂದು ಸಭೆ ಕರೆಯುತ್ತೇನೆಂದು ಹೇಳಿದರು. ಆದರೆ ಇದುವರೆಗೂ ಸಭೆ ಕರೆಯಲಿಲ್ಲ. ಇದರ ಬಗ್ಗೆ ಇದುವರೆಗೆ ಯಾರೂ ಸಹ ಗಮನಹರಿಸಲಿಲ್ಲ. ಬಜೆಟ್ಟಿನಲ್ಲಿ ಹೈದ್ರಾಬಾದ್ ಕರ್ನಾಟಕ ಮಂಡಲಿಗೆ ಸಾಕಷ್ಟು ಹಣ ಕೊಡಿ; ಸರಿಯಾಗಿ ನಡೆಸಿ ಅದರ ಜೊತೆಯಲ್ಲಿಯೇ ಮಲೆನಾಡು ಅಭಿವೃದ್ಧಿ ಮಂಡಲಿ ಮಾಡುವ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು. ಕನಿಷ್ಠಪಕ್ಷ ಅದರ ಬಗ್ಗೆ ಚಿಂತನೆ ಮಾಡುವುದಕ್ಕಾದರೂ

ಸಂಬಂಧಪಟ್ಟ ಎಲ್ಲಾ ಶಾಸಕರನ್ನು ಕರೆದು ಒಂದು ಸಭೆಯನ್ನಾದರೂ ಮಾಡಬೇಕು ಎಂದು ನಾನು ಸರ್ಕಾರವನ್ನು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ. ಈ ಬೋರ್ಡ್ ಮತ್ತು ಮಂಡಲಿಗಳನ್ನು ಮಾಡಿದ ಮಾತ್ರಕ್ಕೆ ಆ ಭಾಗದ ಎಲ್ಲಾ ಸಮಸ್ಯೆಗಳು ಪರಿಹಾರವಾಗುತ್ತವೆಂದು ಅಲ್ಲ. ಈ ಎಲ್ಲಾ ಬೋರ್ಡ್ ಮತ್ತು ಮಂಡಲಿಗಳು ಸ್ಥಾಪನೆಯಾಗುವ ಒಂದು ಫಿಲಾಸಫಿಯ ಮೇಲೆ ಸ್ಥಾಪನೆಯಾಗುತ್ತವೆ. ಆಮೇಲೆ ಆ ನೆನಪು ಇರುವುದಿಲ್ಲ. Why do we create either Board or Corporation? ಮೂಲಭೂತವಾದ ತತ್ವವಿರತಕ್ಕಂಥಾದ್ದು ಏನೆಂದರೆ, ಸರ್ಕಾರಿ ಇಲಾಖೆಗಳಿಗಾದರೆ ಪಬ್ಲಿಕ್ ಅಕೌಂಟಬಿಲಿಟಿ ಇರುತ್ತದೆ. ಆದರೆ ಪ್ರೈವೇಟ್ initiative ಎಲ್ಲಾ ದೃಷ್ಟಿಯಿಂದ ಈ ನಿಗಮಗಳು ಆಗಲಿ, ಮಂಡಲಿಗಳು ಆಗಲಿ ಹೇಗೆ ಕೆಲಸ ಮಾಡಬೇಕೆಂದರೆ ಸರ್ಕಾರಕ್ಕೆ ಇಲ್ಲದ ಜವಾಬ್ದಾರಿ, ಪ್ರಜ್ಞೆ ಈ ಮಂಡಲಿಗಳಿಗೆ ಇರಬೇಕು. ಖಾಸಗಿ ಸಂಸ್ಥೆಗಳಿಗೆ ಇರತಕ್ಕಂಥ the power to initiate things, ಅವು ಸ್ವತಃ ಚಾಲನೆ ಇರತಕ್ಕಂಥ ಖಾಸಗಿ ಸಂಸ್ಥೆಗಳಂತೆ ಇರಬೇಕು. ಸರ್ಕಾರಿ ಇಲಾಖೆಗಳಿಗೆ ಇರತಕ್ಕಂಥ ಒಂದು ಜವಾಬ್ದಾರಿ ಇರಬೇಕು ಆದರೆ ಇವತ್ತು ಏನಾಗಿದೆ ಎಂದರೆ ಅದು ತಿರುಗ ಮುರುಗ ಆಗಿದೆ. ಸರ್ಕಾರಕ್ಕೂ ಜವಾಬ್ದಾರಿ ಇಲ್ಲ. ಈ ರೀತಿ ಇರುವಾಗ ಬೋರ್ಡ್ ಮತ್ತು ಕಾರ್ಪೊರೇಷನ್‌ಗಳು ಯಾವ ರೀತಿ ಕೆಲಸ ಮಾಡುತ್ತಿವೆ ಎನ್ನುವುದನ್ನು ನಾನು ಹೇಳಬೇಕಾಗಿಲ್ಲ. I had an occasion to review the work of a corporation. ಕಾರ್ಪೊರೇಷನ್‌ನವರು ಯಾವುದೋ ಒಂದು ವರ್ಗಕ್ಕೆ ಸಾಲ ಕೊಡಬೇಕಾದಾಗ ಅವರು ಜಿಲ್ಲಾದ್ಯಂತ ಅರ್ಜಿಗಳನ್ನು ಕರೆದರು. ಆಗ ೧೭೦೦ ಅರ್ಜಿಗಳು ಬಂದವು. ಅವರು ಸಾಲ ಕೊಡಬೇಕಾಗಿದ್ದುದು ೩೦ ಅಪ್ಲಿಕೇಷನ್ಸ್‌ಗೆ ೬೦ ಸಾವಿರ ರೂಪಾಯಿಗಳು ಮಾತ್ರ. ಇದಕ್ಕೆ ಕಾರ್ಪೊರೇಷನ್ ಏತಕ್ಕೆ ಬೇಕು? ಅಲ್ಲಿನ ತಹಶೀಲ್ದಾರ್‌ಗೆ ಹೇಳಿದ್ದರೆ ಸಾಕಿತ್ತು, ಅವನೇ ಸಾಲವನ್ನು ಹಂಚಿ, ಅವನೂ ಸ್ವಲ್ಪ ತಿಂದು ಹೋಗುತ್ತಿದ್ದನು. ಈ ರೀತಿಯಾಗಿ ಕೆಲಸ ಮಾಡುವಂತಹ ಬೋರ್ಡ್ ಮತ್ತು ಕಾರ್ಪೊರೇಷನ್‌ಗಳಿಂದ ಯಾವ ಪ್ರಯೋಜನವಿಲ್ಲ. ಹಿಂದೆ ಸಹ ನಾನು ಇದರ ಬಗ್ಗೆ ಹೇಳಿದ್ದೆ. ಆಗ ಇದರ ಬಗ್ಗೆ ಸಮಗ್ರವಾಗಿ ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದರು.

ಉಪಾಧ್ಯಕ್ಷರು.—ಬೇಗ ಮುಗಿಸಿ, ಟೈಮ್ ಜಾಸ್ತಿ ಆಯಿತು.

ಶ್ರೀ ಕೆ. ಎಚ್. ಶ್ರೀನಿವಾಸ್.—ಇದು ಬಜೆಟ್ ಮೇಲಿನ ಸಾಮಾನ್ಯ ಚರ್ಚೆ. ಬೇಗ ಮುಗಿಸಿ ಎಂದರೆ ಹೇಗೆ? ಇನ್ನು ನಾನು ವಿಷಯವನ್ನು ಅಲ್ಲಿಗೇ ಬಿಟ್ಟು ಈ ರಾಜ್ಯದಲ್ಲಿ ಶ್ರೀ ಬೊಮ್ಮಾಯಿಯವರು ಯಾವ ತರಹ ಸರ್ಕಸ್ ಮಾಡುತ್ತಿದ್ದಾರೆ ಎನ್ನುವುದರ ಬಗ್ಗೆ ಹೇಳುತ್ತೇನೆ. ನಾನು ಹಿಂದೆ ಸಹ ಇದರ ಬಗ್ಗೆ ಹೇಳಿದ್ದೆ. ಮದ್ಯಪಾನದ ಬಗ್ಗೆ ಹೇಳುವುದಾದರೆ, ಇದು ನಿಮ್ಮನ್ನೂ ನಮ್ಮನ್ನೂ ಎಲ್ಲರನ್ನೂ ಒಂದು ದಿವಸ ನಾಶ ಮಾಡಿ ಹೋಗುತ್ತದೆ. ನಾನು ಇದರ ಬಗ್ಗೆ ಒಂದು ನಿರ್ಣಯವನ್ನು ತಂದು ಮಾತನಾಡಿದೆ. ಆಗ ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಒಂದು ಉನ್ನತ ಮಟ್ಟದ ಅಧಿಕಾರಿಗಳ ಸಮಿತಿ ಮಾಡಿದರು. ಬಹಳ ದುರದೃಷ್ಟಕರವಾದ ವಿಚಾರ ಏನೆಂದರೆ, ಆ ಸಮಿತಿಯು ಒಂದು ಸಭೆಯನ್ನು ಮಾತ್ರ ಮಾಡಿತು. ಹಿಂದೆ ಎಕ್ಸೈಸ್ ಮಂತ್ರಿಗಳಾಗಿದ್ದ ಮಾನ್ಯ ಇನಾಂದಾರ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಭೆ ಮಾಡುವುದರೊಳಗೆ ಅವರ ಮಂತ್ರಿ ಪದವಿಯೇ ಹೋಯಿತು. ಎರಡು ತಿಂಗಳ ಹಿಂದೆ ಮಾನ್ಯ ಮುಖ್ಯ ಮಂತ್ರಿಯವರನ್ನು ನಾನು ಕಂಡು ನೀವಾದರೂ ಇದರ ಬಗ್ಗೆ ಒಂದು ಸಭೆ ಮಾಡಿ ಎಂದು ಕೇಳಿಕೊಂಡೆ. ಅದಕ್ಕೆ, ಅವರು ಎಕ್ಸೈಸ್ ಡಿಪಾರ್ಟ್‌ಮೆಂಟಿಗೆ ಬೇರೆ ಮಂತ್ರಿಯವರನ್ನೇ ಮಾಡುತ್ತೇನೆಂದು ಹೇಳಿದರು. ಈಗ ಬೇರೆಯವರಿಗೆ ಎಕ್ಸೈಸ್ ಇಲಾಖೆಯನ್ನು ಕೊಡದೆ ಅವರೇ ಇಟ್ಟುಕೊಂಡಿದ್ದಾರೆ. ಈಗ ಮಧ್ಯಪಾನದ ವಿಚಾರದಲ್ಲಿ ಸಮಗ್ರವಾದ ಚಿಂತನೆ ಮಾಡುವುದು ಅಗತ್ಯ ಇದೆ. ಬರೀ ನಮಗೆ ಎಲೆಕ್ಷನ್ ಇದೆ, ಅದಕ್ಕೆ ಏನು ಮಾಡಬೇಕೋ ಅದನ್ನು ಮಾಡೋಣವೆಂದರೆ ಅದು ಸರಿಯಲ್ಲ. ಇದರ ಬಗ್ಗೆ ಒಂದು ಸಮಿತಿ ಮಾಡಿದರೆ, ಆ ಸಮಿತಿಯು ಕೆಲಸ ಸರಿಯಾಗಿ ನಿರ್ವಹಣೆ ಆಗುವ ರೀತಿಯಲ್ಲಿ ಮಾಡಬೇಕು. ಈ ಮಹಾಸದನ ಒಮ್ಮತದಿಂದ ಏನು ನಿರ್ಣಯವನ್ನು ಪಾಸ್ ಮಾಡಿದೆಯೋ ಆ ನಿರ್ಣಯದ ಯೋಗ್ಯತಾನುಸಾರವಾಗಿ ಕರ್ತವ್ಯಗಳ ನಿರ್ವಹಣೆಗಾಗಿ ಏನು ಮಾಡಬೇಕೋ ಅದನ್ನು ಮಾಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಹಳ್ಳಿಗಳಲ್ಲಿ ದುರ್ಬಲವರ್ಗದವರು ಎಲ್ಲಿದ್ದಾರೋ ಅಲ್ಲಿ ಹೆಂಡದ ಅಂಗಡಿಗಳನ್ನು ತೆಗೆಯಬಾರದೆಂದು ನಿರ್ಣಯ ಮಾಡುವುದು ದೊಡ್ಡದಲ್ಲ. ಎಷ್ಟೋ ಕಡೆಗಳಲ್ಲಿ, ಬೇರೆ ಊರಿನವರುಗಳಿಂದ ಹೆಂಡದ ಅಂಗಡಿಯವರನ್ನು ಕರೆದುಕೊಂಡು ಬಂದು ಅಂಗಡಿಗಳನ್ನು ಮಾಡಿರುವುದನ್ನು ನಾವು ನೋಡಿದ್ದೇವೆ. ಬರೀ ತತ್ವ ಹೇಳುವುದರಲ್ಲಿ ಏನು ಅರ್ಥ ಇದೆ. ನಮ್ಮ ಊರಿನಲ್ಲಿ ಹೆಂಗಸರು ಪೊರಕೆಗಳನ್ನು ಹಿಡಿದುಕೊಂಡು ನಮ್ಮ ಊರಿನಲ್ಲಿ ಹೆಂಡದ ಅಂಗಡಿಯನ್ನು ತೆರೆಯಬಾರದೆಂದು ಪ್ರತಿಭಟನೆ ಮಾಡಿದ್ದರೂ ಕೂಡ ಅದೇ ಜಾಗದಲ್ಲಿ ಬೇರೆ ಊರಿನವರಿಂದ ಅಂಗಡಿ

ಮಾಡುವವರನ್ನು ಕರೆದುಕೊಂಡು ಬಂದು ಹೆಂಡದ ಅಂಗಡಿಯನ್ನು ತೆರೆಯಲಾಗಿದೆ. ಅಲ್ಲಿ ದಿನ ಬೆಳಗಾದರೆ ಜಗಳವಾಗುತ್ತಿರುತ್ತದೆ. ಬರೀ ದುಡ್ಡು ಬರುತ್ತದೆ ಎನ್ನುವುದಕ್ಕೋಸ್ಕರ ಈ ಅಂಗಡಿಗಳನ್ನು ಮಾಡುವುದು ಸರಿಯಲ್ಲ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲವೆಂದು ನಾನು ಹೇಳಬೇಕಾಗುತ್ತದೆ. ಮಾನ್ಯ ಉಪಾಧ್ಯಕ್ಷರೇ, ನಾನು ಹೆಚ್ಚಿಗೆ ಭಾಷಣವನ್ನು ಮಾಡುವುದಿಲ್ಲ, ಮುಖ್ಯವಾಗಿ ಒಂದೇ ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕಾಗಿದೆ. ಈಗ ಮಾನ್ಯ ಅಧ್ಯಕ್ಷರವರೇ ಬಂದುಬಿಟ್ಟರು, ನಿಮ್ಮ ಹತ್ತಿರವಾಗಿದ್ದಿದ್ದರೆ ಸ್ವಲ್ಪ ಹೊಡೆದಾಡಿ ಮಾತನಾಡಬಹುದಾಗಿತ್ತು. ಅವರ ಹತ್ತಿರ ಆಗುವುದಿಲ್ಲ.

(ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಶ್ರೀನಿವಾಸರೇ ನೀವೇನೂ ಹೆದರಬೇಕಾಗಿಲ್ಲ, ಈಗಿರುವ ಆಧ್ಯಕ್ಷರೂ, ಉಪಾಧ್ಯಕ್ಷರೂ ಮತ್ತು ಮುಖ್ಯ ಮಂತ್ರಿಗಳೂ ಸಹ ಧಾರವಾಡ ಜಿಲ್ಲೆಗೆ ಸೇರಿದವರೇ ಆಗಿದ್ದಾರೆ,

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ನಾನು ಕೇಳುವುದೇನೆಂದರೆ, ಈ ಬಜೆಟ್‌ನಲ್ಲಿ...... ...

ಅಧ್ಯಕ್ಷರು.—ನೀವು ೧೨ ಗಂಟೆ ೫೫ ನಿಮಿಷಕ್ಕೆ ಪ್ರಾರಂಭ ಮಾಡಿದ್ದೀರಿ ಈಗಾಗಲೇ ೪೦–೫೦ ನಿಮಿಷ ಮಾತನಾಡಿದ್ದೀರಿ, ಇನ್ನು ೫ ಮಿನಿಟ್ ಒಳಗೆ ಮುಗಿಸಿ,

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಮುಖ್ಯ ಮಂತ್ರಿಯವರು ಬಜೆಟ್‌ನಲ್ಲಿ ಕೆಲವು ವಿಚಾರಗಳನ್ನು ಬಹಳ ಸೌಮ್ಯವಾಗಿ ಮಂಡಿಸಿದ್ದಾರೆ. ಈ ಬಜೆಟ್‌ನ್ನು ಇವರು ಕಾರ್ಯಗತ ಮಾಡುತ್ತಾರೋ ಅಥವಾ ಕಾರ್ಯಗತ ಮಾಡ ವುದಕ್ಕೆ ಇವರಿಗೆ ಶಕ್ತಿಯಾದರೂ ಇದೆಯೋ ಎಂದು ಯೋಚನೆ ಮಾಡಬೇಕಾಗುತ್ತದೆ. ಮಾನ್ಯ ಬೊಮ್ಮಾಯಿಯವರು ಮುಖ್ಯ ಮಂತ್ರಿಗಳಾದ ತರುಣದಲ್ಲಿ ಇಂಡಿಯಾ ಟುಡೆ ಪ್ರತ್ರಿಕೆಗೆ ಒಂದು ಸಂದರ್ಶನವನ್ನು ಕೊಟ್ಟಿದ್ದಾರೆ. ಅದರಲ್ಲಿ I am not Hegdes popetes ಎಂದು ಹೇಳಿದ್ದಾರೆ. ಅವರು ಮುಖ್ಯ ಮಂತ್ರಿಗಳಾದ ಮೇಲೆ ಇದು ಅವರ ಚೊಚ್ಚಲ ಸಂದರ್ಶನ. ಅದರಲ್ಲಿ ಕೆಲವು ವಿಷಯಗಳನ್ನು ತುಂಬಾ ಪ್ರಾಮಾಣಿಕವಾಗಿ ಒಪ್ಪಿಕೊಂಡಿದ್ದಾರೆ. ಅವರು ಪ್ರಾಮಾಣಿವಾಗಿ ಹೇಳಿದ್ದಾರೆ ಎನ್ನುವ ಒಂದೇ ಕಾರಣದ ಅಸ್ತ್ರವನ್ನು ಹಿಡಿದು ನಾನು ಹೇಳುತ್ತಿಲ್ಲ, ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ ನಿಜವಾಗಿ ಪ್ರಾಮಾಣಿಕವಾದ ಕೆಲವು ಸಮಸ್ಯೆಗಳನ್ನು ಹೇಳಿದ್ದಾರೆ.

" I love Hegde and accept him as a leader. But his wavering created instability in the state and created many aspirants for his post.

No Chief Minister has been put in such an extra-ordinary crisis as I have. The Government is in a bad shape. There is a financial crisis, an administrative crisis and the experiment of decentralisation faces teething problems. The party is in a shambles with all this rivalry and the elections are only a year and a half away. I must provide continuity of rule as well as implement some of my own new ideas in the short period I have. Time is short and it is a very difficult task. But I am confident of weatheriing this story situation.

First I must tackle the financial crisis largely as a result of drought in the previous years. we need to take some bold, hard decisions. Then the administration has lost its efficiency and it has to be toned up. There was a paychology that any body can do anything and get a way with it. That will stop. Dicipline would be restored............... "

ಇದು ಸನ್ಮಾನ್ಯ ಶ್ರೀ ಬೊಮ್ಮಾಯಿಯವರು ಮುಖ್ಯ ಮಂತ್ರಿಯವರಾದ ಕೂಡಲೇ ಮುಂದಿಟ್ಟ ಒಂದು ಚಿತ್ರ. ನಾನು ಅವರಿಂದ ಈ ಬಜೆಟ್‌ಗೆ ಉತ್ತರ ಹೇಳುವಂತ ಸಂದರ್ಭದಲ್ಲಿ ಕೇಳಬಯಸುತ್ತೇನೆ ಈ ಒಂದು ಸ್ಥಿತಿಯಿಂದ ಏನಾದರೂ ಮುಂದಕ್ಕೆ ಹೋಗಿದ್ದೀರಾ ? ಹೋಗಿದ್ದರೆ ಎಲ್ಲಿಯವರೆಗೆ ಹೋಗಿದ್ದೀರಿ ? ಈ ರಾಜ್ಯದಲ್ಲಿದ್ದಂತಹ ರಾಜಕೀಯ ಅನಿಶ್ಚತತೆಯನ್ನು ನೀವು ಕೊನೆಗಾಣಿಸಿದ್ದೀರಾ ? ಆಡಳಿತದಲ್ಲಿ ನೀವು ಯಾವ ರೀತಿಯಾದಂತ ಬಿಗಿಯನ್ನು ತಂದಿದ್ದೀರಿ ? ಅರ್ಥಿಕ ಸ್ಥಿತಿಯನ್ನು ಮ್ಯಾನೇಜ್ ಮಾಡುವುದರಲ್ಲಿ ಯಾವ ಆರ್ಡ್ ಎಂಡ್ ಬೋಲ್ಡ್ ಡಿಸೀಶನ್ ಎಂದು ಹೇಳಿದ್ದೀರಿ ಅದು ಎಲ್ಲಿದೆ ? ಬಜೆಟ್‌ನಲ್ಲಿಯಂತೂ ಅದು ಏನೂ ಇಲ್ಲ ಹಾಗಿದ್ದಲ್ಲಿ ಆ ಬಗ್ಗೆ ನಿಮ್ಮ ಮನಸ್ಸಿನಲ್ಲಿ ಏನಾದರೂ ಇದೆಯೇ ಎಂದು ಕೇಳಬಯಸುತ್ತೇನೆ. ಏಕೆಂದರೆ ಅವರು ನಾನು ಯಾರ p ppet ಅಲ್ಲ ಎಂದು ಹೇಳಿದ್ದರು. ಇವತ್ತು ಏನಾಗಿದೆ ? ಇವರ ಮಂತ್ರಿ ಮಂಡಲ ಶುರುವಾಯಿತು with a skelton with so many portfolios ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರವಂತೂ ಹುಚ್ಚಾಪಟ್ಟೆ ಪೋರ್ಟ್‌ಫೋಲಿಯೋಗಳು ಉಳಿಯಿತು. ಮಂತ್ರಿಮಂಡಲದ ವಿಸ್ತರಣೆ, ವಿಸ್ತರಣೆ ಎಂದು ಅದೂ ಕೂಡ ಆಯಿತು. ಹೀಗೆ ವಿಸ್ತರಣೆ ಆಗಿದ್ದರೂ ಅವರ ತಾತ್ಪರ್ಯ ಏನು ತರ್ಕ ಏನು ಎಂದು ಯಾರಿಗೂ ಅರ್ಥವಾಗಿಲ್ಲ. ನಮಗೂ ಅರ್ಥವಾಗಿಲ್ಲ. ನಿಮಗೂ ಅರ್ಥವಾಗಿಲ್ಲ. ಮಾನ್ಯ ಬೊಮ್ಮಾಯಿಯವರಿಗೂ ಕೂಡ ಅರ್ಥವಾಗಿಲ್ಲ. ರಾಮಕೃಷ್ಣ ಹೆಗಡೆಯವರ ಜನರನ್ನೂ ಕೂಡ ಇವರು ಕೈಬಿಟ್ಟರು ಹೀಗೇಕೆ ವಿಸ್ತರಣೆ ಮಾಡಿದರು ಎಂದು ಅರ್ಥವಾಗುತ್ತಿಲ್ಲ. ಹೀಗೆಯೇ ಕೆಲವು ಬದಲಾವಣೆಗಳನ್ನು ಮಾಡಿದರು. ಆ ಬದಲಾವಣೆಯಲ್ಲಿಯೂ ಕೂಡ ಯಾವ ತರ್ಕವೂ ಇಲ್ಲ. ಮಾನ್ಯ ಜೆ. ಹೆಚ್. ಪಟೇಲ್‌ರವರಿಗೆ ಇಂಡಸ್ಟ್ರಿ ಮತ್ತು ಪವರ್ ಎರಡರ ಪಟೇಲಿಕೆ ಇತ್ತು, ಈಗ ರೆವಿನ್ಯೂ ಡಿಪಾರ್ಟ್‌ಮೆಂಟಿನ ಶ್ಯಾನ್‌ಬೋಗಿಕೆ ಕೊಟ್ಟಿದ್ದಾರೆ. ಈ ಹಂತದಲ್ಲಿ ಮಾಡಿದ ಚೇಂಜ್ ಸರಿಯಾಗಿದೆಯೇ ? ಮಾನ್ಯ ವೀರಣ್ಣನವರಿಗೆ ಫೈನಾನ್ಸನ್ನು ಕೊಟ್ಟಿದ್ದರೆ ನನಗಂತೂ ಸಂತೋಷವಾಗುತ್ತಾ ಇತ್ತು. ಕಾರಣವೆಂದರೆ, ಅವರು ಅವರಲ್ಲಿ ತುಂಬಾ ಕೆಲಸವನ್ನು ಮಾಡಿದ್ದಾರೆ. He had done a very good job in small savings sector. Nobody has done such a job. I can compliment him. ನೀವು ಈ ಹಂತದಲ್ಲಿ ಎಲೆಕ್ಟ್ರಿಸಿಟಿ ಒಬ್ಬರಿಗೆ, ಇನ್ನೊಬ್ಬರಿಗೆ ಇಂಡಸ್ಟ್ರೀ ಕೊಟ್ಟು ಬಿಟ್ಟಿದ್ದೀರಿ. ಅವರು ಬಂದು ಬಿಡುವುದರೊಳಗೆ ಬೆಳಕಾಗಿ ಬಿಡುತ್ತದೆ. ಇಂಡಸ್ಟ್ರೀ ಮತ್ತು ಪವರ್ ಬೇಕಾದವರೆಲ್ಲ ಬೊಮ್ಮಾಯಿಯವರ ಮನೆಯಲ್ಲಿ ಹೋಗಿ ಕುಳಿತುಕೊಳ್ಳುತ್ತಾರೆ ಎನ್ನುವುದೊಂದನ್ನು ಬಿಟ್ಟರೆ ಬೇರೆ ಏನೂ ಇದರಿಂದ ಆಗುವುದಿಲ್ಲ. ಜೆ. ಹೆಚ್, ಪಟೇಲ್‌ರವರ ಹತ್ತಿರ ಹೋಗುತ್ತಿದ್ದವರು ಬೊಮ್ಮಾಯಿಯವರ ಹತ್ತಿರ ಬರುತ್ತಾರೆ ಅಷ್ಟೆ ? ಅದಕ್ಕಿಂತ ಹೆಚ್ಚಿನ ಪರಿಣಾಮ ಏನೂ ಆಗಲಾರದು. ಬೊಮ್ಮಾಯಿಯವರನ್ನು ಕೆಲವರು ಕೇಳಿದ್ದಾರಂತೆ, ಅದಕ್ಕೆ ಅವರು ಏನು ಹೇಳಿದರು ಅಂದರೆ, ಹೋಮ್ ಬಿಡುವುದಕ್ಕೆ ಬರುವುದಿಲ್ಲ, ಫೈನಾನ್ಸ್ ಕೊಡುವುದಕ್ಕೆ ಬರುವುದಿಲ್ಲ, ಎಕ್ಸೈಜ್ ಇರಲೇ ಬೇಕು, ಮೇಜರ್ ಇರಿಗೇಷನ್ ನಾನು ಅಲ್ಲದಿದ್ದರೆ ಇನ್ನಾರ ಹತ್ತಿರವೂ ನಿರ್ವಹಿಸುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು. ಒಟ್ಟಿನಲ್ಲಿ ಎಲ್ಲವೂ ಮುಖ್ಯವಾದುದು. ಎಕ್ಸೈಜ್ ಸಾಮಾನ್ಯ ಆಡಳಿತ, ಫೈನಾನ್ಸ್, ಮೇಜರ್ ಇರಿಗೇಶನ್ ಎಲ್ಲವನ್ನೂ ಒಬ್ಬರೇ ಇಟ್ಟುಕೊಂಡಿದ್ದಾರೆ. ಜೆ. ಹೆಚ್. ಪಟೇಲ್‌ರವರಿಗೆ ಎರಡು ಖಾತೆಗಳು ಭಾರ ಆದರೆ ಬೊಮ್ಮಾಯಿಯವರಿಗೆ ಮಾತ್ರ ಇಷ್ಟು ಪೋರ್ಟ್‌ಫೋಲಿಯೋ ? ಮುಖ್ಯಮಂತ್ರಿಯ ಪದವಿಯೊಂದಿಗೆ ಇವೆಲ್ಲ ತಲೆನೋವು ಬಹಳ ಹಗುರವಾಗಿ ಇರುತ್ತದೆಯೋ? ಮಂತ್ರಿ ಮಂಡಲ ಮಾಡಬೇಕಾದುದು ಅವರ ಕರ್ತವ್ಯ ಅವರಹಕ್ಕು ಕೂಡ ಆಗಿದೆ. ಆದರೆ ರಾಜ್ಯದ ಹಿತದ ಬಗ್ಗೆ ಗಮನ ಬೇಡವೆ ? ರಾಜ್ಯದ ಹಿತವನ್ನು ಅವರು ಕಾಪಾಡಬೇಕಾಗುತ್ತದೆ. ಆಡಳಿತವನ್ನು ಅವರು ಟೋನ್‌ಅಪ್ ಮಾಡುತ್ತದೆ. ಎನ್ನುವುದು ಯಾವುದನ್ನು ಕೂಡ ಲೆಕ್ಕ ಹಾಕಿಕೊಳ್ಳದೇನೆ ಈ ಒಂದು ಕೆಲಸವನ್ನು ಅವರು ಮಾಡಿದ್ದಾರೆ ಇವತ್ತು ಏನಾಗಿದೆ ಎಂದರೆ, ರಾಮಕೃಷ್ಣ ಹೆಗಡೆಯವರು ಏನೊಂದು ಕನ್‌ಫ್ಯೂಸ್ಡ್ ಪಿಕ್ಚರ್ ಬಿಟ್ಟು ಹೋದರು ಅದನ್ನು ಇವರು ತಿಳಿಗೊಳಿಸುತ್ತಾರೆಂದು ನಾವು ನಿರೀಕ್ಷೆ ಮಾಡಿದ್ದೆವು. you have said I am not Hegde's puppet I will take my own decision. ಆದರೆ ಇವರು ಅದನ್ನು ತಿಳಿಗೊಳಿಸಿಲ್ಲ. What he has done isthat hehas redered aconfusion ndmuch more confounded ಇದನ್ನು ಇನ್ನಷ್ಟ ಗೊಂದಲಕಾರಿಯಾಗಿ ಮಾಡಿದ್ದಾರೆ. ರಾಜಕೀಯವಾಗಿ ಯಾವುದೇ ಅಸ್ಥಿರತೆಯನ್ನು ಕೂಡ ಹೋಗಲಾಡಿಸಿಲ್ಲ. ಈಗ ಎರಡು ಪಕ್ಷಗಳು ಬೇರೆ ಬೇರೆ ಆಗಿವೆ, ಇವರು ಮೊದಲನೇ ಪ್ಯಾರದಲ್ಲಿ ಜನತಾದಳದ ಮುಖ್ಯಮಂತ್ರಿ ಎಂದು ತಮ್ಮ ಪರಾಕ್ರಮವನ್ನು ಹೇಳಿಕೊಂಡಿದ್ದಾರೆ, ರಾಷ್ಟ್ರೀಯ ಮಟ್ಟದಲ್ಲಿ ಬದಲಿ ಪಕ್ಷವೆಂದು ಉದಯವಾಗಿದೆ. ಎಂದು ಹೇಳಿಕೊಂಡಿದ್ದಾರೆ, ಇದು ಇವರ ಮಟ್ಟಿನ ತೃಪ್ತಿಗೆ ಇರಬಹುದು. ಆದರೆ ನಾಲ್ಕು ಪಕ್ಷಗಳು ಹೋಗಿಬಿಟ್ಟು ನಾಲ್ಕಲ್ಲ, ಎರಡಲ್ಲ, ಒಂದೂವರೆ ಪಕ್ಷಗಳು ಒಟ್ಟಿಗೆ ಆದರೂ ರಾಷ್ಟ್ರೀಯ ಪರ್ಯಾಯವನ್ನು ನಾವು ನಿರ್ಮಾಣ ಮಾಡಿದ್ದೇವೆಂದು ಇವರು

ತಿಳಿದುಕೊಂಡರೆ ಅದಕ್ಕೆ ನಾನು ಏನೂ ಮಾಡುವುದಕ್ಕೆ ಆಗುವುದಿಲ್ಲ. ಹೀಗೆ ರಾಜ್ಯದಲ್ಲಿ ಇನ್ನೊಂದು ಅನಿಶ್ಚಿತತೆಯನ್ನು ಇವರು ಉಂಟುಮಾಡಿದರು. ಇವತ್ತು ಅವರು I know Deve Gowda and he knows me. There is perfect understanding. ಎಂದು ಹೇಳಿದರು ಈಗಲೂ ಇದೆಯೋ ಇಲ್ಲವೋ ಎಂಬುದು ನನಗೆ ಗೊತ್ತಾಗುವುದಿಲ್ಲ. ಕೆಲವರು ಇದರಲ್ಲಿ ಏನೋ ಇದೆ ಎಂದು ಹೇಳುತ್ತಾರೆ ಇನ್ನು ಕೆಲವರು ಇವನ್ನೆಲ್ಲಾ ನೀವು ನಂಬಬೇಡಿ ಇಬ್ಬರೂ ಒಟ್ಟಾಗಿಯೇ ಇದ್ದಾರೆ ಎಂದು ಹೇಳುತ್ತಾರೆ. ಈ ವಿಚಾರದಲ್ಲಿ ಕೆಲವರು ಭಾಷಣವನ್ನು ಬಹಳ ಉಗ್ರವಾಗಿ ಮಾಡುತ್ತಾರೆ, ಕೆಲವರು ಮಾಡುವುದಿಲ್ಲ. ಮೊನ್ನೆಯ ದಿವಸ ಮಾನ್ಯ ವೈ. ಕೆ. ರಾಮಯ್ಯನವರು ಏನು ಬೇಕಾದರೂ ಹೇಳಿಕೊಳ್ಳಲಿ, ಸರಕಾರ ಮಾತ್ರ ನಮ್ಮ ಜನತಾ ಪಕ್ಷದ್ದು ಎಂದು ಹೇಳಿದರು. ಅದರ ಬಗ್ಗೆ ಇವರು ಯಾರೂ ಕೂಡ ಅಲ್ಲ ಎಂದು ಹೇಳಲಿಲ್ಲ. ಇದರಿಂದ ಇವತ್ತು ಬಹಳ ಗೊಂದಲವಾಗಿದೆ. ಇವರ ನಾಟಕ ಏನು ? ಯಾರ ಪಾತ್ರ ಯಾವುದು ಎಂದು ಗೊತ್ತಾಗುತ್ತಾ ಇಲ್ಲ. ಈಗಲೂ ಮುಖ್ಯ ಮಂತ್ರಿ ಯಾರು ಎಂದು ತಿಳಿಯುತ್ತಾ ಇಲ್ಲ.

ಶ್ರೀ ರಾಜವರ್ಧನ್.—ಮಾನ್ಯ ಶ್ರೀನಿವಾಸ್‌ರವರಿಗೆ ಮಾನ್ಯ ಮುಖ್ಯ ಮಂತ್ರಿಯವರು ಉತ್ತರ ಹೇಳುತ್ತಾರೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇವರು ಹೇಳಿದ ಕೂಡಲೇ ಅದು ಆಗುವುದಿಲ್ಲ, ಇವರು ಎರಡು ತರಹದಲ್ಲಿ ಹೇಳುತ್ತಾ ಇದ್ದಾರೆ. ಇವತ್ತಿಗೂ ಕೂಡ ಈ ಸರಕಾರವು ಬೊಮ್ಮಾಯಿಯವರದ್ದೋ ? ರಾಮಕೃಷ್ಣ ಹೆಗಡೆಯವರದ್ದೋ ಎಂದು ತಿಳಿಯುತ್ತಾ ಇಲ್ಲ. ಈಗ ಸದನದಲ್ಲಿ ಡಿಫ್ಯಾಕ್ಟೋ ಮುಖ್ಯಮಂತ್ರಿಯಾಗಲಿ ಡಿಜ್ಯೂರ್ ಮುಖ್ಯ ಮಂತ್ರಿಯಾಗಲಿ ಇಲ್ಲ, ಡಿಫ್ಯಾಕ್ಟೋ ಚೀಫ್ ಮಿನಿಸ್ಟರಾದ ಹೆಗಡೆಯವರನ್ನೇನೋ ರಾಜ್ಯಸಭೆಗೆ ಕಳಿಸಿಬಿಡುತ್ತೇವೆ ಅಂತ ದೊಡ್ಡ ಊಹಾಪೋಹ ಎಲ್ಲ ಇತ್ತು. ಕೊನೆಗೆ ಅವರ ಸ್ಥಿತಿ ಇನ್ನೂ ಕಷ್ಟಗಾಣಬಹುದೆಂದು ಗಾಭರಿಯಾಗಿ ಇಲ್ಲಿಯೇ ಉಳಿಸಿಕೊಂಡುಬಿಟ್ಟಿದ್ದಾರೆ. ಈಗ ಅವರು ಬ್ಯಾಕ್‌ಸೀಟ್ ಡ್ರೈವರೋ ಅಥವಾ ಬೊಮ್ಮಾಯಿಯವರು ಫ್ರಂಟ್‌ಸೀಟ್ ಡ್ರೈವರೋ ಯಾರಿಗೂ ಗೊತ್ತಿಲ್ಲ. ಎಲ್ಲ ದೊಡ್ಡ ಗೊಂದಲವಾಗಿದೆ, ಇದೆಲ್ಲದರಿಂದ ರಾಜ್ಯದ ಅಭಿವೃದ್ಧಿ ಹದಗೆಟ್ಟುಹೋಗಿದೆ. ಅಧಿಕಾರಿಗಳು ಯಾವ ಕೆಲಸವನ್ನೂ ಮಾಡುತ್ತಿಲ್ಲ. ಅವರು ಕುದುರೆ ತರಹ ವಾಸನೆ ಹಿಡಿಯುವುದು ಜಾಸ್ತಿ ರಾಜ್ಯದಲ್ಲಿ ರಾಜಕೀಯ ಪರಿಸ್ಥಿತಿ ಚೆನ್ನಾಗಿಲ್ಲ ಎಂದು ಗೊತ್ತಾದೊಡನೆ ಎಲ್ಲ ಫೈಲುಗಳನ್ನೂ ಕಪಾಟಿನಲ್ಲಿಟ್ಟು ಯಾವ ಕೆಲಸವನ್ನೂ ಮಾಡದೆ ಸುಮ್ಮನೆ ಕೂತು ಬಿಡುತ್ತಾರೆ. ವಾತಾವರಣ ಡಲ್ ಆಯಿತೆಂದರೆ ಫೈಲ್ ಮುಂದಕ್ಕೆ ಚಲಿಸುವುದೇ ಇಲ್ಲ. ಬದಲಾಗಿ ಜುಟ್ಟು ಹಿಡಿಯುತ್ತಾರೆ. ಸರ್ಕಾರವೇ ಇಲ್ಲದ ಪರಿಸ್ಥಿತಿ ಈಗಾಗಲೇ ಉಂಟಾಗಿದೆ. ಇದಕ್ಕೆಲ್ಲ ವೈಯುಕ್ತಿಕವಾಗಿ ಬೊಮ್ಮಾಯಿಯವರೇ ಕಾರಣ ಎಂದು ನಾನು ಹೇಳುವುದಿಲ್ಲ. ಪಾಪ ಅವರು ಏನು ಮಾಡುತ್ತಾರೆ? ಅವರ ತಲೆ ಮೇಲೆ ಇದ್ದಕ್ಕಿದ್ದಂತೆ ಸರ್ಕಾರ ಬಂದು ಕುಳಿತಿತು. ಅವರೇನೂ ಮುಖ್ಯಮಂತ್ರಿಯಾಗುತ್ತೇನೆಂಬ ಕನಸು ಕಂಡಿರಲಿಲ್ಲ. ಯಾರೂ ಏನೂ ಮಾಡುವುದಕ್ಕಾಗುವುದಿಲ್ಲ. ಈಗ ಎಲ್ಲರೂ ಕೂಡಿ ನಾನೇ ಚೀಫ್‌ಮಿನಿಸ್ಟರ್ ಎಂದು ಜೈ ಹೇಳಿಬಿಟ್ಟರೆ ಏನು ಮಾಡುವುದಕ್ಕಾಗುತ್ತದೆ ? ಹೆಸರಿಗೆ ಮುಖ್ಯ ಮಂತ್ರಿ ಅಂತ ಆಗಬೇಕಾಗುತ್ತದೆ, ಪೋರ್ಟ್‌ಪೋಲಿಯೋ ಇಲ್ಲ. ಇದ್ದರೂ ಆ ಅಧಿಕಾರವನ್ನು ಚಲಾಯಿಸುವಂಥಾ ವಾತಾವರಣ ಇವತ್ತು ಇಲ್ಲ. ಜನತಾದಳ ಎಂದು ಇವರು ಹೇಳುತ್ತಾರೆ, ಜನತಾ ಪಕ್ಷ ಎಂದು ಅವರು ಹೇಳಿಕೊಳ್ಳುತ್ತಾರೆ—ಇರಬಹುದು ಆದರೆ ನಿಮ್ಮ ಕೈಗೆ ಹಾಗಂತ ಮಾಡಿಕೊಟ್ಟವರು ಯಾರು ? ನೀವು ನೀವೇ ಬೇಕಾದ ಹೆಸರಿಟ್ಟುಕೊಂಡು ನಾವು ೨೮ ಜನರಿದ್ದೇವೆ ಎಂದು ಒಂದು ಗುಂಪು ನಾವು ೧೧೧ ಜನರಿದ್ದೇವೆ, ನಮ್ಮದು ತಿರುಪತಿ ಗುರುತು ಎಂದು ಇನ್ನೊಂದು ಗುಂಪು ಹೇಳಿಕೊಂಡು ನಾವು ಮಾಡಿಕೊಳ್ಳೋದನ್ನೆಲ್ಲ ಜನ ಒಪ್ತಾರೆ ಒಂದು ಹೇಳಿದರೆ ಅದಕ್ಕೆ ಅರ್ಥವಿಲ್ಲ. ಆದ್ದರಿಂದ ನಾನು ಪ್ರಾಮಾಣಿಕವಾಗಿ ಕೇಳುತ್ತೇನೆ, ಮಾನ್ಯ ಬೊಮ್ಮಾಯಿಯವರು ಎಷ್ಟೇ ಸರ್ಕಸ್ ಮಾಡಿದರೂ ಈ ಗೊಂದಲದಿಂದ ಬಚಾವಾಗಲ್ಲ. ಇವತ್ತು ನೀವು ವೋಟ್ ಆನ್ ಅಕೌಂಟ್ ತೆಗೆದುಕೊಂಡರೂ ಮತ್ತೆ ಗೊಂದಲವೇ. ಅಧ್ಯಕ್ಷರೇ, ನೀವು ಅದೇನೋ ೯೦ ದಿವಸ ಅಸೆಂಬ್ಲಿ ನಡೆಸೋಣ, ಆಗ ಎಲ್ಲ ಪಿಎಸಿ, ಪಿಯುಸಿ, ಮತ್ತಿತರ ಕಮಿಟಿ ವರದಿಗಳನ್ನೆಲ್ಲಾ ಚರ್ಚೆ ಮಾಡೋಣ ಎಂದು ಕನಸು ಕಾಣುತ್ತಿದ್ದೀರಲ್ಲ ಅದರ ಬಗ್ಗೆ ನನಗಂತೂ ನಂಬಿಕೆ ಇಲ್ಲ. ಹೇಗೇ ನೋಡಿದರೂ ಇನ್ನು ಆರು ತಿಂಗಳಲ್ಲಿ ಗಂಟುಮೂಟೆ ಕಟ್ಟಿಕೊಂಡು ಹೋಗುವ ಸಂಭವವೇ ಜಾಸ್ತಿ ಹೆಗಡೆಯವರು ಚೀಫ್‌ಮಿನಿಸ್ಟರಾಗಿದ್ದಾಗ ನೇರವಾಗಿ ಅವರ ಮುಂದೆನೇ ಹೇಳಿದೆ ; ನಿಮ್ಮ ಸರ್ಕಾರ ಸತ್ತುಹೋಗಿದೆ. Your Government it dead. It is awaiting only a decent burial. ಹೋಗಲಿ ಬೊಮ್ಮಾಯಿಯವರು ಹೊಸ ಸರ್ಕಾರ ಮಾಡಲಿಲ್ಲ. ಸತ್ತ ಹೆಣವನ್ನೇ ಇಟ್ಟುಕೊಂಡು ಕೂತಿದ್ದಾರೆ. ಸಂಸ್ಕಾರ ಮಾಡದಿದ್ದರೆ

ಯಾವರೀತಿ ವಾಸನೆ ಬರುವುದೋ ಹಾಗೆ ಈಗ ವಾಸನೆ ಅಮರಿಕೊಂಡಿದೆ. It needs a burial I demand with all emphasis at my command the only honest constitutional way that is left for Mr. Bommai is not to engage in horse-trading or anything, but establish his majority on the floor here. ಕ್ಲಿಯರಾಗಿ ಎಲ್ಲರನ್ನೂ ಎಬ್ಬಿಸಿ ನಿಲ್ಲಿಸಿ ನಿಮ್ಮ ಮೆಜಾರಿಟಿ ತೋರಿಸಿ. The honest way left to him is to dissolve and go in for fresh mandate of the people and face the consequences. This thing I demand from Mr. Bommai provided he is honest to the people of Karnataka, ಅದಿಲ್ಲದೆ ಏನೋ ಕುರ್ಚಿ ಸಿಕ್ಕಿದೆ, ಇದ್ದಷ್ಟು ದಿವಸ ಹೇಗೆ ಮಾಡಿಕೊಂಡು ಹೋಗುವುದು ಎಂದು ಹೋದರೆ ಪ್ರಯೋಜನವಿಲ್ಲ. ಬೊಮ್ಮಾಯಿಯವರು ಬಾಲಬ್ರೂಯಿಗೆ ಮೊದಲಿದ್ದ ಮರದ ಬೋರ್ಡ್ ತೆಗೆಸಿ ಕಲ್ಲಿನ ಬೋರ್ಡ್ ಹಾಕಿಸಿದ್ದಾರೆ, ಆದರಿಂದ ಧೈರ್ಯವಾಗಿರಬಹುದು ಎಂದು ಅಂದುಕೊಂಡಿರಬಹುದು ಆದರೆ ಭೂಕಂಪ ಆದರೆ ಎಲ್ಲ ಹೋಗಬೇಕಾಗುತ್ತಿದೆ. ಇಂಥಾ ಗೊಂದಲದ ಪರಿಸ್ಥಿತಿಯಲ್ಲಿ ಸರ್ಕಾರಕ್ಕಾಗಲೀ, ಅದು ಮಂಡಿಸುವ ಬಜೆಟ್‌ಗಾಗಲಿ ಯಾವುದಕ್ಕೂ ಅರ್ಥವಿಲ್ಲ. ಇದರ ಬಗ್ಗೆ ಯೋಜನೆ ಮಾಡಬೇಕೇ ಹೊರತು ಎಷ್ಟು ದಿವಸ ಹೆಣ ಇಟ್ಟುಕೊಂಡು ಕುಳಿತಿದ್ದರೂ ಅದಕ್ಕೆ ಜೀವ ಬರೊಲ್ಲ ಎಂಬ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ (ರೋಣ).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿರತಕ್ಕಂತಹ ಆಯವ್ಯಯ ಪತ್ರವನ್ನು ಸ್ವಾಗತಿಸುತ್ತಾ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಪ್ರಾರಂಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಹಾಗೂ ರಾಜ್ಯ ಸರಕಾರಗಳ ಸಂಬಂಧವನ್ನು ಸೂಕ್ಷ್ಮವಾಗಿ ಹೇಳುತ್ತಾ ಕೇಂದ್ರಸರ್ಕಾರ ಹಣಕಾಸಿನ ನೆರವನ್ನು ಸಾಕಷ್ಟು ಕೊಡುತ್ತಿಲ್ಲ ಎನ್ನುವುದನ್ನು ಪ್ರತಿಪಾದಿಸಿದ್ದಾರೆ. ಆರ್ಥಿಕ ಸ್ವಾಯತ್ತತೆ ಬೇಕು ಎನ್ನುವಂತಹ ಪ್ರತಿಪಾದನೆಯನ್ನೂ ಅವರು ಮಾಡಿದ್ದಾರೆ. ಅವರ ಈ ಪ್ರತಿಪಾದನೆಯಲ್ಲಿನ ಶಕ್ತಿ ಎಷ್ಟರ ಮಟ್ಟಿಗೆ ಕೇಂದ್ರವನ್ನು ತಾಗುತ್ತದೆ ಎನ್ನುವುದು ಬಹಳ ಮುಖ್ಯವಾದುದು. ಅಷ್ಟೇ ಅಲ್ಲ ಇದಕ್ಕೆ ಯಾವುದೇ ರೀತಿಯ ರಾಜಕೀಯ ಅಂಟನ್ನು ಹಚ್ಚಿಕೊಳ್ಳದೆ ಪ್ರತಿ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಈ ರಾಜ್ಯಗಳಿಗೆ ಆರ್ಥಿಕ ಸ್ವಾಯತ್ತತೆ ಬೇಕು ಎನ್ನುವ ಮಂಡನೆಯನ್ನು ಇಟ್ಟಿದ್ದಾರೆ ಕೇಂದ್ರ ಹಾಗೂ ರಾಜ್ಯ ಸರಕಾರಗಳೆರಡೂ ಕೂಡ ಆರ್ಥಿಕ ಶಿಸ್ತನ್ನು ಕಾಯ್ದುಕೊಂಡು ಬಂದರೆ ಹಣದುಬ್ಬರವಾಗುವುದಿಲ್ಲ. ವಿಶೇಷತಃ ಆರ್ಥಿಕ ಶಿಸ್ತು ಕೇಂದ್ರ ಹಾಗೂ ರಾಜ್ಯ ಸರಕಾರಗಳೆರಡಕ್ಕೂ ಕೂಡ ಸಂಬಂಧಪಟ್ಟಿದೆ ಹಣದುಬ್ಬರದಿಂದ ಯಾವುದೇ ಅಭಿವೃದ್ಧಿ ಕಾರ್ಯಗಳು ಸರಿಯಾಗಿ ಆಗುವುದಿಲ್ಲ, ಕೃಷಿ ಸೇವೆಯಲ್ಲಿ ಕ್ಲಂಪ್ ಯೋಜನೆಯನ್ನು ಜಾರಿಗೆ ತರುವುದಾಗಿ ಹೇಳಿದ್ದಾರೆ. ಇದರಲ್ಲಿ ಉತ್ತಮ ಹೈನು ನಿರ್ವಹಣೆ ಮತ್ತು ಗ್ರಾಮೀಣ ವಿದ್ಯುಚ್ಛಕ್ತಿ ಹಾಗೂ ನೀರಿನ ಸಮಸ್ಯೆ ಬಗ್ಗೆ ಮತ್ತು ಸಮಗ್ರ ಭೂ ಬಳಕೆ ನಿರ್ವಹಣಾ ಯೋಜನೆ ಕೂಡ ಇದೆ. ಈ ಕ್ಲಂಪ್ ಯೋಜನೆ ನಮ್ಮ ಸಮಾಜಕ್ಕೆ ಎಷ್ಟರಮಟ್ಟಿಗೆ ಒಗ್ಗುತ್ತದೆ ಎನ್ನುವುದನ್ನು ವಿಚಾರ ಮಾಡಬೇಕು. ಧಾರವಾಡದ ರೋಣ ತಾಲ್ಲೂಕಿನ ಅಬ್ಬಿಗೆರೆಯನ್ನು ಈ ಯೋಜನೆಗೆ ಆರಿಸಿದ್ದಾರೆ. ಪೂರ್ವಭಾವಿಯಾಗಿ ಪ್ರತಿಯೊಂದು ಹಳ್ಳಿಯಲ್ಲಿ ಸರ್ವೆ ಮಾಡಿದ್ದಾರೆ. ಸರ್ವೆ ಮಾಡಲಿಕ್ಕೆ ಯಾವ ಅಧಿಕಾರಿ ಬಂದಿದ್ದಾನೆ ಆತನಿಗೆ ಈ ಕ್ಲಂಪ್ ಯೋಜನೆ ಬಗ್ಗೆ ಸರಿಯಾದಂತಹ ತಿಳುವಳಿಕೆ ಇಲ್ಲ, ಮಾಹಿತಿ ಇಲ್ಲ ಇದರ ಬಗ್ಗೆ ಬಿಡಿಸಿ ಹೇಳಲಿಕ್ಕೆ ಆತ ಅಸಮರ್ಥನಿದ್ದಾನೆ. ಸಾಮಾನ್ಯ ಜನರಲ್ಲಿ. ಸರಕಾರದವರು ನಮಗೆ ಹಣ ಕೊಡುತ್ತಾರೆ ಅದನ್ನು ಹಂಚಿಕೊಂಡು ಆರಾಮವಾಗಿ ಇರೋಣ ಎನ್ನುವ ಭಾವನೆ ಇದೆ. ಸಂಬಂಧಪಟ್ಟ ಅಧಿಕಾರಿಗೆ ಈ ಬಗ್ಗೆ ಸರಿಯಾದಂತಹ ತಿಳುವಳಿಕೆಯನ್ನು ಕೊಡಬೇಕು. ಆಗ ಆತನು ಜನರಿಗೆ ಪೂರ್ಣವಾದಂತಹ ಮಾಹಿತಿಯನ್ನು ನೀಡಲು ಸಮರ್ಥನಾಗುತ್ತಾನೆ. ಕ್ಲಂಪ್ ಯೋಜನೆಯಿಂದಾಗುವ ಖರ್ಚು ರೈತರ ಮೇಲೆ ಬೀಳುತ್ತದೆಯೋ ಅಥವಾ ಗ್ರಾಮದ ಮೇಲೆ ಬೀಳುತ್ತದೆಯೋ ಎಂಬ ಬಗ್ಗೆ ಸ್ಪಷ್ಟವಾದಂತಹ ಚಿತ್ರ ಇಲ್ಲ. ಇದರ ಬಗ್ಗೆ ಸಾಕಷ್ಟು ಜನರಿಗೆ ತಿಳುವಳಿಕೆಯನ್ನು ಕೊಟ್ಟು ನಂತರ ಇದನ್ನು ಕಾರ್ಯಗತ ಮಾಡಬೇಕು. ಅತಿವೃಷ್ಟಿ ಮತ್ತು ಅನಾವೃಷ್ಟಿಯೊಳಗೆ ಕೇಂದ್ರ ಸರ್ಕಾರ ಹಣವನ್ನು ಬಿಡುಗಡೆ ಮಾಡಬೇಕಾದರೆ ಯೋಜಿತ ಹಣದಲ್ಲಿ ಮುಂಗಡವಾಗಿ ಕೊಡುವುದರಿಂದ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಳ್ಳುತ್ತವೆನ್ನುವುದನ್ನು ನಾವು ಮನಗಾಣಬೇಕು. ಐ. ಆರ್. ಡಿ. ಪಿ. ನಲ್ಲಿ ಬಹಳ ಮೋಸ ನಡೆಯುತ್ತಿದೆ. ಇದು ನಿಜವಾಗಿ ಎಲ್ಲರೂ ಒಪ್ಪತಕ್ಕ ವಿಚಾರವಾಗಿದೆ. ಈ ಯೋಜನೆಯ ಬಳಕೆ ಸರಿಯಾಗಿ ಆಗುತ್ತಿಲ್ಲ. ಬಡವನಿಗೆ ಈ ಯೋಜನೆಯ ಫಲ ದಕ್ಕುತ್ತಿಲ್ಲ. ಎಮ್ಮೆಗಳನ್ನು ಅಂದೇ ಸಂತೆಯಲ್ಲಿ ತೆಗೆದುಕೊಂಡು ಹೋಗಿ ಮಾರಾಟ ಮಾಡಿದಂತಹ ಉದಾಹರಣೆಗಳು ನೂರಕ್ಕೆ ೯೦ ಉಂಟು. ಆದ್ದರಿಂದ ಈ ಯೋಜನೆ

ಯನ್ನು ಆದಷ್ಟು ಕಡಿಮೆ ಮಾಡಿ, ಸ್ವಯಂ ಉದ್ಯೋಗ ಭರವಸೆ ಯೋಜನೆಗೆ ಹಣವನ್ನು ಹೆಚ್ಚು ಇಟ್ಟು ಆ ಮೂಲಕ ಯುವಕರು ತಮ್ಮ ಕಾಲ ಮೇಲೆ ತಾವು ನಿಂತುಕೊಳ್ಳಲಿಕ್ಕೆ ಸಹಾಯ ಮಾಡಿ. ಅವನು ತನ್ನ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳುವುದಕ್ಕೆ ಸಹಕಾರವನ್ನು ಕೊಡಬೇಕು. ಪಶು ಸಂಗೋಪನೆ ಮತ್ತು ಡೈರಿ ಯೋಜನೆಯನ್ನು ಕೂಡ ಹೆಚ್ಚು ಬಲಪಡಿಸಬೇಕು. ಬಡವರ ಕಣ್ಣೀರನ್ನು ಒರೆಸುತ್ತೇವೆಂದು ಎಲ್ಲಾ ಪಕ್ಷಗಳವರೂ ಕೂಡ ಹೇಳುತ್ತಾರೆ. ಬಡವನ ಕಣ್ಣೀರಿನ ಸೆಲೆ ನಿಂತು ಹೋಗಲಿಕ್ಕೆ, ಅದನ್ನು ನಿಲ್ಲಿಸುವಂತಹ ಕಾರ್ಯಕ್ರಮವನ್ನು ನಾವು ಮೊದಲು ಹಾಕಿಕೊಳ್ಳಬೇಕು.

೨–೦೦ ಪಿ. ಎಂ.

ಈ ಆಯವ್ಯಯದ ಹಣವನ್ನು ಖರ್ಚು ಮಾಡುವುದು ಹೇಗೆ ಎಂದರೆ ಯಾವಾಗ ಮಾರ್ಚ್ ತಿಂಗಳು ಬರುತ್ತದೆಯೋ ಎಂದು ಕಾಯ್ದುಕೊಂಡು ದೆವ್ವ ಬಂದ ರೀತಿಯಲ್ಲಿ ಅಧಿಕಾರಿಗಳು ಖರ್ಚು ಮಾಡುತ್ತಾರೆ. ಅಲ್ಲಿಯವರೆಗೆ ಕೈಕಟ್ಟಿಕೊಂಡು ಕುಳಿತುಕೊಳ್ಳುತ್ತಾರೆ. ಮಾರ್ಚ್ ಯಾವಾಗ ಬರುತ್ತದೆ ಎಂದು ನೋಡಿಕೊಂಡು ಯಾವ ರೀತಿ ಖರ್ಚು ಮಾಡಬೇಕೆಂದು ಪ್ರತಿಯೊಂದು ಇಲಾಖೆಯಲ್ಲೂ ಕೂಡಾ ಬಡಬಡಿಸಿ ಮಾಡುತ್ತಾರೆ. ಇದರಿಂದ ಏನಾಗುತ್ತದೆ ಎಂದರೆ ಅವರಲ್ಲಿ ಹಣವನ್ನು ಖರ್ಚು ಮಾಡಬೇಕು ಎನ್ನುವುದು ಒಂದೇ ತಿಳುವಳಿಕೆ ಬರುತ್ತದೆಯೇ ಹೊರತಾಗಿ ಅದನ್ನು ಯಾವ ರೀತಿಯಾಗಿ ಖರ್ಚು ಮಾಡಬೇಕು ಎನ್ನುವುದನ್ನು ಅವರು ತಿಳಿದುಕೊಂಡಿರುವುದಿಲ್ಲ. ಇಲ್ಲಿಯವರೆಗೂ ಅವರು ಐಡಲ್ ಆಗಿ ಕುಳಿತಿರುತ್ತಾರೆ. ಇಲ್ಲಿಯವರೆಗೂ ಅವರುಗಳು ಸೋಮಾರಿಗಳಾಗಿದ್ದರು ಎನ್ನುವುದನ್ನು ಕೂಡಾ ತಿಳಿದುಕೊಳ್ಳಬೇಕಾಗುತ್ತದೆ. ಪ್ರತಿಯೊಂದು ಇಲಾಖೆಯಲ್ಲೂ ಕೂಡಾ ಹಣ ಲ್ಯಾಪ್ಸ್ ಆಗುತ್ತದೆ. ನೀರಾವರಿ ತೆಗೆದುಕೊಳ್ಳಿ, ಇಲ್ಲೂ ಕೂಡಾ ಹಣ ಲ್ಯಾಪ್ಸ್ ಆಗುತ್ತದೆ. ಈ ರೀತಿ ಹಣವನ್ನು ಯಾರು ಲ್ಯಾಪ್ಸ್ ಮಾಡಿದ್ದಾರೆ, ಪ್ರತಿಯೊಂದು ಇಲಾಖೆಯಲ್ಲಿ ಎಷ್ಟೆಷ್ಟು ಹಣವನ್ನು ಬಳಕೆ ಮಾಡಿಲ್ಲ ಎನ್ನುವ ಮಾಹಿತಿಯನ್ನು ಕೂಡಾ ಮಾನ್ಯ ಅಧ್ಯಕ್ಷರೇ ನಮಗೆ ಒದಗಿಸಿದ್ದಾರೆ. ಪ್ರತಿಯೊಬ್ಬ ಶಾಸಕರಿಗೂ ಕೂಡಾ ಈ ಮಾಹಿತಿಯನ್ನು ಮಾನ್ಯ ಅಧ್ಯಕ್ಷರು ಒದಗಿಸಿದ್ದಾರೆ. ಈ ಹಣ ಪರಿಪೂರ್ಣವಾಗಿ ಬಳಕೆಯಾಗಿಲ್ಲ ಎನ್ನುವುದನ್ನು ಕೂಡಾ ನಾವು ನೋಡಬೇಕಾಗಿದೆ. ಇಲಾಖೆಗಳಲ್ಲಿ ಹಣ ಏತಕ್ಕೆ ಬಳಕೆಯಾಗಿಲ್ಲ. ಏತಕ್ಕಾಗಿ ಹಣ ಪೂರ್ಣವಾಗಿ ಖರ್ಚಾಗಿಲ್ಲ ಎನ್ನುವುದನ್ನೂ ಕೂಡಾ ಸರ್ಕಾರ ಹೇಳಬೇಕಾಗುತ್ತದೆ. ಸಾಮಾನ್ಯವಾಗಿ ಎಲ್ಲಾ ಇಲಾಖೆಗಳಲ್ಲೂ ಕೂಡಾ ಅವುಗಳಿಗೆ ಒದಗಿಸಿರತಕ್ಕ ಹಣದ ಪೂರ್ಣ ಬಳಕೆಯಾಗಿಲ್ಲ. ಇನ್ನು ಮಹಿಳೆಯರಿಗೆ ಉದ್ಯೋಗದಲ್ಲಿ ಹೆಚ್ಚಿನ ಮೀಸಲಾತಿಯನ್ನು ಇಟ್ಟುಕೊಂಡಿದ್ದೀರಿ. ಇದೂ ಕೂಡಾ ಸ್ವಾಗತಾರ್ಹವಾದುದು. ಪಂಚಾಯತ್ ರಾಜ್ ಮತ್ತು ಮಂಡಲ್ ಪಂಚಾಯಿತಿಗಳು ಆಗಿರುವುದೇನೋ ಒಳ್ಳೆಯದು. ಆದರೆ ಇಲ್ಲಿ ಏನು ತೊಂದರೆಯಾಗಿದೆಯೆಂದರೆ, ಹಿಂದೆಯೂ ಪಂಚಾಯಿತಿಗಳು ಇದ್ದವು, ಅದಕ್ಕೂ ಹೆಚ್ಚಿನ ಒಂದು ಅಧಿಕಾರ ಗ್ರಾಮ ಸಭೆಗಳಿಗೆ ಇದೆ. ಗ್ರಾಮ ಸಭೆಗಳಿಗೆ ಹೆಚ್ಚಿನ ಅಧಿಕಾರ ಇದೆ ಎನ್ನುವ ತಿಳುವಳಿಕೆ ಕೂಡಾ ಗ್ರಾಮ ಸಭೆಗಳಿಗೆ ಬಂದಿಲ್ಲ. ಒಂದು ವೇಳೆ ಆ ತಿಳುವಳಿಕೆಯನ್ನು ಮೂಡಿಸಿದರೆ ಮಂಡಲ ಪಂಚಾಯಿತಿಯ ರೀತಿ ಆಗುತ್ತದೆ. ಮಂಡಲ ಮಟ್ಟದಲ್ಲಿ ನನ್ನ ಒಂದು ತಿಳಿವಳಿಕೆ ಪ್ರಕಾರ ಹೇಳುವುದಾದರೆ, ರಾಜಕೀಯ ಪಕ್ಷಗಳ ತಳುಕನ್ನು ಮಂಡಲ ಪಂಚಾಯಿತಿಯಲ್ಲಿ ದಯವಿಟ್ಟು ತರಬಾರದು ಎಂದು ಹೇಳುತ್ತೇನೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಮಂಡಲಗಳಲ್ಲಿ ಅಭಿವೃದ್ಧಿಗಿಂತ ಹೆಚ್ಚು ರಾಜಕೀಯ ಪ್ರವೇಶ ಆಗುತ್ತಿದೆ. ಅಭಿವೃದ್ಧಿ ಕಾರ್ಯಗಳ ಬಗ್ಗೆ ಚರ್ಚೆ ಆಗುವುದಿಲ್ಲ, ಪ್ರತಿಯೊಂದು ಪಕ್ಷಕ್ಕೆ ಅಂಟಿಕೊಂಡು ಇವರು ನಮ್ಮವರು, ಅವರು ನಮ್ಮವರು ಎಂದು ಒಂದು ರೀತಿಯ ಕಚ್ಚಾಟಗಳ ಕೇಂದ್ರವಾಗಿದೆ. ಮಂಡಲದ ಮಟ್ಟದಲ್ಲಿ ರಾಜಕೀಯ ರಹಿತವಾಗಿ ಮತ್ತು ಅಲ್ಲಿ ಯಾವುದೇ ರಾಜಕೀಯವನ್ನು ಅಂಟಿಸಿಕೊಳ್ಳದ ಹಾಗೆ ಇರಬೇಕು. ಆ ರೀತಿಯಲ್ಲಿ ಮಂಡಲ ಪಂಚಾಯಿತಿಗಳು ಇರಬೇಕು ಎಂದು ಸೂಚನೆಯನ್ನು ಮಾಡುತ್ತೇನೆ. ಇನ್ನು ಕಲಾವಿದರಿಗೆ ಮಾಸಾಶನವನ್ನು ಕೊಡುವ ಬಗ್ಗೆ ಹೇಳುವುದಾದರೆ, ಮೊದಲಿನಿಂದಲೂ ಮಾಸಾಶನವನ್ನು ಕೊಡುತ್ತಲೇ ಬಂದಿದ್ದಾರೆ. ಈಗ ಮಾಸಾಶನ ಕೊಡುವುದು ಪೂರ್ತಿಯಾಗಿ ನಿಂತುಹೋಗಿದೆ, ಅದನ್ನು ಕೊಡುತ್ತಿಲ್ಲ. ಮೂರು ವರ್ಷಗಳಿಂದಲೂ ಕಲಾವಿದರಿಗೆ ಮಾಸಾಶನ ಬಂದಿಲ್ಲ. ಇದಕ್ಕೆ ಪರ್ಯಾಯವಾಗಿ ಯಾವ ಯೋಜನೆಗಳನ್ನೂ ಕೂಡಾ ಮಾಡಿಲ್ಲ. ಪೂರ್ವಾಪರ ಯಾವ ರೀತಿ ಯಶಸ್ವಿಯಾಗುತ್ತೇನೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಆ ಯೋಜನೆಗಳನ್ನು ತಯಾರು ಮಾಡಬೇಕೇ ಹೊರತಾಗಿ ಕೇವಲ ಜನಪ್ರಿಯತೆಗೋಸ್ಕರ ಯೋಜನೆಗಳು ಎಂದು ಹೇಳಿದರೆ ಆಗುವುದಿಲ್ಲ. ಇನ್ನೊಂದು ವಿಷಯವನ್ನು ಇಲ್ಲಿ ಪ್ರಸ್ತಾಪಿಸುವುದಾದರೆ, ಇಪ್ಪತ್ತು ಸಾವಿರ ಜನಸಂಖ್ಯೆಯಿರುವ ನಗರಗಳಲ್ಲಿ ಹಸಿರು ಕಾರ್ಡುಗಳನ್ನು ಕೊಡುತ್ತೇವೆ ಎಂದು ಹೇಳಿದರು. ಹೋದ ಸಲ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಈ ಪ್ರಸ್ತಾವನೆ ಬಂದಿತ್ತು. ಹಸಿರು ಕಾರ್ಡ್‌ಗಳನ್ನು ಪಟ್ಟಣ ಪ್ರದೇಶಗಳಲ್ಲಿ ಇದುವರೆಗೂ

ಒದಗಿಸಿಲ್ಲ. ಕೇಂದ್ರ ಸರ್ಕಾರದವರು ಕಾಳುಗಳನ್ನು ನಮಗೆ ಸರಿಯಾಗಿ ಕೊಡುತ್ತಿಲ್ಲ ಎನ್ನುವುದು ತಿಳಿದು ಬಂದಿದೆ. ಯಾರೇ ಇರಲಿ, ಯೋಜಿತ ವ್ಯವಸ್ಥೆಗಳು ಏನು ಇದ್ದಾವೆ, ಅವುಗಳು ಆಗಬೇಕೆಂದು ಹೇಳುತ್ತೇನೆ. ಇನ್ನು ತಾಳಿ ಭಾಗ್ಯ ಯೋಜನೆಯನ್ನು ತೆಗೆದು ಹಾಕಿದ್ದೀರಿ, ಅದಕ್ಕೆ ಪರ್ಯಾಯವಾಗಿ ಯಾವುದನ್ನು ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಪ್ರಸ್ತಾಪ ಇಲ್ಲ. ಮೊನ್ನೆ ನಾವು ಅನೇಕ ಕಡೆ ಹೋದಾಗ ಈ ತಾಳಿಭಾಗ್ಯ ಯೋಜನೆಯೇ ಇರಲಿ ಎಂದು ಜನರು ತಮ್ಮ ಅಭಿಪ್ರಾಯ ಗಳನ್ನು ಅನೇಕ ಹಳ್ಳಿಗಳಲ್ಲಿ ವ್ಯಕ್ತಪಡಿಸಿದ್ದು ಉಂಟು. ಆ ಯೋಜನೆಯ ಬದಲಿಗೆ ಯಾವ ಪರ್ಯಾಯ ಯೋಜನೆಯನ್ನು ತೆಗೆದುಕೊಂಡಿದ್ದೀರಿ ಎನ್ನುವುದನ್ನು ತಾವು ಹೇಳಬೇಕು. ಮತ್ತು ಈ ಹೈನು ಉದ್ಯಮವನ್ನು ಬಲಪಡಿಸಬೇಕೆಂದು ನಾನು ಹೇಳುತ್ತೇನೆ. ಇಲ್ಲಿಯವರೆಗೆ ಯಾವ ಕೆಲಸಗಳೂ ಆಗಿಲ್ಲ ಎಂದು ನಮ್ಮ ಪ್ರತಿಪಕ್ಷದ ಸದಸ್ಯರು ಹೇಳುತ್ತಿದ್ದರು. ೧೯೮೩ನೇ ಇಸವಿಯಿಂದ ಇಲ್ಲಿಯವರೆಗೆ ಪ್ರತಿಯೊಂದು ಹಳ್ಳಿಗೂ ಒಂದು ಶಾಲೆ, ಕುಡಿಯುವ ನೀರಿನ ವ್ಯವಸ್ಥೆ, ಹಳ್ಳಿಯ ಹೆದ್ದಾರಿಗಳನ್ನು ನಾವು ಮಾಡಿದ್ದೇವೆ. ಈ ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ನಾವು ಮಾಡಿದ್ದರೂ ಯಾವ ಕೆಲಸವನ್ನೂ ಮಾಡಿಲ್ಲವೆಂದು ಹೇಳುವುದು, ಆರ್ಥಿಕವಾಗಿ ಸರ್ಕಾರ ದಿವಾಳಿಯಾಗಿದೆ ಎಂದು ಹೇಳುವುದು ಸರಿಯಲ್ಲ. ದಿವಾಳಿಯಾಗಿದ್ದರೆ ಇಷ್ಟೆಲ್ಲಾ ಅಭಿವೃದ್ಧಿ ಕೆಲಸಗಳು ಆಗುತ್ತಿತ್ತೇ ಎಂದು ತಮ್ಮ ಹೃದಯವನ್ನು ಮುಟ್ಟಿ ವಿಚಾರ ಮಾಡಿಕೊಳ್ಳಿ. ರಾಜಕೀಯವಾಗಿ ಯಾವುದೇ ಅಭಿವೃದ್ಧಿ ಕೆಲಸ ಆಗಿಲ್ಲ ಎಂದು ಮೇಲುನೋಟಕ್ಕೆ ಹೇಳಿಕೊಂಡಿದ್ದರೂ ಕೂಡ ಅಂತರಂಗದಲ್ಲಿ ಅವರು ಸಂತೋಷ ಪಟ್ಟಿದ್ದಾರೆ ಅದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಎನ್. ಎಸ್. ಖೇಡ್‌ರವರೇ. ತಾವು ೧೦ ನಿಮಿಷಗಳಲ್ಲಿ ಮುಗಿಸಿ. ಕಾಂಗ್ರೆಸ್ ನವರಿಗೆ ೫೦ ಮಿನಟ್ ಸಿಗುತ್ತಿತ್ತು, ಈಗ ೪೨ ಮಿನಟ್ ಆಗಿದೆ. ನಿಮಗೆ ೧೨೫ ಮಿನಟ್ ಇತ್ತು...

ಶ್ರೀ ಎನ್. ಎಸ್. ಖೇಡ್ (ಇಂಡಿ).—ನಾನು ಆ ಕಡೆ ಕುಳಿತಾಗ ನನಗೆ ಟೈಮ್ ಕೊಟ್ಟಿಲ್ಲ, ಈಗ ಈ ಕಡೆ ಕುಳಿತಿದ್ದೇನೆ ಟೈಮ್ ಕೊಡಿ. ಇದು ಹೊಸ ಸರ್ಕಾರ ಎಂದು ಸಂತೋಷದಿಂದ ಈ ಒಂದು ಬಜೆಟ್ ಅನ್ನು ಮಂಡನೆ ಮಾಡುತ್ತಿದ್ದೇವೆಂದು ಮಾನ್ಯ ನಾಯಕರು ಹೇಳಿದ್ದಾರೆ. ಅಷ್ಟೇ ಅಲ್ಲ, ಒಂದು ಹೊಸ ಕ್ರಾಂತಿಯನ್ನು ಮಾಡಿದ ವಿಚಾರವನ್ನೂ ಅವರು ಹೇಳಿದ್ದಾರೆ. ಅದು ಏನೆಂದರೆ, ಈ ದೇಶದಲ್ಲಿ ಜನತಾ ದಳ ಎನ್ನುವ ಒಂದು ಪರ್ಯಾಯ ಪಕ್ಷವನ್ನು ಕಟ್ಟಿ ಅದರ ಮುಖಾಂತರ ಒಂದು ಜನತಾ ಸರ್ಕಾರ ಜನತಾ ದಳವಾಗಿ ಕರ್ನಾಟಕ ರಾಜ್ಯದಲ್ಲಿ ಉದಯ ವಾಯಿತೆಂದು ಹೇಳಿದ್ದಾರೆ. ಅದರ ಬಗ್ಗೆ ಸಾಕಷ್ಟು ಹಿರಿಯ ಸದಸ್ಯರುಗಳು ಬೆಳಕನ್ನು ಚೆಲ್ಲಿದ್ದಾರೆ. ತಾವು ಕೂಡ ಅಭಿಮಾನಕ್ಕೋ ಅಥವಾ ಕರ್ನಾಟಕ ರಾಜ್ಯದ ಭವಿಷ್ಯಕ್ಕೋ ಏನೋ ತಾತ್ಪೂರ್ವಿಕವಾಗಿ ಮನ್ನಣೆ ಕೊಟ್ಟಿದ್ದೀರಿ.

ಅಧ್ಯಕ್ಷರು.—ನನಗೆ ಅಭಿಮಾನ ಇರುವುದು ೨೨೪ ಮಂದಿಯ ಬಗ್ಗೆ.

ಶ್ರೀ ಎನ್. ಎಸ್. ಖೇಡ್.– ಈ ವಿಷಯದಲ್ಲಿ ನಮ್ಮ ವಿರೋಧ ಪಕ್ಷದ ನಾಯಕರು ಕೂಡ ಒಂದು ಮೋಷನ್ ಮೂವ್ ಮಾಡಿದ್ದಾರೆ ತಾವು ಕೊಟ್ಟ ಒಂದು ನಿರ್ಣಯ ಮೇಲೆ ನಮಗೆ ಅಸಂತೋಷವಾಗಿದೆ, ಅದು ನ್ಯಾಯಬದ್ಧವಾದುದು ಅಲ್ಲ ಈ ಒಂದು ನಾಯಕತ್ವ ಮತ್ತು ೧೧೧ ಜನ ಶಾಸಕರು, ಈ ಮನೆಯಲ್ಲಿ ಪಾಸ್ ಆದ ಆಂಟಿ ಡಿಫೆಕ್ಷನ್ ಆಕ್ಟ್ ಪ್ರಕಾರ ಡಿಸ್‌ಕ್ವಾಲಿಫಿಕೇಶನ್‌ಗೆ ಅರ್ಹರು ಎಂದು ಎರಡು ತಿಂಗಳ ಹಿಂದೆ ನಾನು ಪಿಟಿಷನ್ ಕೊಟ್ಟಿದ್ದೇನೆ.

ಅಧ್ಯಕ್ಷರು.—ಆ ವಿಷಯ ಬಿಟ್ಟು ಬಜೆಟ್ ಮೇಲೆ ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬಜೆಟ್‌ನಲ್ಲಿ ಮೊದಲನೇ ಪುಟದಲ್ಲಿ ಮೊದಲನೇ ಪ್ಯಾರದಲ್ಲಿ ಶ್ರೀಮಾನ್ ಬೊಮ್ಮಾಯಿಯವರು ಅದನ್ನು ಮೆನ್‌ಷನ್ ಮಾಡಿದ್ದಾರೆ. ನ್ಯಾಷನಲ್ ಆಲ್ಟರ್‌ನೇಟೀವ್‌ಗೆ ಇವರು ಆಲ್ಟರ್‌ನೇಟೀವ್ ಆಗಿ ಉತ್ತರ ನೀಡಬೇಕಲ್ಲ.

ಅಧ್ಯಕ್ಷರು.– ನಿಮ್ಮ ಮಿತ್ರ ಸದಸ್ಯರು ಸೂಚನೆ ಹಾಗೂ ಸಲಹೆ ಕೊಟ್ಟಿದ್ದಾರೆ, ಹಾಗೆ ನೀವೂ ಕೊಡಿ.........

ಶ್ರೀ ಎಸ್. ಎಸ್. ಖೇಡ್.—ಇದನ್ನು ಹೇಳಿ ಬಿಟ್ಟು ಆ ಮೇಲೆ ಸಲಹೆ ಕೊಡುತ್ತೇನೆ. ಇದನ್ನು ಪ್ರಸ್ತಾಪ ಮಾಡಲು ಉದ್ದೇಶವಿರಲಿಲ್ಲ. ಆದರೆ ನಮ್ಮ ನಾಯಕರೇ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಕ್ಕೋಸ್ಕರ ಈ ಮನೆಗೆ ವಿಷಯವನ್ನು ತಿಳಿಸದೇ ಇದ್ದರೆ ತಪ್ಪಾಗುತ್ತದೆ ಎಂದು ಹೇಳುತ್ತಿದ್ದೇನೆ. ಈ ಬಗ್ಗೆ ಎರಡು ತಿಂಗಳ ಹಿಂದೆ ನಾನು ಪಿಟಿಷನ್ ಕೊಟ್ಟಾಗ ತಾವು ಇದನ್ನು ರಿಜೆಕ್ಟ್ ಮಾಡಿಲ್ಲ ನೋಟೀಸ್ ಕೊಡುತ್ತೇನೆ ಎಂದು ಹೇಳಿದಿರಿ.

ಅಧ್ಯಕ್ಷರು.—ಆ ಪಿಟಿಷನ್ ಬಗ್ಗೆ ಹೇಳಬೇಡಿ. ಅದು ನನ್ನ ಡಿಸ್ಕ್ರಿಷನ್, ನಿಮಗೆ ನೋಟೀಸ್ ಕೊಡಬಹುದು ಅಥವಾ ಅಥವಾ ರಿಜೆಕ್ಟ್ ಮಾಡಬಹುದು. ಇಲ್ಲಿ ಅದನ್ನು ಎತ್ತಬೇಡಿ. ನಾನು ರೂಲಿಂಗ್ ಕೊಟ್ಟಿದ್ದೇನೆ. ನನ್ನ ಛೇಂಬರಿನಲ್ಲಿ ಬಂದು ಹೇಳಿ. ಈಗ ಬಡ್ಜೆಟ್ ಮೇಲೆ ಮಾತನಾಡಿ.

† ಶ್ರೀ ಎಸ್. ಎಸ್. ಖೇಡ್.—ಮಾನ್ಯ ಅಧ್ಯಕ್ಷರೆ, ಈಗಾಗಲೇ ಅನೇಕ ಗೆಳೆಯ ಶಾಸಕರು ಹೇಳಿದ್ದಾರೆ. ತಾವು ಅತ್ಯುತ್ತಮ ಸ್ಥಾನದಲ್ಲಿದ್ದೀರಿ. ಈ ಮನೆಯಲ್ಲಿ ತಮ್ಮದು ಕೊನೆಯ ಜಡ್ಜ್‌ಮೆಂಟ್, ಸುಪ್ರೀಂಕೋರ್ಟಿನ ಜಡ್ಜ್‌ಮೆಂಟ್ ರೀತಿ. ಅದನ್ನು ಕೊಶ್ಚನ್ ಮಾಡಲಿಕ್ಕೆ ನಾನು ಹೇಳುತ್ತಾ ಇಲ್ಲ. ಆದರೆ ವಿಷಯ ಪ್ರಸ್ತಾಪಕ್ಕೆ ಬಂದಾಗ ಅದನ್ನು ಉದಹರಿಸದೇ ಹೋದರೆ ನಮ್ಮ ಕರ್ತವ್ಯಕ್ಕೆ ಚ್ಯುತಿ ಬರುತ್ತದೆ. ನಿರ್ಣಯ ಕೊಡುವುದು ಬಿಡುವುದು ತಮಗೆ ಬಿಟ್ಟ ವಿಷಯ. ಇವತ್ತಿನವರೆಗೂ ಅದರ ವಿಚಾರ ನಮಗೇನು ತಿಳಿದಿಲ್ಲ. ಆದುದರಿಂದ ಈ ಮನೆಗೆ ತಿಳಿಸಬೇಕಾಗಿ ಬಂದಿದೆ ತಿಳಿಸುತ್ತಾ ಇದ್ದೇವೆ. ಇಂತಹ ಪರಿಸ್ಥಿತಿಯಲ್ಲಿ ಹುಟ್ಟಿರತಕ್ಕಂಥ, ಬಾಲಗ್ರಹ ಪೀಡಿತವಾಗಿರತಕ್ಕಂಥ ಕೂಸು ಇವತ್ತು ಜನತಾದಳ ಎಂದು ಕರೆಸಿಕೊಂಡು ರಾಜ್ಯದಲ್ಲಿ ರಾಜ್ಯಭಾರ ಮಾಡುತ್ತಿದ್ದು, ಮುಖ್ಯ ಮಂತ್ರಿಗಳಾದಂಥ ಬೊಮ್ಮಾಯಿಯವರು ಬಡ್ಜೆಟ್ಟನ್ನು ಮಂಡನೆ ಮಾಡಿದ್ದಾರೆ. ಈ ಬಡ್ಜೆಟ್ ಬಗ್ಗೆ ಅನೇಕ ಸದಸ್ಯರು ಇಲ್ಲಿ ಬೆಳಕನ್ನು ಚೆಲ್ಲಿದ್ದಾರೆ. ಈ ರಾಜ್ಯದ ಬಡ ಜನತೆಗೋಸ್ಕರವಾಗಿ ಯಾವ ಒಂದು ಉತ್ಸಾಹದ ಕೊಡುಗೆಯೂ ಇದರಲ್ಲಿಲ್ಲ. ವಾರ್ತಾಪತ್ರಿಕೆಗಳು ಪ್ರತಿ ದಿವಸವೂ ಅವಾಕ್ ಜವಾಕ್ ಎಂದು ಲೆಕ್ಕಪತ್ರಗಳನ್ನು ಬರೆಯುತ್ತಾರೆ. ಆ ತರಹದ ಲೆಕ್ಕಾಚಾರದ ಬಡ್ಜೆಟ್ ಪ್ರತಿ ಇವತ್ತು ನಮ್ಮ ಮುಂದಿದೆ. ಈ ಬಡ್ಜೆಟ್‌ನಲ್ಲಿ ಕರ್ನಾಟಕದ ಜನತೆಗೆ ಹೊಸ ಕೊಡುಗೆ ಬಗ್ಗೆ ಚುನಾವಣೆ ಕಾಲದಲ್ಲಿ ನಾಯಕರು ಏನು ಹೇಳಿದ್ದಾರೆ, ಅದರಲ್ಲಿ ಯಾವ ಹುರುಳಿಲ್ಲ, ಅದರಲ್ಲಿ ಯಾವ ಸತ್ಯಾಂಶವೂ ಕಾಣುತ್ತಾ ಇಲ್ಲ. ಆದ್ದರಿಂದ ಈ ಒಂದು ಬಡ್ಜೆಟನ್ನು ವಿರೋಧಿಸುತ್ತಾ, ಅನೇಕ ಇಲಾಖೆಗಳ ಬಗ್ಗೆ ಅವರ ಮಂಡನೆ ಏನಿದೆ ಅದನ್ನು ವಿಶ್ಲೇಷಿಸುತ್ತಾ ಮಾನ್ಯ ಅಧ್ಯಕ್ಷರು ಕೊಟ್ಟಂಥ ಅವಧಿಯಲ್ಲಿ ಅವರು ಕೊಟ್ಟ ಆದೇಶದ ಪ್ರಕಾರ ಕೆಲವೇ ಮಾತುಗಳಲ್ಲಿ ನನ್ನ ಭಾಷಣವನ್ನು ಮುಗಿಸಬಯಸುತ್ತೇನೆ. ಇಂತಹ ಒಂದು ವ್ಯವಸ್ಥೆಯಲ್ಲಿ ನಾಯಕರೇ ಒಪ್ಪಿಕೊಂಡು ಬಡ್ಜೆಟ್‌ನಲ್ಲಿ ಹೇಳಿದ್ದಾರೆ. ''ಕಳೆದ ಕೆಲವು ವರ್ಷಗಳಲ್ಲಿ ನಾವು ಬಹು ಕಷ್ಟಕರವಾದ ಸಂಪನ್ಮೂಲ ಪರಿಸ್ಥಿತಿಯನ್ನು ಎದುರಿಸ ಬೇಕಾಯಿತು. ಈ ಪರಿಸ್ಥಿತಿಯನ್ನು ಉಂಟುಮಾಡಿದಂಥ ಕೆಲವು ಕಾರಣಗಳು ಮಾನ್ಯ ಸದಸ್ಯರಿಗೆ ತಿಳಿದೇ ಇದೆ'' ಎಂದು ಹೇಳಿದ್ದಾರೆ. ಇದು ಸದಸ್ಯರಿಗೆ ಎಷ್ಟರಮಟ್ಟಿಗೆ ಗೊತ್ತಿಲ್ಲ ? ನಮಗಿಂತ ನಾಯಕರಿಗೆ ಹೆಚ್ಚು ಗೊತ್ತಿದೆ. ತಮಗೂ ಹೆಚ್ಚು ಗೊತ್ತಿದೆ. ಮಾನ್ಯ ಅಧ್ಯಕ್ಷರೆ, ಈ ಪರಿಸ್ಥಿತಿಯಲ್ಲಿ ನಮ್ಮ ಸಂಪನ್ಮೂಲದ ಕೊರತೆ ಏನಿದೆ ಇದರ ವಿಚಾರದಲ್ಲಿ ಸದಸ್ಯರ ಮೇಲೆ ಜವಾಬ್ದಾರಿ ಹಾಕಿ ಮುಖ್ಯ ಮಂತ್ರಿಗಳು ನುಣಚಿಕೊಳ್ಳುವಂಥ ಮಾತನ್ನು ಹೇಳುತ್ತಾ ಇದ್ದಾರೆ. ನಾವು ಎಲ್ಲಿ ತಪ್ಪಿದ್ದೇವೆ. ಎಲ್ಲಿ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದಕ್ಕೆ ಆಗಿಲ್ಲ ಎನ್ನುವುದರ ಬಗ್ಗೆ ಸಾಕಷ್ಟು ವಿಚಾರವನ್ನು ಹಿರಿಯ ಸದಸ್ಯರು ನಿಮ್ಮ ನಜರಿಗೆ ತಂದಿದ್ದಾರೆ. ಈ ಒಂದು ವ್ಯವಸ್ಥೆ ಹೇಗಿದೆಯೆಂದರೆ, ನಮ್ಮ ಕಡೆ ಉತ್ತರ ಕರ್ನಾಟಕದಲ್ಲಿ ಹೇಳುತ್ತಾರೆ, ಹೆಣ್ಣುಮಗಳನ್ನು ಕಳಿಸುವಾಗ ಆಕಳನ್ನು ಬಳುವಳಿಯಾಗಿ ಕೊಡುತ್ತಾರೆ. ಆ ರೀತಿಯಾಗಿ ಮಾಜಿ ಮುಖ್ಯ ಮಂತ್ರಿಗಳು ಕೊಟ್ಟಂಥ ಬಳುವಳಿ, ಅದೇ ಕಾರ್ಯ ವೈಖರಿ, ಅದೇ ಮಂದಗತಿ, ಅದೇ ಚಾಣಾಕ್ಷತೆಯನ್ನು ಮೈಗೂಡಿಸಿಕೊಂಡು ಕೇವಲ ಅಂಕಿಅಂಶಗಳ ಪುಟಗಳನ್ನು ನಮ್ಮ ಮುಂದೆ ಇಟ್ಟು ಕರ್ನಾಟಕದ ಜನತೆಗೆ ಮೋಸ ಮಾಡುತ್ತಾ ಇದ್ದಾರೆ ಎಂದು ಹೇಳಬಹುದು. ಆದ್ದರಿಂದ ಇದು ಯಾವುದೇ ಪ್ರಗತಿಪರವಾದ ಬಡ್ಜೆಟ್ ಅಲ್ಲ. ಇದು ಕೇವಲ ಲೆಕ್ಕಾಚಾರ ಮಾಡತಕ್ಕಂಥ, ಇದ್ದದ್ದನ್ನು ನಡೆಸಿಕೊಂಡು ಹೋಗತಕ್ಕಂಥ ಮತ್ತು ಜನತೆಯ ಹಿತವನ್ನು ಕಡೆಗಣಿಸತಕ್ಕಂಥ ಬಡ್ಜೆಟ್ ಆದ್ದರಿಂದ ಇದನ್ನು ಶೀಘ್ರವಾಗಿ ನಾನು ವಿರೋಧಿಸುತ್ತೇನೆ. ಅನೇಕ ಮಿತ್ರರು ಎಚ್ಚರಿಕೆಯಾಗಿ ಹೇಳಿದ್ದಾರೆ. ತಾವು ಸರ್ಕಾರಕ್ಕೆ ಎಚ್ಚರಿಕೆ ಕೊಡಬೇಕು. ಈ ಕಾರ್ಯ ಕ್ರಮಗಳನ್ನು ಕಾರ್ಯಗತಗೊಳಿಸುವುದರಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಲಿಕ್ಕೆ ಸರ್ಕಾರಕ್ಕೆ ಆದೇಶ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕೊಡಬೇಕು ಎಂದು ಹೇಳಿದ್ದಾರೆ, ಸರ್ಕಾರದ ಕಾರ್ಯವೈಖರಿಯ ಬಗ್ಗೆ ಪದೇ ಪದೇ ಚಾಟಿ ಏಟಿನ ಮುಖಾಂತರ ಎಚ್ಚರಿಕೆ ಕೊಡಬೇಕು ಎಂದು ನಾನು ವಿನಂತಿಸಿಕೊಳ್ಳುತ್ತೇನೆ. ಅಧ್ಯಕ್ಷರೆ, ನಮ್ಮ ಅನೇಕ ಮಿತ್ರರು ಇದು ಕೃಷಿ ಪ್ರಧಾನವಾದ ದೇಶ ಎಂದು ಹೇಳಿದರು. ಇದು ಕೃಷಿ ಪ್ರಧಾನವಾದ ದೇಶ, ಕೃಷಿ ಪ್ರಧಾನವಾದ ರಾಜ್ಯ, ರೈತರ ನಾಡು. ಇದು ಗ್ರಾಮೀಣ ಪ್ರದೇಶವನ್ನು ಹೊಂದಿದಂಥ ನಾಡು. ನೂರಕ್ಕೆ ಎಂಭತ್ತು ಜನರು ಗ್ರಾಮೀಣ ಪ್ರದೇಶದಿಂದ ಬಂದಂತಹವರು ಇದ್ದಾರೆ. ಇವರುಗಳ ಬಗ್ಗೆ ಉಪಮೇಯ ಕೊಡುವಂಥಾದ್ದು, ಹೊಗಳಿಕೆಯಿಂದ ಕೂಡಿದಂಥ ಪುಸ್ತಕಗಳನ್ನು ಬರೆಯುವುದು, ನಡೆದಿದೆ. ಇವೊತ್ತಿನವರೆಗೂ ಅಧಿಕಾರ ಗದ್ದುಗೆಯಲ್ಲಿರತಕ್ಕಂಥ ಜನರು ಇವರಿಗೆ ಹೊಗಳಿಕೆಯನ್ನು ಕೊಡುತ್ತಾ ಬಂದಿದ್ದಾರೆಯೇ ಹೊರತು ನಾವು ಅವರಿಗೆ ಕೊಡಬೇಕಾದಂಥ ಕೊಡಗೆಯನ್ನು ಕಳೆದ ನಲವತ್ತು ವರ್ಷಗಳಿಂದ ಇವತ್ತಿನವರೆಗೂ ಕೊಡಲಿಕ್ಕೆ ಆಗಿಲ್ಲ. ಮುಂದೆ ಆಗುವಂಥ ಭವಿಷ್ಯದ ಬಗ್ಗೆ ಕೂಡ ಬಡ್ಜೆಟ್‌ನಲ್ಲಿ ಇಲ್ಲ. ಇವೊತ್ತು ಕೃಷಿ ಪ್ರಧಾನವಾದ ರಾಜ್ಯ ಎಂದು ಏನು ಹೇಳುತ್ತಿದ್ದೇವೆ, ಆ ಒಂದು ಮಂತ್ರಿಮಂಡಲದ ವೈಶಿಷ್ಟದ ಬಗ್ಗೆ ಹೇಳಬೇಕಾಗಿಲ್ಲ. ಅದು ತಮಗೆ ಗೊತ್ತಿದೆ. ಬಹುಶಃ ಕೃಷಿ ಪ್ರಧಾನ ರಾಜ್ಯಗಳಾದಂಥ ಪಂಜಾಬ್, ಹರಿಯಾನ, ಗುಜರಾತ್, ಮಹಾರಾಷ್ಟ್ರ ಮುಂತಾದ ಬಹುತೇಕ ರಾಜ್ಯಗಳಲ್ಲಿ ಮುಖ್ಯಮಂತ್ರಿಗಳು ಈ ಖಾತೆಯನ್ನು ತಮ್ಮ ಅಧೀನದಲ್ಲಿಟ್ಟುಕೊಂಡು, ಮುಖ್ಯಮಂತ್ರಿಗಳೇ ಉಸ್ತುವಾರಿ ವಹಿಸಿ ಜನತೆಯ ಆಶೋತ್ತರಗಳನ್ನು ಈಡೇರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಕಳೆದ ಆರು ವರ್ಷಗಳಿಂದ ನಡೆದುಕೊಂಡು ಬಂದಿರುವುದನ್ನು ನೋಡಿದರೆ ಆ ತರಹ ಏನೂ ಇಲ್ಲ. ನನ್ನ ಸ್ನೇಹಿತರೊಬ್ಬರು ಕೃಷಿ ಮಂತ್ರಿಯದಾಗ ನಾನು ಅವರಿಗೆ ತಾವು ಕೃಷಿ ಮಂತ್ರಿಯಾಗಿದ್ದೀರಿ ನನಗೆ ಬಹಳ ಸಂತೋಷ ಎಂದು ಹೇಳಿದ್ದಕ್ಕೆ ಅವರು, ಸಸಿ, ಗಿಡ, ಯಾವುದೂ ಗೊತ್ತಿಲ್ಲ ನನಗೆ ಕೃಷಿ ಮಂತ್ರಿ ಕೊಟ್ಟಿದ್ದಾರೆಂದು ಹೇಳಿದರು. ಈ ಆರು ವರ್ಷಗಳಲ್ಲಿ ಕೃಷಿಯ ಪರಿಸ್ಥಿತಿ ಈ ರೀತಿ ಇದೆ. ಅದರ ಬಗ್ಗೆ ಒಂದು ಹೆಚ್ಚಿನ ಉತ್ಸುಕತೆಯಿಂದ ಆಡಳಿತ ಕೊಟ್ಟಿಲ್ಲ. ವಿಶೇಷವಾದಂಥ ಬಡ್ಜೆಟ್ ಅದಕ್ಕೆ ಒದಗಿಸಿಲ್ಲ. ಈ ಒಂದು ಉಸ್ತುವಾರಿ ಭಾರವನ್ನು ಹೊತ್ತಂಥ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು ಕೃಷಿ ವಿಶ್ವವಿದ್ಯಾನಿಲಯಕ್ಕೆ ವಿಸಿಟ್ ಮಾಡಲಿಲ್ಲ. ಅಲ್ಲಿ ನಡೆಯುತಕ್ಕ ವಿಜ್ಞಾನದ ಪ್ರಯೋಗವನ್ನು ತಿಳಿಯಲಿಕ್ಕೆ ಹೋಗಿಲ್ಲ. ಕೃಸಿ ಕಾರ್ಮಿಕನ ಬಗ್ಗೆಯಾಗಲಿ, ತೋಟಗಾರಿಕೆಯ ಬಗ್ಗೆಯಾಗಲಿ, ಯಾವುದರ ಬಗ್ಗೆಯೂ ಇವರು ಸಾಕಷ್ಟು ಲಕ್ಷ್ಯ ವಹಿಸಿಲ್ಲ. ಇವರು ಕೊಡುವಂಥ ಹಣ ಸಹ ಅಲ್ಲಿರತಕ್ಕ ನೌಕರರ ಸಂಬಳಕ್ಕೆ ಸಾಲದು ಎಂದು ಹೇಳಬಹುದು. ಇವೊತ್ತು ಕೃಷಿಗೆ ಮತ್ತು ಕೃಷಿ ಕಾರ್ಮಿಕರಿಗೆ ಸಿಕ್ಕಬೇಕಾದಂಥ ಸೌಲಭ್ಯಗಳು ದೊರೆತಿಲ್ಲ ಎಂದು ಹೇಳಬಹುದು. ಇವೊತ್ತು ಕೃಷಿಗೆ ಮತ್ತು ಕೃಷಿ ಕಾರ್ಮಿಕರಿಗೆ ಸಿಕ್ಕಬೇಕಾದಂಥ ಸೌಲಭ್ಯಗಳು ದೊರೆತಿಲ್ಲ ಎಂದು ಹೇಳಬೇಕಾಗಿದೆ. ಅಧ್ಯಕ್ಷರೆ, ತಾವೂ ಸಹ ಪಶುಸಂಗೋಪನಾ ಮಂತ್ರಿಗಳಾಗಿದ್ದಾಗ ನಾನು ತಮ್ಮನ್ನು ನೋಡಲಿಕ್ಕೆ ಬರುತ್ತಿದ್ದೆವು. ಆದರೆ ಇವೊತ್ತು ಪಶುಸಂಗೋಪನೆಯ ಬಗ್ಗೆ ಇವರು ಒಂದು ಮಾತನ್ನೂ ಹೇಳಿಲ್ಲ. ಈ ಸರ್ಕಾರ ೧೯೮೩ರಲ್ಲಿ ಅಧಿಕಾರಕ್ಕೆ ಬಂದರೂ ಕೂಡ ಅಂದಿನಿಂದ ಇಂದಿನವರೆಗೆ ಒಂದು ಪಶುವೈದ್ಯಶಾಲೆಯನ್ನು ನಾವು ಮಾಡಲಿಕ್ಕೆ ಆಗಿಲ್ಲ. ಪ್ರತಿ ವರ್ಷ ಈ ಬಗ್ಗೆ ಕೇಳಿದರೆ ಅದಕ್ಕ ಬಡ್ಜೆಟ್ ಇಲ್ಲ, ಮುಂದಿನ ವರ್ಷ ಮಾಡೋಣ ಎಂದು ಹೇಳುವಂಥಾದ್ದು ನಡೆದುಕೊಂಡು ಬಂದಿದೆ. ಈ ವರ್ಷ ೧.೫೦೦ ಪಶುವೈದ್ಯಶಾಲೆಗಳನ್ನು ಮಾಡುತ್ತೇವೆಂದು ಇದರಲ್ಲಿ ಅಳವಡಿಸಿದ್ದಾರೆ. ಇದಕ್ಕೆ ಎಷ್ಟರಮಟ್ಟಿನ ಹಣಕಾಸು ಸೌಲಭ್ಯ ಒದಗಿಸಿದ್ದಾರೋ ಅದನ್ನು ನೋಡಬೇಕು. ಇದರ ಬಗ್ಗೆ ಏನು ಹೇಳಿದ್ದಾರೆ ಇದು ಸತ್ಯಕ್ಕೆ ದೂರವಾದುದು. ಚುನಾವಣೆಯ ದೃಷ್ಟಿಯಿಂದ, ಜನತೆಯ ಕಣ್ಣೊರೆಸುವ ದೃಷ್ಟಿಯಿಂದ ಮಾಡಿದ್ದಾರೆಂದು ಕಾಣುತ್ತದೆ. ಕಳೆದ ಐದು ವರ್ಷಗಳಿಂದ ಮಾಡದೇ ಇದ್ದಾಗ, ಈ ವರ್ಷ ೧,೫೦೦ ಪಶುವೈದ್ಯ ಶಾಲೆಗಳನ್ನು ತೆರೆಯುತ್ತೇವೆ, ಅದರಿಂದ ಗ್ರಾಮೀಣ ಜನತೆಗೆ ಒಳ್ಳೆಯದು ಮಾಡುತ್ತೇವೆಂದು ಹೇಳುವುದು ಬಹಳ ಆಶ್ಚರ್ಯದ ಸಂಗತಿ. ಇನ್ನು ಕ್ರಾಸ್ ಬ್ರೀಡಿಂಗ್ ಪ್ರೋಗ್ರಾಮ್, ಹೆಚ್ಚು ಹಾಲು ಉತ್ಪಾದನೆ ಮಾಡಬೇಕೆಂದು ಹೇಳುವಂಥಾದ್ದು ಬೆಂಗಳೂರಿನ ಸುತ್ತಮುತ್ತ ಇರತಕ್ಕ ಒಂದೆರಡು ಜಿಲ್ಲೆಗಳನ್ನು ಬಿಟ್ಟರೆ ರಾಜ್ಯದಲ್ಲಿ ಪಶುಸಂಗೋಪನೆ, ಪಶುಸಂಪತ್ತಿಗೆ ಎಷ್ಟು ಬೆಲೆ ಕೊಡಬೇಕಾಗಿತ್ತೋ ಅಷ್ಟು ಬೆಲೆ ಕೊಟ್ಟಿಲ್ಲ ಎಂದು ಹೇಳಬೇಕಾಗುತ್ತದೆ. ಧಾರವಾಡ ಉತ್ತರ ಕರ್ನಾಟಕದ ಕಡೆಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜಾನುವಾರುಗಳು ರಸ್ತೆ ಪಕ್ಕದಲ್ಲಿ ತಿರುಗುತ್ತಿರುತ್ತವೆ. ಹೆಚ್ಚು ಹಾಲು ಉತ್ಪಾದನೆ ಮಾಡಲಿಕ್ಕೆ ಒಂದು ಮಾಸ್ ಪ್ರೋಗ್ರಾಮ್ ಮಾಡಿಲ್ಲ. ಇವೊತ್ತು ರೈತರು ಸಗಣಿ ಗೊಬ್ಬರಕ್ಕೆ ಪಶುಗಳನ್ನು ಸಾಕುತ್ತಿದ್ದೇವೆಂದು ಹೇಳುವಂತಾದ್ದು ಇದೆ. ಇವೊತ್ತು ಡೈರಿಗಾಗಲಿ, ಪೌಲ್ಟ್ರಿಗಾಗಲಿ, ಹೆಚ್ಚು ಪ್ರೋತ್ಸಾಹ ಕೊಡಲಿಕ್ಕೆ ಈ ಬಡ್ಜೆಟ್‌ನಲ್ಲಿ ಯಾವ ಒಂದು ವ್ಯವಸ್ಥೆ ಇಲ್ಲ. ಈ ವರ್ಷ ೧,೫೦೦ ಪಶುವೈದ್ಯ ಶಾಲೆಗಳನ್ನು ಮಾಡುತ್ತೇವೆಂದು ಹೇಳಿದ್ದಾರೆ. ಇದಕ್ಕೆ ಬಡ್ಜೆಟ್‌ನಲ್ಲಿ ಎಷ್ಟು ದುಡ್ಡು ಇದೆ ಎಂದು ನೋಡಿದರೆ ಗೊತ್ತಾಗುತ್ತದೆ. ಇವರು ಕೊಡುವಂಥ ಹಣ ಸಂಬಳಕ್ಕೆ ಸಾಲದು ಎಂದು

ಕಂಡು ಬರುತ್ತಿದೆ. ಇದನ್ನು ನೋಡಿದರೆ ಈ ಸರ್ಕಾರಕ್ಕೆ ಬಡವರ ಬಗ್ಗೆ ಯಾವುದೇ ರೀತಿಯ ಕಳಕಳಿಯೂ ಇಲ್ಲವೆಂದು ಅನಿಸುತ್ತದೆ.

ಮಾನ್ಯ ಅಧ್ಯಕ್ಷರೆ, ಇನ್ನೊಂದು ಈ ಶಿಕ್ಷಣ ವ್ಯವಸ್ಥೆಯ ವಿಚಾರ. ಈಗಿನ ಮಾನ್ಯ ಶಿಕ್ಷಣ ಸಚಿವರು ಅಧಿಕಾರಕ್ಕೆ ಬಂದಮೇಲೆ ಸ್ವಲ್ಪಮಟ್ಟಿಗೆ ಶಿಕ್ಷಣ ಇಲಾಖೆಯಲ್ಲಿ ಬದಲಾವಣೆಯಾಗಿದೆಯೆಂದು ಹೇಳಿದರೆ ಬಹುಶಃ ತಪ್ಪಾಗಲಿಕ್ಕಿಲ್ಲ. ನಾನು ಈ ಮಾತನ್ನು ಹೇಳಿದರೆ ಇವರಲ್ಲಿ ಯಾವುದೇ ವಿಶೇಶವೂ ಇಲ್ಲ. ಏಕೆಂದರೆ, ಕಳೆದ ೪–೫ ವರ್ಷಗಳ ಅವಧಿಯಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಯಾವುದೇ ವಿಧವಾದ ನೀತಿ ನಿಯಮಗಳನ್ನೂ ಅನುಸರಿಸುತ್ತಿರಲಿಲ್ಲ. ಶಾಲಾ ಕಟ್ಟಡಗಳನ್ನು ಕೊಡುವುದರಲ್ಲಾಗಲೀ ಶಿಕ್ಷಣದ ಮಟ್ಟವನ್ನು ಹೆಚ್ಚಿಸುವುದರಲ್ಲಾಗಲೀ, ಅಥವಾ ಬೇರೆ ಯಾವುದೇ ವಿಚಾರದಲ್ಲಾಗಲೀ ಹೆಚ್ಚಿನ ಆಸಕ್ತಿಯನ್ನು ವಹಿಸುತ್ತಿರಲಿಲ್ಲ. ತಾನು ಎಸ್.ಸಿ.ಎಸ್.ಟಿ. ಎಂದು ಹೇಳಿಕೊಂಡು ಮ್ಯಾನೇಜ್ ಮೆಂಟ್‌ನವರು ವಿದ್ಯಾ ಸಂಸ್ಥೆಗಳನ್ನು ಮಂಜೂರು ಮಾಡಿಸಿಕೊಳ್ಳುತ್ತಾರೆ. ಆದರೆ ಅವು ಸರಿಯಾಗಿ ನಡೆಯುವುದಿಲ್ಲ. ಇದಕ್ಕೆ ಬದಲಾಗಿ ಯಾರಿಗೆ ಎಸ್.ಸಿ.ಎಸ್ ಟಿ.ಗಳ ಬಗ್ಗೆ ನಿಜವಾಗಿ ವ್ಯಾಮೋಹ ಇರುತ್ತದೆ ಅಂಥವರಿಗೆ ಮಾತ್ರ ಶಿಕ್ಷಣ ಸಂಸ್ಥೆಯನ್ನು ಮಂಜೂರು ಮಾಡಿಕೊಡಿ. ಕೇವಲ ಜಾತಿಯ ಹೆಸರಿನಲ್ಲಿ ವಿದ್ಯಾ ಸಂಸ್ಥೆಗಳನ್ನು ಸ್ಥಾಪನೆ ಮಾಡಿ ಯಾವುದೇ ಕಾನೂನುಗಳನ್ನೂ ಪಾಲಿಸದೇ ಇರುವವರಿಗೆ ಮಂಜೂರಾತಿಯನ್ನು ಕೊಡುವುದು ಸರಿಯಲ್ಲ. ನನ್ನದೇ ಆದಂಥ ತಾಲ್ಲೂಕಿನಲ್ಲಿ ಉದಯವಾದ ಒಂದು ಸಂಸ್ಥೆ ದೊಡ್ಡದಾಗಿ ಬೆಳೆದು ೬೦೦ ಜನ ವಿದ್ಯಾರ್ಥಿಗಳನ್ನು ನೇಮಕ ಮಾಡಿ ಕೊಳ್ಳುವ ಒಂದು ವ್ಯವಸ್ಥೆಯನ್ನು ಮಾಡಿಕೊಂಡು ಇವತ್ತು ಸರ್ಕಾರದಿಂದ ಕೋಟ್ಯಾಂತರ ರೂಪಾಯಿ ಗಳನ್ನು ಲೂಟಿ ಮಾಡುತ್ತಿದ್ದಾರೆ. ಇದರ ಬಗ್ಗೆ ಹಿಂದಿನ ಮುಖ್ಯ ಮಂತ್ರಿಗಳಿಗೆ, ಕಂದಾಯ ಮಂತ್ರಿ ಗಳಿಗೆ ಪತ್ರ ಮುಖೇನ ತಿಳಿಸಿದರೂ ಅವರು ಯಾವುದೇ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಆ ಸಂಸ್ಥೆ ಯಲ್ಲಿ ಶಾಲಾ ಕಟ್ಟಡವಾಗಲಿ, ಬ್ಲ್ಯಾಂಕ್ ಬೋರ್ಡ್ ಆಗಲಿ, ಕುರ್ಚಿಗಳಾಗಲಿ, ಟೇಬಲ್‌ಗಳಾಗಲಿ ಇದ್ದರೆ ನಾನು ಸಂತೋಷಪಡುತ್ತೇನೆ. ಅಲ್ಲಿ ಇದು ಯಾವುವೂ ಇಲ್ಲ. ಇದು ನನ್ನ ತಾಲ್ಲೂಕಿನ ತಾಂಡೆ ಎಂಬ ಊರಿನಲ್ಲಿ ಇರತಕ್ಕದ್ದು. ಇಲ್ಲಿ ೫ ಹುಡುಗರೂ ಕೂಡ ಇಲ್ಲ. ೩ ಜನ ಟೀಚರ್ಸ್ ಇದ್ದಾರೆ. ಅವರಿಗೆ ಸಂಬಳ ಹೋಗುತ್ತಿದೆ. ಅಲ್ಲಿ ಯಾವ ಪೀಠೋಪಕರಣಗಳೂ ಇಲ್ಲ. ಇಂಥ ನೂರಾರು ಕೇಸುಗಳನ್ನು ವಿಚಾರಣೆ ಮಾಡಿದ್ದರೂ ಅದರಿಂದ ಯಾವುದೇ ಬದಲಾವಣೆಯೂ ಆಗಲಿಲ್ಲ. ನಾನು ತಮಗೆ ಹೇಳುತ್ತೇನೆ. ಇದೇ ರೀತಿಯ ಶಿಕ್ಷಣ ಪದ್ಧತಿಯನ್ನು ನೀವು ಮುಂದುವರಿಸಿದರೆ ಇದು ನಮ್ಮ ರಾಜ್ಯಕ್ಕೆ ಒಂದು ಮಾರಕವಾಗುತ್ತದೆ. ದಯವಿಟ್ಟು ಇದನ್ನು ಸರ್ಕಾರ ನಿಲ್ಲಿಸಲು ಕ್ರಮ ತೆಗೆದುಕೊಳ್ಳಬೇಕು. ಕೇವಲ ಎಸ್.ಸಿ ಎಸ್.ಟಿ. ಶಿಕ್ಷಣ ಸಂಸ್ಥೆಗಳು ಮಾತ್ರವಲ್ಲ, ಅನೇಕ ಮುಂದು ವರಿದ ವರ್ಗದವರ ಶಿಕ್ಷಣ ಸಂಸ್ಥೆಗಳೂ ಕೂಡ ಮೋಸ ಮಾಡಿ ಸರ್ಕಾರದ ಬೊಕ್ಕಸವನ್ನು ಲೂಟಿ ಮಾಡುತ್ತಿರುವುದನ್ನು ತಪ್ಪಿಸಬೇಕು.

ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಚಾರ ಎಂದರೆ, ಕ್ಯಾಪಿಟೇಷನನ್ನು ಸಂಪೂರ್ಣವಾಗಿ ನಿಲ್ಲಿಸು ತ್ತೇವೆಂದು ಈ ಸರ್ಕಾರದವರು ಹಿಂದೆ ಹೇಳಿದ್ದರು. ಆದರೆ ಅದನ್ನು ನಿಲ್ಲಿಸುವುದಕ್ಕೆ ಇವರಿಂದಾಗಿಲ್ಲ. ನಾನಾದರೂ ಸರ್ಕಾರಕ್ಕೆ ಒಂದು ಸಲಹೆಯನ್ನು ಏನು ಮಾಡಬಯಸುತ್ತೇನೆಂದರೆ, ವರದಕ್ಷಿಣೆಯ ಪಿಡುಗನ್ನು ತೊಡೆದುಹಾಕಲು ನಾವು ಏನು ಒಂದು ಕಠಿಣ ಕಾನೂನನ್ನು ಜಾರಿಗೆ ತಂದಿದ್ದೇವೋ ಅದೇ ರೀತಿ ಕ್ಯಾಪಿಟೇಷನ್ ಶುಲ್ಕವನ್ನು ತಪ್ಪಿಸುವುದಕ್ಕೂ ಒಂದು ಕಾನೂನನ್ನು ಮಾಡಬೇಕು. ತಾವು ಕೇಳಿದವರಿಗೆಲ್ಲಾ ಶಿಕ್ಷಣ ಸಂಸ್ಥೆಗಳನ್ನು ಮಂಜೂರು ಮಾಡಿಕೊಡುವುದು ಸರಿಯಲ್ಲವೆಂದು ಹೇಳು ತ್ತಿದ್ದೇನೆ. ಅವರು ಕೇಳಿದಂತೆಲ್ಲಾ ನೀವು ಕೊಡುತ್ತಾ ಹೋದರೆ ಕ್ಯಾಪಿಟೇಷನ್ ಪಿಡುಗನ್ನು ನೀವು ನಿಲ್ಲಿಸುವುದಕ್ಕಾಗುವುದಿಲ್ಲ. ಅಲ್ಪಸಂಖ್ಯಾತರಿಗೆ ಹೆಚ್ಚಿನ ಸೀಟುಗಳನ್ನು ಕೊಡುತ್ತೇವೆ, ಕ್ಯಾಪಿಟೇಷನ್ ಶುಲ್ಕವನ್ನು ನಿಲ್ಲಿಸುತ್ತೇವೆಂದು ಹೇಳಿ ಶಿಕ್ಷಣಕ್ಕೂ ಮತ್ತು ಸಂಸ್ಥೆಗೂ ಇರುವ ಸಂಬಂಧವನ್ನು ಹಾಳು ಮಾಡುವುದಕ್ಕೆ ದಯವಿಟ್ಟು ಹೋಗಬೇಡಿ. ಒಂದು ಉದಾಹರಣೆಯನ್ನು ತಮಗೆ ಹೇಳುವುದಾದರೆ, ಹುಬ್ಬಳ್ಳಿಯಲ್ಲಿರತಕ್ಕ ಸರ್ಕಾರಿ ಕಾಲೇಜಿನಲ್ಲಿ ಲೈಬ್ರರಿ ವ್ಯವಸ್ಥೆಯಾಗಲಿ, ಲ್ಯಾಬೋರೇಟರಿ ವ್ಯವಸ್ಥೆ ಯಾಗಲಿ ಸರಿಯಾಗಿ ಇಲ್ಲ. ಇದು ಹೆಸರಿಗೆ ಮಾತ್ರ ಉನ್ನತ ಶಿಕ್ಷಣವನ್ನು ಕೊಡತಕ್ಕ ಕಾಲೇಜಾಗಿದೆ. ಆದರೆ ಅಲ್ಲಿ ನೋಡಿದರೆ ಬಹಳ ಭೀಕರವಾಗಿದೆ. ಆದ್ದರಿಂದ ಮಾನ್ಯ ಶಿಕ್ಷಣ ಮಂತ್ರಿಯವರು ಇದರ ಬಗ್ಗೆ ಗಮನ ಹರಿಸಬೇಕೆಂದು ಹೇಳಬಯಸುತ್ತೇನೆ. ಕೇವಲ ನಾಟಕೀಯವಾಗಿ, ತೋರಿಕೆಯಾಗಿ ನೀವು ಪ್ರದರ್ಶನ ಮಾಡಲಿಕ್ಕೆ ಇಂತಹ ಹೇಳಿಕೆಗಳನ್ನು ಕೊಡಕೂಡದು. ಅದರ ಸತ್ಯಾಂಶಗಳನ್ನು ತಿಳಿದು ಅದರ ಬಗ್ಗೆ ಏನಾದರೂ ಮಾಡಬೇಕು.

ಇನ್ನೊಂದು ಮಾತು ಅಬಕಾರಿ ಇಲಾಖೆಯ ಬಗ್ಗೆ ಹೇಳಬೇಕಾಗಿದೆ. ಹೊಸ ಮುಖ್ಯ ಮಂತ್ರಿ ಗಳು ಬಂದ ಕೆಲವೇ ದಿನಗಳಲ್ಲಿ ಎಕ್ಸೈಸ್ ರೆವಿನ್ಯೂ ಇನ್‌ಕ್ರೀಸ್ ಮಾಡಿದ್ದೇನೆಂದು ಹೇಳಿದರು.

ಕೇವಲ ೯–೧೦ ದಿನಗಳಲ್ಲಿ ೯ ಕೋಟಿ ರೂಪಾಯಿಗಳಿಗೆ ಇನ್‌ಕ್ರೀಸ್ ಆಗಿದೆಯೆಂದು ಪತ್ರಿಕೆಗಳಲ್ಲಿ ಹೇಳಿಕೆ ಕೊಟ್ಟರು. ಈ ಲಿಕ್ಕರ್ ಸೆಕೆಂಡ್ಸ್‌ನ್ನು ನಿಲ್ಲಿಸಿದ ಮೇಲೆ ಪರಿಸ್ಥಿತಿ ಉತ್ತಮವಾಗಿದೆಯೆಂದು ಹೇಳಿದರು. ಈ ಸೆಕೆಂಡ್ಸ್ ಬಗ್ಗೆ ಈ ಮನೆಯಲ್ಲಿ ಬೇಕಾದಷ್ಟು ವ್ಯಾಖ್ಯಾನವಾಗಿದೆ. ಆದರೆ ಡೀಟೈಲ್‌ಗೆ ಹೋಗುವುದು ಬೇಡ, ಈ ಸರ್ಕಾರಕ್ಕೆ ಒಂದು ಕಮಿಟ್‌ಮೆಂಟ್ ಇದೆಯೋ ಇಲ್ಲವೋ ಎಂಬುದನ್ನು ಪರೀಕ್ಷಿಸುವ ಕಾಲ ಈಗ ಬಂದಿದೆ. ಈಗ ಸೆಕೆಂಡ್ಸ್‌ನ್ನು ನಿಲ್ಲಿಸಿ ರಾಜ್ಯದ ಬೊಕ್ಕಸಕ್ಕೆ ಹೆಚ್ಚಿನ ಹಣವನ್ನು ಕಲೆಕ್ಟ್ ಮಾಡಿದ್ದೀರಾ ಹೇಗೆ ಎಂದು ನೋಡುವುದಾದರೆ ಯಾವುದೂ ಕಣ್ಣಿಗೆ ಕಾಣಿಸುತ್ತಿಲ್ಲ. ಇದು ಕೇವಲ ಮಾತಿಗೋಸ್ಕರ ಜನತೆಗೋಸ್ಕರ ಇದೆಯೇ ಹೊರೆತು ಪರಿಸ್ಥಿತಿ ಉತ್ತಮಗೊಂಡಿಲ್ಲ. ಹಿಂದೆ ಶೇಕಡ ೫೦ರಷ್ಟು ಸೆಕೆಂಡ್ಸ್‌ನ್ನು ಫ್ರೀಯಾಗಿ ಬಿಡುತ್ತಿದ್ದರು. ಅದು ಇವತ್ತು ಶೇಕಡ ೮೦ರಷ್ಟು ಆಗಿದೆ. ಇದರಿಂದ ನಮ್ಮ ರಾಜ್ಯಕ್ಕೆ ಬರತಕ್ಕ ೧೫೦ ಕೋಟಿ ರೂಪಾಯಿಗಳಲ್ಲಿ ಸುಮಾರು ೩೦೦ ಕೋಟಿ ರೂಪಾಯಿಗಳಷ್ಟು ಅಬಕಾರಿ ಟ್ಯಾಕ್ಸ್ ಸೋರಿಹೋಗುತ್ತಿದೆ. ಈ ರೀತಿ ಈ ಹಣ ಸೋರಿ ಹೋಗದಂತೆ ನೋಡಿಕೊಳ್ಳಲು ಅನುಭವಿಗಳು ಏನು ಹೇಳುತ್ತಾರೆ ಹಾಗೂ ಈ ಖಾತೆಯಲ್ಲಿ ಕೆಲಸ ಮಾಡತಕ್ಕವರು ಏನು ಹೇಳುತ್ತಾರೆ ಅದನ್ನು ಸರ್ಕಾರ ಗಣನೆಗೆ ತೆಗೆದುಕೊಳ್ಳುವುದನ್ನು ಬಿಟ್ಟು, ಸರ್ಕಾರ ಯಾರೋ ಹೊಗಳಭಟ್ಟರಿಗೆ ಅನುಕೂಲ ಮಾಡಿಕೊಳ್ಳುತ್ತಿರುವ ಹಾಗೆ ಕಾಣುತ್ತಿದೆ. ಈ ಸೆಕೆಂಡ್ಸ್ ಹೊರಗಡೆಯಿಂದ ಅಂದರೆ ಆಂಧ್ರಪ್ರದೇಶದಿಂದ, ಉತ್ತರ ಪ್ರದೇಶದಿಂದ, ಪಾಂಡಿಚೇರಿಯಿಂದ ಲೈಸೆನ್ಸ್ ತೆಗೆದುಕೊಂಡು ಅದನ್ನು ಕರ್ನಾಟಕದಲ್ಲಿ ತಂದು ಇಲ್ಲಿ ವ್ಯಾಪಾರ ನಡೆಯುತ್ತಿದೆ. ಮತ್ತೆ ಅದೇ ಪರ್ಮಿಟ್ ಮೇಲೆ ಇನ್ನೊಂದು ಸಲ ತಂದು ಇಲ್ಲಿ ಮಾಡುತ್ತಿದ್ದಾರೆ. ಕರ್ನಾಟಕದಲ್ಲಿ ಈ ಸೆಕೆಂಡ್ಸ್‌ಗಳ ಹಾವಳಿ ಹೆಚ್ಚಾಗಿದೆ. ಇದನ್ನು ನಿಲ್ಲಿಸಲು ಏನು ಕ್ರಮ ಕೈಗೊಂಡಿದ್ದೀರಿ ?

ಇನ್ನು ರೆಕ್ಟಿಫೈಡ್ ಸ್ಪಿರಿಟ್‌ನಲ್ಲಿ ದುರುಪಯೋಗ ನಡೆಯುತ್ತಿದೆ. ಹಿಂದೆ ಟೀನೇಚರ್ಡ್ ಸ್ಪಿರಿಟ್ ಕೊಡುತ್ತಿದ್ದರು. ಈಗ ಅದನ್ನು ಬದಲಾವಣೆ ಮಾಡಿದ್ದಾರೆ. ಇದರ ಹಿನ್ನೆಲೆ ಏನು ಎಂಬುದನ್ನು ಜನತೆಯು ಹಾಗೂ ಈ ಮನೆಯೂ ತಿಳಿದುಕೊಳ್ಳಬೇಕಾಗಿದೆ. ಬೆಳಗಾಂ ಮತ್ತು ಕಾರವಾರ ಜಿಲ್ಲೆಗಳಲ್ಲಿ ಈ ಒಂದು ಮದ್ಯದ ವ್ಯಾಪಾರವನ್ನು ನಿಲ್ಲಿಸಿದ್ದೇವೆಂದು ಹೇಳಿದ್ದಾರೆ. ಅಂದರೆ ಕಂಟ್ರಿ ಸಾರಾಯಿ ಅಥವಾ ಟಾಡಿಯನ್ನು ನಿಲ್ಲಿಸಿದ್ದೇವೆಂದು ಹೇಳಿದ್ದಾರೆ, ಇದ್ದಕ್ಕಿದ್ದ ಹಾಗೆ ಟಾಡಿ ಗಿಡಗಳು ಮಾಯವಾಗಿದೆಯೋ ಬೇರೆ ಜಿಲ್ಲೆಗಳಲ್ಲಿ ಟಾಡಿ ಗಿಡಗಳು ಇದೆಯೋ ಇಲ್ಲವೋ ಎಂಬುದನ್ನು ತಿಳಿಸಬೇಕು. ಈಗಿರತಕ್ಕ ನೀತಿಯನ್ನು ಬದಲಾವಣೆ ಮಾಡಬೇಕು. ಈ ರಾಜ್ಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಅಬಕಾರಿ ನೀತಿ ನಿಯಮಗಳನ್ನು ಸರಿಯಾಗಿ ಪಾಲಿಸಬೇಕು. ಯಾರೋ ಒಬ್ಬ ವೈಯಕ್ತಿಕ ವ್ಯಕ್ತಿಯ ಬೆಳವಣಿಗೆಯನ್ನು ಪರಿಗಣಿಸಕೂಡದು. ಮೈಸೂರಿನಲ್ಲಿ ಹೋದ ವರ್ಷ ಟಾಡಿ ತೆಗೆಯುವ ವ್ಯವಸ್ಥೆಯನ್ನು ನಿಲ್ಲಿಸಿದ್ದೀರಿ, ಇದರಿಂದ ಸಾವಿರಾರು ಕೂಲಿಗಾರರು, ತಲಾತಲಾಂತರಗಳಿಂದ ಜೀವನೋಪಾಯ ಏನು ಮಾಡುತ್ತಿದ್ದರು, ಅವರಿಲ್ಲಿ ಇವತ್ತು ಬಹಳ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಅವರಿಗೆ ಕೊಟ್ಟಂತಹ ಆಶ್ವಾಸನೆಯನ್ನು ಈಡೇರಿಸಲು ಪರ್ಯಾಯವಾಗಿ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ, ? ಕಡಿಮೆ ಪರ್ಸೆಂಟೇಜ್‌ನಲ್ಲಿ ಆಲ್ಕೋಹಾಲ್ ಇರುವ ಬೀರನ್ನು ಕೊಡುತ್ತೇವೆಂದು ಈ ಬಜೆಟ್‌ನಲ್ಲಿ ಹೇಳಿದ್ದೀರಿ, ಇದರ ಬಗ್ಗೆ ಸರಿಯಾದ ವಿವರಣೆಯನ್ನು ನೀಡಬೇಕು. ಅದನ್ನು ಯಾವಾಗ ಕೊಡುತ್ತೀರಿ, ಯಾರ ಮುಖಾಂತರ ಕೊಡುತ್ತೀರೆಂಬುದನ್ನು ತಿಳಿಸಬೇಕು. ಇವುಗಳೆಲ್ಲವೂ ಫಲವಾಗಿ ಪರಿಣಮಿಸದೇ ರಾಜ್ಯಕ್ಕೆ ಸಂಪತ್ತಿನ ಕೊಡುಗೆಯಾಗಬೇಕೆಂದು ನಾನು ಆಶಿಸುತ್ತೇನೆ. ಇಷ್ಟೇ ಅಲ್ಲ, ಕೆಲವು ದಿವಸಗಳ ಹಿಂದೆ ಪತ್ರಿಕೆಗಳಲ್ಲಿ

೨.೩೦ ಪಿ.ಎಂ.

ಒಂದು ಸ್ಟೇಟ್‌ಮೆಂಟ್ ಬಂದಿದೆ. ಮಾನ್ಯ ಹೆಚ್. ಡಿ. ದೇವೇಗೌಡರು ಸರ್ಕಾರದಲ್ಲಿರತಕ್ಕಂಥವರಿಗೆ ಒಂದು ಮಾತನ್ನು ಹೇಳಿದರು. ಫೈನಾನ್ಸ್ ಮತ್ತು ಎಕ್ಸೈಸ್ ಈ ಎರಡು ಡಿಪಾರ್ಟ್‌ಮೆಂಟ್‌ಗಳನ್ನು ನನಗೆ ಒಪ್ಪಿಸಿದರೆ ಈಗಿರುವ ಹಣಕ್ಕಿಂತ ೧೦೦ ಕೋಟಿ ಜಾಸ್ತಿ ಮಾಡಿ ತೋರಿಸುತ್ತೇನೆಂದು ಹೇಳಿದರು. ಯಾವ ವಿಷಯದಲ್ಲಿ ಈ ಮಾತನ್ನು ಹೇಳಿದರೋ ಗೊತ್ತಿಲ್ಲ. ಇವತ್ತು ನಮ್ಮ ರೆವಿನ್ಯೂ ಎಷ್ಟಿದೆ. ಇದನ್ನು ಹೇಳಿ ಒಂದು ವರ್ಷ ಕಳೆದುಹೋಯಿತು. ಈ ಮಾತಿಗೆ ಉತ್ತರ ಕೂಡ ಬರಲಿಲ್ಲ. ಈವತ್ತು ಇದರಲ್ಲಿ ಸತ್ಯಾಂಶ ಇದೆಯೋ ಹೇಗೆ ಎನ್ನುವುದನ್ನು ಈ ಮನೆಯ ಅತ್ಯುನ್ನತ ಸ್ಥಾನದಲ್ಲಿರತಕ್ಕಂಥ ಅಧ್ಯಕ್ಷರು ತಾವು ನಮಗೆ ತಿಳಿಸಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಕೊನೆಯದಾಗಿ ನೀರಾವರಿಗಾಗಿ ಈ ಸಭೆಯಲ್ಲಿ ಒಂದು ರೆಸಲ್ಯೂಷನ್ ಮಾಡುವ ಮಟ್ಟಕ್ಕೂ ಕೂಡ ಬಂದರು. ತಮ್ಮ ಒಂದು ಮಾತಿನಮೇಲೆ ನಂಬಿಕೆ ಇಟ್ಟು ವಿಶ್ವಾಸದಿಂದ ಈ ಮನೆ

ರೆಸಲ್ಯೂಷನನ್ನು ಪಾಸ್ ಮಾಡದೆ ಒಪ್ಪಿಗೆ ಕೊಟ್ಟಿತು. ಅಂದು ಸಂಪೂರ್ಣವಾಗಿ ಕಾಂಗ್ರೆಸ್ ಅಂತಲ್ಲ, ಜನತಾ ಅಂತಲ್ಲ, ಕಮ್ಯುನಿಸ್ಟ್ ಅಂತಲ್ಲ, ಬಿ. ಜೆ. ಪಿ. ಅಂತಲ್ಲ ಸರ್ವಸಾಮಾನ್ಯವಾಗಿ ಈ ಸಭೆಯ ಎಲ್ಲಾ ಪಕ್ಷಗಳ ಸದಸ್ಯರು ಒಕ್ಕೊರಲಿನಿಂದ ಮಂಡನೆ ಮಾಡಿದಾಗ ಅಂದಿನ ಮುಖ್ಯ ಮಂತ್ರಿಗಳು ಅದಕ್ಕೆ ಉತ್ತರ ಕೊಟ್ಟರು. ಮುನ್ನೂರು ಕೋಟಿ ರೂಪಾಯಿಗಳನ್ನು ನೀರಾವರಿಗಾಗಿ ಖರ್ಚು ಮಾಡುತ್ತೇವೆಂದು ಹೇಳಿದರು. ಅಷ್ಟೇ ಅಲ್ಲ, ಹೋದ ವರ್ಷದ ಬಜೆಟ್‌ನಲ್ಲಿಯೂ ಕೂಡ ಅಳವಡಿಸಿ ಮಾಡಿದರು. ಆದರೆ ಖರ್ಚು ಎಷ್ಟಾಯಿತು, ಅದರಿಂದ ನೀರಾವರಿಗೆ ಸದುಪಯೋಗ ಎಷ್ಟಾಯಿತು ಸ್ವಾಮಿ ? ಒಂದು ಪೈಸೆ ಹೆಚ್ಚಾಗಲಿಲ್ಲ. ಸರ್ಕಾರ ಸಂಬಳವನ್ನು ಕೊಡುವುದು ಒಂದು ಬಿಟ್ಟರೆ ಒಂದು ಎಕರೆ ಜಮೀನನ್ನು ಅಭಿವೃದ್ಧಿ ಮಾಡಲಿಲ್ಲ. ಈರೀತಿ ರೆಸಲ್ಯೂಷನ್‌ಗೆ ಅಪಮಾನ ಮಾಡುವುದಾದರೆ, ಬಜೆಟ್‌ನಲ್ಲಿ ಅಪಮಾನ ಮಾಡುವುದಾದರೆ ಅದಕ್ಕೆ ಏನಾದರೂ ಶಿಕ್ಷೆ ಇಲ್ಲವೇ ಅದಕ್ಕೆ ಏನಾದರೂ ಕ್ರಮ ಇಲ್ಲವೇ ? ಹಾಗಿದ್ದರೆ ನಾವು ಇಲ್ಲಿ ಶಾಸಕರಾಗಿ ಬರತಕ್ಕಂಥ ಅವಶ್ಯಕತೆ ಏನು ಸ್ವಾಮಿ ? ಇಂಥ ಬಜೆಟ್‌ಗಳನ್ನು ಜನತೆಯ ಮುಂದೆ ಏತಕ್ಕೆ ಇಡಬೇಕು. ಇದು ಪಬ್ಲಿಕ್ ಚೀಟಿಂಗ್ ಅಲ್ಲವೆ ? ಇವತ್ತು ಜನ ಹೊರಗಡೆ ನೋಡುತ್ತಿದ್ದಾರೆ. ನಾವು ೩೦೦ ಕೋಟಿ ರೂಪಾಯಿಗಳಿಗೆ ಕಡಿಮೆ ಇಲ್ಲದಂತೆ ಕೇಳಿದ್ದೆವು. ಅದರ ಬಗ್ಗೆ ಇವತ್ತಿನ ಮುಖ್ಯ ಮಂತ್ರಿಗಳು ಕೂಡ ಕೇಳಿದ್ದರು, ೩೦೦ ಕೋಟಿ ಸಾಕಾಗುವುದಿಲ್ಲ. ಇನ್ನೂ ಹೆಚ್ಚಿಗೆ ಬೇಕೆಂದು ಹೇಳಿದರು. ಇವತ್ತು ಅವರೇ ಮುಖ್ಯ ಮಂತ್ರಿಗಳಾಗಿದ್ದಾರೆ. ೫೦೦ ಕೋಟಿ ಅಲ್ಲ ೧೦೦೦ ಕೋಟಿ ರೂಪಾಯಿಗಳನ್ನು ಕೊಡಲಿ ಅವರು ಹೇಳಿದಂತೆ ಕೆಲಸ ಮಾಡಲಿಕ್ಕೆ ತಯಾರಾಗಿದ್ದೇವೆ. ಜನತೆಯ ಕೈಕಾಲು ಹಿಡಿದು ದುಡ್ಡನ್ನು ಕೊಡಿಸಬೇಕಾದರೂ, ಸರಿ ಮಾಡತಕ್ಕಂಥ ಕಳಕಳಿ ಇದ್ದರೆ ಆಗ ಬಜೆಟ್‌ಗೆ ಬೆಲೆ ಇರುತ್ತದೆ. ಈ ಬಜೆಟ್‌ನಲ್ಲಿ ಏನಿದೆ ? ಒಂದು ಪೈಸೆ ಕೂಡ ಕೆಲಸ ಮಾಡಲು ಸಾಧ್ಯವಿಲ್ಲ. ಅವರು ಒಂದು ಸಂತೋಷವಾಗುತ್ತದೆಂದು ಹೇಳಿದರು. ಅದು ಯಾವ ಸಂತೋಷವೆನ್ನುವುದು ಗೊತ್ತಿಲ್ಲ. ಹತ್ತು ವರ್ಷಗಳ ಗಡುವು ಇದೆ. ಈ ರಾಜ್ಯದಲ್ಲಿ ನೀರಾವರಿ ಯೋಜನೆಗಳನ್ನು ನಾವು ಮಾಡಬೇಕಾದಂಥ ಆ ಗಡುವು ಮೀರಿಹೋಗುತ್ತಿದೆ. ಅದು ಮೀರಿದರೆ ಅದರ ಸಂಪತ್ತು ಹೋಗಿಬಿಡುತ್ತದೆ. ಕರ್ನಾಟಕದ ನೀರನ್ನು ಕಬಳಿಸಲು ಇವತ್ತು ಎಲ್ಲಾ ಕಡೆಯಿಂದ ಜನರು ಬಾಯಿ ತೆಗೆದುಕೊಂಡು ಕುಳಿತಿದ್ದಾರೆ. ಅದನ್ನು ನಾವು ಕಣ್ಣು ಬಿಟ್ಟು ನೋಡಬೇಕು. ಪ್ರತಿನಿತ್ಯ ಸ್ಟೇಟ್‌ಮೆಂಟ್ ಬರುತ್ತಿದೆ. ತೆಲುಗುಗಂಗಾ ಯೋಜನೆ ಇದೆ. ಅದೇರೀತಿ ಕೃಷ್ಣ ನದಿ ನೀರನ್ನು ಅವರು ಹೆಚ್ಚು ಬಳಕೆ ಮಾಡಿದ್ದಾರೆ. ಆದರೂ ನಾವು ಮಾತ್ರ ಸುಮ್ಮನೆ ಕೂಡಬೇಕೆ ? ಈ ರಾಜ್ಯದಲ್ಲಿ ಈ ಮನೆಯಲ್ಲಿ ನಾವು ಚಳುವಳಿಯನ್ನು ನಡೆಸಬೇಕಾಗುತ್ತದೆ. ಪ್ರತಿಯೊಬ್ಬ ರೈತರೂ ಕೂಡ ಚಳುವಳಿ ಮಾಡಬೇಕಾಗುತ್ತದೆ. ಈ ವ್ಯವಸ್ಥೆಯಲ್ಲಿ ಇಂಥ ಒಂದು ಮೋಸಗಾರಿಕೆ ನಡೆಯುತ್ತಿದೆ. ಹೆಚ್ಚು ನೀರಾವರಿಯಾಗಬೇಕಾದರೆ ಹೆಚ್ಚು ಹಣದ ವ್ಯವಸ್ಥೆಯಾಗಬೇಕು. ೩೦೦ ಕೋಟಿ ಸಾಲದು, ಅದು ಹೆಚ್ಚು ಪರಿವರ್ತನೆಯಾಗಬೇಕು. ೩೦೦ ಕೋಟಿ ಕೊಡುತ್ತೇವೆಂದು ಏನು ಹೇಳಿದ್ದೀರಿ ಅದಕ್ಕೆ ಬದಲಾಗಿ ೫೦೦ ಕೋಟಿಯನ್ನು ಕೊಡಬೇಕು. ಅಷ್ಟೇ ಅಲ್ಲ, ಹತ್ತು ವರ್ಷಗಳಲ್ಲಿ ಈ ನೀರನ್ನು ಸಂಪೂರ್ಣವಾಗಿ ಸದುಪಯೋಗ ಮಾಡಿಕೊಳ್ಳುತ್ತೇವೆನ್ನುವ ಭರವಸೆಯನ್ನು ಜನತೆಗೆ ಕೊಡಬೇಕು. ಈ ಮನೆಗೆ ಕೊಡಬೇಕು. ಆದರೆ ಇದರಲ್ಲಿ ಯಾವ ಭರವಸೆಯೂ ಇಲ್ಲ. ಅದಕ್ಕೆ ಹೇಳುವುದು, ಇದು ಒಂದು ಮಾರ್ವಾಡಿಯ ಲೆಕ್ಕದಂತಿದೆ ಎಂದು ಮಾರ್ವಾಡಿಗಳು ಪ್ರತಿ ವರ್ಷ ದೀಪಾವಳಿ ಹಬ್ಬಕ್ಕೆ ಹೊಸ ಯಾದಿಯನ್ನು ತೆಗೆಯುವಂತೆ ಆಗಿದೆ. ಆ ಒಂದು ದಿಸೆಯಲ್ಲಿ ನಮ್ಮ ಇವತ್ತಿನ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ನೀರಾವರಿ ಬೇಡಿಕೆಗಳನ್ನು ಪೂರೈಸುವಲ್ಲಿ ಇಷ್ಟೆಲ್ಲ ಆಶ್ವಾಸನೆಗಳನ್ನು ಕೊಟ್ಟಿದ್ದು, ಬಹುಶಃ ಈ ಮನೆಯಲ್ಲಿ ಬಹುತೇಕ ಹಿರಿಯ ಸದಸ್ಯರು ನೋಡಲೇಬೇಕು. ಜನತಾ ಸರ್ಕಾರ ೧೯೮೩-೮೫ರ ಪ್ರಣಾಳಿಕೆಯಲ್ಲಿ ಕರ್ನಾಟಕದ ಜಲ ಮತ್ತು ಜನತೆಯ ಶಕ್ತಿಯನ್ನು ನಾವು ಕಾಪಾಡುತ್ತೇವೆಂದು ಹೇಳಿದ್ದರು. ಯಾವ ಶಕ್ತಿಯನ್ನು ಕಾಪಾಡಿದ್ದೀರಿ ಸ್ವಾಮಿ ? ಕರ್ನಾಟಕದಲ್ಲಿರತಕ್ಕಂಥ ಇಂಡಸ್ಟ್ರೀಸನ್ನು ಮಾಲೆ ಗುಂಪು ಮಾಡಲಾಗಿದೆ. ಕರ್ನಾಟಕದಲ್ಲಿರತಕ್ಕಂಥ ಎಲ್ಲ ನೆಲ ರಾಜ್ಯದ ಹೊರಗಡೆಯಿಂದ ಬಂದಿರುವ ನೆಲಗಳ್ಳರಿಗೆ ಆಗಿದೆ. ೫೦೦ ಕೋಟಿ ೬೦೦ ಕೋಟಿ ಕಾವೇರಿಗೆ ಖರ್ಚು ಮಾಡತಕ್ಕಂಥ ಹಣ ಯಾರಿಗೋಸ್ಕರ ಮಾಡುತ್ತಿದ್ದೀರಿ ? ಪ್ರತಿಯೊಂದು ಲೇಔಟ್‌ಗೆ ಹೋದರೂ ಶರ್ಮ, ಕಪೂರ್, ಗೋಲವಾಲ, ಪಕೀರ್‌ವಾಲ, ಚಡ್ಡ–ಈ ಹೆಸರುಗಳವರು ಬಂದಿದ್ದಾರೆ. ಇವರು ಯಾರು ? ಇವರು ಹೇಗೆ ಬಂದರು. ಇಂಥ ಲೇಔಟ್‌ಗಳು ಯಾವುದು ? ಇವತ್ತು ಮದ್ರಾಸ್‌ಗೆ ಹೋದರೆ ಒಂದು ಪ್ಲಾಟನ್ನು ಒಂದು ಸೈಟನ್ನು ಪಡೆಯಬೇಕಾದರೆ ೧೦ ವರ್ಷಗಳಿಗಿಂತ ಕಡಿಮೆ ಅಲ್ಲಿ ಇದ್ದು ಸರ್ಟಿಫಿಕೇಟ್ ಪಡೆದು ದುಂಬಾಲು ಬಿದ್ದು ಎಲ್ಲ ಕಾಗದ ಪತ್ರಗಳನ್ನು ಒದಗಿಸಿದರೂ ಕೂಡ ಔಟ್‌ಸೈಡ್ ಮದ್ರಾಸಿಯನ್ ಎಂದು ಹೇಳತಕ್ಕಂಥದ್ದು ಇದೆ. ಇವತ್ತು ನಾವು ವಿಶಾಲ ಮನೋಭಾವನೆಯನ್ನು ಹೊಂದಿರತಕ್ಕಂಥವರು. ಇಂದು ಈ ದೇಶ ಕರ್ನಾಟಕಮಯವಾಗಿದೆ ಎಂದು ಕಾಣುತ್ತದೆ. ಅದಕ್ಕಾಗಿ ಈ ನಿಲುವನ್ನು, ಬಿಗಿಯನ್ನು ತೋರದಿದ್ದರೆ ಮುಂದೆ ಬಹಳ ಕಷ್ಟವನ್ನು

ಎದುರಿಸಬೇಕಾಗುತ್ತದೆ. ತಾವು ಸ್ವತಃ ನೋಡಿದ್ದೀರಿ, ಮತ್ತು ಅನೇಕ ಸ್ನೇಹಿತರು ಹೋಗಿ ನೋಡಿದ್ದಾರೆ ಇವತ್ತು ಕಲ್ಕತ್ತದಲ್ಲಿ ಏನು ಪರಿಸ್ಥಿತಿ ಇದೆ ಎಂಬುದನ್ನು ನಾವೆಲ್ಲ ನೋಡಿದ್ದೇವೆ. ಅಂಥ ಕಲ್ಕತ್ತ ದಕ್ಷಿಣ ಭಾರತದಲ್ಲಿ ಆದೀತು ಎಂಬ ಎಚ್ಚರಿಕೆಯ ಮಾತನ್ನು ಹೇಳುತ್ತೇನೆ. ಪರಿಸ್ಥಿತಿ ಹೀಗೇ ಮುಂದುವರಿದರೆ ನಾಳೆ ದಿವಸ ನಮಗೆ ಬದುಕಲಿಕ್ಕೆ ಜಾಗ ಸಿಗುವುದಿಲ್ಲ, ಕುಡಿಯುವುದಕ್ಕೆ ನೀರು ಸಿಗುವುದಿಲ್ಲ. ಅಂಥ ಪರಿಸ್ಥಿತಿ ನಮ್ಮ ಕರ್ನಾಟಕಕ್ಕೆ ಬಂದೀತು. ಆದ್ದರಿಂದ ಸರ್ಕಾರವನ್ನು ಹದ್ದುಬಸ್ತಿನಲ್ಲಿಡಬೇಕು. ಅದು ತನ್ನ ಕಾರ್ಯವೈಖರಿಯನ್ನು ಬದಲಾವಣೆ ಮಾಡದಿದ್ದರೆ, ಆಡಳಿತದಲ್ಲಿ ನೈಪುಣ್ಯತೆಯನ್ನು ತೋರದಿದ್ದರೆ ಅಂಥ ಸರ್ಕಾರವನ್ನು ಕಿತ್ತು ಹಾಕಬೇಕೆಂದು ಬೇಡಿಕೊಂಡು ಈ ಆಯವ್ಯಯವನ್ನು ವಿರೋಧಿಸಿ ಇಷ್ಟು ಕಾಲ ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಲ್. ಉಸ್ತಾದ್ (ಬಿಜಾಪುರ).— ಮಾನ್ಯ ಅಧ್ಯಕ್ಷರೆ, ಸರ್ಕಾರಿ ಮುದ್ರಣಾಲಯದಲ್ಲಿ ಮುದ್ರಣವಾದ ಈ ಬಜೆಟ್ ಅನ್ನು ನಾನು ವಿರೋಧಿಸಬೇಕಾಗುತ್ತದೆ. ಇದರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವ ಕೆಲಸ ಮಾಡಿರುವುದು ಕರ್ನಾಟಕದ ಪರಂಪರೆಗೆ ಮತ್ತು ಸಂಸ್ಕೃತಿಗೆ ಸರಿ ಅನ್ನಿಸುವುದಿಲ್ಲವೆಂದು ನನ್ನ ಭಾವನೆ. ಬಜೆಟ್ಟಿನ ಪುಟ ೯ ರಲ್ಲಿ ೭ನೇ ಪಂಚವಾರ್ಷಿಕ ಯೋಜನೆಯನ್ನು ಅನುಷ್ಠಾನ ಮಾಡುವುದರಲ್ಲಿ ನಿಜವಾಗಿ ಒಳ್ಳೆಯ ಕೆಲಸ ಮಾಡಿದ್ದೇವೆಂದು ತಮ್ಮ ಬೆನ್ನನ್ನು ತಾವೇ ಚಪ್ಪರಿಸುವ ಧೈರ್ಯವನ್ನು ಮಾಡಿದ್ದಾರೆ. ಈ ಬಜೆಟ್ ಭಾಷಣದಲ್ಲಿ ಒಂದು ಕಾರ್ಯಕ್ರಮವನ್ನು ತೋರಿಸಿದ್ದಾರೆ ಅದೇನೆಂದರೆ ೧೫ ಮಂಡಲಗಳಲ್ಲಿ ಜಪಾನ್ ಸರ್ಕಾರದ ಸಹಾಯದೊಂದಿಗೆ ಯೋಜನೆಯನ್ನು ಜಾರಿಯಲ್ಲಿ ತರುತ್ತೇವೆ ಎಂದು. ನನ್ನ ಒಂದಂ ಅನಿಸಿಕೆ ಏನೆಂದರೆ, ಈ ಯೋಜನೆಯನ್ನು ಎಲ್ಲಾ ಮಂಡಲಗಳಲ್ಲಿ ಜಾರಿಯಲ್ಲಿ ತರುವ ಕಾರ್ಯಕ್ರಮವನ್ನು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ. ಈ ಬಜೆಟ್ ಪುಸ್ತಕದಲ್ಲಿ ಮಿಲ್ಕ್ ಫೆಡರೇಷನ್, ಕೆ.ಇ.ಬಿ. ಮತ್ತಿತರ ಸಂಘ ಸಂಸ್ಥೆಗಳ ಕಾರ್ಯಕ್ರಮಗಳನ್ನು ಪ್ರಸ್ತಾಪಿಸಿದ್ದಾರೆ. ಕೇಂದ್ರ ಸರ್ಕಾರ ಕೂಡ ಮಾಡಿದ ಯೋಜನೆಗಳನ್ನು ಟೈಂ ಬೌಂಡ್ ಪ್ರಕಾರ ಮುಗಿಸಿದ್ದೇವೆಂದು ಹೇಳಿದರು. ಮಂಡಲಗಳಲ್ಲಿ ಕೂಲಿಗಾಗಿ ಕಾಳು ಯೋಜನೆ ಏನಿದೆ ಅದು ಕಾಳಿಗಾಗಿ ಕೂಲಿ ಆಗಿದೆ. ಬಡವರಿಗೆ ಕೊಡಬೇಕಾಗಿದ್ದ ಕಾಳು ಫ್ಲೋರ್ ಮಿಲ್‌ಗಳಿಗೆ ಹೋಗಿ ರವೆ ಉಪ್ಪಿಟ್ಟು ಆಗಿದೆಯೆಂದು ಹೇಳಿದರೆ ತಪ್ಪಾಗುವುದಿಲ್ಲವೆಂದು ಭಾವಿಸುತ್ತೇನೆ. ಲರ್ನ್ ಅಂಡ್ ಅರ್ನ್ ಯೋಜನೆ ಏನಿದೆ ಇದು ಯಾರಿಗಾಗಿ ? ಸುಮ್ಮನೆ ಪ್ರಯೋಜನವಾಗದೆ ಇರುವ ಇಂಥ ಯೋಜನೆಗಳನ್ನು ತಮ್ಮ ಯುವಕರಿಗೆ ದಾರಿ ತಪ್ಪಿಸುವ ಕೆಲಸ ಆಗಬಾರದೆಂದು ತಮ್ಮ ಮೂಲಕ ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೇಂದ್ರ ಸರ್ಕಾರ ಕೂಡ ಮಾಡಿದ ಹಲವಾರು ಯೋಜನೆಗಳು ಅಕ್ಷಯ ಪಾತ್ರೆಗಳಾಗಿ ಪರಿಣಮಿಸಿರುವಾಗ ಕೇಂದ್ರ ಸರ್ಕಾರದ ಮೇಲೆ ಪದೇ ಪದೇ ಗೂಬೆ ಕೂರಿಸುವುದು ಸರಿಯಲ್ಲವೆಂದು ಹೇಳುತ್ತೇನೆ. ಬಡವರಿಗೆ ಲಕ್ಷ್ಮಿ ಆಗಿರುವ ರೇಷ್ಮೆ ಉದ್ಯಮದ ಬಗ್ಗೆ ಬೇರೆ ರಾಜ್ಯದವರು ಹೆಚ್ಚು ಆಸಕ್ತಿ ವಹಿಸಿ ಪ್ರಗತಿ ಪಥದಲ್ಲಿ ಪಾದಾರ್ಪಣೆ ಮಾಡಲಿಕ್ಕೆ ಸಿದ್ಧರಿದ್ದಾರೆ. ಅದಕ್ಕೋಸ್ಕರ ಈ ಬಗ್ಗೆ ತಮ್ಮ ಮೂಲಕ ಈ ಸರ್ಕಾರಕ್ಕೆ ಎಚ್ಚರಿಸುತ್ತೇನೆ. ವಿದ್ಯುಚ್ಛಕ್ತಿ ಬಗ್ಗೆ ಹೇಳಬೇಕಾದರೆ ತಮಗೆ ಇದರ ಪರಿಸ್ಥಿತಿ ಗೊತ್ತು. ಲೈಟ್ ವಿತೌಟ್ ಬ್ರೈಟ್ ಎಂದು ಹೇಳುತ್ತೇವೆ. ಇವತ್ತಿನ ದಿವಸ, ಹಳ್ಳಿಗಳ ಕೂಡ ಕರೆಂಟ್ ಹೋಯಿತು, ಎಂತಹ ಕೆಲಸ ಮಾಡುವುದು ಎಂದು ಹೇಳುವುದಕ್ಕೆ ಜನ ಹತ್ತಿದ್ದಾರೆ ಕರೆಂಟ್ ಮಂತ್ರಿಗಳು ಇದನ್ನು ನೋಡುವುದಿಲ್ಲ. ಅವರಿಗೆ ಬಲ್ಬ್ ಗೊತ್ತಿಲ್ಲ. ಮೋಟಾರ್ ಗೊತ್ತಿಲ್ಲ. ಬಲ್ಬ್ ಹಾಕಲಾರದೆ ಬಿಲ ಹಾಕುವುದು ಮಾತ್ರ ಅವರಿಗೆ ಗೊತ್ತು. ಕಡೇಪಕ್ಷ ಅಡಿಗೆ ಮಾಡುವ ವೇಳೆಯಿಂದ ಹಿಡಿದು ಊಟ ಮಾಡುವವರೆಗಾದರೂ ಕರೆಂಟ್ ಕೊಡಿಸಿ ಎಂದು ಹೇಳುವುದಕ್ಕೆ ಹೊರಟ್ಟಿದ್ದಾರೆ ರೈತರು. ಇರಿಗೇಷನ್ ಬಗ್ಗೆ ಹೇಳುವುದಾದರೆ, ಐದು ವರ್ಷಗಳಿಂದ ಹೇಳಿದ್ದನ್ನು ಕೇಳಿ ಕೇಳಿ ಸಾಕಾಯಿತು. ನೀರು ಕೊಡಿ ಎಂದರೆ ಅವರಿಗೆ ತ್ರಾಸ ಆಗಿದೆ. ನೀರು ಕೊಡಿ ಎಂದರೆ ಬೀರು, ಬ್ರಾಂದಿ, ವಿಸ್ಕಿ ಅಂಗಡಿಗಳನ್ನು ಕೊಡುತ್ತಾರೆ. ಇಡೀ ಹಿಂದೂಸ್ಥಾನದಲ್ಲಿ ನಾನು ನೋಡಿದ್ದೇನೆ. ನಮ್ಮ ರಾಜ್ಯದಲ್ಲಿ ಇರುವಷ್ಟು ಮದ್ಯದ ಅಂಗಡಿಗಳು ಬೇರೆಲ್ಲೂ ಇಲ್ಲ. ನಮ್ಮ ರಾಜ್ಯದಲ್ಲಿರುವಷ್ಟು ಬೀರು, ಬ್ರಾಂದಿ ವಿಸ್ಕಿ ಅಂಗಡಿಗಳು ಹೊರ ರಾಜ್ಯಗಳಲ್ಲಿ ಎಲ್ಲೂ ಕಂಡಿಲ್ಲ. ಬಿಜಾಪುರದಲ್ಲಿ ಸಹ ಹಳ್ಳಿಹಳ್ಳಿಯಲ್ಲಿ ಬೀರು ವಿಸ್ಕಿ ಅಂಗಡಿಗಳಾಗಿವೆ. ಉತ್ತರ ಕರ್ನಾಟಕಕ್ಕೆ ಒಂದು ಮತ್ತು ದಕ್ಷಿಣ ಕರ್ನಾಟಕಕ್ಕೆ ಒಂದು ಎಂದು ಎರಡು ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ಗಳನ್ನು ಮೈಸೂರು ಮತ್ತು ಬಿಜಾಪುರದಲ್ಲಿ ಮಾಡಿದ್ದಾರೆ. ನನ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಪ್ರಕಾರ ಅಧಿಕಾರಿಗಳಿಗೆ ಪ್ರಮೋಷನ್ ಕೊಡುವ ಸಲುವಾಗಿ ಅದನ್ನು ಮಾಡಿದ್ದಾರೋ ಏನೋ ಎಂಬ ಭಾವನೆ ಇದೆ. ಏಕೆಂದರೆ, ಅದರಲ್ಲಿ ದುಡ್ಡೂ ಇಲ್ಲ, ಕೆಲಸವೂ ಇಲ್ಲ. ಲಿಫ್ಟ್ ಮಾಡುವುದಕ್ಕಿಂತ ಮುಂಚೆ ಮಂತ್ರಿಗಳ ಕಡೆಯಿಂದ ಬರುತ್ತಿರುವ ಗಿಫ್ಟ್ ಎಂದರೆ ಬರೀ ಅಡಿಗಲ್ಲು ಸಮಾರಂಭಗಳು. ಜಿಲ್ಲಾ ಪರಿಷತ್ ಎಲೆಕ್ಷನ್‌ಗೆ ಮುಂಚೆ ನಮ್ಮ ಜಿಲ್ಲೆಯಲ್ಲಿ ಮುಂಜಾನೆಯಿಂದ ಸಂಜೆವರೆಗೆ ಬರೀ ಅಡಿಗಲ್ಲು ಸಮಾರಂಭಗಳೇ ನಡೆದವು. ಮಾಜಿ ಮುಖ್ಯ ಮಂತ್ರಿಗಳಾದ ರಾಮಕೃಷ್ಣ ಹೆಗಡೆ ಅವರು ಬಿಜಾಪುರಕ್ಕೆ ಬಂದು ಲಿಫ್ಟ್ ಇರಿಗೇಷನ್ ಸ್ಕೀಂಗೆ ಅಡಿಗಲ್ಲು ಹಾಕಿದರು. ಮುಳುವಾಡ್ ಲಿಫ್ಟ್ ಇರಿಗೇಷನ್ ಬಗ್ಗೆ ಬಹಳ ಹೇಳುತ್ತಿದ್ದೇವೆ. ಆ ಯೋಜನೆ ಆದರೆ ೫ ತಾಲ್ಲೂಕುಗಳ ಏಳೂವರೆ ಲಕ್ಷ ಎಕರೆ ಭೂಮಿಗೆ ನೀರಾವರಿಯಾಗುತ್ತದೆ. ಜಿಲ್ಲಾ ಪರಿಷತ್ತಿನ ಚುನಾವಣೆಯಲ್ಲಿ ಓಟು ಪಡೆಯುವ ದುರುದ್ದೇಶದಿಂದ ಮಾನ್ಯ ರಾಮಕೃಷ್ಣ ಹೆಗಡೆಯವರು ಹೆಲಿಕ್ಯಾಪ್ಟರ್‌ನಲ್ಲಿ ಬಂದು ಮುಳುವಾಡ್ ಯೋಜನೆಗೆ ಅಡಿಗಲ್ಲು ಹಾಕಿದರು. ಆದರೆ ಇವತ್ತಿನವರೆಗೂ ಅದಕ್ಕೆ ಟೆಕ್ನಿಕಲ್ ಸ್ಯಾಂಕ್ಷನ್ ಆಗಿಲ್ಲ. ಬಜೆಟ್‌ನಲ್ಲಿ ಅದಕ್ಕೆ ಒಂದು ಪೈಸೆಯನ್ನೂ ಇಟ್ಟಿಲ್ಲ. ಇಂಥ ಕಾರ್ಯಕ್ರಮಗಳನ್ನು ಏತಕ್ಕೆ ಮಾಡುತ್ತೀರಿ ? ಮೈಸೂರು ಮತ್ತು ಬಿಜಾಪುರದಲ್ಲಿ ಎರಡು ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ಗಳನ್ನು ಮಾಡಿದ್ದಾರೆ. ಅದನ್ನು ಈಗ ಕಿತ್ತು ಹಾಕಬೇಕೆಂದು ಯೋಜನೆ ಮಾಡಲಿಕ್ಕೆ ಹತ್ತಿದ್ದಾರೆಂದು ಕೇಳಿದ್ದೇನೆ. ಅದು ಸರಿಯಲ್ಲ ಎಂದು ತಮ್ಮ ಮುಖಾಂತರ ಈ ಸರ್ಕಾರಕ್ಕೆ ಹೇಳುತ್ತೇನೆ. ಒಂದು ವೇಳೆ ಅದನ್ನು ಕಿತ್ತು ಹಾಕಿದರೆ ಉತ್ತರ ಕರ್ನಾಟಕದ ಮಂದಿ ದೊಡ್ಡ ಪ್ರಮಾಣದಲ್ಲಿ ಪ್ರೊಟೆಸ್ಟ್ ಮಾಡಬೇಕಾಗುತ್ತದೆ. ನಮ್ಮ ಸರ್ಕಾರ ಇದ್ದಾಗ ಅಂದರೆ ಕಾಂಗ್ರೆಸ್ ಗೌರ್ನಮೆಂಟ್ ಇದ್ದಾಗ ಮನೆ ಇಲ್ಲದವರಿಗೆ ಮನೆ, ಹೊಲ ಇಲ್ಲದವರಿಗೆ ಹೊಲ, ನೌಕರಿ ಇಲ್ಲದವರಿಗೆ ನೌಕರಿ ಕೊಡುತ್ತಿದ್ದೆವು.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ನೀವು ಕೇಳಿದವರಿಗೆಲ್ಲಾ ಟಿಕೆಟ್ ಕೊಡುತ್ತಿದ್ದೀರಿ ಅಷ್ಟೆ.

ಶ್ರೀ ಎಂ, ಎಲ್. ಉಸ್ತಾದ್,—ಆದರೆ ಇವತ್ತಿನ ಪರಿಸ್ಥಿತಿ ಏನಾಗಿದೆ ? ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಒಂದು ಕುಟುಂಬಕ್ಕೆ ಒಂದು ನೌಕರಿ ಕೊಡುತ್ತೇವೆ ಎಂದು ಹೇಳಿದ್ದೀರಿ. ೧೯೮೩ನೇ ಇಸವಿಯಲ್ಲಿ ಜನತಾಪಕ್ಷ ಅಧಿಕಾರಕ್ಕೆ ಬಂದಾಗ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿರುವುದು ಎಲ್ಲರಿಗೂ ಗೊತ್ತುಂಟು. ನೌಕರಿ ಕೊಡುವುದು ದೂರ ಉಳಿಯಿತು. ೧೯೮೩ರಲ್ಲಿ ೨೮ ಸಾವಿರ ಸರ್ಕಾರಿ ನೌಕರರ ಹುದ್ದೆಗಳು ಖಾಲಿ ಇದ್ದರೆ ಇವತ್ತಿನ ದಿವಸ ೮೦ ಸಾವಿರಕ್ಕೂ ಹೆಚ್ಚು ಖಾಲಿ ಇವೆ. ಹುಡ್ಕೊ ಸ್ಕೀಮ್ ಹುಡುಕಾಡುವ ಹಾಗೆ ಆಗಿದೆ, ಅದೆಲ್ಲೂ ಸಿಕ್ಕಿಲ್ಲ. ಕಾಂಗ್ರೆಸ್ಸಿಗೆ ಓಟು ಕೊಟ್ಟಿದ್ದಾರೆ ಎಂದು ಬಡವರಿಗೆ ಮನೆ ಕೊಡುವುದಿಲ್ಲ. ಅರ್ಬನ್ ಡೆವಲಪ್‌ಮೆಂಟ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ೧೯೮೦ನೇ ಇಸವಿಯಲ್ಲಿ ಪಾರ್ಲಿಮೆಂಟ್ ಚುನಾವಣೆಗೆ ಬಂದಾಗ ಪಬ್ಲಿಕ್ ಭಾಷಣ ಮಾಡಿದ್ದುಂಟು. ಅದು ಪತ್ರಿಕೆಯಲ್ಲೂ ಕೂಡ ಬಂತು. ಅಲ್ಲಿ ಭಾಷಣ ಮಾಡಿದಾಗ ಗುಂಡೂರಾಯರಿಗೆ ಏನು ಗೊತ್ತು ಬಿಜಾಪುರದ ಇತಿಹಾಸ ಬಿಜಾಪುರದ ರಸ್ತೆಯ ಇತಿಹಾಸ, ಅವರು ಹೆಲಿಕ್ಯಾಪ್ಟರ್‌ನಲ್ಲಿ ಬಂದು ಹೋಗಿಬಿಡುತ್ತಾರೆ, ಬಿಜಾಪುರದ ರೋಡಿನ ಪರಿಸ್ಥಿತಿ ನೋಡಿದರೆ ನಾಚಿಕೆ ಬರುತ್ತದೆ ಎಂದು ಹೇಳಿದ್ದರು. ಸ್ವಾಮಿ ತಮ್ಮ ಸರ್ಕಾರ ಬಂದಾಗ ಮಾಡಿದ್ದು ಏನು ? ಇವತ್ತು ಬಿಜಾಪುರದ ಪರಿಸ್ಥಿತಿ ಅಷ್ಟೇ ಅಲ್ಲ, ಎಲ್ಲಾ ಮುನಿಸಿಪಾಲಿಟಿಗಳಲ್ಲೂ ಇದೇ ಪರಿಸ್ಥಿತಿ ಇದೆ. ಇನ್ನು ಕೆಲವು ದಿವಸಗಳಲ್ಲಿ ಹೀಗೇ ಬಿಟ್ಟರೆ ರಸ್ತೆಗಳು ಸ್ಲಮ್‌ಗಳ ತರಹ ಆಗುತ್ತವೆ. ಇವತ್ತಿಗೂ ಹಣ ಮಂಜೂರಾಗಿಲ್ಲ. ಮೊದಲು ೧೫ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಬೇಕು ಮಾನ್ಯ ಬೊಮ್ಮಾಯಿಯವರು ಮುಖ್ಯಮಂತ್ರಿಯಾಗಿ ಅಧಿಕಾರವನ್ನು ವಹಿಸಿಕೊಂಡಾಗ ಪ್ರಥಮವಾಗಿ ಬಿಜಾಪುರಕ್ಕೆ ಬಂದರು. ಆಗ ಶಾಸಕರ ಜೊತೆಯೂ ಮೀಟಿಂಗ್ ಮಾಡಿದರು. ಪಬ್ಲಿಕ್ ಮೀಟಿಂಗ್ ಕೂಡ ಮಾಡಿದರು. ಬಿಜಾಪುರದ ರಸ್ತೆ ಸಲುವಾಗಿ ಸ್ಪೆಷಲ್ ಗ್ರ್ಯಾಂಟ್ ಎಂದು ೧೭ ಲಕ್ಷ ರೂಪಾಯಿಗಳನ್ನು ತಕ್ಷಣವೇ ಬಿಡುಗಡೆ ಮಾಡುತ್ತೇವೆಂದು ಹೇಳಿದರು. ನೀರಿನ ಸಲುವಾಗಿ ಮುಂದಿನ ಬಜೆಟ್‌ನಲ್ಲಿ ಸ್ಕೀಂನ್ನು ಇನ್‌ಕ್ಲೂಡ್ ಮಾಡುತ್ತೇನೆಂದು ಹೇಳಿದ್ದುಂಟು. ಅದು ಪತ್ರಿಕೆಯಲ್ಲೂ ಬಂತು. ಬಿಜಾಪುರದ ಜನ ಚಪ್ಪಾಳೆ ಕೂಡ ತಟ್ಟಿದರು. ಆದರೆ ಇವತ್ತಿನವರೆಗೆ ಆ ಬಾಬಿನಲ್ಲಿ ಒಂದು ಪೈಸೆ ಸಹ ಬಂದಿಲ್ಲ. ಏಕೆ ಈ ರೀತಿ ಸುಳ್ಳು ಹೇಳುತ್ತೀರಿ ? ನಿಮ್ಮ ಕೈಯಲ್ಲಿ ಮಾಡುವುದು ಇದ್ದರೆ ಮಾಡುತ್ತೇವೆಂದು ಹೇಳಿ. ಇಲ್ಲದಿದ್ದರೆ ಆಗುವುದಿಲ್ಲ ಎಂದು ಹೇಳಿ. ಇನ್ನೊಂದು ವಿಚಾರ. **Annexure-III 3 Augmentation of Bijapur Water Supply Scheme from Krishna River II Stage** ಅದು ಇನ್‌ಕ್ಲೂಡ್ ಆಗುತ್ತದೆಂದು ನಾನು ತಿಳಿದುಕೊಂಡಿದ್ದೆ. ಇದರ ಬಗ್ಗೆ ಬಹಳ ವರ್ಷಗಳಿಂದಲೂ ಹೇಳುತ್ತಿದ್ದೇನೆ. ಆದರೆ ಒಂದು ಏನಾಗಿದೆ ಎಂದರೆ ಏನನ್ನು ಮಾಡುತ್ತೇನೆಂದೂ ಈ ಸರ್ಕಾರ ಹೇಳುತ್ತದೆಯೋ ಅದರ ಮೇಲೆ ಭರವಸೆಯೇ ಇಲ್ಲವ ಹಾಗೆ ಆಗಿದೆ. ಏಕೆಂದರೆ, ೧೯೮೩ ರಿಂದ ಇವತ್ತಿನವರೆಗೆ ಯಾವ ಪ್ರಕಾರ ಇವರು ನುಡಿದಿದ್ದಾರೋ ಆ ಪ್ರಕಾರ

ನಡೆದುಕೊಂಡೇ ಇಲ್ಲ. ನಮ್ಮ ಜಿಲ್ಲೆಯ ಇಬ್ಬರೂ ಮಂತ್ರಿಗಳೂ ಸದನದಲ್ಲೇ ಇದ್ದಾರೆ ತಮಗೆ ಒಂದು ಮಾತನ್ನು ಹೇಳುತ್ತೇನೆ. ಅದನ್ನು ಪ್ರಾಮಾಣಿಕವಾಗಿ ಪ್ರಯತ್ನ ಮಾಡುವುದು. The last additional pipeline from under bridge at Bijapur is about 15-16 crores ೧೫ ರಿಂದ ೧೬ ಕೋಟಿ ರೂಪಾಯಿಗಳ ಯೋಜನೆಯಾದರೂ ಈ ಸಾಲಿನ ಬಜೆಟ್‌ನಲ್ಲಿ ತಾವು ಅಟಲೀಸ್ಟ್ ೫-೬ ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಆ ರೀತಿ ಮಾಡಿದರೆ ಮಾತ್ರ ತಾವು ಶಹಭಾಸಗಿರಿಯನ್ನು ತೆಗೆದುಕೊಳ್ಳುತ್ತೀರಿ. ನಾನು ಆ ನಗರದ ನೀರಿನ ಸಮಸ್ಯೆಯ ಬಗ್ಗೆ ಇದೇ ಅಸೆಂಬ್ಲಿಯಲ್ಲಿ ಬೊಬ್ಬೆ ಹೊಡೆದುಕೊಂಡಿದ್ದು ಎಲ್ಲರಿಗೂ ಗೊತ್ತುಂಟು.

ಅಧ್ಯಕ್ಷರು.—ಹೌದು ನೀವು ಹೋದಸಾರಿ ಬೊಬ್ಬೆ ಹೊಡೆದುಕೊಂಡಿರಿ.

ಶ್ರೀ ಎಂ. ಎಲ್. ಉಸ್ತಾದ್.—ಆದರೆ ಈ ಸಲ ಯಾವುದರಲ್ಲಿ ಹೊಡೆದುಕೊಳ್ಳಬೇಕು ? ಹೋದಸಲ ನಾನು ಬಾಯಿ ಬಡಿದುಕೊಂಡರೂ ಅದನ್ನು ಕಾರ್ಯಗತ ಮಾಡಲಿಲ್ಲ. ಈ ಸಲ ಇನ್ನಾ ತರಲ್ಲಿ ಹೊಡೆದುಕೊಳ್ಳಬೇಕು ಎಂಬುದನ್ನು ನಿಮಗೇ ಬಿಡುತ್ತೇನೆ. ನೀವು ಶ್ಯಾಣೇರು ಇದ್ದರೆ ತಿಳಿದುಕೊಳ್ಳುತ್ತೀರೆಂಬುದಾಗಿ ನಾನು ಭಾವಿಸುತ್ತೇನೆ. ನಾವು ಮೊದಲು ಬಾಂಬೆ ರಾಜ್ಯದಲ್ಲಿದ್ದಂತಹ ವರು. ನಮ್ಮ ರಾಜ್ಯಕ್ಕೆ ಆ ಭಾಗವನ್ನು ಸೇರಿಸಿಕೊಂಡಾಗಿನಿಂದಲೂ ಆ ಭಾಗವನ್ನು ಕಡೆಗಣಿಸುತ್ತಾ ಬಂದಿದ್ದಾರೆ. ನಮ್ಮ ಭಾಗ ಮಹಾರಾಷ್ಟ್ರದ ಸೋಲಾಪುರಕ್ಕೆ ಬಹಳ ಸಮೀಪ ಇದೆ. ನಾವು ಮೊದಲು ಬಾಂಬೆಯಲ್ಲಿದ್ದೆವು. ನಾನು ಮೊನ್ನೆ ಸೋಲಾಪುರಕ್ಕೆ ಹೋಗಿದ್ದೆ. ಇಲ್ಲಿ ನೀರಿಗೆ ಯಾವುದೇ ರೀತಿಯ ಕೊರತೆ ಇಲ್ಲ. ಆದರೂ ಮುಂದಾಲೋಚನೆಯನ್ನು ಮಾಡಿ ಆ ನಗರಕ್ಕೆ ಇನ್ನೂ ಒಂದು ಅಡಿಷನಲ್ ಪೈಪನ್ನು ಭೀಮಾನದಿಯಿಂದ ಸೋಲಾಪುರಕ್ಕೆ ಹಾಕಿದ್ದಾರೆ. ನಾವು ಎಲ್ಲೇ ಇದ್ದರೂ ಭಾರತದವರೆ. ಒಂದು ರೀತಿಯಲ್ಲಿ ನಾವು ಮಹಾರಾಷ್ಟ್ರದಲ್ಲಿದ್ದಿದ್ದರೆ ಚೆನ್ನಾಗಿತ್ತು ಎಂಬುದಾಗಿ ಆ ಭಾಗದ ಜನರು ಮಾತನಾಡಿಕೊಳ್ಳುತ್ತಿದ್ದಾರೆ. ಬಿಜಾಪುರದ ಜನರಿಗೆ ಕುಡಿಯುವ ನೀರು ಇಲ್ಲವೇ ಇಲ್ಲ. ಇರಿಗೇಷನ್ ಅಂತೂ ದೂರವೇ ಉಳಿಯಿತು. ಕುಡಿಯುವ ನೀರಿಗೂ ತೊಂದರೆ ಕೊಡುತ್ತಿದ್ದಾರೆಂದು ಆ ಜನ ಮಾತನಾಡಿಕೊಳ್ಳುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಅದರ ಸಲುವಾಗಿ ಇದೇ ರೀತಿಯ ಧೋರಣೆ ಯನ್ನು ಸರ್ಕಾರ ಮುಂದುವರಿಸುವುದಾದರೆ, ಭಾರಿ ದೊಡ್ಡ ಪ್ರಮಾಣದಲ್ಲಿ ಹೋರಾಟವನ್ನು ನಾವು ಮಾಡಬೇಕಾಗುತ್ತದೆಂದು ತಮ್ಮ ಮೂಲಕ ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ.

ಇದೇ ಪ್ರಕಾರ ಶ್ರೀ ಎಂ. ಎಸ್. ಪಾಟೀಲ್‌ರವರ ಕ್ಷೇತ್ರವೂ ಕೂಡ ಮೊದಲು ಮಹಾರಾಷ್ಟ್ರ ರಾಜ್ಯದಲ್ಲಿತ್ತು. ಅವರೂ ಕೂಡ ಆ ಭಾಗದ ಜನರ ಕುಡಿಯುವ ನೀರಿನ ಸಲುವಾಗಿ ಉಪವಾಸ ಸತ್ಯಾಗ್ರಹವನ್ನು ಕೈಗೊಂಡರು, ಮಾಜಿ ಮುಖ್ಯಮಂತ್ರಿಗಳಾದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಅಲ್ಲಿಗೆ ಬಂದು ಕಲ್ಲು ಹಾಕಿ ಹೋದರು ಆದರೆ ಇನುವರೆವಿಗೂ ಅದು ಕಾರ್ಯಗತವಾಗಲೇ ಇಲ್ಲ. ಇದರ ಬಗ್ಗೆಯೂ ಸರ್ಕಾರ ಎಚ್ಚರ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಹೆಲ್ತ್ ಬಗ್ಗೆ ಹೇಳುವುದಾದರೆ, ಸಿರಿಂಜ್ ಇದ್ದರೆ ಔಷಧಿ ಇದ್ದರೆ ಡಾಕ್ಟರ್ ಇಲ್ಲ. ಎಲ್ಲಿ ಪೇಷೆಂಟ್‌ಗಳು ಇದ್ದಾರೆಯೋ ಅಲ್ಲಿ ಆಸ್ಪತ್ರೆಗಳಿಲ್ಲ. ಅದರಲ್ಲೂ ಮಂಡಲ್‌ದೊಂದು ಗೋಂದಲ. ಇದರ ಸಲುವಾಗಿ ಮಾನ್ಯ ಸಚಿವರು ಗಮನಹರಿಸಬೇಕು.

ಇನ್ನು ಎಜುಕೇಶನ್ ಬಗ್ಗೆ ಹೇಳುವುದಾದರೆ, ೧೯೮೩ ರಿಂದ ಇವತ್ತಿನವರೆಗೂ ಬಿಜಾಪುರ ಪಟ್ಟಣಕ್ಕೆ ಒಂದು ಶಾಲೆಯನ್ನೂ ಕೊಟ್ಟಿಲ್ಲ. ಇದ್ದ ಶಾಲೆ ಇನ್ನೂ ರಿಪೇರಿಯೆ ಆಗಿಲ್ಲ. ಬಿಲ್ಡಿಂಗ್ ಕೆಲಸವಂತೂ ದೂರವೇ ಉಳಿಯಿತು. ಈ ಬಗ್ಗೆ ಜಿಲ್ಲಾಪರಿಷತ್ತಿನವರನ್ನು ಎನ್ನುತ್ತಾರೆ. ಕೇಳಿದರೆ ಇದು ನಮಗೆ ಬರುವುದಿಲ್ಲವಾದ್ದರಿಂದ ಸರ್ಕಾರಕ್ಕೆ ನೇರವಾಗಿ ಕೇಳಿ ಇಲ್ಲಿ ಸರ್ಕಾರಕ್ಕೆ ಕೇಳಿದರೆ ಜಿಲ್ಲಾಪರಿಷತ್ತಿನವರಿಗೆ ಕೇಳಿ ಎಂದು ಹೇಳುತ್ತಾರೆ. ಇವರ ಬಗ್ಗೆ ತಾವು ಒಂದು ನಿರ್ದಿಷ್ಟವಾದ ರೂಲ್ಸ್ ಫ್ರೇಮ್ ಮಾಡಬೇಕೆಂದು ಹೇಳುತ್ತೇನೆ. ಇನ್ನು ಸೈನ್ಸ್ ಮತ್ತು ಟೆಕ್ನಾಲಜಿ ಬಗ್ಗೆ ಹೇಳಬೇಕೆಂದರೆ. ಯಾವ ಪ್ರಕಾರ ನಮ್ಮ ಸರ್ಕಾರ ಇವರ ಬಗ್ಗೆ ಆಸಕ್ತಿ ವಹಿಸಬೇಕೋ ಆ ರೀತಿ ಮಾಡುವುದಕ್ಕೆ ಹತ್ತಿಲ್ಲ. ನಮ್ಮ ಬಿಜಾಪುರದಲ್ಲಿ ಎಕ್ಸ್‌ಸರ್ವಿಸ್‌ಮನ್ ಭೋಸ್ಲೆ ಎನ್ನುವವರು ಸೈನ್ಸ್ ಮತ್ತು ಟೆಕ್ನಾಲಜಿ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿದ್ದು ಅವರು ಇನ್ನೂ ಮುಂದೆ ಹೋಗಿ ಅಧ್ಯಯನ ಮಾಡಬೇಕೆಂದರೆ ಅವರಿಗೆ ಸರ್ಕಾರದಿಂದ ಸರಿಯಾದ ಪ್ರೋತ್ಸಾಹ ಸಿಕ್ಕುತ್ತಿಲ್ಲ ಈ ಒಂದು ಕ್ಷೇತ್ರದಲ್ಲಿ ಪ್ರತಿಭಾವಂತ ಯುವಕರನ್ನು ಗುರ್ತಿಸಿ ಇದರ ಬಗ್ಗೆ ಸಮಗ್ರ ಯೋಜನೆಯನ್ನು ಸರ್ಕಾರ ರೂಪಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇವತ್ತು ಪಂಚಾಯಿತಿರಾಜ್

ಬಗ್ಗೆ ಹೇಳಬೇಕೆಂದರೆ, ಇವತ್ತು ನಾವು ಪಂಚರನ್ನು ಹುಡುಕುವುದಕ್ಕೆ ಬುತ್ತಿಯನ್ನು ಕಟ್ಟಿಕೊಂಡು ಹೋಗಬೇಕಾದ ಪರಿಸ್ಥಿತಿ ಬಂದಿದೆ. ಇವತ್ತಿನ ದಿವಸ ಮಂಡಲದಲ್ಲಿ ಯಾವುದೇ ಕಾರ್ಯಕ್ರಮಗಳನ್ನು ಹಾಕುವುದಿಲ್ಲ. ಈ ಹಸಿರು ಕಾರ್ಡ್ ನೀಲಿ ಕಾರ್ಡ್ ಕೇಸರಿ ಕಾರ್ಡ್ ಬಗ್ಗೆ ನಮಗೆ ಮೊನ್ನೆಗೊತ್ತಾಯಿತು ಜನತಾ ದಳದವರು ಹಸಿರು ಕಾರ್ಡನ್ನು ತೆಗೆದುಕೊಂಡು ಹೋದರು, ಜನತಾದವರು ಕೇಸರಿ ಕಾರ್ಡ ಗಳನ್ನು ತೆಗೆದುಕೊಂಡುಹೋದರು. ಇವತ್ತು ಮಂಡಲದ ಕಾರ್ಯಕ್ರಮಗಳು ಬರೀ ಗೊಂದಲದಲ್ಲೆ ನಡೆಯುತ್ತಿವೆ. ಮಂಡಲದವರ ಮಾತನ್ನು ಜಿಲ್ಲಾ ಪರಿಷತ್ತಿನವರು ಕೇಳುವುದಿಲ್ಲ, ಜಿಲ್ಲಾ ಪರಿಷತ್ತಿನವರ ಮಾತನ್ನು ಮಂಡಲದವರು ಕೇಳುವುದಿಲ್ಲ. ಇವತ್ತು ಕಂಟ್ರಾಕ್ಟ್ ಮಾಡುವುವರ ಸಂಖ್ಯೆ ಜಾಸ್ತಿಯಾಗಿದೆ ಮತ್ತೆ ಹೆಣ್ಣು ಮಕ್ಕಳಿಗೆ ೩೦ ಪರ್ಸೆಂಟ್ ರಿಸರ್ವೇಷನ್ ಕೊಡುತ್ತೇವೆಂದು ಹೇಳಿದ್ದೀರಿ. ಇವತ್ತು ಜಾಗ ಇಲ್ಲ, ನೌಕರಿ ಇಲ್ಲದಮೇಲೆ ಇದನ್ನು ಹೇಗೆ ಕೊಡುತ್ತೀರಿ ? ಇದರ ಬಗ್ಗೆ ತಾವು ಒಂದು ರೂಪರೇಶೆ ಹಾಕಬೇಕು. ಇವತ್ತು ಉರ್ದು ಡೈರೆಕ್ಟೋರೇಟ್ ಬಗ್ಗೆ ಹೇಳಿದ್ದೀರಿ. ಇವತ್ತು ಉರ್ದು ಹೇಳುವವರು ಡೈರೆಕ್ಟರ್ ಆಗಬೇಕು. ಇವತ್ತು ಮೈನಾರಿಟೀಸ್ ಏನಿದ್ದಾರೆ, ಅವರು ಮುಸ್ಲಿಮರೇ ಇರಬಹುದು, ತಮಿಳರೇ ಇರಬಹುದು ತೆಲುಗರೇ ಇರಬಹುದು ಅವರನ್ನು ತಾವು ಕಡೆಗಣಿಸಿದ್ದೀರಿ. ೧೯೮೭ ರಿಂದ ಇಲ್ಲಿಯವರೆಗೆ ಬಿಜಾಪುರದಲ್ಲಿ ಒಂದು ಉರ್ದು ಶಾಲಾ ಟೀಚರನ್ನು ತುಂಬಿಲ್ಲ. ಇದರ ಬಗ್ಗೆ ಹೆಚ್ಚು ಹಿತಾಸಕ್ತಿ ವಹಿಸಿ ಆದಷ್ಟು ಮಟ್ಟಿಗೆ ಅವರಿಗೆ ನ್ಯಾಯ ದೊರಕಿಸಿ ಕೊಡಬೇಕು. ೧೯೮೭-೮೮ನೇ ಸಾಲಿನಲ್ಲಿ ನಮ್ಮ ಜಿಲ್ಲೆಯ ಡಿಡಿಪಿಐ ಅವರು ೧೮೬ ಜಾಗಗಳು ಖಾಲಿ ಇವೆ ಎಂದು ಪತ್ರ ಬರೆದಿದ್ದರೂ ಇವತ್ತಿನವರೆಗೆ ಶಿಕ್ಷಕರ ಹುದ್ದೆಗಳನ್ನು ತುಂಬುವ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಇದರ ಬಗ್ಗೆ ಸರ್ಕಾರ ಹಿತಾಸಕ್ತಿ ವಹಿಸಿ ಉರ್ದು, ಮಲಯಾಳಿ, ಮರಾಠಿ ಹಾಗೂ ಇನ್ನಿತರ ಟೀಚರ್ ಹುದ್ದೆಗಳನ್ನು ತುಂಬುವ ಬಗ್ಗೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಹೇಳಿ ೫ ನಿಮಿಷ ಹೆಚ್ಚು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಸ್. ಕಡಪಟ್ಟಿ.—(ಹುನಗುಂದ).—ಸನ್ಮಾನ್ಯ ಅಧ್ಯಕ್ಷರೇ, ೧೯೮೯-೯೦ನೇ ಸಾಲಿನ ಆಯವ್ಯಯನ್ನು ಸ್ವಾಗತಿಸುತ್ತಾ, ಇದರಲ್ಲಿ ನಮ್ಮ ಕೆಲವು ಹಿರಿಯ ಸ್ನೇಹಿತರು ಕೇಂದ್ರ ಸರ್ಕಾರವನ್ನು ದೂಷಣೆ ಮಾಡಿದ್ದು ನೋಡಿ ಏನೋ ಇವರಿಗೆ ರೋಗ ಬಂದಿದೆ ಎನ್ನುವಂತೆ ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿದರು. ಏಕೆ ಇವರಿಗೆ ಈ ಭಾವನೆ ಬಂತೋ ನನಗೆ ಅರ್ಥವಾಗುವುದಿಲ್ಲ. ಹಿಂದೆ ದಿವಂಗತ ದೇವರಾಜ್ ಅರಸ್ ಅವರ ಕಾಲದಲ್ಲೂ ಕೂಡಾ ಫೈನಾನ್ಸ್ ಕಮಿಷನ್‌ಗೆ ರೆಪ್ರಸೆಂಟೇಷನ್ ಕೊಡುವಾಗ ಕೂಡಾ ನಾವು ೯ನೇ ಹಣಕಾಸಿನ ಆಯೋಗಕ್ಕೆ ಕೊಟ್ಟ ರೆಪ್ರಸೆಂಟೇಷನ್ ನಲ್ಲಿ ಕೂಡಾ ಇಂತಹ ಅನೇಕವು ಇದ್ದವು. ಫೆಡರಲ್ ಸಿಸ್ಟಮ್ ಆಫ್ ಗೌರ್ವಮೆಂಟ್‌ನಲ್ಲಿ ರಾಜ್ಯಕ್ಕೆ ನ್ಯಾಯವಾಗಿ ಬರಬೇಕಾದುದು ಬಂದಿದ್ದರೆ ಅನುಕೂಲ ಆಗುತ್ತಾ ಇತ್ತು ಎನ್ನುವುದರಲ್ಲಿ ನಮ್ಮ ಸ್ನೇಹಿತರು ಅದನ್ನು ಬೇರೆ ಎಂದು ಭಾವನೆ ಮಾಡದೇ ರಾಜ್ಯದ ಹಿತರಕ್ಷಣೆಗಾಗಿ ಕಾಲು ಕೆದರಿ ಇಂಥಹದ್ದು ಮಾಡುವುದು ಅಲ್ಲ. ರಾಜ್ಯದ ಅಭಿವೃದ್ಧಿಗೆ ಏನು ಬರಬೇಕೊ ಅ ಬಗ್ಗೆ ಅಭಿಪ್ರಾಯ ವ್ಯಕ್ತ ಮಾಡಿದರೆ ಅವರು ಮನಸ್ಸಿಗೆ ಬೇಜಾರು ಮಾಡಿಕೊಳ್ಳುವುದನ್ನು ಇನ್ನು ಮುಂದಾದರೂ ಬಿಡಬೇಕು. ಉದಾಹರಣೆಗೆ ಹೇಳುವುದಾದರೆ, ಹೋದಸಲ ಬರಗಾಲದ ಸಲುವಾಗಿ ಇನ್‌ಕಂಟ್ಯಾಕ್ಸ್ ಸರ್ಚಾರ್ಜ್ ಹಾಕಿದರು, ಅಂದಾಜು ೫೦೦ ಕೋಟಿ ರೂಪಾಯಿಗಳ ಆದಾಯ ಬರುತ್ತದೆನ್ನುವ ಅಭಿಪ್ರಾಯ ವನ್ನು ವ್ಯಕ್ತ ಮಾಡಿದ್ದರು. ಕಳೆದ ಅನೇಕ ವರ್ಷಗಳಿಂದ ಕರ್ನಾಟಕ ರಾಜ್ಯದಲ್ಲಿ ಬರಗಾಲ ಇದ್ದರೂ ಸಹಿತ ಕೇಂದ್ರ ಸರ್ಕಾರಕ್ಕೆ ಅನೇಕ ಸಲ ಮನವಿ ಮಾಡಿದಾಗ, ಪ್ಲಾನ್ ಅಡ್ವಾನ್ಸ್ ಎಂದು ಹಣವನ್ನು ಕೊಟ್ಟರೆ ವಿನಹ ಕಳೆದ ಸಲ ಬರಗಾಲಕ್ಕಿಂದು ಕೂಡಿಸಿದಂತ ಹಣದಲ್ಲಿ ಕರ್ನಾಟಕ ರಾಜ್ಯಕ್ಕೆ ಒಂದು ಪೈಸೆಯನ್ನೂ ಸಹ ಕೊಡಲಿಲ್ಲ. ಪೂಲ್‌ನಿಂದ ರಾಜ್ಯಗಳಿಗೆ ಹಣ ಬರುತ್ತದೆನ್ನುವ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಕೇಂದ್ರ ಸರ್ಕಾರ, ಬೇರೆ ರಾಜ್ಯ ಸರ್ಕಾರಗಳು, ಆ ಪಕ್ಷ ಈ ಪಕ್ಷ ಎಂದು ಹೇಳುತ್ತಿಲ್ಲ. ನಮ್ಮ ಹಿರಿಯ ಸದಸ್ಯರು ತಮ್ಮ ವಕೀಲಿಯನ್ನು ಮಾಡಿ ಕೆಲಸ ಮಾಡಿದರೆ ಒಳ್ಳೆಯ ದಾಗುತ್ತದೆ. ರಾಜ್ಯಕ್ಕೆ ಯಾವ ಮೂಲದಿಂದ ಹೆಚ್ಚಿನ ಹಣಕಾಸಿನ ನೆರವು ಬರುತ್ತದೆ, ಅನುಕೂಲತೆ ಗಳು ಬರುತ್ತವೆನ್ನುವ ಬಗ್ಗೆ ಆಪ್ತಾಲೋಚನೆ ಮಾಡಿ, ಸಮಾಲೋಚನೆ ಮಾಡಿ ಕೆಲಸ ಮಾಡಬೇಕು.

ಶ್ರೀ ಕೆ. ಹೆಚ್, ಶ್ರೀನಿವಾಸ್.—ಜುರಿಸ್‌ಡಿಕ್ಷನ್ ಇರುವ ಕೋರ್ಟ್ ಆದರೆ ಕೇಳಬಹುದು. ಯಾವ ಜುರಿಸ್‌ಡಿಕ್ಷನ್ ಇಲ್ಲದಿರುವ ಕೋರ್ಟ್‌ನಲ್ಲಿ ವಾದ ಮಾಡಿದರೆ ಏನು ಪ್ರಯೋಜನ ?

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಎಸ್. ಎಸ್. ಕಡಪಟ್ಟಿ.—ಜುರಿಸ್‌ಡಿಕ್ಷನ್ ಬಗ್ಗೆ ಪ್ರಥಮವಾಗಿ ಎತ್ತಿದಂತಹ ಶ್ರೇಯಸ್ಸು ಕರ್ನಾಟಕ ರಾಜ್ಯಕ್ಕೆ ಸಲುತ್ತದೆ ಅದನ್ನು ತಾವು ಒಪ್ಪುತ್ತೀರಿ. ರಾಜ್ಯಗಳಿಗೆ ಬರುವಂತಹ ಹಣವನ್ನು ಕೇಂದ್ರ ಸರ್ಕಾರ ಇಟ್ಟುಕೊಳ್ಳುವುದು ಏನಿದೆ ಅದನ್ನು ಸಂಪೂರ್ಣವಾಗಿ ಬದಲಾವಣೆ ಮಾಡಬೇಕು. The entire credit should go to the former Chief Minister Sri Ramakrishna Hegde.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಎಲ್ಲಾ ಸರ್ಕಾರಗಳೂ ಹೇಳಿವೆ. ಎಲ್ಲಿ ಹೇಳಬೇಕೋ ಅಲ್ಲಿ ಹೇಳಿ. ಇಲ್ಲಿ ಹೇಳಿ ಹೆಗಲು ತಟ್ಟಿಕೊಂಡರೆ ಹೇಗೆ ?

ಶ್ರೀ ಎಸ್. ಎಸ್. ಕಡಪಟ್ಟಿ.—ನಿಮಗೆ ಏತಕ್ಕೆ ಮುಜುಗರ ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇದು ಸಂಬಂಧವಿಲ್ಲ.

ಶ್ರೀ ಎಸ್. ಎಸ್. ಕಡಪಟ್ಟಿ.—ಯಾವ್ಯಾವ ಫೋರಂನಲ್ಲಿ ಹೇಳಬೇಕೋ ಅಲ್ಲೆಲ್ಲಾ ಹೇಳಿ ಆಯಿತು. ತತ್ವಶಃ ಒಪ್ಪಿಕೊಂಡು ಹೀಗೆ ಮಾಡಿದರೆ ಹೇಗೆ ? ಹಿಂದಿನ ಪಾರ್ಲಿಮೆಂಟಿನ ಎಸ್ಟಿಮೇಟ್ ಕಮಿಟಿಯ ನಜರಿಗೆ ಈ ವಿಷಯವನ್ನು ತರಲಾಯಿತು. ವರ್ಲ್ಡ್ ಬ್ಯಾಂಕಿನಿಂದ ಎಷ್ಟು ಹಣ ಬರುತ್ತದೆ ಅಷ್ಟನ್ನು ಕೇಂದ್ರಸರ್ಕಾರ ರಾಜ್ಯಸರ್ಕಾರಗಳಿಗೆ ಕೊಡಬೇಕು. ಅವರು ಏನು ಇಂಟರೆಸ್ಟ್ ಚಾರ್ಜ್ ಮಾಡುತ್ತಾರೆ ಅದನ್ನೇ ನಮಗೆ ಚಾರ್ಜ್ ಮಾಡಬೇಕೆಂದು ವಿನಂತಿ ಮಾಡಿಕೊಳ್ಳಲಾಗಿದೆ. ಹಿಂದಿನ ಮುಖ್ಯಮಂತ್ರಿಗಳು, ಈಗಿನ ಮುಖ್ಯ ಮಂತ್ರಿಗಳು ನೇರವಾಗಿ ಈ ವಿಷಯವನ್ನು ಗಮನಕ್ಕೆ ತೆಗೆದುಕೊಂಡಾಗ ಇದು ಎಲ್ಲಾ ರಾಜ್ಯಗಳಿಗೂ ಅನುಕೂಲವಾಗುತ್ತದೆ, ಕರ್ನಾಟಕ ರಾಜ್ಯ ಒಂದಕ್ಕೆ ಅನುಕೂಲವಾಗುವುದಿಲ್ಲ. ಆದಕೋಸ್ಕರ ನಮ್ಮ ರಾಜ್ಯ ಸರ್ಕಾರವನ್ನು ಅಭಿನಂದಿಸಬೇಕು. ತಾವು ಕೂಡಾ ವಕಾಲತ್ತು ವಹಿಸಿ ಕೇಂದ್ರ ಸರ್ಕಾರ ವರ್ಲ್ಡ್ ಬ್ಯಾಂಕ್‌ನವರು ಏನು ಇಂಟರೆಸ್ಟ್ ಚಾರ್ಜ್ ಮಾಡುತ್ತಾರೆ ಅಷ್ಟನ್ನೇ ಮಾಡಬೇಕು. ತಾವು ಕೂಡಾ ತಮ್ಮ ಪ್ರಭಾವವನ್ನು ಬೀರಿ Same interest should be charged to all other States also. ಆ ದೃಷ್ಟಿಯಿಂದ ತಮ್ಮ ಪ್ರಭಾವವನ್ನು ಬೀರಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ರಾಜ್ಯದ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಈಗಾಗಲೇ ಅನೇಕ ಸಲ ಅನೇಕ ಸಂದರ್ಭಗಳಲ್ಲಿ ಹೇಳಿದ್ದಾಗಿದೆ. ಕೇಂದ್ರ ಸರ್ಕಾರದ ಹಣಕಾಸಿನ ಪರಿಸ್ಥಿತಿ ಚೆನ್ನಾಗಿದೆಯೆಂದು ಇದರ ಅರ್ಥವಲ್ಲ. ಒಟ್ಟಾರೆ ಎಲ್ಲರೂ ಕೂಡಿ ಮಾಡುವ ಕೆಲಸ. ಕೇಂದ್ರ ಸರ್ಕಾರ ತನ್ನ ನೌಕರರಿಗೆ ಪಗಾರ ಹೆಚ್ಚು ಮಾಡಿದಾಗ ರಾಜ್ಯ ಸರ್ಕಾರಗಳು ಅನಿವಾರ್ಯವಾಗಿ ಅದನ್ನು ಒಪ್ಪಲೇಬೇಕಾಗುತ್ತದೆ. ಅಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದ್ದಾರೆ. ಈ ದೃಷ್ಟಿಯಲ್ಲಿ ಕೇಂದ್ರ ಸರ್ಕಾರ ಒಂದು ದೃಢ ನಿಲುವು ತೆಗೆದುಕೊಂಡು some celing has to be fixed. ಎಲ್ಲಾ ರಾಜ್ಯಗಳಿಗೆ ಸೂಚನೆ ಕೊಟ್ಟರೆ ಕರ್ನಾಟಕ ರಾಜ್ಯ ಹಿಂದೆ ಬೀಳುವುದಿಲ್ಲ. ನಮ್ಮ ಸ್ನೇಹಿತರೊಬ್ಬರು ಮಾತನಾಡುವಾಗ ಯಾವುದೋ ಖಾತೆಯನ್ನು ಕೊಟ್ಟರೆ ೧೦೦ ಕೋಟಿ ರೂಪಾಯಿಗಳನ್ನು ಮಾಡಿಕೊಡುತ್ತೇನೆಂದು ಹೇಳಿದರು. ತಿಳುವಳಿಕೆ ಹೆಚ್ಚಿದು ಆ ರೀತಿ ಮಾತನಾಡಿದ್ದರೆ ಚೆನ್ನಾಗಿತ್ತು. ಸೇಲ್ಸ್‌ಟ್ಯಾಕ್ಸ್ ೯೫೦ ಕೋಟಿ ರೂಪಾಯಿ ಇದ್ದದ್ದು ಈಗ

೩-೦೦ ಪಿ.ಎಂ.

೧೦೨೦ ಕೋಟಿ ರೂಪಾಯಿ ದಾಟಿದೆ. ಅದೇ ರೀತಿಯ ಎಕ್ಸೈಸ್‌ನಲ್ಲಿ ಹಣ ಜಾಸ್ತಿ ಬಂದಿದೆ. ಇದು ಕೂಡ...

(ಗೊಂದಲ)

ಶ್ರೀ ಎಂ. ರಾಮಪ್ಪ.—ಮುನಿಸಿಪಾಲಿಟಿಗಳಿಗೆ ಅನುದಾನ ಕೊಡಬೇಕಾಗಿದ್ದರೆ ತೆಗೆದು ತೆಗೆದು ಕೊಡುತ್ತಿದ್ದೀರಿ. ಬಳ್ಳಾರಿಯಲ್ಲಿ ಮುನಿಸಿಪಾಲಿಟಿಗಳಿಗೆ ನಾಲ್ಕು ತಿಂಗಳಾಯಿತು ಸಂಬಳ ಇಲ್ಲ.

ಶ್ರೀ ಎಸ್. ಜಿ. ನಂಜಯ್ಯನಮಠ್.—ಸ್ವಾಮಿ ೧೯೮೩ರಿಂದ ಈಚೆಗೆ ೧೨ ಮನೆಗಳನ್ನು ಕಟ್ಟಿದ್ದಾರೆ. ಇದು ಇವರ ನಗರಾಭಿವೃದ್ಧಿ ಸಾಧನೆ.

ಶ್ರೀ ಎಸ್. ಎಸ್. ಕಡಪಟ್ಟಿ.—ನನ್ನ ತಾಲ್ಲೂಕಿನ ಬಗ್ಗೆ ಹೇಳಬೇಕಾದರೆ, ಇವರು ಕಟ್ಟಿಸಿದಂಥ ಮನೆಗಳು ಜೀವಂತ ಇವೆಯೋ ಎಂಬುವನ್ನು ಬಂದು ನೋಡಿ.

ಶ್ರೀ ಎಸ್. ಜಿ. ನಂಜಯ್ಯನಮಠ.—ನಿಮ್ಮದು ಕೂಡ ಹೋಗಿ ನೋಡಿ.

ಶ್ರೀ ಬಾಬು ರೆಡ್ಡಿ ವಿ. ತುಂಗಳ,—ನಮ್ಮ ಸರ್ಕಾರ ಬಂದ ಮೇಲೆ ಗುಳೇದಗುಡ್ಡಕ್ಕೆ ನೀರಿನ ವ್ಯವಸ್ಥೆ ಮಾಡಿದ್ದು ನಿಜ. ಅದಕ್ಕೆ ಅವರು ನಮ್ಮ ಸರ್ಕಾರವನ್ನು ಅಭಿನಂದಿಸಬೇಕು.

(ಗೊಂದಲ)

ಶ್ರೀ ಪಟವರ್ಧನ ರತ್ನಾಕರ್.—ಸನ್ಮಾನ್ಯ ಅಧ್ಯಕ್ಷರೇ, ಶ್ರೀ ಕಡಪಟ್ಟಿಯವರು ಹಳಿ ಮೇಲೆ ನಿಂತಿದ್ದಾರೆ. ಅವರ ಹಳಿ ತಪ್ಪಿದೆ. ಅವರ ರೈಲು ಹಳಿ ತಪ್ಪಿದೆ.

ಅಧ್ಯಕ್ಷರು.—ಶ್ರೀ ಕಡಪಟ್ಟಿಯವರೇ, ನಿಮಗೆ ಭಾಷಣ ಮಾಡುವುದು ಬೇಕಿಲ್ಲವೆಂದು ಕಾಣುತ್ತದೆ. ಆ ಕಡೆಗೆ ಏಕೆ ನೋಡುತ್ತಿದ್ದೀರಿ ? ಅವರಿಗೆ ಏಕೆ ಉತ್ತರ ಕೊಡುವುದಕ್ಕೆ ಹೋಗುತ್ತೀರಿ ?

ಶ್ರೀ ಎಸ್. ಎಸ್. ಕಡಪಟ್ಟಿ.—ನಾನು ತಮ್ಮ ಕಡೆ ನೋಡಿಯೇ ಹೇಳುವುದಕ್ಕೆ ಹತ್ತಿದ್ದೇನೆ. ಇವರಿಂದ ನಾನು ಕೇಳಿ, ಕಲಿಯುವಂತದ್ದು ಬಹುತೇಕ ಈ ದೇಶದಲ್ಲಂತೂ ಇಲ್ಲ. ಇನ್ನು ಕನ್‌ಸಾಯ್ನ್‌ಮೆಂಟ್ ಟ್ಯಾಕ್ಸ್ ಕೂಡ, we should thank the Prime Minister and the Government of India because though late, he has at last conceded to the demands of the State. ಅಂದರೆ ನಾವೇನೂ ಕೃತಘ್ನರು ಅಲ್ಲ. ಕಡೆಗೆ ಅವರು ಬಹಳ ತಡವಾಗಿ ತಿಳಿದುಕೊಂಡು ಒಪ್ಪಿದ್ದಾರೆ ಅನ್ನುವಷ್ಟು ಸೌಜನ್ಯ ನಮ್ಮ ಹತ್ತಿರ ಇದೆ. ಈ ದೃಷ್ಟಿಯಿಂದ ಕೇಂದ್ರ ಸರ್ಕಾರದವರು under the directive principles ಗುಜರಾತಿಗೆ, ತಮಿಳುನಾಡಿಗೆ ಹಣವನ್ನು ಕೊಟ್ಟಿದ್ದಾರೆ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಕರ್ನಾಟಕದಲ್ಲಿ ಮಾಡಿದ್ದಕ್ಕೆ ಮುಕ್ತ ಮನಸ್ಸಿನಿಂದ ಪ್ರಶಂಸೆ ಮಾಡಬೇಕು. ಕರ್ನಾಟಕದ ಪರಿಸ್ಥಿತಿಯನ್ನು ವಿಚಾರ ಮಾಡಿ ತಿಳಿದುಕೊಂಡು ಸಹಾಯ ಮಾಡಬೇಕು, ಸತತವಾಗಿ ಬರಗಾಲ ಬಂದಾಗ ಫೈನಾನ್ಸ್ ಕಮಿಷನ್ ಶಿಫಾರಸ್ಸುಗಳ ಪ್ರಕಾರ ಕೇಂದ್ರ ಸರ್ಕಾರದವರು ಏನು ಹಣ ಬಿಡುಗಡೆ ಮಾಡುತ್ತಾರೆ. ಪ್ಲಾನ್ ಅಡ್ವಾನ್ಸ್ ಎಂದು ಏನು ಕೊಡುತ್ತಾರೆ. ಅದನ್ನು ಗ್ರ್ಯಾಂಟ್ ಎಂದು ಟ್ರಿಟ್ ಮಾಡಬೇಕು. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ ಕೊಡುವ ಈ ಹಣವನ್ನು ಗ್ರ್ಯಾಂಟ್ ಎಂದು ತಿಳಿದುಕೊಂಡು ಡೈವರ್ಟ್ ಮಾಡುವುದಕ್ಕೆ, ಪರಿವರ್ತನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಹಣಕಾಸಿನ ಪರಿಸ್ಥಿತಿ ಬಗ್ಗೆ ೬೦೦ ಕೋಟಿಗೆ ನಮ್ಮ ಪ್ಲಾನ್ ಸೈಜ್‌ನ್ನು ಇಳಿಸುವಂಥಾದ್ದು, ಬಹುತೇಕ ಈಗ ೮೨೦ ಕೋಟಿಯಿಂದ ೮೫೦ ರವರೆಗೆ ಹೋಗಬಹುದು. ಕರ್ನಾಟಕದಲ್ಲಿ ಎಷ್ಟೇ ಹಣಕಾಸಿನ ತೊಂದರೆ ಇದ್ದರೂ ಸಹಿತ ಪ್ಲಾನ್ ಸೈಜನ್ನು ಮುಟ್ಟುವ ರೀತಿಯಲ್ಲಿ ತನ್ನ ಇತಿಮಿತಿಯಲ್ಲಿ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿದೆ. ಎನ್ನುವುದನ್ನು ಸ್ವಾಗತಿಸಬೇಕು. ೯೦೦ಕೋಟಿ ಮುಟ್ಟಿದ್ದರೆ ಇನ್ನಷ್ಟು ಒಳ್ಳೆಯದಾಗುತ್ತಿತ್ತು. ಎಂದು ನಾನು ಹೇಳುತ್ತೇನೆ. ಹೋದಸಲ ಕರ್ನಾಟಕ ಸರ್ಕಾರ ತೊಂದರೆ ಪರಿಸ್ಥಿತಿಯಲ್ಲಿರುವಂಥ ರೈತರಿಗೆ ಬಡ್ಡಿ ಮನ್ನಾ ಮಾಡಿದ್ದಕ್ಕೆ ನಬಾರ್ಡ್‌ನವರು ಕಿರಿಕಿರಿ ಮಾಡಿದರು. ಈ ಸಲ ಕೂಡ, ಇವತ್ತು ಬಂದ ಅನಧಿಕೃತ ಮೂಲಗಳ ಪ್ರಕಾರಸುದ್ದಿ ಏನೆಂದರೆ, NABARD has once again stopped the finance. ಈ ದೃಷ್ಟಿಯಲ್ಲಿ ನಮ್ಮ ಸ್ನೇಹಿತರು, ಹಿರಿಯ ಸದಸ್ಯರಾದ ಶ್ರೀ ಕೆ. ಎಚ್. ಶ್ರೀನಿವಾಸ್‌ರವರು ಮಾನ್ಯ ವಿರೋಧ ಪಕ್ಷದ ನಾಯಕರು, ವಿಚಾರ ಮಾಡಲಿ ರೈತರ ಜೊತೆ ಚೆಲ್ಲಾಟ ಆಡವ ರೀತಿ ಪರಿಸ್ಥಿತಿಯಲ್ಲಿ let the Government ನಬಾರ್ಡ್ should of India should not make it as a weapon to harass the State Government After all they are the part and parcel of the Country, ಈ ದೃಷ್ಟಿಯಲ್ಲಿ ರೈತರಿಗೆ ತೊಂದರೆ ಆಗದ ರೀತಿಯಲ್ಲಿ ನಬಾರ್ಡ್‌ನವರು ಆದೇಶ ಕೊಡಬೇಕು. ರೈತರ ಜೊತೆಯಲ್ಲಿ ಚೆಲ್ಲಾಟ ಆಡುವ ಪರಿಸ್ಥಿತಿ ಆಗಬಾರದು ಎಂದು ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರವನ್ನು ಸಂಪರ್ಕಿಸಿ, NABARD should never stop the finance to the farmers. ಈ ದೃಷ್ಟಿಯಲ್ಲಿ ಕಾರ್ಯಕ್ರಮ ಮಾಡಬೇಕು. ರಾಜ್ಯ ಸರ್ಕಾರದವರು ಕಳೆದ ಸಲ ರೈತರಿಗೆ ಬಡ್ಡಿ ಸಬ್ಸಿಡಿ ಕೊಟ್ಟಿದ್ದರು, ಈ ಸಲವೂ ಕೂಡ ಅದೇರೀತಿಯಲ್ಲಿ ಸಬ್ಸಿಡಿ ಕೊಡಬೇಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ. ಇನ್ನು ನೇಕಾರರ ಪರಿಸ್ಥಿತಿ ಬಗ್ಗೆ ಹೇಳುವು

ದಾದರೆ, ಇವತ್ತು ಅವರಿಗೆ ಬೇಕಾದ ಕಚ್ಚಾ ಮಾಲಿನ ಬೆಲೆಗಳು ಸಿಕ್ಕಾಪಟ್ಟೆ ಹೆಚ್ಚಾಗಿವೆ. ನೇಕಾರರು ಈಗ ಊರು ಬಿಟ್ಟು ಗುಳೆ ಹೋಗುವ ಪರಿಸ್ಥಿತಿ ಬಂದಿದೆ. ಆದ್ದರಿಂದ ಸನ್ಮಾನ್ಯ ಮುಖ್ಯಮಂತ್ರಿಗಳು, ಕೇಂದ್ರಸರ್ಕಾರದ ಜೊತೆ ಸಂಪರ್ಕಿಸಿ, ಕಚ್ಚಾರೇಷ್ಮೆ ನೂಲಿನ ದರ ಕಡಿಮೆಮಾಡಿ, ನೇಕಾರರ ಪರಿಸ್ಥಿತಿ ಸ್ವಲ್ಪ ಸುಗಮವಾಗುವಂತೆ, ಅವರ ಜೀವನ ಸುಗಮ ಆಗುವ ರೀತಿಯಲ್ಲಿ ತಮ್ಮ ಪ್ರಭಾವವನ್ನು ಬೀರಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಕಳೆದ ವರ್ಷ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಕೇಂದ್ರ ಸರ್ಕಾರದ ಈ ನೇಕಾರರಿಗೆ ಸಂಬಂಧಪಟ್ಟ ಮಂತ್ರಿಗಳನ್ನು ಕರ್ನಾಟಕದಲ್ಲಿ ಕರೆಸಿ, ಅವರಿಗೆ ಸಂಪೂರ್ಣವಾಗಿ ಮನವರಿಕೆಯಾಗುವ ರೀತಿಯಲ್ಲಿ ಅವರೊಡನೆ ಚರ್ಚೆ ಮಾಡಿದರೂ ಸಹಿತ, ಇದುವರೆಗೂ ಏನೂ ಫಲಕಾರಿಯಾಗಲಿಲ್ಲ. ಆದ್ದರಿಂದ ಈಗಲಾದರೂ ಕೂಡ ಕೇಂದ್ರಸರ್ಕಾರ ಈ ಬಗ್ಗೆ ಕ್ರಮ ಕೈಗೊಂಡು ರಾಜ್ಯದಲ್ಲಿ, ರೈತರ ಪರವಾಗಿ ಬರುವಂಥ ಈ ನೇಕಾರರಿಗೆ ಸಹಾಯ ಮಾಡಬೇಕು. ಈ ದೃಷ್ಟಿಯಲ್ಲಿ ನಮ್ಮ ಸ್ನೇಹಿತರು ಕೇಂದ್ರಸರ್ಕಾರವನ್ನು ಒತ್ತಾಯ ಮಾಡಬೇಕು. ಒತ್ತಾಯ ಮಾಡಿ, ರಾಜ್ಯದಲ್ಲಿ ಹೆಚ್ಚಿಗೆ ಇರುವಂಥ ನೇಕಾರರ ಬವಣೆಯನ್ನು ದೂರ ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡ ಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಕಳೆದ ಸಲ ನೇಕಾರರಿಗೆ ಹಸಿರು ಕಾರ್ಡ್ ಕೊಡುವುದಾಗಿ ಮಾನ್ಯ ಮುಖ್ಯಮಂತ್ರಿಗಳು ವಾಗ್ದಾನ ಮಾಡಿದ್ದರು. ಆ ಕಾರ್ಯ ಇದುವರೆಗೂ ಈಡೇರಲಿಲ್ಲ. ಇವರಿಗೆ ರಾಜ್ಯ ಸರ್ಕಾರದವರು ಹಸಿರು ಕಾರ್ಡ್ ಕೊಟ್ಟರೆ, ಕೊನೇಪಕ್ಷ ನೇಕಾರರಿಗೆ ಸ್ವಲ್ಪ ಭಾರ ಕಡಿಮೆಯಾಗುತ್ತದೆ, ಅವರಿಗೆ ತೊಂದರೆ ಕಡಿಮೆಯಾಗುತ್ತದೆ, ಒಂದುರೀತಿಯಲ್ಲಿ ಅವರಿಗೆ ಸಹಾಯವಾಗುತ್ತದೆ ಎಂದು ತಮ್ಮ ಮೂಲಕ ವಿನಂತಿಮಾಡಿಕೊಳ್ಳುತ್ತೇನೆ. ಇನ್ನು ನೀರಾವರಿ ಬಗ್ಗೆ ಹೇಳುವುದಾದರೆ. ನಮ್ಮ ಅನೇಕ ಸ್ನೇಹಿತರು ಹೇಳಿದರು. ಆದರೆ ಈ ಅಪ್ಪರ್ ಕೃಷ್ಣಾ ಯೋಜನೆ ಬಗ್ಗೆ ನಮ್ಮ ಈ ಸಲದ ಬಜೆಟ್‌ನಲ್ಲಿ ೭೨ ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳನ್ನು ವಿನಂತಿಸಿಕೊಳ್ಳುವುದೇನೆಂದರೆ, ಈ ಯೋಜನೆಗೆ ೫೦೦ ಕೋಟಿ ರೂಪಾಯಿಗಳ ವಿದೇಶಿ ನೆರವನ್ನು ಏಳೂವರೆ ವರ್ಷಗಳ ಅವಧಿಯಲ್ಲಿ ಪಡೆಯುವ ನಿರೀಕ್ಷೆ ಇದೆ ಎಂಬ ವಿಚಾರ ಹೇಳಿದ್ದಾರೆ. ಈ ರೀತಿ ನಮ್ಮ ರಾಜ್ಯಸರ್ಕಾರದವರು ಕೊಡುತ್ತಾ ಹೋದರೆ. ಕೃಷ್ಣಾ ಕಣಿವೆ ಯೋಜನೆಯನ್ನು ಎರಡು ಸಾವಿರ ವರ್ಷದೊಳಗೆ ಪೂರ್ಣ ಮಾಡುತ್ತೇವೆ ಎನ್ನುವುದು ಬರೀ ಭ್ರಮೆ ಎಂಬುದನ್ನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಈ ರಾಜ್ಯದ ಜನತೆಗೆ ಆದರಲ್ಲಿಯೂ ಸತತವಾಗಿ ಬರಗಾಲಕ್ಕೆ ತುತ್ತಾದ ಪ್ರದೇಶಗಳಿಗೆ ಇವರು ವಂಚನೆ ಮಾಡಿದ ರೀತಿಯಲ್ಲಿ ಇದಾಗುತ್ತದೆ. ಈ ದೃಷ್ಟಿಯಲ್ಲಿ ರಾಜ್ಯ ಸರ್ಕಾರ ಸ್ಪಷ್ಟವಾದ ನಿಲುವು ತಾಳಬೇಕು. ಜಾಗತಿಕ ಬ್ಯಾಂಕಿನಿಂದ ೫೦೦ ಕೋಟಿ ರೂಪಾಯಿಗಳು ಬರುತ್ತದೆ. ಇದಕ್ಕೆ ಏಳೂವರೆ ವರ್ಷಗಳನ್ನು ತೆಗೆದು ಕೊಳ್ಳಬೇಕೇ ? They are prepared. These people should give a plan accordingly. ಈ ದೃಷ್ಟಿಯಲ್ಲಿ ಜಾಗತಿಕ ಬ್ಯಾಂಕ್‌ನವರು ೫೦೦ ಕೋಟಿ ರೂಪಾಯಿ ಗಳನ್ನು ಕೊಡುತ್ತಾ ಇದ್ದರೆ, ರಾಜ್ಯ ಸರ್ಕಾರದವರು ೫ ವರ್ಷಗಳಲ್ಲಿ ಪ್ರತಿ ವರ್ಷ ಎಷ್ಟು ಹಣವನ್ನು ಕೊಡುತ್ತಾರೆ ? ಹೆಚ್ಚು ಹಣವನ್ನು ಒದಗಿಸಿ, ಪ್ರತಿ ವರ್ಷ ಕೆಲಸ ಮಾಡುತ್ತಾ ಬಂದರೆ, ಆ ಭಾಗದ ಜನತೆಗೆ ಉಪಯೋಗವಾಗುತ್ತದೆ. ಆ ಭಾಗದ ರೈತರೂ ರಾಜ್ಯದ, ಇತರ ಭಾಗದ ರೈತರಿಗೆ ಸರಿಸಮನಾಗಿ ಬರುತ್ತಾರೆಂದು ಹೇಳುತ್ತೇನೆ. ಇನ್ನು ರೀಜನಲ್ ಇಂಬ್ಯಾಲೆನ್ಸ್ ಬಗ್ಗೆ ಹೇಳುವುದಾದರೆ we were treated as tailenders and the same feeling is continued. ಈ ಬಗ್ಗೆ ನಮ್ಮ ಅನೇಕ ಸ್ನೇಹಿತರು ಹೇಳುತ್ತಾರೆ. ಆದರೆ ಅದನ್ನು ಕೃತಿಯಲ್ಲಿ, ಅಮಲಿನಲ್ಲಿ ತರಲು ೧೯೫೬ ರಿಂದ ಇದುವರೆಗೆ ಯಾರೂ ಪ್ರಾಮಾಣಿಕವಾಗಿ ಪ್ರಯತ್ನ ಮಾಡಿಲ್ಲ ಈಗ ಉತ್ತರ ಕರ್ನಾಟಕದ ಎಂಟು ಜಿಲ್ಲೆಗಳು ರಾಜ್ಯದ ಅರ್ಧಕಿಂತ ಕಡಿಮೆಯಿಲ್ಲ. ಅಲ್ಲಿ ರಸ್ತೆ ಪ್ರಮಾಣ ನೋಡಿದರೆ, ರಾಜ್ಯದ ಈ ಕಡೆ ಭಾಗದಲ್ಲಿ ಸರಾಸರಿ ೧೩ ಕಿಲೋಮೀಟರ್ ಇದ್ದರೆ, ಇಲ್ಲಿ ಏಳು ಕಿಲೋಮೀಟರ್ ಇದೆ. ಅದೇ ದೃಷ್ಟಿಯಲ್ಲಿ ಸರಕಾರಿ ದವಾಖಾನೆ, ದನದ ದವಖಾನೆ, ಸ್ಕೂಲ್ ಕಾಲೇಜಸ್ ಎಲ್ಲವನ್ನೂ ವಿಚಾರ ಮಾಡಬೇಕು. ಇದರ ಬಗ್ಗೆ ವಿಚಾರ ಮಾಡಿ ಸನ್ಮಾನ್ಯ ಮುಖ್ಯ ಮಂತ್ರಿಯವರು ಇನ್ನು ಎಷ್ಟು ವರ್ಷಗಳೊಳಗೆ ಈ ಬ್ಯಾಕ್‌ಲಾಗ್ ಫಿಲಪ್ ಮಾಡಿ, ಸ್ಟೇಟ್ ಆವರೇಜ್‌ಗೆ ತೆಗೆದುಕೊಂಡು ಬರುತ್ತಾರೆ ಎಂಬುದರ ಬಗ್ಗೆ ನಿಖರವಾಗಿ ಉತ್ತರ ಹೇಳಬೇಕು, ಐವಾಷ್ ಬೇಕಾಗಿಲ್ಲ. ಈಗ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಮಾಡಿದ್ದಾರೆ. ಇದು ಸ್ವಾಗತಾರ್ಹ ವಾದುದು. ಇಂತಹ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಇನ್ನು ಇಷ್ಟು ವರ್ಷಗಳಲ್ಲಿ ಇದೆಲ್ಲಾ ಮಾಡುತ್ತೇವೆ ಎಂದು ಅವರು ಹೇಳಬೇಕು. ಇನ್ನು ಎಸ್. ಸಿ /ಎಸ್. ಟಿ. ರಿಸರ್ವೇಷನ್ ಬಗ್ಗೆ ಇಲ್ಲಿ ಹೇಳುವುದು ಅಪ್ರಸ್ತುತವಾದರೂ ಒಂದು ಮಾತು ಹೇಳಲೇಬೇಕು. ಯಾರಿಗೆ ಅದರಿಂದ ಸವಲತ್ತು ದೊರಕಿದೆ ಅವರೇ ಗ್ರ್ಯಾಬ್ ಮಾಡುತ್ತಿದ್ದಾರೆಯೋ ಹೊರತು ನಮ್ಮ ಹಳ್ಳಿಯಲ್ಲಿರುವ ಹನುಮಪ್ಪನ ಮಗನಿಗೆ ಅದು ಸಿಗುತ್ತಿಲ್ಲ. ಎಸ್. ಸಿ. /ಎಸ್.ಟಿ. ರಿಸರ್ವೇಷನ್ ಬಗ್ಗೆ ಕೇಂದ್ರಸರಕಾರಕ್ಕೆ

ತಮ್ಮ ಸಲಹೆ ಸೂಚನೆ ಕೊಡಬೇಕು. ಈಗ ಯಾರು ಅದರ ಲಾಭ ಪಡೆದಿದ್ದಾರೆ, ಅವರಿಗೆ ಮುಂದೆ ಇದರ ಲಾಭ ಸಿಗಬಾರದು. ಯಾರು ಸಮಾಜದಲ್ಲಿ ನಿಕೃಷ್ಟ ಮಟ್ಟದಲ್ಲಿದ್ದಾರೆ ಅವರಿಗೆ ಇದರ ಲಾಭ ಸಿಗಬೇಕು. I should come from the bottom, ಈ ದೃಷ್ಟಿಯಲ್ಲಿ ವಿಚಾರ ಮಾಡಬೇಕು ಎಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಟ್ಯಾಕ್ಸೇಷನ್ ಬಗ್ಗೆ ಹೇಳುವುದಾದರೆ, ಬೆಲ್ಲದ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಎರಡು ರೂಪಾಯಿ ಟ್ಯಾಕ್ಸ್ ಇರುವುದನ್ನು ಕನಿಷ್ಟ ಒಂದು ರೂಪಾಯಿಯಾದರೂ ಮಾಡಲಿ. ಈ ಬಗ್ಗೆ ಉತ್ತರ ಕರ್ನಾಟಕದ ಅನೇಕ ಸಂಘ ಸಂಸ್ಥೆಗಳು ಹಾಗೂ ರೈತರು ಅನೇಕ ಸಲ ಮನವಿಯನ್ನು ಕೊಟ್ಟರೂ ಸಹಿತ ಅದರ ಪರಿಣಾಮ ಅವರಿಗೆ ಆಗಲಿಲ್ಲ. ಇದನ್ನು ಒಂದು ರೂಪಾಯಿ ಮಾಡಿದರೆ ರಾಜ್ಯದಲ್ಲಿ ಈಗೇನು ಬೆಲ್ಲದಿಂದ ಟ್ಯಾಕ್ಸ್ ಬರುತ್ತಿದೆ. ಎರಡು ರೂಪಾಯಿ ತೆರಿಗೆ ಮಾಡಿದ್ದರೆ ಎಷ್ಟು ತೆರಿಗೆ ಬರುತ್ತಿತ್ತೋ, ಒಂದು ರೂಪಾಯಿ ಮಾಡಿದರೂ ಅಷ್ಟೇ ತೆರಿಗೆ ಬರುತ್ತದೆ. ಇದರ ಜೊತೆಗೆ, ಎಲ್ಲ ಒಕ್ಕಲುತನ ಹುಟ್ಟುವಳಿ ಮಾರಾಟ ಸಂಸ್ಥೆಗಳಿಗೆ ಒಂದೊಂದು ರೂಪಾಯಿ ಜಾಸ್ತಿ ಬರುತ್ತದೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಅಧಿಕಾರಿಗಳು ಏನಾದರೂ ಹೇಳಿರ ಬಹುದು. ಆದರೆ ಅವರು ಮಾಡಿ ನೋಡಲಿ, ಸರಿ ಅನಿಸಲಿಲ್ಲ ಎಂದರೆ ಮುಂದಿನ ವರ್ಷ ದಿಂದ ಮೂರು ಪರ್ಸೆಂಟ್ ಮಾಡಿದರೂ ನಾವು ಅದಕ್ಕೆ ಕಬೂಲಿ ಆಗುತ್ತೇವೆ. ಇಲ್ಲದಿದ್ದರೆ ಕೋಟ್ಯಾಂತರ ರೂಪಾಯಿಗಳ ಬೆಲ್ಲ ನೆರೆ ರಾಜ್ಯಕ್ಕೆ ಹೋಗಿ ನಮ್ಮ ರಾಜ್ಯಕ್ಕೆ ಕಡಿಮೆ ಹಣ ಬರುತ್ತದೆ.

ಅಧ್ಯಕ್ಷರು.—ಹತ್ತು ಮಿನಿಟ್ ಆಯಿತು, ದಯವಿಟ್ಟು ಮುಗಿಸಿ, ಚೀಫ್ ಮಿನಿಸ್ಟರ್ ಬಂದಿದ್ದಾರೆ, ಅವರು ಉತ್ತರ ಹೇಳಬೇಕು.

ಶ್ರೀ ಎಸ್. ಎಸ್. ಕಡಪಟ್ಟಿ.—ಇನ್ನು ನೇಕಾರರ ಬಗ್ಗೆ ಹೇಳುವುದಾದರೆ, ಕೈಮಗ್ಗಕ್ಕೆ ಉಪಯೋಗ ಮಾಡುವಂತಹ ನೂಲಿಗೆ, ಅದೂ ನಮ್ಮ ರಾಜ್ಯದಲ್ಲಿ ತಯಾರಾದಂಥ ನೂಲಿಗೆ ಕರ ಎರಡು ರೂಪಾಯಿ ಇದೆ. ಅದನ್ನು ಮಾಫಿ ಮಾಡಬೇಕು ಎಂದು ಹೇಳುತ್ತೇನೆ.

ಅಧ್ಯಕ್ಷರು.—ಹತ್ತು ನಿಮಿಷ ಎಂದರೆ ೨೦ ನಿಮಿಷ ತೆಗೆದುಕೊಂಡಿದ್ದೀರಿ. ಬೇಗ ಮುಗಿಸಿ.

ಶ್ರೀ ಎಸ್. ಎಸ್. ಕಡಪಟ್ಟಿ.—ಅದರಲ್ಲಿ ಹತ್ತು ನಿಮಿಷ ಅವರಿಗೆ ಹೋಗಿದೆ, ಇನ್ನು ಮೂರು ನಿಮಿಷ ನೀವೇ ತೆಗೆದುಕೊಂಡಿದ್ದೀರಿ.

ಆಮೇಲೆ ಕೆ. ಎಂ. ಎಫ್. ನ ಕೆಲವು ಪ್ರಾಡಕ್ಷನ್ಸ್ ಬಗ್ಗೆ ಮಾತ್ರ ಹೇಳಿದ್ದಾರೆ, it should be for all the products produced by K.M. F. ತಾವು ವೇಳೆಯ ಅಭಾವದ ಮೂಲಕ ಒತ್ತಾಯ ಮಾಡುವುದಕ್ಕೆ ಹತ್ತಿದ್ದೀರಿ. ತಾವು ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞತೆಯನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಶ್ರೀ ಭೂಪತಿಯವರೇ ೫ ನಿಮಿಷದಲ್ಲಿ ಮಾತನಾಡಿ.

ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಅಧ್ಯಕ್ಷರೇ, ೧೯೭೯–೮೦ರ ಆಯವ್ಯಯ ಬಗ್ಗೆ ಮಾತನಾಡಲು ತಾವು ಅಪ್ಪಣೆ ಕೊಟ್ಟಿದ್ದೀರಿ, ಜೊತೆಗೆ ಸಮಯದ ಅಭಾವ ಬೇರೆ ಇದೆ. ಆದರೂ ಸಹ ಆಯವ್ಯಯ ಪತ್ರದ ಬಗ್ಗೆ ಕೇವಲ ಕೆಲವು ಅಂಶಗಳನ್ನು ಮಾತ್ರ ಹೇಳಲು ಇಷ್ಟಪಡುತ್ತೇನೆ. ಮೊದಲನೆಯದಾಗಿ ಸರ್ಕಾರದ ಉದ್ಯೋಗ ನೀತಿಯ ಬಗ್ಗೆ ನಾನು ಪ್ರಸ್ತಾಪ ಮಾಡಬೇಕೆಂದು ಇದ್ದೇನೆ. ಪ್ರಾರಂಭದಲ್ಲಿ ಇವರು ಅಧಿಕಾರಕ್ಕೆ ಬಂದಾಗ ೧೯೭೨ರಲ್ಲಿ ಇವರು ಬರೆದುಕೊಂಡಿದ್ದಂತೆ ಇಂಡಸ್ಟ್ರೀ ರೆಸಲ್ಯೂಷನ್ ಪಾಲಿಸಿಯಲ್ಲಿ ಒಂದು ತಿಂಗಳಲ್ಲಿ ಒಂದು ಸಾವಿರ ಕೈಗಾರಿಕೆಗಳನ್ನು ಪ್ರಾರಂಭ ಮಾಡುತ್ತೇವೆಂದು ಘೋಷಣೆ ಮಾಡಿದರು. ಇದಾದ ನಂತರ ಒಂದು ಮನೆಗೆ ಒಂದು ಉದ್ಯೋಗ ಕೊಡುತ್ತೇವೆಂದು ಘೋಷಣೆ ಮಾಡಿದರು. ಅದಾದ ನಂತರ ರಿಟೈರ್‌ಮೆಂಟ್ ವಯಸ್ಸನ್ನು ೫೫ ರಿಂದ ೫೮ ಕ್ಕೆ ಹೆಚ್ಚು ಮಾಡಿದಿರಿ. ಈ ವರ್ಷದ ಬಜೆಟ್‌ನಲ್ಲಿ ೨೦ ಸಾವಿರ ಯುವಕ ಮತ್ತು ಯುವತಿಯವರಿಗೆ ತರಬೇತಿ ಕೊಟ್ಟು ಲ್ಯಾಂಡ್ ಆರ್ಮಿ ಸಹಯೋಗದೊಂದಿಗೆ ಸ್ಕೀಮ್ ಮಾಡಿ ಅವರಿಗೆ ತಿಂಗಳಿಗೆ ೩೦೦ ರೂಪಾಯಿಗಳ ಸ್ಟೈಪೆಂಡ್ ಕೊಟ್ಟು ತರಬೇತಿ ಕೊಟ್ಟರೆ ಅಪರ ಕಾಲ ಮೇಲೆ ಅವರು ನಿಂತು ಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಿದ್ದೀರಿ. ನನಗೆ ಒಂದು ವಿಷಯ ಗೊತ್ತಾಗಬೇಕು ಈ ಸರ್ಕಾರದ ಉದ್ಯೋಗ ನೀತಿ ಏನು ಎಂದು ಗೊತ್ತಾಗಬೇಕು. ತಾವು ಯೋಜನೆ ಮಾಡಬೇಕು ಪ್ರತಿಯೊಂದು ಇಲಾಖೆಯಲ್ಲಿಯೂ ಸಹ ಹುದ್ದೆಗಳನ್ನು ತುಂಬುವುದನ್ನು ನಿಲ್ಲಿಸಿದ್ದೀರಿ. ಅದು ಕೆ. ಪಿ. ಎಸ್. ಸಿ. ಆಗಿರಲಿ, ಬೇರೆ ರಿಕ್ರೂಟ್‌ಮೆಂಟ್ ಅಥಾರಿಟಿಗಳು

ಆಗಲಿ ಹಲವಾರು ಕಡೆ ಹುದ್ದೆಗಳನ್ನು ತುಂಬುವುದನ್ನು ತಾವೇ ತಡ ಮಾಡಿಸಿದ್ದೀರಿ. ಉದಾಹರಣೆಗೆ ಇಂಜಿನೀಯರಿಂಗ್ ಡಿಪಾರ್ಟ್‌ಮೆಂಟಿನಲ್ಲಿ ಜೂನಿಯರ್ ಇಂಜನೀಯರ್ ಹುದ್ದೆಗಳಿಗೆ ಅರ್ಜಿಗಳನ್ನು ಕರೆದು ಒಂದು ವರ್ಷವಾಯಿತು ಇದುವರೆಗೂ ಇಂಟರ್‌ವ್ಯೂ ಆಗಲಿಲ್ಲ. ಅದೇ ರೀತಿ ಆಯುರ್ವೇದಿಕ ಲೆಕ್ಚರರ್ಸ್ ಮತ್ತು ಪ್ರೊಫೆಸರ್ಸ್ ಹುದ್ದೆಗಳಿಗೆ ಅರ್ಜಿ ಕರೆದು ಒಂದು ವರ್ಷವಾಯಿತು ಇಂಟರ್‌ವ್ಯೂ ಕಳುಹಿಸಿಕೊಡಲಿಲ್ಲ. ಆಮೇಲೆ ಅದನ್ನು ವಿತ್ ಡ್ರಾ ಮಾಡಿದ್ದೀರಿ. ಅದರ ಡಿ. ಡಿ. ಏನಾಯಿತೋ ಏನೋ ಯಾರಿಗೂ ಗೊತ್ತಿಲ್ಲ. ಇಂಥಾದ್ದು ಹಲವಾರು ಆಗಿದೆ. ತಾವೇ ಯೋಚನೆ ಮಾಡಿ. ಸರ್ಕಾರ ನಿರುದ್ಯೋಗದ ಬಗ್ಗೆ ತಾಳಿರುವ ಧೋರಣೆ ಇದು. ತಾವು ಈ ವರ್ಷ ಈ ಉದ್ಯೋಗ ನೀತಿಯನ್ನು ಘೋಷಣೆ ಮಾಡಿರತಕ್ಕಂದ್ದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀಮಾನ್ ಕೆ. ಎಚ್. ಶ್ರೀನಿವಾಸ್‌ರವರು ಬಹಳ ಚೆನ್ನಾಗಿ ಮಾತನಾಡಿದರು. ಅವರಿಗೆ ತೆರಚೆ ತಿ ಕೊಟ್ಟರೆ ತಮ್ಮ ಕಾಲ ಮೇಲೆ ತಾವು ನಿಂತುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೋ ? ಈಗ ಇರತಕ್ಕಂಥ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ವ್ಯವಸ್ಥೆಯಲ್ಲಿ ಗ್ರಾಮಾಂತರ ಪ್ರದೇಶಗಳ ಬಗ್ಗೆ ಮಾತನಾಡುವುದಾದರೆ ಗ್ರಾಮಾಂತರ ಪ್ರದೇಶದ ಕೃಷಿ ಕಾರ್ಮಿಕರಿಗೆ ಉದ್ಯೋಗದ ಖಾತರಿ ಕೊಡತಕ್ಕಂಥ ಎನ್. ಆರ್. ಐ. ಮತ್ತು ಆರ್. ಎಲ್. ಇ. ಜಿ. ಪಿ. ಡಿಪಿ. ಎಪಿ. ಇಂತಹ ಅನೇಕ ರೀತಿಯ ಕಾರ್ಯಕ್ರಮಗಳು ಏನಿವೆ ಈ ಕಾರ್ಯಕ್ರಮಗಳು ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಯ ಮೆಂಬರ್ಸ್ ಶೇಕಡ ೬೦ ಪರ್ಸೆಂಟ್‌ನಷ್ಟು ಕಂಟ್ರಾಕ್ಟ್‌ದಾರರಾಗಿದ್ದಾರೆ. ನಿಜವಾಗಿ ಕಾನೂನು ಹೇಳುತ್ತದೆ, ಅವರು ಕಂಟ್ರಾಕ್ಟ್ ಕೆಲಸ ಮಾಡಿಸಬಾರದೆಂದು. ಅದು ಬೇರೆ ವಿಚಾರ. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಇವರು ಕಂಟ್ರಾಕ್ಟ್ ಪಡೆದು ಎನ್. ಆರ್. ಎ. ಗಳು ಯಾರು ಇರುತ್ತಾರೋ ಅವರ ಕೈಯಲ್ಲಿ ಎಲ್ಲಪ್ಪ, ರಾಮಪ್ಪ ತಮ್ಮಣ್ಣ ಅಂತ ಹೆಬ್ಬೆಟ್ಟು ಒತ್ತಿಸಿ ಕೊಳ್ಳುವುದು, ಅದನ್ನು ಸಂಬಂಧಪಟ್ಟ ಅಧಿಕಾರಿಗಳು ದೃಢೀಕರಿಸುವುದು. ಈ ರೀತಿಯ ಕೆಲಸ ನಡೆಯುತ್ತಿದೆ. ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಸಲ್ಲಿಸತಕ್ಕಂಥ ವರದಿಯಲ್ಲಿ ನೂರಕ್ಕೆ ೬೦–೭೦ ಪರ್ಸೆಂಟ್‌ನಷ್ಟು ಬೋಗಸ್ ಇದೆ. It is not correct. Rural Employment Guarantee Programme.......ಈ ಕಾರ್ಯಕ್ರಮಗಳನ್ನು ಮಾಡಿರುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ತಪ್ಪು ವರದಿಯನ್ನು ಕೊಟಿದ್ದಾರೆ. ಈ ಬಗ್ಗೆ ಸರ್ಕಾರ they should conduct some investigation by a high level committee and enquire. ತಾವು ಪ್ರಾಮಾಣಿಕವಾಗಿ ಮಾಡುವುದಾದರೆ ಮತ್ತು ಉದ್ಯೋಗ ಖಾತರಿ ಯೋಜನೆ ಬಗ್ಗೆ ತಮಗೆ ಕಾಳಜಿ ಇದ್ದರೆ ಇದನ್ನು ನಂಬಬೇಕಾಗುತ್ತದೆ. ಬರೀ ಕಣ್ಣು ಒರೆಸುವುದಕ್ಕೆ ಅಥವಾ ಕೇಂದ್ರ ಸರ್ಕಾರದಿಂದ ಹಣ ಪಡೆಯುವುದಕ್ಕೆ ನಾವು ಹೆಚ್ಚಿನ ಮಾನವ ದಿನಗಳನ್ನು ಸೃಷ್ಟಿ ಮಾಡಿದ್ದೇವೆಂದು ಹೇಳಿದರೆ ಆಗುವುದಿಲ್ಲ. ತಾವು ಬೇಕಾದರೆ ನಾನು ಹೇಳಿದ್ದನ್ನು ಪರೀಕ್ಷೆ ಮಾಡಿ ನೋಡಿ. ಇನ್ನು ಶಿಕ್ಷಣದ ಬಗ್ಗೆ ಇಲ್ಲಿ ಹೇಳಿದ್ದಾರೆ. ೧೯೮೩–೮೪ ರಲ್ಲಿ ಶಿಕ್ಷಣಕ್ಕೆ ಖರ್ಚು ಮಾಡಿದ ಹಣಕ್ಕಿಂತ ಈಗ ನಾವು ಜಾಸ್ತಿ ಹಣ ಖರ್ಚು ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಶಿಕ್ಷಣದ ವ್ಯವಸ್ಥೆ ನಮ್ಮಲ್ಲಿ ಕೆಟ್ಟಿದೆ ಎಂದು ನಾನು ಹೇಳಬೇಕಾಗಿದೆ. ಇದಕ್ಕೆ ಕಾರಣವೇನೆಂದರೆ, ರಾಜ್ಯದಲ್ಲಿ ಹೆಚ್ಚು ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ತೆರೆಯಲು ಅನುವು ಮಾಡಿ ಕೊಟ್ಟಿದ್ದು. ಮತ್ತು ತಮಗೆ ಚುನಾವಣೆಯಲ್ಲಿ ಯಾರು ಬೆಂಬಲ ನೀಡುತ್ತಾರೋ ಅವರು ಶಿಕ್ಷಣ ಸಂಸ್ಥೆ ತೆರೆದು ಅನುಕೂಲ ಮಾಡಿಕೊಂಡಿದ್ದು ಬೇನಾಮಿ ಹೆಸರಿನಲ್ಲಿ ಅಂದರೆ ಎಸ್. ಸಿ. ಮತ್ತು ಎಸ್. ಟಿ. ಹೆಸರಿನಲ್ಲಿ ಬೇರೆಯವರು ಶಿಕ್ಷಣ ಸಂಸ್ಥೆಗಳನ್ನು ನಡೆಸಿ ಅನುದಾನ ಪಡೆದರೆ ಆಗ ಶಿಕ್ಷಣ ಇಲಾಖೆಗೆ ವೆಚ್ಚ ಜಾಸ್ತಿ ಬರುತ್ತದೆ. ಇದು ನೇರವಾಗಿ ಖರ್ಚುಮಾಡುವುದು ಅಲ್ಲ. ಶಿಕ್ಷಣ ಸಂಸ್ಥೆಗಳನ್ನು ನೀವು ಮಂಜೂರು ಮಾಡುವಾಗ ಯಾವ ಯಾವ ಶಿಕ್ಷಣ ಸಂಸ್ಥೆಗಳಲ್ಲಿ ಇನ್‌ಫ್ರಾಸ್ಟ್ರಕ್ಚರ್‌ಗಳು ಇವೆಯೇ ಇಲ್ಲವೇ ಎಂದು ನೋಡಿಲ್ಲ. ಅವುಗಳನ್ನು ಮಂಜೂರು ಮಾಡುವಾಗ ಯಾವುದೇ ನೀತಿ ನಿಯಮಗಳನ್ನು ಫಾಲೋ ಮಾಡಿಲ್ಲ. ಇದರಿಂದ ಈ ಶಿಕ್ಷಣ ಸಂಸ್ಥೆಗಳವರು ಲಕ್ಷಾಂತರ ರೂಪಾಯಿಗಳ ಲಂಚ ಹೊಡೆದು ಶಿಕ್ಷಕರುಗಳನ್ನು ಅಪಾಯಿಂಟ್ ಮಾಡಿಕೊಳ್ಳುತ್ತಾರೆ. ಇಂಥ ಶಿಕ್ಷಣ ಸಂಸ್ಥೆಗಳ ಬಗ್ಗೆ ಬಿಗಿಯಾದ ನಿಲುವನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ತಿಳಿಸುವುದಕ್ಕೆ ನಾನು ಇಷ್ಟಪಡುತ್ತೇನೆ. ನಮ್ಮ ಬಳ್ಳಾರಿ ಜಿಲ್ಲೆಯ ಜಿಲ್ಲಾಪರಿಷತ್ತಿನವರು ಇಂಥ ಶಿಕ್ಷಣ ಸಂಸ್ಥೆಗಳವರ ಮೇಲೆ ನಿಗಾ ಇಡುವ ಕೆಲಸವನ್ನು ಮಾಡುತ್ತಿದ್ದಾರೆ. ಸರ್ಕಾರ ಕೂಡ ಈ ಬಗ್ಗೆ ಕೆಲಸ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಇನ್ನು ಮಾನ್ಯ ಅಧ್ಯಕ್ಷರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಬಗ್ಗೆ ಮಾತನಾಡಿದ್ದಾರೆ. ಈಗಾಗಲೇ ಪ್ರಾಥಮಿಕ ಆರೋಗ್ಯ ಕೇಂದ್ರಗಳು ೪೭೧ ಇವೆ. ಅವುಗಳ ಸಂಖ್ಯೆಯನ್ನು ಹೆಚ್ಚು ಮಾಡುವುದಕೋಸ್ಕರ ಇನ್ನೂ ೩೦೩ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆಯುವುದಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಇದರ ಬಗ್ಗೆ ಕೂಲಂಕಷವಾಗಿ ಯೋಚನೆ ಮಾಡಿದರೆ, ಇವತ್ತು ಇರತಕ್ಕಂಥ ಪ್ರಾಥಮಿಕ ಆರೋಗ್ಯ

ಕೇಂದ್ರಗಳಲ್ಲೇ ಸರಿಯಾದ ಸಿಬ್ಬಂದಿ ವರ್ಗದವರು ಇಲ್ಲ. ಕೆಲವು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಡಾಕ್ಟರುಗಳೇ ಇಲ್ಲ. ಸರಿಯಾದ ರೀತಿಯಲ್ಲಿ ಸಿಬ್ಬಂದಿ ವರ್ಗದವರನ್ನು ಹಾಗೂ ಡಾಕ್ಟರುಗಳನ್ನು ನೇಮಕ ಮಾಡುವ ಬಗ್ಗೆ ಸರ್ಕಾರ ಯೋಜನೆ ಮಾಡಿದೆಯಾ ಎಂದು ನಾನು ಕೇಳುತ್ತಿದ್ದೇನೆ. ನನ್ನ ಕ್ಷೇತ್ರದ ಎರಡು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಡಾಕ್ಟರುಗಳೇ ಇಲ್ಲ. ಅಂಥಾದ್ದರಲ್ಲಿ ಇನ್ನೂ ಒಂದು ಆರೋಗ್ಯ ಕೇಂದ್ರವನ್ನು ನನ್ನ ಕ್ಷೇತ್ರದಲ್ಲಿ ಮೊನ್ನೆ ಮೊನ್ನೆ ಪ್ರಾರಂಭ ಮಾಡಲಾಗಿದೆ. ಇಲ್ಲಿಯೂ ಸಹ ಡಾಕ್ಟರ್ ಇಲ್ಲ. ಜೊತೆಗೆ ಸೂಕ್ತ ಪ್ರಮಾಣದಲ್ಲಿ ಔಷಧಿಗಳನ್ನು ಸರಬರಾಜು ಮಾಡುತ್ತಿಲ್ಲ. ಪ್ರಾಥಮಿಕ ಆರೋಗ್ಯ ಕೇಂದ್ರಗಳ ವಿಷಯವಿರಲಿ, ಬೆಂಗಳೂರಿನಲ್ಲಿರುವ ಬೌರಿಂಗ್ ಆಸ್ಪತ್ರೆಗೇ ಸರಿಯಾದ ಔಷಧಿಗಳನ್ನು ಸರ್ಕಾರ ಸರಬರಾಜು ಮಾಡುತ್ತಿಲ್ಲ. ಕೆಲವು ದಿನಗಳ ಹಿಂದೆ ನಮ್ಮ ಮನೆಯವರನ್ನು ಬೌರಿಂಗ್ ಆಸ್ಪತ್ರೆಗೆ ಅಡ್ಮಿಟ್ ಮಾಡಿದ್ದೆ. ಅಲ್ಲಿ ಔಷಧಿಗಳು ಇಲ್ಲದೆ ನಾನು ಹೊರಗಡೆಯಿಂದ ಇಂಜಕ್ಷನ್ ಟ್ಯೂಬ್ ಮತ್ತು ಟ್ಯಾಬ್ಲೆಟ್ಸನ್ನು ಪರ್ಚೇಸ್ ಮಾಡಿಕೊಂಡು ಬಂದೆ. ಆಮೇಲೆ, ವಾರ್ಡ್‌ನಲ್ಲಿ ಸ್ವಲ್ಪ ಫೆನಾಯಿಲ್ ಹಾಕಿ ಇರುವ ಗಲೀಜನ್ನು ತೊಳೆಯಿರಿ ಎಂದು ಆಸ್ಪತ್ರೆಯ ಸೂಪರಿನ್‌ಡೆಂಟ್‌ರವರಿಗೆ ಹೇಳಿದ್ದಕ್ಕೆ, ಏನು ಮಾಡಲಿ ಸಾರ್ ಫೆನಾಯಿಲೇ ಇಲ್ಲ ಎಂದು ಹೇಳಿದರು. ಈ ಪರಿಸ್ಥಿತಿಗೆ ಸರ್ಕಾರದ ಆಸ್ಪತ್ರೆಗಳು ಬಂದು ತಲುಪಿವೆ. ನಿಗದಿಯಾದ ಕಾಲಕ್ಕೆ ಸರಿಯಾಗಿ ಔಷಧಿಗಳನ್ನು ಸರ್ಕಾರ ಸರಬರಾಜು ಮಾಡುವ ಪರಿಸ್ಥಿತಿಯಲ್ಲಿ ಇಲ್ಲ. ಬರೀ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಹೆಚ್ಚು ಮಾಡುತ್ತೇವೆಂದು ಹೇಳಿದರೆ ಪ್ರಯೋಜನವಾಗುವುದಿಲ್ಲ ಇವುಗಳನ್ನು ಪ್ರಾರಂಭ ಮಾಡಿದ ಮೇಲೆ ಸರಿಯಾಗಿ ಔಷಧಿಗಳನ್ನು ಸರಬರಾಜು ಮಾಡಬೇಕು. ಇದರ ಜೊತೆಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭ ಮಾಡುವಾಗ ಕೆಲವು ನೀತಿ ನಿಯಮಗಳನ್ನು ಅನುಸರಿಸಬೇಕಾಗುತ್ತದೆ. ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ತೆರೆಯಬೇಕಾದರೆ, ೨೦ ಸಾವಿರದಿಂದ ೩೦ ಸಾವಿರದವರೆಗೆ ಜನಸಂಖ್ಯೆ ಇರಬೇಕು ಹಾಗೂ ಇಷ್ಟೇ ಕಿಲೋಮೀಟರ್ ಅಂತರದಲ್ಲಿ ಅದು ಇರಬೇಕು ಎಂದು ನಿಯಮಗಳು ಇವೆ. ನೀವು ಪ್ರಾರಂಭ ಮಾಡಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಬಗ್ಗೆ ತಾಲ್ಲೂಕುವಾರು ಮತ್ತು ಜಿಲ್ಲಾವಾರು ನೋಡಿದರೆ ಎಷ್ಟರಮಟ್ಟಿಗೆ ರಾಜಕೀಯ ಪ್ರಭಾವ ತಮ್ಮ ಮೇಲೆ ಬೀರಲಾಗಿದೆ ಎನ್ನುವುದು ಗೊತ್ತಾಗುತ್ತದೆ. ಯಾವ ಸದಸ್ಯರು ನಿಮ್ಮ ಮೇಲೆ ಪ್ರಭಾವ ಬೀರುತ್ತಾರೋ ಅಂಥವರುಗಳ ಕ್ಷೇತ್ರಗಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಕೊಟ್ಟಿದ್ದೀರಿ. ಇದು ನನ್ನ ಅನುಭವಕ್ಕೆ ಬಂದಿರುವ ವಿಷಯ. ಇದನ್ನು ನಾನು ಬಹಳ ವ್ಯಥೆಯಿಂದ ಹೇಳುತ್ತಿದ್ದೇನೆ. ಇದು ಸತ್ಯಾಂಶ. ನೀವು ಇಲ್ಲವೆಂದರೆ ನಾನು ಒಪ್ಪಿಕೊಳ್ಳುವುದಿಲ್ಲ. ಈ ರೀತಿ ಮುಂದೆ ಆಗಬಾರದು. ಇನ್ನು ಮುಂದೆ ಪ್ರಾರಂಭ ಮಾಡುವ ೩೦೩ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಇಲಾಖೆಯ ನಿಯಮಾವಳಿಗಳ ಪ್ರಕಾರ ಯಾವ ಯಾವ ಪ್ರದೇಶಗಳಲ್ಲಿ ಇಲ್ಲವೋ ಅಂಥಾ ಕಡೆಗಳಲ್ಲಿ ಮಾತ್ರ ಪ್ರಾರಂಭ ಮಾಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಕೈಗಾರಿಕಾ ಬೆಳವಣಿಗೆ ಬಗ್ಗೆ ಹೇಳಬೇಕಾದರೆ, ಕೇಂದ್ರ ಸರ್ಕಾರದವರು ಈ ವಿಷಯದ ಬಗ್ಗೆ ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ೩ ಜಿಲ್ಲೆಗಳನ್ನು ಗುರುತಿಸಿಕೊಡಬೇಕೆಂದು ಕೇಳಿದ್ದಾರೆ. ಮುಖ್ಯಮಂತ್ರಿಯವರು ೩ ಜಿಲ್ಲೆಗಳ ಬದಲಾಗಿ ೬ ಜಿಲ್ಲೆಗಳ ಹೆಸರುಗಳನ್ನು ಕಳುಹಿಸಿಕೊಟ್ಟಿದ್ದಾರೆ. ಈ ರೀತಿ ಏಕೆ ಮಾಡಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ೩ ಜಿಲ್ಲೆಗಳ ಹೆಸರುಗಳನ್ನು ಕಳುಹಿಸಿಕೊಡಿ ಎಂದು ಅವರು ಕೇಳಿದಾಗ ಇವರು ೬ ಜಿಲ್ಲೆಗಳ ಹೆಸರಗಳನ್ನು ಕಳುಹಿಸುವುದಕ್ಕೆ ಇವರು ಯಾರ ಒತ್ತಡಕ್ಕೆ ಮಣಿದು ಕಳುಹಿಸಿದರೆಂದು ನಾನು ಕೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕೇಂದ್ರ ಸರ್ಕಾರದವರು ೬ ಜಿಲ್ಲೆಗಳನ್ನು ಗುರುತಿಸಿ ಹೆಸರುಗಳನ್ನು ಕಳುಹಿಸಿಕೊಡಿ, ಅದರಲ್ಲಿ ನಾವು ಮೂರು ಜಿಲ್ಲೆಗಳನ್ನು ಆಯ್ಕೆ ಮಾಡಿಕೊಳ್ಳುತ್ತೇವೆಂದು ಹೇಳಿದ್ದರು. ಅದರಂತೆ ನಾವು ೬ ಜಿಲ್ಲೆಗಳ ಹೆಸರುಗಳನ್ನು ಕಳುಹಿಸಿದ್ದೇವೆ.

ಶ್ರೀ ಯು. ಭೂಪತಿ.—ಇದನ್ನು ನಾನು ಏಕೆ ಪ್ರಸ್ತಾಪ ಮಾಡಿದೆ ಎಂದರೆ, ಹೈದಾರಾಬಾದ್ ಕರ್ನಾಟಕ ವಿಚಾರ ಬಂದಾಗ ನನಗೆ ಬಹಳ ವಿಷಾದ ಎನಿಸುತ್ತದೆ. ಮಾನ್ಯ ಸದಸ್ಯರಾದ ಕಡಪಟ್ಟಿಯವರ ಅಧ್ಯಕ್ಷತೆಯಲ್ಲಿ ಒಂದು ರೀಜನಲ್ ಇಂಬ್ಯಾಲೆನ್ಸ್ ಕಮಿಟಿಯನ್ನು ಮಾಡಿ ವರದಿಯನ್ನು ಕೊಡುವಂತೆ ಸರ್ಕಾರ ಕೇಳಿತ್ತು. ಆದರಂತೆ, ಆ ಕಮಿಟಿಯವರು ಒಂದು ವರದಿಯನ್ನು ಕೊಟ್ಟರು: ಆ ವರದಿಯನ್ನು ಕ್ಯಾಬಿನೆಟ್ ಸಬ್ ಕಮಿಟಿ ಮುಂದೆ ತರುತ್ತೇವೆಂದು ಮಾನ್ಯ ರಾಮಕೃಷ್ಣ ಹೆಗಡೆಯವರು ಹೇಳಿದ್ದರು. ಆದರೆ, ಕ್ಯಾಬಿನೆಟ್ ಸಬ್ ಕಮಿಟಿ ಮುಂದೆ ಈ ವರದಿಯನ್ನು ಇಡಲಿಲ್ಲ. ಈ ಕಮಿಟಿಯವರು ಮಾಡಿರುವ ಯಾವ ರೆಕಮೆಂಡೆಷನ್‌ಗಳನ್ನು ನೀವು ಮಾಡಿದ್ದೀರಿ ? ಅದರ ಬಗ್ಗೆ ಯಾವ ಯಾವ ಗೌರ್ನಮೆಂಟ್ ಆರ್ಡರ್‌ಗಳನ್ನು ಮಾಡಿದ್ದೀರಿ ಎಂದು ನಾನು ಕೇಳುತ್ತೇನೆ. ಆಮೇಲೆ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯನ್ನು ಮಾಡಿ ಅದಕ್ಕೆ ಎರಡು ಕೋಟಿ ರೂಪಾಯಿಗಳನ್ನು ಕೊಡು

ತ್ತೇವೆಂದು ಹೇಳಿದ್ದೀರಿ. ಇಷ್ಟು ಹಣದಿಂದ ಯಾವ ಅಭಿವೃದ್ಧಿಯೂ ಆಗುವುದಿಲ್ಲ. ಮುಖ್ಯವಾಗಿ ಬಳ್ಳಾರಿ ಜಿಲ್ಲೆಯ ಹೇಳುವುದಾದರೆ, ನಾವು ಒಂದು ಕಾಲದಲ್ಲಿ ಹಳೇ ಮದ್ರಾಸ್ ಪ್ರದೇಶಕ್ಕೆ ಸೇರಿದ್ದವರು, ಈಗ ಹೈದರಾಬಾದ್ ಕರ್ನಾಟಕಕ್ಕೆ ಸೇರಿಸಿದ್ದಾರೆ. ಹೀಗಾಗಿ ನಾವು ತ್ರಿಶಂಕು ಸ್ವರ್ಗದಲ್ಲಿ ಇದ್ದೇವೆ. ಹೈದರಾಬಾದ್ ಕರ್ನಾಟಕ ಪ್ರದೇಶದವರೂ ನಮ್ಮನ್ನು ಒಪ್ಪಿಕೊಳ್ಳುವುದಿಲ್ಲ, ಓಲ್ಡ್ ಮದ್ರಾಸ್ ಪ್ರವೇಶದಲ್ಲೂ ನಾವು ಇಲ್ಲ. ಇನ್ನು ಬಳ್ಳಾರಿ ಜಿಲ್ಲೆಯಲ್ಲಿರುವ ವಿಜಯನಗರ ಉಕ್ಕಿನ ಕಾರ್ಖಾನೆಯ ಕುರಿತು ಹೇಳುವುದಾದರೆ, ೧೯೭೧ನೇ ಇಸವಿಯಲ್ಲಿ ಇದರ ಶಂಕುಸ್ಥಾಪನೆಯಾಯಿತು. ಆದರೆ ಈ ತನಕವೂ ಅದು ತ್ರಿಶಂಕುಸರ್ಗದಲ್ಲಿಯೇ ಉಳಿದಿದೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯ ಮಂತ್ರಿಗಳಾಗಿದ್ದಾಲೂ ಸಹ ಈ ಬಗ್ಗೆ ಹಲವಾರು ಬಾರಿ ಹೇಳಿದ್ದಾರೆ, ಬಹಿರಂಗ ಸಭೆಗಳಲ್ಲಿ ಹೇಳಿದ್ದಾರೆ, ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ನಾವು ಕೈಬಿಡುವುದಿಲ್ಲ ಎಂದು ಹೇಳಿಕೊಂಡಿದ್ದಾರೆ. ಈ ಬಗ್ಗೆ ಕೇಂದ್ರ ಸರಕಾರ ಮೇಲೆ ಒತ್ತಡವನ್ನು ತರುವುದಕ್ಕೆ ನಾನು ಸರ್ವಪಕ್ಷಗಳ ನಿಯೋಗ ವನ್ನು ಕಳುಹಿಸುತ್ತೇನೆ, ಅವರು ಒಪ್ಪಲಿಲ್ಲ ಅಂದರೆ ಕರ್ನಾಟಕ ರಾಜ್ಯ ಬಂದ್ ಮಾಡುವುದಕ್ಕೆ ಕರೆ ಕೊಡುತ್ತೇನೆ ಎಂದು ಕೂಡ ಹೇಳಿದ್ದರು. ಆದರೆ ಯಾವುದೇ ಕಾರ್ಯಕ್ರಮವನ್ನು ಆ ಬಗ್ಗೆ ಸರಕಾರದವರು ಇವೊತ್ತಿನವರೆಗೂ ಕಾರ್ಯರೂಪಕ್ಕೆ ತರಲಿಲ್ಲ. ಇತ್ತೀಚೆಗೆ ಮಾನ್ಯ ಕೈಗಾರಿಕಾ ಮಂತ್ರಿಗಳಾದ ವೀರಣ್ಣನವರು ಬೀದರ್, ಗುಲ್ಬರ್ಗದಲ್ಲಿ ಸಭೆಯಲ್ಲಿ ಮಾತನಾಡುತ್ತಾ ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಬಿಡುವುದಿಲ್ಲ ಎಂದು ಹೇಳಿದ್ದಾರೆ. ವಾಸ್ತವವಾಗಿ ಅಲ್ಲಿ ಮೂರು ಕಂಬಗಳು ಮಾತ್ರ ಇವೆ, ಅವನ್ನೇ ಗಟ್ಟಿಯಾಗಿ ಹಿಡಿದು ಕೊಂಡು ಇರಬೇಕು ಎಂದು ಕಾಣುತ್ತದೆ. ಬರೀ ಮಾತು ಗಳನ್ನು, ಆಶ್ವಾಸನೆಗಳನ್ನು ಹೇಳುವುದರಲ್ಲಿ ಏನೂ ಪ್ರಯೋಜನವಿಲ್ಲ. ಈ ವಿಷಯದಲ್ಲಿ ಪ್ರಾಮಾಣಿಕ ವಾದಂಥ ಪ್ರಯತ್ನವನ್ನು ಮಾಡಬೇಕಾಗಿದೆ, ಆ ಬಗ್ಗೆ ಸರಕಾರದವರು ಏನಾದರೂ ಕ್ರಮ ತೆಗೆದು ಕೊಂಡು ಕಾರ್ಯಪ್ರವೃತ್ತರಾಗಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಈ ಸಾಲಿನ ಬಜೆಟ್‌ನಲ್ಲಿ ಕಮಿಷನ್ ಏಜೆಂಟ್‌ಗಳಿಗೆ ಮಾನ್ಯ ಮುಖ್ಯಮಂತ್ರಿ ಗಳವರು ತುಂಬಾ ಅನುಕಂಪವನ್ನು ತೋರಿಸಿದ ಹಾಗೆ ಕಂಡು ಬರುತ್ತದೆ. ಈ ಕಮಿಷನ್ ಏಜೆಂಟ್ಸ್ ರೈತರಿಂದ ಕಮಿಷನ್ ವಸೂಲು ಮಾಡಬಾರದು ಎಂಬ ಕಾನೂನು ಇದೆ. ಮಾನ್ಯ ಜಾಲಪ್ಪನವರು ಸಹಕಾರ ಮಂತ್ರಿಯವರಾಗಿದ್ದ ಈ ಕಾನೂನನ್ನು ತಂದರು. ಆದರೂ ಕೂಡ ಕಮಿಷನ್ ಏಜಂಟರು ರಾಜ್ಯದಲ್ಲಿ ರಾಜಾರೋಷವಾಗಿ ಕಮಿಷನ್ ವಸೂಲಿ ಮಾಡುತ್ತಾ ಇದ್ದಾರೆ. ಮಾರಾಟವಾದ ವಸ್ತುಗಳನ್ನು ತೆಗೆದುಕೊಂಡಂಥ ಸಂದರ್ಭದಲ್ಲಿ ವಸ್ತುಗಳಿಗೆ ಕೊಟ್ಟ ಹಣದ ಲೆಕ್ಕ ಇಡಬೇಕೆಂದು ಕಾನೂನು ಇದೆ. ಆದರೆ ಅವರು ಒಂದು ಮನವಿಯನ್ನು ನಿಮಗೆ ಕೊಟ್ಟು ಲೆಕ್ಕ ನಮಗೆ ಸರಿಯಾಗಿ ಸಿಗುವುದಿಲ್ಲ ಎಂದ ಮಾತ್ರಕ್ಕೆ ನೀವು ಅದನ್ನು ಮಾಫಿ ಮಾಡಿದ್ದೀರಿ. ಅವರು ಕೋಟ್ಯಂತರ ರೂಪಾಯಿಗಳ ಲಾಭ ಪಡೆದು ಮಜಾ ಮಾಡಿಕೊಂಡು ಇದ್ದಾರೆ. ಅವರು ಸಂತೋಷದಿಂದ ಬದುಕಿಕೊಂಡಿದ್ದಾರೆ. ಆದರೆ ರೈತರ ಪಾಡೇನು ? ಆದುದರಿಂದ ಇನ್ನು ಮುಂದಾದರೂ ಇಂಥ ತಪ್ಪನ್ನು ಮಾಡಬೇಡಿ ಎಂದು ಹೇಳ ಬಯಸುತ್ತೇನೆ. ಇಂಥ ಸೌಜನ್ಯವನ್ನು ಅವರಿಗೆ ತೋರಿಸಬೇಕಾಗಿಲ್ಲ ಎಂದು ನಾನು ಅಭಿಪ್ರಾಯ ಪಡುತ್ತೇನೆ.

ಇನ್ನೊಂದು ಬಹಳಷ್ಟು ಸೂಕ್ಷ್ಮವಾದ ವಿಚಾರವನ್ನು ನಾವೆಲ್ಲರೂ ಗಮನಿಸಬೇಕಾಗಿದೆ. ನಮ್ಮ ರಾಜ್ಯದಲ್ಲಿ ವರದಕ್ಷಿಣೆ ಪ್ರಕರಣದ ಸಾವುಗಳು ಜಾಸ್ತಿಯಾಗುತ್ತಾ ಇವೆ. ಇದು ತುಂಬಾ ಕಳವಳಕಾರಿ ಯಾದ ವಿಚಾರವಾಗಿದೆ, ಈ ಕುರಿತು ಪಾರ್ಲಿಮೆಂಟ್‌ನಲ್ಲಿ ಉತ್ತರಿಸತಕ್ಕಂಥ ಸಂದರ್ಭದಲ್ಲಿ ಕರ್ನಾಟಕದಲ್ಲಿ ಈ ರೀತಿಯ ಪ್ರಕರಣಗಳು ಜಾಸ್ತಿಯಾಗುತ್ತಾ ಇವೆ ಎಂದು ಹೇಳಿದ್ದಾರೆ, ಈ ರೀತಿಯ ಪ್ರಕರಣಗಳು ನಿಯಂತ್ರಿಸುವುದು ಸರ್ಕಾರ ಒಂದರ್ ಜವಾಬ್ದಾರಿ ಎಂದು ನಾನು ಹೇಳಬಯಸುವುದಿಲ್ಲ. ಆದರೆ ಇಂಥ ದುಷ್ಕೃತ್ಯಗಳಿಗೆ ಕಾರಣಗಳು ಏನು ಎಂದು ಪರಿಶೋಧನೆ ಮಾಡುವ ಮತ್ತು ಅನಿಷ್ಟವಾಗಿ ತೊಡೆದು ಹಾಕುವ ದಿಸೆಯಲ್ಲಿ ಪ್ರಾಮಾಣಿಕವಾಗಿ ವಿಚಾರ ಮಾಡಬೇಕಾದಂಥ ಜವಾಬ್ದಾರಿಯು ಸರಕಾರದ ಮೇಲೆ ಇದೆ ಎಂದು ನಾನು ಭಾವಿಸುತ್ತೇನೆ.

ಇನ್ನು, ಇತ್ತೀಚೆಗೆ ಜಾತೀಯ ಮತ್ತು ಮತೀಯ ಘರ್ಷಣೆಗಳು ಸಣ್ಣಪುಟ್ಟ ಗ್ರಾಮಗಳಲ್ಲಿ ಕೂಡ ಬೆಳೆಯುತ್ತಾ ಬರುತ್ತಿದೆ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳಿಗೂ ತಿಳಿದಿರುವ ಹಾಗೆ, ನ್ಯಾಷನಲ್ ಇಂಟಿಗ್ರೇಷನ್ ಕೌನ್ಸಿಲ್ ಎಂಬ ಒಂದು ರಾಷ್ಟ್ರಮಟ್ಟದಲ್ಲಿದ್ದು, ಬಾಡಿ ಅಂಥ ಒಂದು ಕೌನ್ಸಿಲ್ ರಾಜ್ಯಮಟ್ಟ ದಲ್ಲಿಯೂ ಕೂಡ ಇದೆ ಎಂದು ನಾನು ನಂಬಿದ್ದೇನೆ. ಈ ಜಾತೀಯ ಮತ್ತು ಮತೀಯ ಘರ್ಷಣೆಗಳು

ಕಡಿಮೆಯಾಗಬೇಕೆಂಬ ಬಗ್ಗೆ ಈ ಕಾನ್ಸಿಲ್ ಸೂಕ್ತ ಕ್ರಮಗಳನ್ನು ಹಾಕಿಕೊಂಡು ಅದರ ಮೂಲಕ ಪ್ರಯತ್ನ ಮಾಡಬೇಕಾಗಿದೆ. ಆಗಿಂದಾಗ್ಗೆ ಇದರ ಬಗ್ಗೆ ಒಂದು ಅಂಡರ್‌ಸ್ಟಾಂಡಿಂಗ್ ಸರಿಯಾದ ರೀತಿಯಲ್ಲಿ ಮುಂದುವರಿಯಬೇಕಾದರೆ ಇಂಥ ಬಾಡಿಗಳನ್ನು ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳಲ್ಲಿಯೂ ಸ್ಥಾಪನೆ ಮಾಡಬೇಕಾದ ಅವಶ್ಯಕತೆ ಇದೆ. ಆದುದರಿಂದ ಇಂಥ ರಾಷ್ಟ್ರೀಯ ಐಕ್ಯತಾ ಬಾಡಿಗಳನ್ನು ಆದಷ್ಟು ಜಾಗ್ರತೆ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಪ್ರಾರಂಭ ಮಾಡಿ ಎಲ್ಲಾ ಸಂಘಸಂಸ್ಥೆಗಳನ್ನು ಎಲ್ಲಾ ಪಕ್ಷದ ನಾಯಕರುಗಳನ್ನು ಅದರಲ್ಲಿ ಪ್ರಾಧಾನ್ಯತೆ ಕೊಟ್ಟು ಸೇರಿಸಿ, ಈ ರೀತಿಯಾದಂಥ ಘರ್ಷಣೆಗಳು ನಡೆಯದಂತೆ ಮಾಡಬೇಕೆಂದು ಹೇಳಿ, ಈ ಬಗ್ಗೆ ಸರಕಾರದವರು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಒತ್ತಾಯಿಸಿ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈ ಶ್ರೀ ವಿನಯಕುಮಾರ್ ಸೊರಕೆಯವರು ಮಾತನಾಡಬಹುದು. ಆ ಮೇಲೆ ಮಾನ್ಯ ಶ್ರೀ ಬಾಬುರೆಡ್ಡಿ ತುಂಗಳ್‌ರವರು ತಮ್ಮ ಭಾಷಣವನ್ನು ಮಾಡಬಹುದು.

† ಶ್ರೀ ವಿನಯಕುಮಾರ್ ಸೊರಕೆ(ಪುತ್ತೂರು).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿದಂಥ ೧೯೯೯–೯೦ನೇ ಸಾಲಿನ ಬಜೆಟ್‌ನ್ನು ನಾನು ವಿರೋಧಿಸುತ್ತೇನೆ, ನಾನು ಶಾಸಕನಾಗಿ ಈ ಶಾಸನಕ್ಕೆ ಬಂದ ನಂತರ ಈ ವರ್ಷವೂ ಕೂಡ ಈ ಒಂದು ನಾಟಕೀಯ ಬಜೆಟ್‌ನ್ನು ನೋಡಿ ಆದರ ಮಟ್ಟಿಗೆ ಮಾತನಾಡಬೇಕಾಗಿದೆ. ಹಿಂದೆ ನಮ್ಮ ಬೇಡಿಕೆಗಳನ್ನು ಈ ಸದನದ ಮುಂದಿಟ್ಟು, ಯಾವುದೇ ರೀತಿಯಾದ ಫಲಿತಾಂಶ ಇಲ್ಲದೇನೇ, ಕಳೆದ ನಾಲ್ಕು ವರ್ಷಗಳಿಂದ ಇದೇ ರೀತಿಯಲ್ಲಿ ಮುಂದುವರಿಸಿಕೊಂಡು ಬಂದಿದ್ದೇವೆ. ಈ ವರ್ಷವೂ ಕೂಡ ಅದೇ ರೀತಿಯಲ್ಲಿ ಮಾತನಾಡಲು ನನಗೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು,

ನಾನಾದರೂ, ನನ್ನ ಜಿಲ್ಲೆಯ ಮಟ್ಟಿಗೆ, ನನ್ನ ಕ್ಷೇತ್ರದ ಮಟ್ಟಿಗೆ. ಸೀಮಿತವಾಗಿ ಮಾತನಾಡುವುದು ಇದ್ದರೆ, ಕಳೆದ ನಾಲ್ಕು ವರ್ಷಗಳಲ್ಲಿ ಸತತವಾಗಿ ಈ ಸದನದಲ್ಲಿ ಮುಖ್ಯಮಂತ್ರಿಗಳಲ್ಲಿ, ಅದೇ ರೀತಿಯಾಗಿ ಸಂಬಂಧಪಟ್ಟ ಮಂತ್ರಿಗಳವರಲ್ಲಿ, ನಮ್ಮ ಕ್ಷೇತ್ರದ ಬೇಡಿಕೆ ಮಟ್ಟಿಗೆ ಹೇಳಿಕೊಂಡಿದ್ದೇನೆ. ಅದು ಪುತ್ತೂರು ಬೈಪಾಸ್ ರಸ್ತೆಗೆ ಸಂಬಂಧಪಟ್ಟ ವಿಚಾರವಾಗಿರಲಿ. ಆ ಕ್ಷೇತ್ರದ ಶಿಕ್ಷಣದ ವ್ಯವಸ್ಥೆಯ ಮಟ್ಟಿಗೆ ಹೊಂದಿರತಕ್ಕಂಥ ವಿಚಾರವೇ ಆಗಿರಲಿ, ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಪಟ್ಟ ವಿಚಾರವೇ ಆಗಿರಲಿ, ಅಂತಹ ಬೇಡಿಕೆಗಳನ್ನು ಪದೇ ಪದೇ ವಿವಿಧ ಹಂತಗಳಲ್ಲಿ ಸದನದ ಮುಂದೆ ಇಟ್ಟಿದ್ದರೂ ಕೂಡ ಆ ವಿಚಾರಗಳಲ್ಲಿ ಇದುವರೆಗೆ ಯಾವುದೇ ಪ್ರಗತಿಯನ್ನು ನಾವು ಕಾಣುವುದಕ್ಕೆ ಸಾಧ್ಯವಾಗಿಲ್ಲ.

೩–೩೦ ಪಿ. ಎಂ.

ನಮಗಿರುವ ವ್ಯವಸ್ಥೆಯಲ್ಲಿ ನಾವು ಕ್ಷೇತ್ರದ ಬೆಳವಣಿಗೆಗಾಗಿ ಶಾಸಕರಾಗಿ ಆರಿಸಿ ಬಂದನಂತರ ಅದನ್ನು ಮಂತ್ರಿಗಳ, ಮುಖ್ಯ ಮಂತ್ರಿಗಳ ಗಮನಕ್ಕೆ ತರುವ ರೀತಿಯಲ್ಲಿ ಪ್ರಯತ್ನಿಸಿದರೂ ಕೂಡ ಯಾವ ರೀತಿಯ ಅಭಿವೃದ್ಧಿ ಕಾರ್ಯಕ್ರಮ ಆಗುವುದಿಲ್ಲ, ಬರೀ ನಿಯಮಿತವಾಗಿ ವರ್ಷಕ್ಕೊಂದು ಸಲ ಬಜೆಟ್ ಮಂಡನೆಯಾಗುತ್ತದೆ. ಅನಂತರ ನಿರಾಶದಾಯಕವಾದ ಚರ್ಚೆಯಾಗುತ್ತದೆ. ಅದರಲ್ಲೂ ಅಸೆಂಬ್ಲಿ ಅಧಿವೇಶನ ವರ್ಷದಲ್ಲಿ ಒಂದು ತಿಂಗಳು ಕೂಡ ನಡೆಯದಿರುವುದೂ ಕಂಡು ಬರುತ್ತಿದೆ. ಇದರಿಂದ ನಮಗಿರುವ ಅವಕಾಶಗಳು ಕುಂಠಿತವಾಗುತ್ತವೆಂಬ ಭಾವನೆ ಶಾಸಕರಲ್ಲಿ ಬರುವ ಸಂಭವವಿದೆ. ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರುವ ಬಜೆಟ್ ತುಂಬಾ ನಿರಾಶಾದಾಯಕವಾಗಿ ಚುನಾವಣಾ ಬಜೆಟೆಂದು ಪ್ರಚಾರ ಮಾಧ್ಯಮಗಳ ಬಜೆಟಾಗಿದೆಯೇ ವಿನಾ ಅಭಿವೃದ್ಧಿ ಕಾರ್ಯಕ್ರಮಗಳಿಗೋಸ್ಕರ ಬೇರೆ ಯೋಜನೆಗಳನ್ನು ಹಮ್ಮಿಕೊಂಡಿರುವ ಬಗ್ಗೆ ಹೆಚ್ಚಿನ ಫಲಿತಾಂಶ ಕಾಣುತ್ತಿಲ್ಲ. ಇದು ಮುಖ್ಯವಾಗಿ ಈಗಿನ ಸರ್ಕಾರ ಹೇಳಿಕೊಳ್ಳುವ ಜಿಲ್ಲಾ ಪರಿಷತ್ ಮಂಡಲ ಪಂಚಾಯತ್ ವ್ಯವಸ್ಥೆ ಬಗ್ಗೆ ಇದೆ. ಮಾಜಿ ಮುಖ್ಯಮಂತ್ರಿ ಹೆಗಡೆಯವರು ನಮ್ಮ ಜಿಲ್ಲೆಗೆ ಬಂದಾಗ ಕರ್ನಾಟಕದಲ್ಲೇ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವ ಜಿಲ್ಲಾ ಪರಿಷತ್ ಎಂದರೆ ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ ಎಂದು ಹೇಳಿ ಬಂದಿದ್ದರು. ಇವತ್ತು ಜಿಲ್ಲಾ ಪರಿಷತ್‌ಗಳು ಯೋಜನೆಗಳನ್ನು, ಕಾರ್ಯಕ್ರಮಗಳನ್ನು, ಅವುಗಳ ಬಜೆಟ್‌ನ್ನು ಮಾಡುತ್ತಿವೆ. ಆದರೂ ಅದಕ್ಕೆ ಖಜಾನೆಯಲ್ಲಿ ಕಡಿವಾಣ ಹಾಕಿ ಹಣಕಾಸಿನ ವ್ಯವಸ್ಥೆಗೆ ಅವಕಾಶ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಇಲ್ಲದೆ ಬರೀ ಚರ್ಚೆ ಮಾಡಿ ತಿಂಗಳು ತಿಂಗಳು ಸಂಬಳ ತೆಗೆದುಕೊಳ್ಳುವ ಪರಿಸ್ಥಿತಿ ಇದೆಯೋ ವಿನಾ ಯೋಜನೆ ಕೈಗೂಡಿಸಿಕೊಳ್ಳಲಾರದೆ ತುಕ್ಕು ಹಿಡಿಯುತ್ತಿದೆ. ನಾವು ದಿವಂಗತ ನಜೀರ್‌ಸಾಬರು ಹೊಸದಾಗಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳನ್ನು ತರುವ ಸಂದರ್ಭದಲ್ಲಿ ಹೆಚ್ಚಿನ ಜನರಿಗೆ ಅಭಿವೃದ್ಧಿ ಆಗುವುದೆಂಬ ಫಲಿತಾಂಶ ಬರಬಹುದೆಂಬ ನಂಬಿಕೆ ಇಟ್ಟುಕೊಂಡಿದ್ದೆವು. ಆದರೆ ಇಂದು ನಿರಾಶೆಯ ಫಲಿತಾಂಶ ಕಾಣುತ್ತಿದ್ದೇವೆ. ಕೇಂದ್ರದಿಂದ ಬರುವ ಆರ್‌ಎಲ್‌ಇಜಿಪಿ, ಎನ್‌ಆರ್‌ಇಪಿ ಮುಂತಾದ ಯೋಜನೆಗಳಿಗೆ ಹೊಸ ರೂಪ ಕೊಟ್ಟು ಮಾಡುವ ಯೋಜನೆ ಸರ್ಕಾರ ಹಮ್ಮಿಕೊಂಡಿದೆಯೋ ವಿನ ಬೇರೇನೂ ಇಲ್ಲ ಎಂಬ ಭಾವನೆ ಜನರಲ್ಲಿ ಬರಲು ಅವಕಾಶವಾಗಿದೆ.

ಇವತ್ತಿನ ಶಿಕ್ಷಣ ವ್ಯವಸ್ಥೆಯನ್ನು ಬೆಂಗಳೂರಿನಲ್ಲಿ ನೋಡಿದರೆ, ಹಿಂದೆ ನಮ್ಮ ಕಾಂಗ್ರೆಸ್ ಸರ್ಕಾರ ಇರುವಾಗ, ವಿದ್ಯಾರ್ಥಿಗಳು ಚಾಕು, ಚೂರಿ ಸಂಸ್ಕೃತಿಯವರು ಎಂಬ ದೊಡ್ಡ ಪ್ರಚಾರ ನಡೆಯಿತು. ಆದರೆ ಈ ಸರ್ಕಾರ ಬಂದ ನಂತರ ಹೆಬ್ಬಾಳದ ಅಗ್ರಿಕಲ್ಚರ್ ಯೂನಿವರ್ಸಿಟಿಯನ್ನೇ ತೆಗೆದುಕೊಂಡರೆ ಅಲ್ಲಿ ನೇರವಾಗಿ ಕ್ಯಾಬಿನೆಟ್ ಮಿನಿಸ್ಟರ್ಸ್ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ ದುಡ್ಡು ಕೊಟ್ಟು ಹೆಂಡ ಸರಬರಾಜು ಮಾಡುವುದು, ಕತ್ತಿ ಗುರಾಣಿ ಸರಬರಾಜು ಮಾಡುವ ವ್ಯವಸ್ಥೆ ಇರುವುದು ಪತ್ರಿಕೆಗಳಲ್ಲಿ ಬಂದಿದೆ. ಇದು ಜನಜನಿತವಾಗಿದೆ. ಅದರಲ್ಲೂ ಪೋಲಿಸರು ಕಾಯಿದೆ ಪ್ರಕಾರ ಒಳಗಡೆ ಹಾಕಿದವರನ್ನು ಬಿಡಿಸಲು ಮಂತ್ರಿಗಳು ಜಾಮೀನು ಕೊಡುತ್ತಿದ್ದಾರೆ. ಹಿಂದಿನ ಚಾಕು ಚೂರಿ ಸಂಸ್ಕೃತಿ ಈಗ ಕತ್ತಿ ಗುರಾಣಿ ಸಂಸ್ಕೃತಿಯನ್ನು ಕಾಣಲಿಕ್ಕೆ ಅವಕಾಶವಾಗುತ್ತಿದೆ. ವಿದ್ಯಾಭ್ಯಾಸಕ್ಕೆ ಯಾವುದೇ ಮಹತ್ವ ಕೊಡದೆ ಇಂತಹ ಸಂಸ್ಕೃತಿಗೆ ಪ್ರೋತ್ಸಾಹ ಕೊಡುತ್ತಿರುವುದನ್ನು ನಾವು ಬೆಂಗಳೂರು ಯೂನಿವರ್ಸಿಟಿಯಲ್ಲಿ ಕಾಣುತ್ತಿದ್ದೇವೆ. ನೀರಾವರಿ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಬಜೆಟ್ಟಿನಲ್ಲಿ ಪ್ರಸ್ತಾಪ ಮಾಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೀರಾವರಿ ಮಾಡಲಿಕ್ಕೆ ಸರಿಯಾದಂತಹ ಅರ್ಹತೆ ಇಲ್ಲ ಎನ್ನುವ ರೀತಿಯಲ್ಲಿ ತಪ್ಪು ಅಭಿಪ್ರಾಯ ಸರಕಾರಕ್ಕೆ ಇದೆ. ಬೇರೆ ಬೇರೆ ಜಿಲ್ಲೆಗಳಲ್ಲಿ ನೀರಾವರಿ ಯೋಜನೆಯಿಂದ ರೈತರಿಗೆ ಬಹಳ ಅನುಕೂಲವಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ಈ ಯೋಜನೆಯಲ್ಲಿ ೪೦೦–೫೦೦ ಎಕರೆಗಿಂತ ಹೆಚ್ಚು ಬೇಸಾಯ ಮಾಡಲೇಬೇಕೆನ್ನುವ ರೀತಿ ಕಾನೂನು ಇರುವ ಕಾರಣ ಇಂತಹ ಯೋಜನೆ ದಕ್ಷಿಣ ಕನ್ನಡ ಜಿಲ್ಲೆಗೆ ಅನ್ವಯವಾಗುವುದಿಲ್ಲವೆಂಬ ಅಭಿಪ್ರಾಯ ಇದೆ. ನಮ್ಮ ಜಿಲ್ಲೆಯ ಪುತ್ತೂರಿನ ಬೆಳ್ಳಿವಾಡ ಗ್ರಾಮ ಕಠಾರ, ಬಂಟ್ವಾಳದ ತಾಲ್ಲೂಕಿನ ಬೆಳ್ಳಿಯೂರಲ್ಲಿ ಈ ಯೋಜನೆಯನ್ನು ಅಳವಡಿಸಿಕೊಂಡು ಹೋಗುವಂತಹ ಒಂದು ಅವಕಾಶ ಇದೆ. ಬೇರೆ ಜಿಲ್ಲೆಗಳಿಗೆ ಪ್ರಾತಿನಿಧ್ಯ ಕೊಡುವ ರೀತಿಯಲ್ಲಿ ನಮ್ಮ ಜಿಲ್ಲೆಗೆ ಈ ಯೋಜನೆಯನ್ನು ಹಮ್ಮಿಕೊಂಡು ಹೋಗಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ವಿದ್ಯುಚ್ಛಕ್ತಿ ಮಟ್ಟಿಗೆ ಹೇಳುವುದಾದರೆ, ಹಳ್ಳಿಯ ರೈತರಿಗೆ ವಿದ್ಯುಚ್ಛಕ್ತಿ ಕಡಿತ ಬಹಳವಾಗಿ ಆಗುತ್ತಿದೆ. ಪಟ್ಟಣದ ಉದ್ಯಮಿಗಳಿಗೆ ಆ ರೀತಿಯಾಗುತ್ತಿಲ್ಲ. ಈಗ ಪಟ್ಟಣಕ್ಕೆ ಒಂದು ವ್ಯವಸ್ಥೆ, ಹಳ್ಳಿಗೆ ಒಂದು ರೀತಿಯ ವ್ಯವಸ್ಥೆ ಇದೆ. ಈ ತಾರತಮ್ಯ ಸರಿಯಲ್ಲ. ರೈತರಿಗೆ ತೊಂದರೆಯಾಗದ ರೀತಿಯಲ್ಲಿ ವಿದ್ಯುಚ್ಛಕ್ತಿ ವ್ಯವಸ್ಥೆಯನ್ನು ಸರಿಪಡಿಸಬೇಕೆಂದು ಮನವಿ ಮಾಡುತ್ತೇನೆ. ನಜೀರ್ ಅವಾಸ್ ಯೋಜನೆಯನ್ನು ಸರಕಾರ ಜಾರಿಗೆ ತರುತ್ತದೆ ಎನ್ನುವುದು ಬಹಳ ಒಳ್ಳೆಯ ಸೂಚನೆಯಾಗಿದೆ. ಎನ್‌ಆರ್‌ಇಪಿ ಮುಖಾಂತರ ಗ್ರೂಪ್ ಹೌಸಸ್ ಮಾಡುವಂತಹ ವ್ಯವಸ್ಥೆ ಇನ್ನೂ ಬಳಕೆಗೆ ಬಂದಿಲ್ಲ. ಆದ್ದರಿಂದ ನಜೀರ್ ಆವಾಸ್ ಯೋಜನೆಯನ್ನು ಗ್ರೂಪ್ ಹೌಸಸ್ ಯೋಜನೆಯನ್ನಾಗಿ ಪರಿವರ್ತನೆ ಮಾಡಬೇಕು. ಇಂತಹ ಯೋಜನೆಗಳನ್ನು ಅಳವಡಿಸುವುದರ ಜೊತೆಗೆ ಹಿಂದೆ ಇದ್ದಂತಹ ಇಂದಿರಾ ಆವಾಸ ಯೋಜನೆಯನ್ನು ಮತ್ತು ಆರ್‌ಎಲ್‌ಇಜಿಪಿ ಹಾಗೂ ಹುಡ್ಕೋ ಯೋಜನೆಯನ್ನು ಜಾರಿಗೆ ತರಬೇಕು. ಹುಡ್ಕೋ ಹೌಸಸ್‌ಗೆ ಸರಿಯಾಗಿ ಹಣ ಸಿಕ್ಕದೆ ಬಿಡಿಓ ಕಚೇರಿಗೆ ಜನರು ತಿರುಗುವಂತಹ ವ್ಯವಸ್ಥೆಯನ್ನು ನಾವು ನೋಡುತ್ತಿದ್ದೇವೆ. ಬಡವರಿಗೆ ತೊಂದರೆಯಾಗದ ರೀತಿಯಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ಮಾನ್ಯ ಮುಖ್ಯ ಮಂತ್ರಿಯವರಲ್ಲಿ ವಿನಂತಿಸುತ್ತೇನೆ. ಕಂದಾಯ ಇಲಾಖೆಯಲ್ಲಿನ ಜಾಗದಲ್ಲಿ ಅನೇಕ ಜನರು ೧೦–೨೦ ವರ್ಷಗಳಿಂದ ಕೃಷಿ ಮಾಡಿಕೊಂಡು ಬರುತ್ತಿದ್ದಾರೆ. ಅವರು ಅತಿ ಸಣ್ಣ ಹಿಡುವಳಿದಾರರಾಗಿದ್ದು ಅವರಿಗೆ ಸರಿಯಾದಂತಹ ತಿಳುವಳಿಕೆ, ವಿದ್ಯಾಭ್ಯಾಸ ಇಲ್ಲ. ಯಾರು ೧೦–೧೫ ವರ್ಷಗಳಿಂದ ಅಲ್ಲಿ ಕೃಷಿ ಮಾಡುತ್ತಿದ್ದಾರೆ ಅವರಿಗೆ ಹಕ್ಕು ಪತ್ರವನ್ನು ನೀಡುವಂತಹ ವ್ಯವಸ್ಥೆಯಾಗಿಲ್ಲ. ೭೦–೮೦ ಪರ್ಸೆಂಟ್‌ನಷ್ಟು ಜನರಿಗೆ ಹಕ್ಕುಪತ್ರ ಇಲ್ಲ. ಈ ರೀತಿಯಾದರೆ ಅವರಿಗೆ ಯಾವ ಅನುಕೂಲವೂ ಸಿಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಕಂದಾಯ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಇದರ ಬಗ್ಗೆ ಕಾನೂನನ್ನು ಜಾರಿಗೆ ತರುತ್ತೇವೆನ್ನುವಂತಹ ಭರವಸೆಯನ್ನು ಕೊಟ್ಟಿದ್ದರು. ಸರಕಾರ ಇದರ ಬಗ್ಗೆ ಹಿಂಜರಿಯುತ್ತಿದೆ. ಇದರ ಬಗ್ಗೆ ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಫಾರೆಸ್ಟ್ ಕಮಿಟಿಯವರ ಅಭಿಪ್ರಾಯದ ಪ್ರಕಾರ ೧೯೭೮ಕ್ಕಿಂತ ಮೊದಲು ಯಾರು ಆ ಜಾಗದಲ್ಲಿ ಕೃಷಿ

ಮಾಡಿಕೊಂಡಿದ್ದಾರೆ ಅವರಿಗೇ ಆ ಭೂಮಿಯನ್ನು ಕೊಡಬೇಕೆಂದು ಇದೆ. ಕಳೆದ ಕೆಲವು ತಿಂಗಳ ಹಿಂದೆ ಮಾನ್ಯ ರಾಚಯ್ಯನವರು ಅರಣ್ಯ ಮಂತ್ರಿಗಳಾಗಿದ್ದಾಗ ಒಂದು ಸರ್ಕ್ಯುಲರ್ ಕಳುಹಿಸಿ ೧೯೮೦ನೇ ಇಸವಿಗಿಂತ ಮೊದಲು ಯಾರು ಕೃಷಿಯನ್ನು ಮಾಡುತ್ತಿದ್ದಾರೆ ಅದನ್ನು ಅವರಿಗೇ ಕೊಡಬೇಕೆನ್ನುವಂತಹ ನಿರ್ದೇಶನ ಕೊಟ್ಟಿದ್ದರು. ಆದರೆ ಆ ನಿರ್ದೇಶನ ಆ ಕಮಿಟಿಗೆ ಬಂದಿಲ್ಲ. ೧೯೮೦ನೇ ಇಸವಿಗಿಂತ ಮೊದಲು ಯಾರು ಆ ಜಮೀನಿನಲ್ಲಿ ಕೃಷಿ ಮಾಡಿಕೊಂಡು ಹೋಗುತ್ತಿದ್ದಾರೆ ಅವರಿಗೇ ಆ ಜಮೀನನ್ನು ಕೊಡುವ ಬಗ್ಗೆ ಹಕ್ಕು ಪತ್ರವನ್ನು ಕೊಡುವ ರೀತಿ ಮಾನ್ಯ ಮುಖ್ಯ ಮಂತ್ರಿಗಳು ಆದೇಶ ಕೊಡಬೇಕು. ೨ ಎಕರೆ ಜಮೀನಿದ್ದವರಿಗೆ ೩ ಎಕರೆ ಜಾಗವನ್ನು ಕೊಡಬೇಕೆಂದು ಮಾಡಿದ್ದಾರೆ, ಇದು ಸರಿಯಲ್ಲ. ಜಾಗ ಇಲ್ಲದವರಿಗೆ ಜಾಸ್ತಿ ಕೊಡಬೇಕು, ಜಾಗ ಇದ್ದವರಿಗೆ ಕಡಿಮೆ ಕೊಟ್ಟರೂ ಪರವಾಗಿಲ್ಲ. ಜಾಗ ಇಲ್ಲದವರಿಗೆ ೫ ಎಕರೆ ಕೊಡಬೇಕೆಂದು ನಾನು ವಿನಂತಿಸುತ್ತೇನೆ. ನಮ್ಮ ಕುಮ್ಕಿ ಹಕ್ಕಿನ ಮಟ್ಟಿಗೆ ಬೇರೆ ಜಿಲ್ಲೆಯಲ್ಲಿ ಹೆಚ್ಚಿನ ತಿಳುವಳಿಕೆ ಇರಲಿಕ್ಕಿಲ್ಲ. ನಮ್ಮ ಜಿಲ್ಲೆಯಲ್ಲಿ ಶಿವಮೊಗ್ಗ, ಉತ್ತರ ಕನ್ನಡ, ಕೊಡಗು ಜಿಲ್ಲೆಗಳಲ್ಲಿ ಕುಮ್ಕಿ ಹಕ್ಕುಪತ್ರಕ್ಕೆ ಹೆಚ್ಚಿನ ಬೇಡಿಕೆ ಇದೆ. ಆಗಲೇ ಸರ್ಕಾರದ ನಿರ್ದೇಶದ ಪ್ರಕಾರ, ೫೦ ಪರ್ಸೆಂಟ್ ರೈತ ಮತ್ತು ೫೦ ಪರ್ಸೆಂಟ್ ಸರ್ಕಾರ ಎನ್ನುವ ರೀತಿಯಲ್ಲಿ ಅನುಭವ ಮಾಡಿಕೊಂಡು ಬರುತ್ತಿದ್ದಾರೆ. ಹಿಂದೆ ಮದ್ರಾಸ್ ಸರ್ಕಾರ ಇರುವಾಗ ನಮ್ಮ ರಾಜ್ಯ ವಿಂಗಡಣೆ ಆಗುವಂಥ ಸಂದರ್ಭದಲ್ಲಿ ಕಾಸರಗೋಡು, ಕೇರಳ ರಾಜ್ಯಕ್ಕೆ ಸೇರಿದಂಥ ಸಂದರ್ಭದಲ್ಲಿ ಇಂಥದ್ದೇ ಹಕ್ಕು ಇರುವಂಥ ಕುಮ್ಕಿ ಹಕ್ಕು ಕೇರಳ ರಾಜ್ಯದಲ್ಲಿ ತೀರ್ಮಾನವಾಗಿ ಕುಮ್ಕಿ ಹಕ್ಕು ಸಂಪೂರ್ಣವಾಗಿ ರೈತನಿಗೆ ಸಿಗುವಂಥ ಅವಕಾಶವಾಗಿದೆ. ಆದ್ದರಿಂದ ಈ ಕುಮ್ಕಿ ಹಕ್ಕು ಪತ್ರವನ್ನು ರೈತನಿಗೆ ಒದಗಿಸಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಕಳೆದ ಸಲ ಗ್ರಾಮೀಣಾಭಿವೃದ್ಧಿ ಸಚಿವರಾದ ಶ್ರೀ ಎಂ.ಪಿ. ಪ್ರಕಾಶ್‌ರವರು ನಮ್ಮ ಜಿಲ್ಲೆಗೆ ಬಂದಂಥ ಸಂದರ್ಭದಲ್ಲಿ ನಮ್ಮಲ್ಲಿ ಸಣ್ಣ ಸಣ್ಣ ಹಿಡುವಳಿದಾರರು ಸಿಗುತ್ತಾರೆ, ತೋಟದ ಹಿಡುವಳಿದಾರರು ಇದ್ದಾರೆ. ವಿಲಿಯರ್ಸ್ ಪಂಪನ್ನು ಉಪಯೋಗ ಮಾಡಿಕೊಂಡು ಸೀಮೆಎಣ್ಣೆ ಮುಖಾಂತರ ಪಂಪನ್ನು ನಡೆಸುವಂಥ ವ್ಯವಸ್ಥೆಯಲ್ಲಿ ಹೆಚ್ಚಿನ ಹಿಡುವಳಿದಾರರು ಇದ್ದಾರೆ. ಆದರಲ್ಲೂ ನೆರೆ ರಾಜ್ಯವಾದ ಕೇರಳ ರಾಜ್ಯದಲ್ಲಿ ಬೇಸಾಯಕ್ಕೋಸ್ಕರ ಉಪಯೋಗ ಮಾಡುವ ಪಂಪ್‌ಗೆ ಸೀಮೆಎಣ್ಣೆ ರಿಯಾಯಿತಿ ದರದಲ್ಲಿ ಸಿಗುತ್ತದೆ. ಇವತ್ತು ನಮ್ಮಲ್ಲಿ ಸೀಮೆಎಣ್ಣೆಯನ್ನು ಗೃಹಬಳಕೆಗೆ ಯಾವ ರೀತಿ ಉಪಯೋಗ ಮಾಡುತ್ತಿದ್ದಾರೆಯೋ ಅದೇ ರೀತಿಯಲ್ಲಿ ನಮ್ಮ ಜಿಲ್ಲೆಯಲ್ಲೂ ಕೂಡಾ ರಿಯಾಯಿತಿ ದರದಲ್ಲಿ ಸಿಗುವಂತೆ ಸೂಕ್ತವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ಅಧ್ಯಕ್ಷರೇ, ಅರ್ಥ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಗಳಾದಂಥ ಸನ್ಮಾನ್ಯ ಶ್ರೀ ಎಸ್. ಆರ್. ಬೊಮ್ಮಾಯಿಯವರು ಮಂಡಿಸಿರುವಂಥ ಈ ಬಜೆಟ್‌ನ್ನು ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ, ನೂರಾರು ತೊಂದರೆಗಳ ಮಧ್ಯೆಯೂ ಕೂಡಾ ಬಹಳ ಸಮತೋಲನದಿಂದ ಇದಂಥ ಬಜೆಟ್ ಇದು ಎಂಬ ದೃಷ್ಟಿಯಿಂದ ಇದನ್ನು ನಾನು ಸ್ವಾಗತ ಮಾಡುತ್ತೇನೆ. ಈ ವರ್ಷದ ಬಜೆಟ್‌ನಲ್ಲಿ ಕೆಲವು ಹೊಸ ಕಾರ್ಯಕ್ರಮಗಳು ಸೇರಿಕೊಂಡಿವೆ. ಗ್ರಾಮ ನೈರ್ಮಲ್ಯದ ಕಾರ್ಯಕ್ರಮ, ನಜೀರ್ ಆವಾಜ್‌ದಂಥ ಕಾರ್ಯಕ್ರಮ, ಮಹಿಳೆಯರಿಗೆ ಶೇಕಡ ೩೦ ರಷ್ಟು ಉದ್ಯೋಗದಲ್ಲಿ ಮೀಸಲಾತಿಯ ಕಾರ್ಯಕ್ರಮ. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ ಕಾರ್ಯಕ್ರಮ, ಕನ್ನಡಿಗರಿಗೆ ಉದ್ಯೋಗ ಅವಕಾಶ, ಹೀಗೆ ಅನೇಕ ತರಹ ಸ್ವಾಗತಾರ್ಹವಾದಂಥ ಕಾರ್ಯಕ್ರಮಗಳನ್ನು ಈ ಬಜೆಟ್‌ನಲ್ಲಿ ಅರ್ಥ ಸಚಿವರು ಆದಂಥ ಮಾನ್ಯ ಮುಖ್ಯಮಂತ್ರಿಗಳು ಸೇರಿಸಿರುವುದಕ್ಕೆ ನಾನು ನನ್ನ ಜನತೆಯ ಪರವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅದರ ಜೊತೆಗೆ ಅದರಲ್ಲಿ ಒಂದು ಪ್ರಾರ್ಥನೆಯನ್ನೂ ಕೂಡಾ ಮಾಡುತ್ತೇನೆ. ನಾವು ಇವತ್ತು ಹಳ್ಳಿಗಾಡಿನ ಜನರನ್ನು ನೋಡುತ್ತಿದ್ದೇವೆ, ತಾವು ಕೂಡಾ ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕಂಥವರು. ಬಹಳಷ್ಟು ಹಳ್ಳಿಗಳ ದಿಕ್ಕುದೆಶೆಗಳನ್ನು ಬದಲಾವಣೆ ಮಾಡುವುದಕ್ಕೆ ನಮ್ಮಿಂದ ೪೦–೪೨ ವರ್ಷಗಳಿಂದಲ್ಲೂ ಆಗಿಲ್ಲ. ಕಲ್ಮಶ ರಹಿತವಾದ ಮಾರ್ಗದಿಂದ ದೂರವಿರುವಂಥ ಒಂದೆರಡು ಹಳ್ಳಿಗಳನ್ನು ನೋಡಬೇಕಾಗುತ್ತದೆ. ಗ್ರಾಮ ನೈರ್ಮಲ್ಯದ ಕಾರ್ಯಕ್ರಮ, ಯಶಸ್ವಿಯಾಗುವ ರೀತಿಯಲ್ಲಿ ಗ್ರಾಮಾಭಿವೃದ್ಧಿ ಸಚಿವರು ನೋಡಿಕೊಳ್ಳಬೇಕೆಂದು ಹೇಳುತ್ತೇನೆ. ಈ ಬಜೆಟ್‌ನ್ನು ನೋಡಿದ ಮೇಲೆ ನನಗೆ ನೀರಾವರಿ ಬಗ್ಗೆ ಸ್ವಲ್ಪ ಸಂದೇಹ ಇದೆ. ಏತಕ್ಕೆಂದು ಹೇಳಿದರೆ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕಳೆದ ವರ್ಷ ಮತ್ತು ಅದರ ಹಿಂದಿನ ವರ್ಷ ಕಾವೇರಿ ಯೋಜನೆಗಳಿಗೆ ಒಂದು ನೂರು ಕೋಟಿ ರೂಪಾಯಿಯನ್ನು ಕೊಡಬೇಕು, ಕೃಷ್ಣ ಯೋಜನೆಗೆ ಎರಡು ನೂರು ಕೋಟಿ ರೂಪಾಯಿಯನ್ನು ಕೊಡಬೇಕು ಎಂದು ಈ ಸದನದಲ್ಲಿ ಒಮ್ಮತದಿಂದ ತೀರ್ಮಾನವಾಗಿತ್ತು. ಸನ್ಮಾನ್ಯ ದೇವೇಗೌಡರು ಸಚಿವ ಸಂಪುಟವನ್ನು ಬಿಡುವಾಗ ಆ ಸ್ಥಾನದಲ್ಲಿ ನಿಂತು ಒಂದು ಮಾತನ್ನು ಹೇಳಿದ್ದರು. ನೀರಾವರಿಗಾಗಿ ೩೦೦ ಕೋಟಿ ರೂಪಾಯಿಗಳನ್ನು ದೊರಕಿಸುವುದರಲ್ಲಿ ವಿಫಲರಾಗಿದ್ದೇವೆ, ಆ ವಿಫಲತೆಯನ್ನು ಒಪ್ಪಿಕೊಂಡು ನಾನು ಇವತ್ತು ನಮ್ಮ ನಾಯಕರನ್ನು ಮನ ಒಲಿಸುವಲ್ಲಿ ವಿಫಲನಾದುದರಿಂದ ಸಚಿವ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟು ಹೋಗಿದ್ದೇನೆ ಎಂದು ಹೇಳಿದರು, ಆಮೇಲೆ ಮತ್ತೆ ಬಂದರು. ಬಜೆಟ್‌ನಲ್ಲಿ ನೀರಾವರಿಯ ಬಗ್ಗೆ ಇರುವ ಕೆಲವು ವಿಷಯಗಳನ್ನು ನೋಡಿದಾಗ ಮಾನ್ಯ ಶ್ರೀ ಕಡಪಟ್ಟಿಯವರಿಗೆ ಏನು ಅನಿಸುತ್ತದೆಯೋ ಗೊತ್ತಿಲ್ಲ, ನನಗಂತೂ ವೈಯಕ್ತಿಕವಾಗಿ ಬಹಳ ವಿಷಾದವಾಗಿದೆ. ನಮ್ಮ ಕ್ಷೇತ್ರದಲ್ಲಿ ನೀರಾವರಿ ಯೋಜನೆಗಳು ಇದ್ದಾವೆ. ೧೯೮೬ರ ಬಜೆಟ್ ಪುಸ್ತಕದಲ್ಲಿ ನೀರಾವರಿ ಬಗ್ಗೆ ಪ್ರಸ್ತಾಪ ಇಟ್ಟಿದ್ದರು. ಆಗ ನಾವು ಜನರಿಗೆ ಏನೇನೋ ಸಮಾಧಾನವನ್ನು ಹೇಳಿದೆವು. ಮತ್ತೆ ೧೯೮೭ರ ಬಜೆಟ್ ಪುಸ್ತಕದಲ್ಲಿ ಪ್ರಸ್ತಾಪ ಆಗಿತ್ತು. ಜನಗಳಿಗೆ ಸಮಾಧಾನ ಹೇಳಿದೆವು. ನಂತರ ೧೯೮೮ರಲ್ಲಿ ಬಜೆಟ್ ಪುಸ್ತಕದಲ್ಲಿ ಆ ವಿಷಯ ಪ್ರಿಂಟ್ ಆಗಿತ್ತು. ಈ ವರ್ಷದ ದುರಂತ ಏನು ಆಗಿದೆ ಅಂದರೆ, ನನ್ನ ಕ್ಷೇತ್ರದ ಜನಗಳಿಗೆ ಮತ್ತು ಗೆಳೆಯರಿಗೆ ಸಮಾಧಾನ ಮಾಡಿ, ಬಜೆಟ್‌ನಲ್ಲಿ ನಮ್ಮ ಯೋಜನೆ ಬಂದಿದೆ, ಬಂದಿದೆ ಹೇಳುತ್ತಿದ್ದೇವೆ. ಈ ವರ್ಷದ ಬಜೆಟ್ ನೋಡಿ ಅವರಿಗೆ ಆಘಾತವಾಗಿದೆ. ಮೂರು ವರ್ಷದಿಂದ ಕನಿಷ್ಟ ಪ್ರಿಂಟ್ ಆದರೂ ಆಗುತ್ತಿತ್ತು. ಈ ವರ್ಷ ಅದು ನಾಪತ್ತೆಯಾಗಿದೆ. ಈ ಕಾರಣಕ್ಕಾಗಿ ನನಗೆ ಕಳವಳ ಆಗಿದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದ್ದಾರೆ. ಕಟ್ಟುನಿಟ್ಟಾಗಿ ನಾವು ನೀರಾವರಿ ಸಲುವಾಗಿ ೩೦೧ ಕೋಟಿ ರೂಪಾಯಿಗಳನ್ನು ತೆಗೆದು ಇಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಕಳೆದ ಎರಡು ಮೂರು ವರ್ಷಗಳಿಂದ ಬಜೆಟ್‌ನಲ್ಲಿ ಇರತಕ್ಕ ಕಾರ್ಯಕ್ರಮಗಳು ನಾಪತ್ತೆಯಾಗಿವೆ. ಅನೇಕ ಭಾರಿ ನಾನು ಮುಖ್ಯಮಂತ್ರಿಗಳಿಗೆ ಸಲಹೆಯನ್ನು ಮಾಡಿದ್ದೇನೆ, ಈಗಲೂ ಸಹ ಮಾಡುತ್ತೇನೆ. ನೀರಾವರಿ ಯೋಜನೆಗಳಿಗೆ ಹಣಕಾಸಿನ ಕೊರತೆ ಏನಾದರೂ ಇದ್ದರೆ, ನೀರಾವರಿಗೆ ಬಾಂಡ್ ಮಾಡಬೇಕು ಎಂದು ಸಲಹೆ ಮಾಡುತ್ತೇನೆ. ನಮ್ಮ ಜನರು ದಾರಿಯಲ್ಲಿ ಹೋಗುವಾಗ ೧೦-೧೦ ಲಾಟರಿ ಟಿಕೇಟ್‌ಗಳನ್ನು ತೆಗೆದುಕೊಳ್ಳುತ್ತಾನೆ. ಇನ್ನೊಬ್ಬ ನೌಕರ ೫೦ ಲಾಟರಿ ಟಿಕೇಟು ತೆಗೆದುಕೊಳ್ಳುತ್ತಾನೆ. ಅವರಿಗೆ ಹಣಕಾಸಿನ ವ್ಯವಸ್ಥೆ ಬಗ್ಗೆ ಗೊತ್ತಿಲ್ಲ. ನಾನು ಹೇಳುವುದೇನೆಂದರೆ, ನೀವು ರೈತರ ಉಪಯೋಗಕ್ಕಾಗಿ ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ಹಾಕಿ. ರೈತರಿಗೆ ನೀರಾವರಿ ಬಾಂಡ್‌ಗಳನ್ನು ಕೊಟ್ಟರೆ ಅವರು ಅನೇಕ ನೀರಾವರಿ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳುತ್ತಾರೆ. ನಮ್ಮ ಕೃಷ್ಣಾ ತೀರದ ರೈತ ಸಂಘಗಳು ಒಂದು ಕೋಟಿ ರೂಪಾಯಿ ಖರ್ಚು ಮಾಡಿ ಒಂದು ಚಿಕ್ಕ ಬ್ಯಾರೇಜ್ ಮಾಡಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಅದರ ಬಗ್ಗೆ ಎರಡು ಮೂರು ವಾರದ ಹಿಂದೆ ''ಇಂಡಿಯಾ ಟುಡೇ'' ನಲ್ಲಿ ಒಂದು ವರದಿ ಕೂಡ ಬಂದಿತ್ತು, ತಾವು ಸಹ ನೋಡಿರಬಹುದು. ಅವರು ಯಾವ ರೀತಿ ಕಾರ್ಯಕ್ರಮ ಮಾಡುತ್ತಾರೆ, ಇದರ ಬಗ್ಗೆ ಸರ್ಕಾರ ಏನಾದರೂ ಯೋಜನೆ ಹಾಕಿಕೊಂಡು ಸಹಾಯ ಮಾಡುವುದಕ್ಕೆ ಮುಂದೆ ಬಂದರೆ ನಮ್ಮಲ್ಲಿರುವಂತಹ ಬ್ಯಾರೇಜ್‌ಗಳನ್ನು, ಅಣೆಕಟ್ಟುಗಳನ್ನು ತಾಲ್ಲೂಕು, ತಾಲ್ಲೂಕುಗಳಲ್ಲಿ, ಜಿಲ್ಲೆ ಜಿಲ್ಲೆಗಳಲ್ಲಿ ನಿರ್ಮಾಣ ಮಾಡುವುದಕ್ಕೆ ರೈತರು ಮುಂದೆ ಬರುತ್ತಾರೆ. ನಾನು ಮಾನ್ಯ ಸ್ನೇಹಿತರು ಆಡಿದ ಒಂದು ಮಾತಿಗೆ ವಿಷಾದ ವ್ಯಕ್ತಪಡಿಸುತ್ತೇನೆ. ಮಾನ್ಯ ಉಸ್ತಾದ್‌ರವರು ಒಂದು ಮಾತನ್ನು ಹೇಳಿದ್ದಾರೆ. ಜಿಲ್ಲಾ ಪರಿಷತ್ ಚುನಾವಣೆಗೆ ಪೂರ್ವದಲ್ಲಿ ಆಗಿನ ಮುಖ್ಯಮಂತ್ರಿಗಳೂ, ಈಗಿನ ಮುಖ್ಯಮಂತ್ರಿಗಳೂ ಹಾಗೂ ನೀರಾವರಿ ಮಂತ್ರಿಗಳು ಮುಳುವಾಡದಲ್ಲಿ ಬಂದು ಒಂದು ಅದ್ದೂರಿ ಸಮಾರಂಭ ಮಾಡಿ, ಸುಮಾರು ೬೦೦ ಕೋಟಿ ರೂಪಾಯಿಗಳು ಮುಳುವಾಡಿ ಯೋಜನೆ ಆಗುತ್ತದೆ, ಈ ನೀರಾವರಿ ಯೋಜನೆ ಬಗ್ಗೆ ಯಾರೂ ಶಂಕೆ ವ್ಯಕ್ತಪಡಿಸಬೇಕಾಗಿಲ್ಲ. ಎಂದು ಹೇಳಿ ಬಹಳ ಅದ್ದೂರಿಯಿಂದ ಪ್ರಾರಂಭ ಮಾಡಿ ಹೋದರು. ಮಾನ್ಯ ಮಂತ್ರಿಗಳು ಹೋದ ವರ್ಷ ಸದನಕ್ಕೆ ತಪ್ಪು ಮಾಹಿತಿ ನೀಡಿದರು. ಅದು ಏನು ಅಂದರೆ ನಾನು ಹಾಗೂ ಮಾನ್ಯ ಉಸ್ತಾದ್‌ರವರು ಮುಳುವಾಡ ಯೋಜನೆ ಬಗ್ಗೆ ಪ್ರಶ್ನೆ ಕೇಳಿದಾಗ ಈ ಯೋಜನೆಗೆ ೧೦ ಕೋಟಿ ರೂಪಾಯಿಗಳನ್ನು ತೆಗೆದು ಇಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಇವತ್ತಿನವರೆಗೂ ಏನೂ ಆಗಲಿಲ್ಲ. ನಾನು ವಿಷಾದದಿಂದ ಹೇಳುತ್ತೇನೆ. ನೀರಾವರಿ ಯೋಜನೆಗಳ ವಿಷಯದಲ್ಲಿ ಬಹಳಷ್ಟು ಮಾತನಾಡಿ ಈ ಸದನಕ್ಕೆ ಬಂದ ನಾವುಗಳು, ಈಗ ಜನರ ಎದುರಿಗೆ ಹೋಗಲಿಕ್ಕೆ ನಮಗೆ ಮುಖ ಇಲ್ಲ. ಈ ಸದನದಲ್ಲಿ ನಾನು ನೇರವಾಗಿ ಹೇಳುತ್ತೇನೆ. ನನ್ನ ಜಿಲ್ಲೆಯಲ್ಲಿ ೨೦ ವರ್ಷಗಳಿಂದ ನಾನು ಒಬ್ಬ ಪತ್ರಕರ್ತನಾಗಿ ಮರ್ಯಾದೆಯಿಂದ ಬದುಕನ್ನು ಸಾಗಿಸಿಕೊಂಡು ಬಂದಿದ್ದೇನೆ. ಆದರೆ ಶಾಸಕನಾಗಿ ಕಳೆದ ನಾಲ್ಕು ವರ್ಷಗಳಲ್ಲಿ ನನ್ನ ಮರ್ಯಾದೆ ಹರಾಜಾಗಿ ಹೋಗಿದೆ. ಈ ರೀತಿಯಾದ ಕಾರ್ಯಗಳನ್ನು

ಮಾಡದೆ ಇರುವುದರಿಂದ ಇವತ್ತಿನ ದಿವಸ ನಮ್ಮ ಜಿಲ್ಲೆಯಲ್ಲಿ ಜನಗಳಿಗೆ ಮುಖ ತೋರಿಸದ ರೀತಿಯಲ್ಲಿ ಆಗಿದೆ. ನಮ್ಮ ಐದು ಜಿಲ್ಲೆಗಳು ಇರುವಂತಹ ಪ್ರದೇಶವನ್ನು ಏಕೆ ನಿರ್ಲಕ್ಷ್ಯ ಮಾಡಿದ್ದೀರಿ. ಇದಕ್ಕೆ ಕಾರಣ ಗೊತ್ತಿಲ್ಲ. ಒಂದು ಕಡೆ ರೊಕ್ಕ ಇಲ್ಲವೆಂದು ಹೇಳುತ್ತೀರಿ, ಮತ್ತೊಂದು ಕಡೆ ಹೇಮಾವತಿ ಯೋಜನೆಗೆ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡುತ್ತೀರಿ. ನಮ್ಮ ಕಡೆ ಸಣ್ಣ ಏತಾವರಿ ಯೋಜನೆ ಮಾಡಿದ್ದೀರಿ, ಏನೇನೋ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತೀರಿ. ಈ ಕಡೆ ಕೋಟಿಗಟ್ಟಲೆ ದುಡ್ಡು ಖರ್ಚು ಮಾಡುತ್ತೀರಿ. ನಮ್ಮ ಕಡೆ ಬರೀ ಕಾಗದದಲ್ಲಿ ಇರುವಂತಹ ಯೋಜನೆಗಳು ಜಾರಿಗೆ ಬರುವುದಿಲ್ಲ. ಹೀಗಾಗಿ ಶಾಸಕರ ಬಗ್ಗೆ ಜನಗಳಿಗೆ ಗೌರವ ಹೋಗುತ್ತಿದೆ. ಈ ರೀತಿ ಯಾದರೆ ಶಾಸಕರು ಯಾವ ಮುಖ ಇಟ್ಟುಕೊಂಡು ಜನರಿಗೆ ತೋರಿಸಬೇಕು. ನಮ್ಮಲ್ಲಿ ಕಳೆದ ವರ್ಷ ಏತ ನೀರಾವರಿ ಯೋಜನೆ ಆಗುತ್ತದೆ ಎಂದು ಇತ್ತು. ಆದರೆ ಈ ಯೋಜನೆ ಈ ವರ್ಷದ ಬಡ್ಜೆಟ್‌ನಲ್ಲಿ ಬರಲಾರದಿದ್ದುದಕ್ಕೆ ನನ್ನ ಕ್ಷೇತ್ರದ ಜನರು ಸಾವಳಗಿ ಸರ್ಕಲ್‌ನಲ್ಲಿ ಕಳೆದ ಮೂರು ದಿವಸದಿಂದ ಸತ್ಯಾಗ್ರಹ ಮಾಡುತ್ತಿದ್ದಾರೆ. ನನ್ನ ಊರಿಗೆ ಹೋಗಬೇಕಾದರೆ ಈ ಹಳ್ಳಿ ಮುಖಾಂತರ ಹೋಗಬೇಕು. ಅಲ್ಲಿ ಅವರುಗಳು ಸರದಿ ಸತ್ಯಾಗ್ರಹ ಮಾಡುವುದಕ್ಕೆ ಆರಂಭಿಸಿದ್ದಾರೆ. ನೀರಾವರಿ ಯೋಜನೆಗಳಿಗೆ ಎಷ್ಟು ದುಡ್ಡು ಖರ್ಚು ಮಾಡಿದರೂ ನಿಮ್ಮ ಬಗ್ಗೆ ಆಕ್ಷೇಪಣೆ ಮಾಡುವುದಿಲ್ಲ. ನೀರಾವರಿ ಯೋಜನೆಗಳಿಗೆ ಹೆಚ್ಚು ಹಣವನ್ನು ಖರ್ಚು ಮಾಡಬೇಕು ಎಂದು ಹೇಳುತ್ತೇವೆ. ನಾನು ಬಹಳ ಸಂತೋಷ ಪಡಬಹುದಾದ ವಿಚಾರ. ಬಿಜಾಪುರದಲ್ಲಿ ಏತ ನೀರಾವರಿ ಯೋಜನೆ ಆಯಿತು. ಎಂದು ಹೇಳಿ ನಾನು ಮಾನ್ಯ ಮಂತ್ರಿಗಳಿಗೆ ಬಹಳ ಗಂಭೀರವಾದ ಆರೋಪ ಮಾಡುತ್ತಿದ್ದೇನೆ. ನಾನು ಕಳೆದ ವರ್ಷ ಒಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಮಾನ್ಯ ದೇವೇಗೌಡರು ಉತ್ತರ ಹೇಳಿದ್ದಾರೆ. ಬಿಜಾಪುರದಲ್ಲಿ ಏತ ನೀರಾವರಿ ನಿಗಮ ಇದ್ದುದು ನಿಜ. ಏತ ನೀರಾವರಿ ನಿಗಮ ಸ್ಥಾಪನೆ ಮಾಡಿದ್ದು ನಿಜ ಎಂದು ಹೇಳಿದ್ದರು. ಆದರೆ ದುರಂತ ಎಂದರೆ ಅದು ಪ್ರಾರಂಭ ಆಗಿಲ್ಲ. ಮಾನ್ಯ ಬಿಜಾಪುರದ ಶಾಸಕರಾದ ಶ್ರೀ ಖೇಡ್‌ರವರಿಗೂ ಗೊತ್ತಿದೆ. ಏತ ನೀರಾವರಿ ನಿಗಮ ಏನು ಇದೆ ಇಲ್ಲಿ ಕೇವಲ ೧೬೨ ಜನ ಸಿಬ್ಬಂದಿ ಇದ್ದಾರೆ. ೧೬೨ ಜನ ಸಿಬ್ಬಂದಿ ಇದ್ದರೂ ಸಹ ಕೆಲಸ ಮಾತ್ರ ಶೂನ್ಯ. ಒಂದು ನಯಾ ಪೈಸೆ ಕೆಲಸ ಕೂಡ ಆಗಿಲ್ಲ. ೧೬೨ ಜನ ಸಿಬ್ಬಂದಿ ಇದ್ದುಕೊಂಡು ಕೆಲಸವನ್ನು ಪ್ರಾರಂಭ ಮಾಡಿರುವುದಿಲ್ಲ. ನಾನು ಸರ್ಕಾರಕ್ಕೆ ಖಾರವಾಗಿ ಕೇಳುತ್ತೇನೆ. ಈ ೧೬೨ ಜನ ಸಿಬ್ಬಂದಿಯ ಬಿಳಿ ಆನೆಯನ್ನು ಬಿಜಾಪುರದ ದರಿದ್ರ ನಾಡಿನಲ್ಲಿ, ಬರಗಾಲದ ನಾಡಿನಲ್ಲಿ ಈ ಬಿಳಿ ಆನೆಯನ್ನು ಸಾಕುವ ಅವಶ್ಯಕತೆ ಇದೆಯೇ ? ನಾನು ಈ ಮಾತನ್ನು ಆಡಳಿತ ಪಕ್ಷದ ಸದಸ್ಯನಾಗಿ ಕೇಳುತ್ತೇನೆ. ಹಿಂದೆ ಜಮಖಂಡಿಗೆ ಮತ್ತು ಇಂಡಿಯಲ್ಲಿ ಜನರೇಟರ್ ಕೊಡುತ್ತೇವೆ ಎಂದು ಹೇಳಿದ್ದರು. ೩ ವರ್ಷಗಳ ಬಡ್ಜೆಟ್ ಬಂತು ಇದಕ್ಕೆ ಕೇಂದ್ರ ಸರ್ಕಾರದ ಹಸಿರು ಬಾವುಟ ಸಿಕ್ಕಿದೆ, ಇಷ್ಟರಲ್ಲೇ ಮಾಡುತ್ತೇವೆ ಎಂದು ಹೇಳಿದರು. ಆದರೂ ಜನರೇಟರ್ ಜಮಖಂಡಿಗೆ ಬಂದಿಲ್ಲ, ಇಂಡಿಗೆ ಬಂದಿಲ್ಲ, ನಮ್ಮ ಊರಿಗೂ ಬಂದಿಲ್ಲ. ಈ ಬಗ್ಗೆ ಬಹಳ ವರ್ಷಗಳಿಂದ ಹೇಳುತ್ತಾ ಬಂದಿದ್ದಾರೆ. ಈ ಜನರೇಟರ್ ಆದರೆ ನೀರಾವರಿ ಪಂಪ್‌ಸೆಟ್‌ಗೆ ಅಧಿಕ ಶಕ್ತಿ ಬರುತ್ತದೆ. ಈಗ ಅದು ಬಂದಿಲ್ಲ. ನಾನು ಸ್ಪಷ್ಟವಾಗಿ ಹೇಳುತ್ತೇನೆ, ಈ ವಿಚಾರದಲ್ಲಿ ಪ್ರಾದೇಶಿಕ ತಾರತಮ್ಯ ಆಗಲಿಕ್ಕೆ ಹತ್ತಿದೆ. ಪ್ರಾದೇಶಿಕ ತಾರತಮ್ಯ ಆಗಿದ್ದೇ ಆದರೆ ನಾವು ಬಹಳ ಮುಂದೆ ಹೋಗಬೇಕಾಗುತ್ತದೆ. ನಮ್ಮ ಗುರುಗಳಾದಂಥ ಮಾನ್ಯ ಜೆ. ಹೆಚ್. ಪಟೇಲರು ಆ ಕಡೆ ಇದ್ದಾಗ ಒಂದು ಮಾತನ್ನು ಹೇಳಿದ್ದರು. ಪ್ರಾದೇಶಿಕ ತಾರತಮ್ಯ ಇದೇ ರೀತಿ ಮುಂದುವರೆದರೆ ನಾವು ಮತ್ತೊಂದು ಕರ್ನಾಟಕಕ್ಕಾಗಿ ಚಳುವಳಿ ಮಾಡುತ್ತೇವೆ ಎನ್ನುವಂಥ ಮಾತನ್ನು ಹೇಳಿದಂಥ ಪಟೇಲರು ಇವತ್ತು ಇಲ್ಲಿ ಕುಳಿತಿದ್ದಾರೆ. ಅಂತಹ ಪಟೇಲರ ಶಿಷ್ಯನಾಗಿ ಸದನದಲ್ಲಿ ಘಂಟಾಘೋಷವಾಗಿ ನಾನು ಅದೇ ಮಾತನ್ನು ಹೇಳುತ್ತೇನೆ. ಪ್ರಾದೇಶಿಕ ತಾರತಮ್ಯದ ಬಗ್ಗೆ ಇವತ್ತು ಹೇಳಬೇಕಾಗುತ್ತದೆ ಮತ್ತು ಎಚ್ಚರಿಕೆ ಕೊಡಬೇಕಾಗುತ್ತದೆ. ೫ ನದಿಗಳು ಇರುವಂಥ ಬಿಜಾಪುರ ಜಿಲ್ಲೆಯನ್ನು ಮರೆಯಬಾರದು, ಮರೆತರೆ ಹಳ್ಳಿಯ ಜನರು ಹೋರಾಟ ಮಾಡುತ್ತಾರೆ, ಆಂದೋಳನ ಮಾಡುತ್ತಾರೆ. ಆ ಹೋರಾಟವನ್ನು ಎದುರಿಸಲಿಕ್ಕೆ ನಮಗೆ ಆಗುವುದಿಲ್ಲ. ಆಗ ನಾವು ಕಡ್ಡಾಯವಾಗಿ ರಾಜಕೀಯ ನಿವೃತ್ತಿ ತೆಗೆದುಕೊಂಡು ಮನೆಗೆ ಗೌರವವಾಗಿ ಹೋಗಬೇಕಾದ ಪರಿಸ್ಥಿತಿ ಬರುತ್ತದೆ. ಎನ್ನುವಂಥ ಮಾತನ್ನು ಅತ್ಯಂತ ವಿಷಾದದಿಂದ ಹೇಳಿ ನನಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಜಿ. ನಂಜಯ್ಯನಮಠ.—ನಮ್ಮ ಜನತೆಯ ಪರವಾಗಿ ಮಾನ್ಯ ಬಾಬುರೆಡ್ಡಿಯವರಿಗೆ ಕೃತಜ್ಞತೆಗಳು.

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೆ, ಬಜೆಟ್ ಮೇಲೆ ನಡೆದಂಥ ಚರ್ಚೆಯಲ್ಲಿ ಸುಮಾರು ೨೦ ಜನ ಮಾನ್ಯ ಶಾಸಕರು ಭಾಗವಹಿಸಿದ್ದಾರೆ. ಪ್ರಮುಖ ವಿರೋಧ ಪಕ್ಷವಾದಂಥ ಕಾಂಗ್ರೆಸ್ ಪಕ್ಷದವರು ಸುಮಾರು ೧೨ ಗಂಟೆಗಳ ಕಾಲವನ್ನು ಈ ಚರ್ಚೆಯಲ್ಲಿ ಉಪಯೋಗ ಮಾಡಿಕೊಂಡಿದ್ದಾರೆ. ಪ್ರಾರಂಭದಲ್ಲಿ ಒಂದು ವಿಚಾರವನ್ನು ಮಾನ್ಯ ಮೊಯ್ಲಿಯವರು ಎತ್ತಿದ್ದಾರೆ. ಏನೆಂದರೆ, ೬ ತಿಂಗಳ ಓಟ್ ಆನ್ ಅಕೌಂಟ್ ತೆಗೆದುಕೊಳ್ಳತಕ್ಕಂಥಾದ್ದು ಸರಿಯಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಈ ರೀತಿ ಓಟ್ ಆನ್ ಅಕೌಂಟ್ ತೆಗೆದುಕೊಳ್ಳುವುದು ಇದೇ ಮನೆಯಲ್ಲಿ ೨ ಸಲ ಆಗಿದೆ, ಮತ್ತು ಬೇರೆ ರಾಜ್ಯಗಳಲ್ಲಿ ಕೂಡ ಆಗಿದೆ. ಈ ಮನೆಯಲ್ಲಿ ಆದ ವಿಚಾರವನ್ನು ಹೇಳಿದ್ದೇನೆ. ಸಾಮಾನ್ಯವಾಗಿ ೬ ತಿಂಗಳ ಕಾಲವನ್ನು ತೆಗೆದುಕೊಳ್ಳತಕ್ಕದ್ದು, ಏಕೆಂದರೆ, ಸದನದಲ್ಲಿ ಡಿಮ್ಯಾಂಡ್‌ಗಳ ಮೇಲೆ ಚರ್ಚೆಯಾಗುತ್ತದೆ. ಮಾನ್ಯ ಅಧ್ಯಕ್ಷರು, ಅದಕ್ಕೆ ಹೆಚ್ಚು ಸಮಯವನ್ನು ಕೊಡಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಈ ಸಲ ಹೆಚ್ಚು ಚರ್ಚೆಯಾಗಬೇಕು, ಮಾನ್ಯ ಸದಸ್ಯರಿಗೆ ಹೆಚ್ಚು ಸಮಯ ಕೊಡಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು ೬ ತಿಂಗಳಿಗೆ ನಾವು ಓಟ್ ಆನ್ ಅಕೌಂಟ್ ಕೇಳಿದ್ದೇವೆ. ಇದರಲ್ಲಿ ಅಂತಹ ಕಾನೂನಿನ ವಿಚಾರವಾಗಲಿಅಥವಾ ನಿಯಮದ ಉಲ್ಲಂಘನೆಯ ವಿಚಾರವಾಗಲಿ ಇಲ್ಲ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ಅನೇಕ ಮಾನ್ಯ ಸದಸ್ಯರು ಕೆಲವು ವಿಚಾರಗಳಲ್ಲಿ ತಮ್ಮ ಅಭಿಪ್ರಾಯವನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ ಸಲಹೆಗಳನ್ನು ಕೊಟ್ಟಿದ್ದಾರೆ ಮತ್ತು ಸೂಚನೆಗಳನ್ನು ಕೊಟ್ಟಿದ್ದಾರೆ. ಆದರೆ ನನಗೆ ಮಾತ್ರ ಒಂದು ರೀತಿಯ ನಿರಾಸೆಯಾಗಿದೆ. ಆ ನಿರಾಸೆಗೆ ಕಾರಣವೇನೆಂದರೆ, ವಿರೋಧಪಕ್ಷಗಳಿಂದ ನಾನು ನಿರೀಕ್ಷೆ ಮಾಡಿದ್ದೆ. ಅವರು ಸರ್ಕಾರದ ಲೋಪದೋಶಗಳನ್ನು ನಿರ್ದಿಷ್ಟವಾಗಿ ಬೆರಳು ಮಾಡಿ ತೋರಿಸಿ ಟೀಕೆ ಮಾಡಿದರೆ, ಆ ತಪ್ಪುಗಳನ್ನು ಸರ್ಕಾರ ತಿದ್ದಿಕೊಳ್ಳತಕ್ಕ ಒಂದು ಕಾರ್ಯವನ್ನು ಮಾಡಬೇಕಾಗುತ್ತದೆ ಎಂದು ನಾನು ನಿರೀಕ್ಷೆ ಮಾಡಿದ್ದೆ. ಸರ್ವೆಸಾಮಾನ್ಯವಾಗಿ ರಾಜಕೀಯವಾಗಿ ಮಾತನಾಡತಕ್ಕದ್ದು ಏನಿದೆ ಅದು ಬೇರೆ. ಆದರೆ ನಿರ್ದಿಷ್ಟವಾಗಿ ವಿಚಾರಗಳನ್ನು ಹೇಳಿ, ಸರ್ಕಾರದ ಲೋಪದೋಷಗಳನ್ನು ಎತ್ತಿತೋರಿಸುವುದರಲ್ಲಿ ಅವರು ಸಫಲರಾಗಿಲ್ಲ. ನಾವು ಎಲ್ಲಿ ಎಡವಿದ್ದೇವೆ ಎನ್ನುವುದು ನಮಗೆ ಗೊತ್ತಿದೆ. ಆದರೆ ಮಾನ್ಯ ವಿರೋಧಪಕ್ಷದ ಶಾಸಕರು ಅಥವಾ ಆಳುವ ಪಕ್ಷದ ಶಾಸಕರು ಕೆಲವು ವಿಚಾರಗಳನ್ನು ಹೇಳಿದ್ದಾರೆ, ನಾನು ಇಲ್ಲ ಎಂದು ಹೇಳುವುದಿಲ್ಲ. ಈ ವಿಷಯದಲ್ಲಿ ನಾನು ನಿರೀಕ್ಷಿಸಿದ ಮಟ್ಟಕ್ಕೆ ಅದು ಬರಲಿಲ್ಲ ಎಂದು ನಾನು ಹೇಳಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೆ, ಇದು ಏಳನೆಯ ಪಂಚವಾರ್ಷಿಕ ಯೋಜನೆಯ ಕೊನೆಯ ವರ್ಷ. ಈ ಅಧಿವೇಶನ ಮತ್ತು ನಾವು ಮುಂದೆ ಕೂರತಕ್ಕ ಅಧಿವೇಶನದ ಅವಧಿಯಲ್ಲಿ ಸಕಾರದ ಸಾಧನೆ ಏನು, ಯೋಜನೆಯ ಗುರಿ ಎಷ್ಟಿತ್ತು ಆ ಗುರಿಯನ್ನು ಮುಟ್ಟಿದ್ದೇವೆಯೋ, ಇಲ್ಲವೋ ಎನ್ನುವುದನ್ನು ನಾವು ಅತ್ಯಂತ ಆಳವಾಗಿ ಒಳಹೊಕ್ಕು ನೋಡಿ ಅಭಿಪ್ರಾಯವನ್ನು ಹೇಳಬೇಕಾಗುತ್ತದೆ. ಇದು ಕೊನೆಯ ವರ್ಷ. ಈ ಮಾತನ್ನು ನಾನು ಹೇಳುವಾಗ, ಕಳೆದ ನಾಲ್ಕೈದು ವರ್ಷಗಳ ಕಾಲದಲ್ಲಿ ಮಳೆಯ ಅಭಾವ, ಬರಗಾಲ ಮುಂತಾದ ನೈಸರ್ಗಿಕ ಅಘಾತಕ್ಕೆ ರಾಜ್ಯ ತುತ್ತಾಗಿದ್ದನ್ನು ಗಮನದಲ್ಲಿಟ್ಟುಕೊಂಡು, ಅದರಿಂದ ಸರ್ಕಾರದ ಬೊಕ್ಕಸಕ್ಕೆ ಬರಬೇಕಾದ ಆದಾಯ ಎಷ್ಟು ಕಡಿಮೆಯಾಗಿದೆ ಎನ್ನುವುದನ್ನು ಗಮನಿಸಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಹೆಚ್ಚಿಗೆ ಹೈಡ್ರೋಪವರ್ ಬಗ್ಗೆ ಅವಲಂಬನೆ ಇದೆ. ಮಳೆಯ ಅಭಾವದಿಂದ ವಿದ್ಯುಚ್ಛಕ್ತಿ ಕೊರತೆಯಾಗಿದೆ. ಈ ಕೊರತೆಯ ಅಂದಾಜನ್ನು ನಾವು ಈಗಾಗಲೇ ಈ ಮನೆಗೆಹೇಳಿದ್ದೇನೆ ನಮಗೆ ಬರತಕ್ಕಂಥ ಆದಾಯದಲ್ಲಿ ಸುಮಾರು ೪೪೮ ಕೋಟಿ ರೂಪಾಯಿಗಳಷ್ಟು ಆದಾಯ ರಾಜ್ಯದ ಬೊಕ್ಕಸಕ್ಕೆ ಕಡಿಮೆಯಾಗಿದೆ. ನಮ್ಮ ಕೃಷಿಯಲ್ಲಿ ಸಾಕಷ್ಟು ನಷ್ಟವಾಗಿದೆ. ಅದೇ ರೀತಿ ವಿದ್ಯುಚ್ಛಕ್ತಿಯ ಅಭಾವದಿಂದಾಗಿ ನಮ್ಮ ಉತ್ಪಾದನೆಯಲ್ಲಿ ಸುಮಾರು ಎರಡು ಕೋಟಿ ರೂಪಾಯಿಯಷ್ಟು ಆದಾಯ ಕಡಿಮೆಯಾಗಿದೆ. ಕೈಗಾರಿಕೆಗಳಲ್ಲಿ ಉತ್ಪಾದನೆ ಕಡಿಮೆ ಆದಾಗ ಸರ್ಕಾರಕ್ಕೆ ಬರತಕ್ಕ ಆದಾಯ ಕೂಡ ಕಡಿಮೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ನಾವು ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಮಾಡಿದ ಸಾಧನೆಯನ್ನು ತೂಗಿ ನೋಡಬೇಕೆಂದು ಅತ್ಯಂತ ವಿನಯದಿಂದ ಹೇಳುತ್ತಿದ್ದೇನೆ. ಇಷ್ಟೊಂದು ಆರ್ಥಿಕ ಬಿಕ್ಕಟ್ಟನ್ನು, ಮುಗ್ಗಟ್ಟನ್ನು ಎದುರಿಸಿ ನಾವು ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ಗುರಿಯನ್ನು ಸಾಧಿಸಿದ್ದೇವೆ, ಸಾಧಿಸುತ್ತೇವೆ ಎನ್ನು ಮಾತನ್ನು ನಾನು ನಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದೇನೆ. ನಿಗದಿತ ಮೊಬಲಿಗಿಂತಲೂ ಕಡಿಮೆಯಾಗಿದೆ ಎನ್ನುವ ಮಾತನ್ನು ಮಾನ್ಯ ವೀರಪ್ಪ ಮೊಯಿಲಿಯವರು ಹೇಳಿದ್ದಾರೆ. The average rate of inflation is 7% ಲೆಕ್ಕಕ್ಕೆ ತೆಗೆದುಕೊಂಡು ೭೦೦ ಕೋಟಿ ರೂಪಾಯಿ ನಮ್ಮ ಗುರಿಯಲ್ಲಿ ಕೊರತೆ ಬೀಳುತ್ತದೆ. ಎನ್ನುವ ಮಾತನ್ನು ಹೇಳಿದ್ದಾರೆ. ಅಧ್ಯಕ್ಷರೆ. ೫ನೇ ಪಂಚವಾರ್ಷಿಕ ಯೋಜನೆಯಲ್ಲಿ the approved outlay is Rs. 997.67 crores, expenditure at current prices is Rs. 1023.21 crores, expenditure at constant prices is Rs. 781.19

crores. shortfall at constant prices minus Rs. 21.7 crores. This is with regard to 5th Five Year Plan. Now, I come to 6th Five Year Plan. The approved outlay is Rs. 2,265 crores, expenditure at current prices is Rs. 2,720.49 crores, and the shortfall in expenditure is Rs. 14.7 crores.

೪–೦೦ ಪಿ.ಎಂ.

In the 7th Five year Plan, the approved outlay was ; Rs. 3575 Crores

Expenditure at current prices :	Rs. 4100 Crores
Expenditure at constant prices :	Rs 3412.15 Crores
Shortfall in expenditure ;	Rs, 4.5 Crores

ಕಳೆದ ೪ ವರ್ಷಗಳ ಅವಧಿಯಲ್ಲಿ ನಮ್ಮ ರಾಜ್ಯದಲ್ಲಿ ಆರ್ಥಿಕ ಬಿಕ್ಕಟ್ಟು ಎಷ್ಟಿತ್ತು ಎಂಬುದನ್ನು ನಾನು ಈಗಾಗಲೇ ಹೇಳಿದ್ದೇನೆ. ಈ ಸಂದರ್ಭದಲ್ಲಿ ನಾವು ಮಾಡಿರತಕ್ಕ ಸಾಧನೆ ಏನು ಇದೆ ಅದು ಒಂದು ರೀತಿಯ ಹೆಮ್ಮೆ ಪಡತಕ್ಕದಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ನನಗೆ ಇನ್ನೊಂದು ಆಸೆ ಏನೆಂದರೆ ಮುಂದಿನ ವರ್ಷ ಮುಗಿಯುವುದರೊಳಗೆ ಈಗ Shortfall in Expenditure 4.5 ಏನಿದೆ ಅದನ್ನು ಅಳಿಸಿ ಹಾಕುವುದಕ್ಕೆ ಸಾಧ್ಯವಿದೆ ನೂರಕ್ಕೆ ನೂರರಷ್ಟು ಗುರಿಯನ್ನು ನಾವು ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಸಾಧನೆ ಮಾಡಿಯೇ ಮಾಡುತ್ತೇವೆಂದು ನಾನು ಹೇಳಬಯಸುತ್ತೇನೆ. ನಾವು ಈಗ ಸಾಧಿಸಿರುವ ಸಾಧನೆ ಚಿಕ್ಕದೇನೂ ಅಲ್ಲ. ಟೋಟಲ್ ಎಕ್ಸ್‌ಪೆಂಡಿಚರ್ ಎಷ್ಟು ಎಂಬುದನ್ನು ಈಗಾಗಲೇ ಹೇಳಿದ್ದೇನೆ, ಮತ್ತು ಕಾನ್‌ಸ್ಟೆಂಟ್ ಪ್ರೈಸಸ್‌ನ್ನು ಹೇಳಿದ್ದೇನೆ. We are achieving the full outlay for the 7th Five Year Plan inspite of number of difficulties that we have to face. I can say that it is an achievement one can reckon with.

ಮಾನ್ಯ ಅಧ್ಯಕ್ಷರೆ, ಕೆಲವು ವಿಚಾರಗಳನ್ನು ಸರ್ವೇಸಾಮಾನ್ಯವಾಗಿ ನಮ್ಮ ಮಾನ್ಯ ಸದಸ್ಯರು ಹೇಳಿದ್ದಾರೆ. ಕೊನೆಯ ಭಾಷಣಕಾರರಾದ ಶ್ರೀ ತುಂಗಳ್‌ರವರೂ ಹೇಳಿದ್ದಾರೆ. ನೀರಾವರಿ ವಿಚಾರದಲ್ಲಿ ಅವರು ಬಹಳ ಚೆನ್ನಾಗಿ ಹೇಳಿದ್ದಾರೆ. ನೀರಾವರಿಗಾಗಿ ಹೆಚ್ಚು ಹಣವನ್ನು ಖರ್ಚುಮಾಡತಕ್ಕದ್ದರ ಬಗ್ಗೆ, ಅದರಲ್ಲೂ ಕೃಷ್ಣಾ ನದಿಯ ನೀರನ್ನು ೨೦೦೦ ಇಸವಿಯೊಳಗಾಗಿ ಉಪಯೋಗ ಮಾಡಿಕೊಳ್ಳತಕ್ಕದ್ದರ ಬಗ್ಗೆ ಮತ್ತು ಕಾವೇರಿ ವಲಯದಲ್ಲಿ ಕೂಡ ನಮ್ಮ ಹಕ್ಕಿನ ನೀರನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಳ್ಳತಕ್ಕದ್ದರ ಬಗ್ಗೆ ಸರ್ಕಾರ ಬಹಳ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ ಎಂದು ಹೇಳಿದ್ದಾರೆ, ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ತುಂಗಳ್‌ರವರನ್ನು ನಾನು ಅಭಿನಂದಿಸಬೇಕಾಗುತ್ತದೆ, ರೈತರ ಸಂಘಟನೆಯಿಂದ ಅವರ ಕ್ಷೇತ್ರದಲ್ಲಿ ಒಂದು ಬ್ಯಾರೇಜ್‌ನ್ನು ಮಾಡಿದ್ದಾರೆ. ಎಲ್ಲರಿಗೂ ಆದರ್ಶವಾದ ರೀತಿಯಲ್ಲಿ ಅವರು ಅದನ್ನು ಮಾಡಲಿಕ್ಕೆ ಮುಂದೆ ಬಂದಿದ್ದಾರೆ. ಅವರ ಕಷ್ಟ ಏನು ಎಂಬುದು ನನಗೆ ಗೊತ್ತಿದೆ. ಆದ್ದರಿಂದ ಸರ್ಕಾರದ ವತಿಯಿಂದ ಅವರಿಗೆ ಏನು ಸಹಾಯವನ್ನು ಮಾಡಬೇಕೋ ಅದನ್ನು ಮಾಡೋಣ. ಈಗ ನಾನು ಇಲ್ಲಿ ಕೆಲವು ಅಂಕಿ ಅಂಶಗಳನ್ನು ಕೊಡಬಯಸುತ್ತೇನೆ. ೧೯೭೮ ರಿಂದ ೧೯೮೩ರವರೆಗೆ ಈ ೫ ವರ್ಷಗಳ ಅವಧಿಯಲ್ಲಿ ನೀರಾವರಿಯ ವಿಚಾರದಲ್ಲಿ ಬಜೆಟ್‌ನಲ್ಲಿ ಒದಗಿಸಿರತಕ್ಕ ಹಣ ೫೯೪.೭೪ ಕೋಟಿ ರೂಪಾಯಿಗಳು ಖರ್ಚು ಮಾಡಿರತಕ್ಕ ಹಣ ೫೮೭.೫೫ ಕೋಟಿ ರೂಪಾಯಿಗಳು ನೀರಾವರಿಯನ್ನು ಒದಗಿಸಿರತಕ್ಕ ಕ್ಷೇತ್ರ ೨,೪೮.೭೭೪ ಹೆಕ್ಟೇರ್‌ಗಳು. ಇದೇರೀತಿ ೧೯೮೩ ರಿಂದ ೮೮ರವರೆಗೆ ಈ ೫ ವರ್ಷಗಳ ಅವಧಿಯಲ್ಲಿ ಬಜೆಟ್‌ನಲ್ಲಿ ಒದಗಿಸಿರತಕ್ಕ ಹಣ ೧೦೫೭.೭೪ ಕೋಟಿ ರೂಪಾಯಿಗಳು ಖರ್ಚುಮಾಡಿರತಕ್ಕ ಹಣ ೮೭೧.೭೬ ಕೋಟಿ ರೂಪಾಯಿಗಳು, ನೀರಾವರಿಯನ್ನು ಒದಗಿಸಿರತಕ್ಕ ಕ್ಷೇತ್ರ ೨,೬೨,೩೦೩ ಹೆಕ್ಟೇರ್‌ಗಳು. ೧೯೮೯–೯೦ರಲ್ಲಿ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪ್ರೈಸಸ್ ಲೆಕ್ಕ ಹಾಕಿದರೆ ನಿಮ್ಮದು ದೊಡ್ಡ ಅಚೀವ್‌ಮೆಂಟ್ ಏನೂ ಆಗಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ಈ ಅವಧಿಯಲ್ಲಿ ೧೦೦ ಕೋಟಿ ರೂಪಾಯಿಗಳನ್ನು ನಾವು ಡ್ಯಾಮ್ ಕಟ್ಟಲಿಕ್ಕೆ ಉಪಯೋಗ ಮಾಡಿದ್ದೇವೆ. ಹೇಮಾವತಿಯಲ್ಲಿ ಹಾಗೂ ಇತರ ಕಡೆಗಳಲ್ಲಿ ಡ್ಯಾಮ್ ಕಟ್ಟಲು ಹಣ ಖರ್ಚು ಮಾಡಿದಾಗ ನೀರಾವರಿ ಒದಗಿಸಿದಂತಹ ಕ್ಷೇತ್ರ ಕಮ್ಮಿಯಾಗುತ್ತದೆ.

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಎಸ್.ಆರ್. ಬೊಮ್ಮಾಯಿ.—ಎಲ್ಲೆಲ್ಲಿ ಅವಶ್ಯಕತೆ ಇದೆ ಅಂತಹ ಕ್ಷೇತ್ರಗಳಲ್ಲಿ ಡ್ಯಾಮ್‌ಗಳನ್ನು ಕಟ್ಟದೇ ನೀರು ಕೊಡುವುದು ಹೇಗೆ ? ಎಕ್ಸ್‌ಪೆಂಡಿಚರ್ ಯಾವುದರಲ್ಲಿ ಮಾಡಿದ್ದೇವೆ ಎಂಬ ಬಗ್ಗೆ ತಮಗೆ ವಿವರಣೆಯನ್ನು ಕೊಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇರಿಗೇಷನ್ ಬಗ್ಗೆ ಒಂದು ವೈಟ್ ಪೇಪರನ್ನು ಪಬ್ಲಿಷ್ ಮಾಡಿ ನೋಡೋಣ.

ಶ್ರೀ ಎಸ್. ಆರ್. ಬೊಮ್ಮಾಯಿ,—ಕೊಡೋಣ, ಕಾವೇರಿ ವಲಯದಲ್ಲಿ ೧೯೮೩ರವರೆಗೆ ಸುಮಾರು ೨೦ ವರ್ಷಗಳ ಕಾಲ ಖರ್ಚು ಮಾಡಿದಂತಹ ಹಣ ೧೫೦ ಕೋಟಿ ರೂಪಾಯಿಗಳು. ಎಕ್ಸ್‌ಪೆಂಡಿಚರ್ ೧೫೭.೭೩ ಕೋಟಿ ಪೊಟೇನ್‌ಷಿಯಲ್ ಕ್ರಿಯೇಟೆಡ್ ೫೬ ಸಾವಿರದ ೮೦೪ ಹೆಕ್ಟೇರುಗಳು. ೧೯೮೩ ರಿಂದ ೮೮ರವರೆಗೆ ೫ ವರ್ಷಗಳಲ್ಲಿ ಕಾವೇರಿ ವಲಯದಲ್ಲಿ ಖರ್ಚು ಮಾಡಿದಂತಹ ಹಣ ಅಂದರೆ ಗ್ರ್ಯಾಂಟ್ ಕೊಟ್ಟಿದ್ದು ೩೭೫ ಕೋಟಿ ೭೪ ಲಕ್ಷ, ಖರ್ಚು ಮಾಡಿದಂಥದ್ದು ೩೦೨ ಕೋಟಿ ೯೧ ಲಕ್ಷ ರೂಪಾಯಿಗಳು ನೀರು ಕೊಟ್ಟಂತಹ ಕ್ಷೇತ್ರ ೧,೦೬.೮೭೩ ಹೇಕ್ಟೇರುಗಳು ನಾವು ೫ ವರ್ಷಗಳಲ್ಲಿ ೩೦೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅದಕ್ಕೆ ಮೊದಲು ೨೦ ವರ್ಷಗಳಲ್ಲಿ ೧೫೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾವ ರೀತಿ ನಾನ್ ಪ್ಲಾನ್‌ನಲ್ಲಿ ಮಾಡಿದ್ದೀರೆಂಬುದನ್ನು ಹೇಳಿ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಪ್ಲಾನ್ ಆರ್ ನಾನ್‌ಪ್ಲಾನ್ ನೀರಾವರಿಗೆ ಖರ್ಚು ಮಾಡಿದಂತಹ ಹಣ ಇಲ್ಲಿ ಮುಖ್ಯ. ಇಲ್ಲಿ ಒಂದು ವಿಚಾರವನ್ನು ನಾನು ಪ್ರಸ್ತಾಪ ಮಾಡಲೇಬೇಕು. ಮೊದಲನೆಯ ಪಂಚವಾರ್ಷಿಕ ಯೋಜನೆಯಿಂದ ಇಲ್ಲಿಯವರೆಗೆ ಸುಮಾರು ೨೦೦೦ ಕೋಟಿ ರೂಪಾಯಿಗಳ ಹಣವನ್ನು ನಾವು ನೀರಾವರಿಯಲ್ಲಿ ತೊಡಗಿಸಿದ್ದೇವೆ. ಇಷ್ಟು ಹಣ ತೊಡಗಿಸಿ ನಮಗೆ ಬರತಕ್ಕ ಆದಾಯವೇನು ? ನಮ್ಮ ಒಟ್ಟು ಆದಾಯ ೫೦–೭೦ ಕೋಟಿ ರೂಪಾಯಿಗಳು ಏನಿದೆ ಅದು ಹೆಚ್ಚು ಕಡಿಮೆ ಯಾಗುತ್ತದೆ. ಅದು ವಸೂಲಿಯಾಗುತ್ತಿಲ್ಲ. ಈ ಹಣವನ್ನು ವಸೂಲು ಮಾಡತಕ್ಕ ಪ್ರಯತ್ನ ಸಾಕಷ್ಟು ಆಗಲಿಲ್ಲ. ಈ ನೀರಾವರಿಗಳ ಕಾಲುವೆಗಳ ಮೆಂಟೆನೆನ್ಸ್ ಎಕ್ಸ್‌ಪೆಂಡಿಚರ್ ಪ್ರತಿವರ್ಷ ೪–೫ ಕೋಟಿ ರೂಪಾಯಿಗಳು ಆಗುತ್ತಿದೆ, ಅದಕ್ಕಾಗಿ ಹೋದ ತಿಂಗಳು ನಾವು ನೀರಾವರಿ ದರವನ್ನು ಹೆಚ್ಚು ಮಾಡಲು ಒಂದು ಆಜ್ಞೆಯನ್ನು ಹೊರಡಿಸಿದ್ದೇವೆ. ಮಾನ್ಯ ಶ್ರೀ ಯಡಿಯೂರಪ್ಪನವರು ಪದೇ ಪದೇ ಈ ಮಾತನ್ನು ಎತ್ತುತ್ತಿದ್ದಾರೆ, ಪಕ್ಕದ ರಾಜ್ಯಗಳಿಗಿಂತ ಇಲ್ಲಿ ಬಹಳ ಕಡಿಮೆ ಇದೆ. ಜೊತೆಗೆ ಕಳೆದ ೨೦ ವರ್ಷಗಳಲ್ಲಿ ನಾವು ನೀರಾವರಿ ದರವನ್ನು ಕಲೆಕ್ಟ್ ಮಾಡತಕ್ಕ ಪ್ರಯತ್ನ ಮಾಡಿಲ್ಲ. ಜೊತೆಗೆ ಅದನ್ನು ವಸೂಲು ಮಾಡಲು ಸರಿಯಾದ ಕ್ರಮವನ್ನು ಕೈಗೊಂಡಿಲ್ಲ. ನಾವು ಈ ವಿಚಾರವನ್ನು ಬಹಳ ಗಂಭೀರವಾಗಿ ಪ್ರಸ್ತಾಪ ಮಾಡುತ್ತಿದ್ದೇವೆ. ನಾವು ಹೆಚ್ಚಿನ ನೀರಾವರಿಯನ್ನು ಮಾಡಬೇಕಾದರೆ, ಹಣ ತೊಡಗಿಸಬೇಕಾದರೆ ಎಲ್ಲಿ ರೈತರು ನೀರಾವರಿಯಿಂದ ಲಾಭವನ್ನು ಪಡೆಯುತ್ತಾರೋ ಅವರಿಂದ ಹೆಚ್ಚಿನ ತೆರಿಗೆಯನ್ನು ವಸೂಲು ಮಾಡುವುದು ಬಹಳ ಅವಶ್ಯಕತೆ ಇದೆ. ಅವರಿಂದ ಹೆಚ್ಚು ಹಣವನ್ನು ವಸೂಲು ಮಾಡದಿದ್ದರೆ ನಾವು ಹೆಚ್ಚು ಹಣವನ್ನು ನಮ್ಮ ನೀರಾವರಿ ಯೋಜನೆಗಳಿಗೆ ತೊಡಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇನ್ನೊಂದು ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ಈ ನೀರಾವರಿ ಯೋಜನೆಗಳಲ್ಲಿ ತೊಡಗಿಸುವ ಹಣ ಇಡೀ ರಾಜ್ಯದ ನಾಗರಿಕರಿಂದ ವಸೂಲು ಮಾಡತಕ್ಕಂಥ ಹಣ. ಅದು ಒಣ ಬೇಸಾಯ ಕೊಡತಕ್ಕವರಿಂದ ವಸೂಲು ಮಾಡಿರುವುದು ಇರಬಹುದು, ಅಥವಾ ಬೇಸಾಯ ಮಾಡದೆ ಇರುವ ಭೂಮಿಯ ಒಡೆಯರಾಗಿರತಕ್ಕಂಥ ನಾಗರೀಕರಿಂದ ವಸೂಲು ಕೊಂಡಿರುವುದು ಇರಬಹುದು, ಲ್ಯಾಂಡ್ ಲೆಸ್ ಲೇಬರ್ ಇರಬಹುದು. ಲೇಬರ್ ಇರಬಹುದು, ನಾವು ಅವರಿಂದ ಹಣವನ್ನು ವಸೂಲಿ ಮಾಡಿ ಖರ್ಚುಮಾಡತಕ್ಕಂಥ ಆ ನೀರಾವರಿಯಿಂದ ಲಾಭ ಪಡೆದಂಥ ರೈತರಿಂದ ನಮ್ಮ ನೀರಾವರಿ ಯೋಜನೆಗಳಿಗೆ ಮೇಂಟೆನೆನ್ಸ್ ಮಾಡತಕ್ಕ ಹಣವನ್ನು ವಸೂಲು ಮಾಡದೆ ಅಲ್ಲಿ ವಿಫಲರಾಗಿದ್ದೇವೆ. ಎರಡು ವಿಚಾರಗಳಲ್ಲಿ ನಾವು ವಿಫಲರಾಗಿದ್ದೇವೆ.

ಒಂದು ಸರಿಯಾದ ನೀರಾವರಿ ತೆರಿಗೆಯನ್ನು ವಸೂಲು ಮಾಡುವುದರಲ್ಲಿ ಯಾವುದೇ ನೀರನ್ನು ಶಾಸ್ತ್ರೋಕ್ತವಾಗಿ ಪ್ರಯೋಜನ ಪಡೆಯತಕ್ಕಂಥ, ವಾಟರ್ ಮ್ಯಾನೇಜ್‌ಮೆಂಟ್ ಇವತ್ತು ಏನು ಇದೆ. ಆ ವಾಟರ್ ಮ್ಯಾನೇಜ್‌ಮೆಂಟ್‌ನಲ್ಲೂ ಕೂಡ ನಾವು ಹಿಂದೆ ಬಿದ್ದಿದ್ದೇವೆ ಒಂದೊಂದು ಅಚ್ಚುಕಟ್ಟಿನಲ್ಲಿ ಒಂದು ಲಕ್ಷ ಎರಡು ಲಕ್ಷ ಅನ್‌ಆಥರೈಸ್ಡ್ ಕಲ್ಟಿವೇಷನ್, ಪ್ರಾಫಿಟ್ ಪ್ಯಾಟರ್ನ್, ಎಲ್ಲಿ ಒಣ ಬೇಸಾಯ ಇದೆ, ನೀರಾವರಿ ಇದೆ ಭತ್ತ ಬೆಳೆಯುವಲ್ಲಿ ಭತ್ತ ಬೆಳೆಯದೆ ಕಬ್ಬು ಬೆಳೆಯುವುದು, ಕಬ್ಬು ಬೆಳೆಯುವಲ್ಲಿ ಭತ್ತ ಬೆಳೆಯುವುದು ಇದು ಕಳೆದ ೨೦-೩೦ ವರ್ಷಗಳಿಂದಲೂ ನಡೆದುಬಂದಿದೆ. ವಾಟರ್ ಮ್ಯಾನೇಜ್‌ಮೆಂಟ್, ವಾಟರ್ ಟ್ಯಾಕ್ಸೇಷನ್ ಏನಿದೆ ಇದರಲ್ಲಿ ನಾವು ತಪ್ಪಿದ್ದೇವೆ. ಈಗ ಇದನ್ನು ಸರಿಪಡಿಸಿ ಕೊಳಬೇಕಾಗಿದೆ. ಈ ವಿಚಾರದಲ್ಲಿ ನಾನು ಕಂದಾಯ ಮಂತ್ರಿಯಾಗಿದ್ದಾಗಿನಿಂದಲೂ ನೋಡಿದ್ದೇನೆ. ರೈತರನ್ನು ಕರೆದು ಚರ್ಚೆಮಾಡಿದ್ದೇವೆ. ಈಗ ಸ್ವಲ್ಪ ಹೆಚ್ಚಿಗೆ ಮಾಡತಕ್ಕಂಥದ್ದು. ೪ಕೋಟಿ ರೂಪಾಯಿ ಆದಾಯ ಹೆಚ್ಚಾಗಿ ಬರತಕ್ಕದ್ದನ್ನು ಸರ್ಕಾರ ನಿರ್ಣಯ ಮಾಡಿ, ಗೆಜೆಟ್‌ನಲ್ಲಿ ನೋಟಿಫಿಕೇಶನ್ ಮಾಡಿದೆ. ಸನ್ಮಾನ್ಯ ಯಡಿಯೂರಪ್ಪನವರು ಕೇಳಬೇಕು. ನೋಟೀಫಿಕೇಶನ್ ಆದಮೇಲೆ ಅಬ್‌ಜಕ್ಷನ್ ಕೇಳಿದ್ದೇವೆ. ಯಾರಾರರೂ ತಕರಾರು ಇದ್ದಲ್ಲಿ ಕೊಡಬಹುದೆಂದು ಕೇಳಿದ್ದೇವೆ. ಅದು ಇನ್ನೂ ಜಾರಿಗೆ ಬಂದಿಲ್ಲ. ನಾವು ಅದಕ್ಕೆ ನಿರ್ಣಯ ಮಾಡಿದಮೇಲೆ ಯಾವ ತಾರೀಖಿನಿಂದ ಜಾರಿಗೆ ಬರುತ್ತದೆ ಎನ್ನುವುದನ್ನು ಹೇಳುತ್ತೇವೆ. ತಾವು ಅಬ್ಜಕ್ಷನ್ ಕೊಡಲಿಕ್ಕೆ ಅವಧಿ ಏನು ಇದೆ ಅದರಲ್ಲಿ ಕೊಡಬೇಕಾಗುತ್ತದೆ. ಕೊಡತಕ್ಕಂಥ ಹಕ್ಕು ತಮಗೆ ಇದೆ. ನೀರಾವರಿ ವಿಚಾರದಲ್ಲಿ ಮತ್ತು ವಿದ್ಯುಚ್ಛಕ್ತಿಯ ವಿಚಾರದಲ್ಲಿ ನಾವು ಹೆಚ್ಚಿನ ಗಮನವನ್ನು ಕೊಟ್ಟಿದ್ದೇವೆ. ವಿದ್ಯುಚ್ಛಕ್ತಿಗೆ ನಾವು ಒದಗಿಸತಕ್ಕಂಥ ಹಣದಲ್ಲಿ ನೀರಾವರಿ ಮತ್ತು ವಿದ್ಯುಚ್ಛಕ್ತಿಗೆ ೧೦೦ರಲ್ಲಿ ೪೭ ಪರ್ಸೆಂಟ್ ಅಂದರೆ ೪೬.೫ ರಷ್ಟು ಹಣವನ್ನು ಕೊಟ್ಟಿದ್ದೇವೆ. ಸುಮಾರು ಅರ್ಧ ಭಾಗದಷ್ಟು ಹಣವನ್ನು ಈ ಎರಡು ಬಾಬುಗಳಿಗೆ ಖರ್ಚುಮಾಡುತ್ತಿದ್ದೇವೆ. ನಾವು ಇದರ ಜೊತೆಗೆ ಸಾಮಾಜಿಕ ನ್ಯಾಯ ಮಾಡತಕ್ಕಂಥದ್ದು, ಶಿಕ್ಷಣವನ್ನು ಕೊಡತಕ್ಕಂಥದ್ದು, ಆರೋಗ್ಯ ವಿಚಾರದಲ್ಲಿ ಮಾಡತಕ್ಕಂಥದ್ದರ ಜೊತೆಗೆ ನಮ್ಮ ಸರ್ಕಾರದ ಸಿಬ್ಬಂದಿಯವರ ಮೇಲೆ ೩೨ ಪರ್ಸೆಂಟ್ of one income is spent ಇದನ್ನು ಕೂಡ ಗಮನದಲ್ಲಿಡಬೇಕಾಗುತ್ತದೆ. ನೀರಾವರಿ ವಿದ್ಯುಚ್ಛಕ್ತಿಗೆ ಯಾವ ರೀತಿ ಆದ್ಯತೆಯನ್ನು ಈ ಸರ್ಕಾರ ಕೊಟ್ಟಿದೆ ಎನ್ನುವುದನ್ನು ಈ ಬಜೆಟ್‌ನಲ್ಲಿ ಸ್ಪಷ್ಟವಾಗಿ ಕಂಡುಕೊಳ್ಳಬಹುದು. ನೀರಾವರಿಗೆ ಆದ್ಯತೆ ನಿಡಿಲ್ಲ. ವಿದ್ಯುಚ್ಛಕ್ತಿಗೆ ಆದ್ಯತೆ ನೀಡಿಲ್ಲವೆಂದು ಟೀಕೆ ಮಾಡುವಾಗ ಎಂಟೈರ್ ಬಡ್ಜೆಟ್ಟನ್ನು ನೋಡಬೇಕಾಗುತ್ತದೆ. ಅದರಲ್ಲಿ ಸರ್ಕಾರ ಅವಶ್ಯವಾದ ಕರ್ತವ್ಯಗಳನ್ನು ಮಾಡಿ ಉಳಿದ ಎಲ್ಲಾ ಹಣವನ್ನು ನೀರಾವರಿ ಮತ್ತು ವಿದ್ಯುಚ್ಛಕ್ತಿಗೆ ಖರ್ಚು ಮಾಡುತ್ತಿದೆ. ಇದಕ್ಕೂ ಹೆಚ್ಚು ಮಾಡಬೇಕು, ಇಲ್ಲವೆಂದು ಹೇಳುವುದಿಲ್ಲ.

ಶ್ರೀ ಕೆ. ಬಿ. ಶಾಣಪ್ಪ.—ಹೈದರಾಬಾದ್ ಕರ್ನಾಟಕದಲ್ಲಿ ಇರಿಗೇಷನ್ ಇಲ್ಲ, ಕ್ರಾಪ್ಸ್ ಇಲ್ಲವೆಂದು ಜನರು ಊರು ಬಿಟ್ಟು ಹೋಗುವುದಕ್ಕೆ ಹತ್ತಿದ್ದಾರೆ.

ಉಪಾಧ್ಯಕ್ಷರು.—ಆಮೇಲೆ ಕೇಳುವಿರಂತೆ, ಈಗ ಕುಳಿತುಕೊಳ್ಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ವಿದ್ಯುಚ್ಛಕ್ತಿ ಬಗ್ಗೆ ಗೆಳೆಯರು ಗಮನ ಹರಿಸಬೇಕು. ಅವರು ಪ್ರಸ್ತಾಪ ಮಾಡುವಾಗ ಅರ್ಥ ಪೂರ್ಣವಾದ ರೀತಿಯಲ್ಲಿ ಹೇಳಲಿಲ್ಲ. ೧೯೫೬ಕ್ಕೆ ಮೊದಲು ವಿದ್ಯುಚ್ಛಕ್ತಿಗಾಗಿ ನಾವು ಹೆಚ್ಚು ಹಣವನ್ನು ಖರ್ಚು ಮಾಡಲಿಲ್ಲ. ಇದನ್ನು ನಾನು ಟೀಕೆ ಮಾಡುವ ದೃಷ್ಟಿಯಿಂದ ಹೇಳುತ್ತಿಲ್ಲ. ಇದಕ್ಕೆ ಕಾರಣವೇನೆಂದರೆ, ೧೯೬೦ರ ಬಡ್ಜೆಟ್ಟಿನಲ್ಲಿ ನೋಡಿದರೆ, ವಿದ್ಯುಚ್ಛಕ್ತಿ ಬಳಸುವ ಶಕ್ತಿ ನಮ್ಮಲ್ಲಿ ಇರಲಿಲ್ಲ. ಅಂದು ನಮ್ಮಲ್ಲಿ ಉತ್ಪಾದನೆಯಾದ ವಿದ್ಯುಚ್ಛಕ್ತಿಯನ್ನು ಬಳಸುವುದಕ್ಕೆ ಬೇರೆ ರಾಜ್ಯಗಳಿಂದ ಕೈಗಾರಿಕೆಗಳ ಒಡೆಯರನ್ನು ಕರೆಯತಕ್ಕ ಕೆಲಸವನ್ನು ಮಾಡಿದ್ದೇವೆ. ಅಲ್ಲಿ ನಾವು ಒಂದು ತಪ್ಪನ್ನು ಮಾಡಿದ್ದೇವೆ. ಬೇರೆ ರಾಜ್ಯಗಳಿಂದ ಇಂಡಸ್ಟ್ರಿಯಲಿಸ್ಟ್‌ಗಳನ್ನು ಇನ್‌ವೈಟ್ ಮಾಡುವಾಗ ಅವುಗಳಿಗೆ ಅಷ್ಟು ಗಮನ ಕೊಡಬಾರದಾಗಿತ್ತು. ಅಲ್ಯೂಮಿನಿಯಂ ಫ್ಯಾಕ್ಟರಿ ಬಂದಿದೆ, ಸ್ಟೀಲ್ ಇಂಡಸ್ಟ್ರಿಗಳು ಬಂದಿವೆ. ಹೀಗೆ ನಮ್ಮಲ್ಲಿರತಕ್ಕ ವಿದ್ಯುತ್ತನ್ನು ಬಳಸುವವರು ಇಲ್ಲವೆಂದು ಅವರನ್ನೆಲ್ಲ ನಾವು ಆಗ ಕರೆದಿದ್ದೇವೆ. ನಾವು ಅವರಿಗೆ ಆ ಮಂತ್ರಣ ಕೊಡುವಾಗ ನಮ್ಮ ರಾಜ್ಯದ ಹೆಚ್ಚು ಹೆಚ್ಚು ಜನತೆಗೆ ಉದ್ಯೋಗದ ಅವಕಾಶ ಆಗಿರಬೇಕು, ಆಗ ನಾವು ನಮ್ಮ ರಾಜ್ಯದಲ್ಲಿ ಉತ್ಪಾದನೆ ಮಾಡತಕ್ಕ ಕಚ್ಚಮಾಲು ಎಂದು ಏನು ಹೇಳುತ್ತೇವೆ. ಅದನ್ನು ಉಪಯೋಗಿಸತಕ್ಕ ನೀತಿಯನ್ನು ರೂಪಿಸಿಕೊಳ್ಳಬೇಕಾಗಿತ್ತು. ೧೯೭೪ಕ್ಕೆ ಮೊದಲು ಈ ರಾಜ್ಯದಲ್ಲಿ ಕೇಂದ್ರದ ಒಂದೂ ವಿದ್ಯುತ್ ಯೋಜನೆಗಳು ಬಂದಿಲ್ಲ, ಆಮೇಲೆ ಕೂಡ ಇಲ್ಲ. ಒಂದೇ ಒಂದು ಪವರ್ ಪ್ರಾಜೆಕ್ಟ್ ಕೂಡ ನಮ್ಮ ರಾಜ್ಯದಲ್ಲಿ ಇಲ್ಲ. ಕೇಂದ್ರ ಸರ್ಕಾರದ ಇನ್‌ವೆಸ್ಟ್‌ಮೆಂಟ್ ಏನೂ ಇಲ್ಲ.

ಮೊನ್ನೆ ಮೊನ್ನೆಯವರೆಗೆ ಕೊಡಲಿಲ್ಲ. ಅದು ಕೈಗಾ ಇರಬಹುದು, ಮಂಗಳೂರು ಮಲ್ಟಿ ಪರ್ಪಸ್ ಯೋಜನೆ ಇರಬಹುದು, ಪವರ್ ಪ್ರಾಜೆಕ್ಟ್ ಇರಬಹುದು. ಯಾವುದಕ್ಕೂ ಅಲ್ಲಿಯವರೆಗೆ ಅವಕಾಶ ಇರಲಿಲ್ಲ. ತಮಗೆ ಹೇಳಬೇಕಾದರೆ, ರಾಜ್ಯ ಸರ್ಕಾರ ತನ್ನ ಪ್ರಯತ್ನದಿಂದ ಒಟ್ಟು ೨೫೦ ಮೆಗಾವ್ಯಾಟ್ ವಿದ್ಯುತ್ತನ್ನು ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಉತ್ಪಾದನೆ ಮಾಡಬೇಕಾಗಿತ್ತು, ಆದರೆ ನಾವು ಮಾಡಿದ್ದು ೩೦೦ ಮೆಗಾವ್ಯಾಟ್ ಅಂದರೆ ಇನ್ನೂ ಹೆಚ್ಚು ಉತ್ಪಾದನೆ ಮಾಡಿದ್ದೇವೆ. ಇದು ಒಂದು ಸಾಧನೆ ವಿದ್ಯುಚ್ಛಕ್ತಿಯನ್ನು ಹೆಚ್ಚು ಉತ್ಪಾದನೆ ಮಾಡತಕ್ಕ ಪ್ರಯತ್ನವನ್ನು ನಮ್ಮ ಆರ್ಥಿಕ ತೊಂದರೆಯಲ್ಲಿ ಕೂಡ ಮಾಡಿದ್ದೇವೆ ಇತ್ತೀಚೆಗೆ ನಮ್ಮ ೪-೫ ಪ್ರಮುಖ ಯೋಜನೆಗಳಿಗೆ ವಿಶ್ವ ಬ್ಯಾಂಕಿನ ಒಪ್ಪಿಗೆ ಸಿಕ್ಕಿದೆ. ಮಂಗಳೂರು ಯೋಜನೆಗೆ ಕೂಡ ರಷ್ಯದಿಂದ ಬರತಕ್ಕದ್ದಕ್ಕೆ ಕೇಂದ್ರ ಸರ್ಕಾರದ ಸಹಾಯ ಮಾಡಿದೆ. ಆದಿನ ವಿದ್ಯುಚ್ಛಕ್ತಿ ಮಂತ್ರಿಗಳಾದ ಮಾನ್ಯ ಜೆ. ಹೆಚ್. ಪಟೇಲರು ಮತ್ತು ನಾನು ವೈಯಕ್ತಿಕವಾಗಿ ಪ್ರಧಾನಿಯವರಿಗೆ ಹೇಳಿದಾಗ ಅವರು ವಿಶೇಷ ಆಸ್ಥೆ ವಹಿಸಿ ಒಪ್ಪಿಗೆ ಕೊಡುವುದರಲ್ಲಿ ಸಹಾಯ ಮಾಡಿದ್ದಾರೆ. ಇವತ್ತಿನ ದಿವಸ ಸಾಠೆಯವರು ಕೂಡ ಸಹಾಯ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದ ಸಹಕಾರದಿಂದ ಹೆಚ್ಚು ವಿದ್ಯುಚ್ಛಕ್ತಿ ಉತ್ಪಾದನೆ ಮಾಡತಕ್ಕದ್ದರಲ್ಲಿ ನಾವು ಯಶಸ್ವಿಯಾಗಿದ್ದೇವೆ. ಇನ್ನು ೨-೩ ವರ್ಷಗಳಲ್ಲಿ ಹೆಚ್ಚು ವಿದ್ಯುಚ್ಛಕ್ತಿಯನ್ನು ನಮ್ಮ ರಾಜ್ಯ ಕೊಡುತ್ತದೆ. ಆದರೆ ನಮ್ಮ ಬೇಡಿಕೆ ಆದರಿಂದ ಪೂರೈಸುತ್ತದೆಂಬ ಮಾತನ್ನು ನಾನು ಒಪ್ಪುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮೊದಲನೇ ೧೨ ಪುಟಗಳಿವೆಯಲ್ಲ ಅವನ್ನು ಕಡಿಮೆ ಮಾಡಬಹುದಾಗಿತ್ತಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದರ ಬಗ್ಗೆ ನಾನು ಹೇಳಿದ್ದೇನೆ. ಇದು ಕರ್ನಾಟಕ ರಾಜ್ಯಕ್ಕೆ ಮಾತ್ರ ಸೀಮಿತವಾಗಿಲ್ಲ. ಇದು ಎಲ್ಲಾ ರಾಜ್ಯಗಳ ಸಮಸ್ಯೆ. ನಾನು ಬೇಕಾದರೆ ನಿಮಗೆ ಎಲ್ಲಾ ಮುಖ್ಯಮಂತ್ರಿಗಳ ಭಾಷಣದ ಪ್ರತಿಯನ್ನು ಕೊಡುತ್ತೇನೆ ಒಂದು ತಿಂಗಳ ಹಿಂದೆ ನಡೆದ ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿ ಎಲ್ಲ ಮುಖ್ಯಮಂತ್ರಿಗಳು ಮಾಡಿದ ಭಾಷಣದ ಪ್ರತಿಯನ್ನು ಕೊಡುತ್ತೇನೆ. All the Chief Ministers demands are identical. So far as the Centre-State relations are concerned, the demands of the State Governments are uniform Perhaps everybody speaks with one voice. ಈ ೧೨ ಪುಟಗಳಲ್ಲಿ ಆ ವಿಚಾರವನ್ನೇ ವ್ಯಕ್ತ ಮಾಡಿದ್ದೇನೆ. ಸರ್ಕಾರಿಯಾ ಕಮೀಷನ್ ವಿಚಾರ ಇರಲಿ, ಬೇರೆ ವಿಚಾರ ಇರಲಿ ಅದನ್ನು ನಾನು ಹೇಳಿದ್ದೇನೆ. ಇದರಲ್ಲಿ ರಾಜಕೀಯ ಇಲ್ಲ. ಇವತ್ತಲ್ಲ ನಾಳೆ ಈ ಸಮಸ್ಯೆಗಳು ಇತ್ಯರ್ಥ ಆಗಲೇಬೇಕು. ಇದರಲ್ಲಿ ಮುಚ್ಚಿಡತಕ್ಕ ಪ್ರಯತ್ನ ಮಾಡುವುದಿಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.—ತಾವು ಅದರಲ್ಲಿ ಪ್ರಸ್ತಾಪ ಮಾಡಿದ್ದರ ಮೆರಿಟ್ಸ್ ಬಗ್ಗೆ ನಾವು ವಾದ ವಿವಾದಕ್ಕೆ ಇಳಿದಿಲ್ಲ. ನೀವು ಹಿಂದೆ ಕೊಟ್ಟಿರುವ ಮೆಮೋರ್ಯಾಂಡಮ್‌ನಲ್ಲಿ ಮತ್ತು ಈಗ ಕೊಟ್ಟಿರುವುದರಲ್ಲಿ ಎಲ್ಲದರಲ್ಲೂ ಸೇಮ್ ಪಾಯಿಂಟ್ಸ್ ಇದೆ. ಆದರೆ ಅದನ್ನು ಬಜೆಟ್ ಭಾಷಣದಲ್ಲಿ ಏತಕ್ಕೆ ರಿಪೀಟ್ ಮಾಡುತ್ತೀರಿ ಎಂದು ನಾವು ಕೇಳುತ್ತಿದ್ದೇವೆಯೇ ಹೊರತು ಅದನ್ನು ಬೇರೆ ಫೋರಂನಲ್ಲಿ ಹೇಳಬಾರದು ಎಂದು ಹೇಳಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದನ್ನು ಹೇಳಬೇಕಾಗುತ್ತದೆ. ಕಳೆದ ೨೦ ವರ್ಷಗಳಿಂದ ರಾಜ್ಯ ಸರ್ಕಾರಗಳಿಗೆ ನ್ಯಾಯವಾಗಿ, ರಾಜ್ಯಾಂಗದತ್ತವಾಗಿ, ನಿಜವಾಗಿ ದೊರೆಯಬೇಕಾದುದು ದೊರೆಯದೆ ಕಡಿಮೆಯಾಗುತ್ತಿದೆ. ನನ್ನ ಭಾಷಣದಲ್ಲಿ ಅದಕ್ಕೆ ಉದಾಹರಣೆಯನ್ನು ಹೇಳಿದ್ದೇನೆ. ಇನ್‌ಕಮ್ ಟ್ಯಾಕ್ಸ್ ಹೆಚ್ಚು ಮಾಡಿದರೆ ಅದರಲ್ಲಿ ನಮ್ಮ ಪಾಲಿದೆ. ಎರಡು ವರ್ಷದ ಹಿಂದೆ ಡ್ರೌಟ್ ಸರ್‌ಚಾರ್ಜ್ ಬಂತು. ಸರ್‌ಚಾರ್ಜ್ ಆನ್ ಇನ್‌ಕಂ ಟ್ಯಾಕ್ಸ್ ಬಂತು. ಒಂದು ಸಾವಿರ ಕೋಟಿ ರೂಪಾಯಿ ಅದು ಬಂದಿದೆ. ಅದನ್ನು ಎಲ್ಲಾ ರಾಜ್ಯಗಳಿಗೂ ಸರಿಯಾಗಿ ಹಂಚಿಕೆ ಮಾಡಿಲ್ಲ. ಎಲ್ಲ ರಾಜ್ಯಗಳಿಗೂ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಸರಿಯಾಗಿ ಹಂಚಿದರೆ ಒಪ್ಪಿಕೊಳ್ಳುತ್ತೇನೆ. ನಮ್ಮ ರಾಜ್ಯಕ್ಕೆ ಎಷ್ಟು ಬರಬೇಕೋ ಅಷ್ಟು ಬರಲಿ. ಇವತ್ತು ಐದು ನೂರು ಕೋಟಿ ರೂಪಾಯಿಗಳನ್ನು ಉದ್ಯೋಗ ಯೋಜನೆಗೆ ಇಟ್ಟಿದ್ದಾರೆ. ಹಿಂದಿಯಲ್ಲಿ ಏನೋ ಹೇಳುತ್ತಾರೆ, ಅದು ನನಗೆ ಬರುವುದಿಲ್ಲ. ಜವಾಹರಲಾಲ್ ನೆಹರೂ ರೋಜ್‌ಗಾರ್ ಸ್ಕೀಂ...

ಶ್ರೀ ಕೆ. ಎಚ್. ಶ್ರೀನಿವಾಸ್.—ಅದು ಜವಾಹರ್ ರೋಜ್‌ಗಾರ್ ಸ್ಕೀಂ.

ಶ್ರೀ ಎಸ್. ಆರ್. ಬೊಮ್ಮಾಯಿ.—ನನಗೆ ಹಿಂದಿ ಸರಿಯಾಗಿ ಬರುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಹೆಗಡೆಯವರು ಮಾಡಿದ ಹಾಗೆ, ಹಿಂದಿ ಕಲಿಯುವುದಕ್ಕೆ ಹೋಗಿ ಆ ಕಡೆ ಹೋಗುವುದಕ್ಕೆ ಪ್ರಯತ್ನ ಮಾಡಬೇಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕೇಂದ್ರ ಸರ್ಕಾರದವರು ಐದುನೂರು ಕೋಟಿ ರೂಪಾಯಿ ಆದಾಯ ಬರುತ್ತದೆಂದು ಹೇಳಿದ್ದಾರೆ, ವಿಶೇಷವಾಗಿ ಅದನ್ನು ತೆಗೆದಿಡಲಿ. ಎಲ್ಲಾ ರಾಜ್ಯಗಳಿಗೂ ಅದನ್ನು ಹಂಚಲಿ. ಆಗ ಅದನ್ನು ನಾನು ಸ್ವಾಗತಿಸುತ್ತೇನೆ. ಆದರೆ ಆ ರೀತಿ ಅಲ್ಲಿ ಮಾಡುವುದಿಲ್ಲ. ಪುನಃ ಅದು ಕನ್‌ಸಾಲಿಡೇಟ್ ಫಂಡಿಗೆ ಹೋಗುತ್ತದೆ. ರಾಜ್ಯಗಳ ಪಾಲಿಗೆ ಬರುವುದಿಲ್ಲ. ಪರ್‌ಕ್ಯಾಪಿಟಾ ಪ್ಲಾನ್ ಎಕ್ಸ್‌ಪೆಂಡಿಚರ್ ಕಡಿಮೆಯಾಗುತ್ತದೆ, ರಾಜ್ಯದ ಪಾಲು ಕಡಿಮೆ ಆಗುತ್ತಿದೆ. ಹಣಕಾಸಿನ ವಿಚಾರದಲ್ಲಿ ಕೇಂದ್ರದಲ್ಲಿ ಕೇಂದ್ರೀಕೃತವಾಗುತ್ತಿದೆ ಎಂಬ ಮಾತನ್ನು ಹೇಳಿದ್ದೇನೆ. ನಾನು ಅಂಕಿಅಂಶಗಳನ್ನು ಕೊಟ್ಟಿದ್ದೇನೆ. ರಾಜ್ಯ ಮತ್ತು ಕೇಂದ್ರದ ಅನುಕೂಲತೆ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ನಮಗೆ ಪ್ಲಾನ್ ಅಸಿಸ್ಟೆನ್ಸ್ ಏನು ಬರುತ್ತದೆ ಅದಕ್ಕಿಂತ ಹೆಚ್ಚು ನಾವು ಮರುಪಾವತಿ ಮಾಡಬೇಕಾಗಿದೆ. ಕಳೆದ ಮೂರು-ನಾಲ್ಕು ವರ್ಷಗಳಿಂದ ಪ್ಲಾನ್ ಅಸಿಸ್ಟೆನ್ಸ್ ಏನು ಬರುತ್ತದೆ ಅದಕ್ಕಿಂತ ಹೆಚ್ಚು ಮರುಪಾವತಿ ಮಾಡುವಂಥ ಪರಿಸ್ಥಿತಿ ಬಂದಿದೆ. ಆ ರೀತಿ ಮಾಡುವುದಾದರೆ, the entire plan of the State will be funded by the State resources. ಹಾಗಾದರೆ ಕೇಂದ್ರ ಸರ್ಕಾರದ ಸಹಾಯ ಅಂದರೆ ಅರ್ಥ ಏನು ? ಕೇಂದ್ರಕ್ಕೆ ಎಲ್ಲಾ ಅಧಿಕಾರವನ್ನು ಕೊಡತಕ್ಕ ಅರ್ಥ ಏನು ? ನಾನು ಇವತ್ತು ಕೇಳುತ್ತಿದ್ದೇನೆ, ಎಲ್ಲಿಯವರೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಹಣಕಾಸಿನ ವಿಚಾರದಲ್ಲಿ ರಾಜ್ಯಾಂಗದಲ್ಲಿ ಸ್ಪಷ್ಟವಾಗಿ ನಿರೂಪಣೆಯಾಗಿರುವ ತತ್ವಗಳನ್ನು ಒಪ್ಪಿಕೊಂಡು, ಅವುಗಳನ್ನು ಜಾರಿಗೆ ಕೊಡುವುದಿಲ್ಲವೋ ಅಲ್ಲಿಯವರೆಗೆ ಈ ರೀತಿಯ ಘರ್ಷಣೆಗಳು ಸಹಜವಾಗಿ ಆಗುತ್ತಿರುತ್ತವೆ. Tension will be built up. ಕಾರಣವೇನೆಂದರೆ, ರಾಜ್ಯ ಸರ್ಕಾರಗಳು ಜನತೆಯ ಹತ್ತಿರ ಇವೆ. ಮತ್ತೆ ರಾಜ್ಯಾಂಗದಲ್ಲಿ ಇರುವಂತೆ ಅನೇಕ ಹೊಣೆಗಾರಿಕೆಗಳು ರಾಜ್ಯ ಸರ್ಕಾರಗಳ ಮೇಲಿದೆ. ಈ ಹೊಣೆಗಾರಿಕೆಯನ್ನು ಸರಿಯಾಗಿ ನಿರ್ವಹಿಸಬೇಕಾದರೆ ನಮಗೆ ಬರತಕ್ಕ ನಮ್ಮ ಪಾಲಿನ ಹಣ ನಮಗೆ ಬರಲೇಬೇಕು. ಅದಕ್ಕಾಗಿ ನಾವು ಒತ್ತಾಯ ಮಾಡಬೇಕಾಗುತ್ತದೆ, ಅವರ ಮನ ಒಲಿಸಬೇಕಾಗುತ್ತದೆ, ಅವಶ್ಯ ಬಿದ್ದರೆ ಹೋರಾಟ ಮಾಡಬೇಕಾಗುತ್ತದೆ. ಹೋರಾಟ ಅಂದರೆ, ನಾವೆಲ್ಲ ಒಗ್ಗಟ್ಟಾಗಿ ಕೇಂದ್ರ ಸರ್ಕಾರದವರ ಮನವನ್ನು ಒಲಿಸತಕ್ಕ ವಿಚಾರದಲ್ಲಿ ಸಫಲರಾಗದಿದ್ದರೆ ಅವರ ಮೇಲೆ ಒತ್ತಡ ತರತಕ್ಕಂತಹದ್ದಕ್ಕೆ ಪ್ರಯತ್ನ ಮಾಡಬೇಕು. ಆ ದೃಷ್ಟಿಯಿಂದ ಈ ಮಾತನ್ನು ಹೇಳಿದ್ದೇನೆ. ಸದನದಲ್ಲಿ ಅನೇಕ ಸಲ ಇದರ ಬಗ್ಗೆ ಪ್ರಸ್ತಾಪವಾಗಿದೆ. ಇನ್ನೂ ಅದರ ಬಗ್ಗೆಯೇ ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಬೆಳವಣಿಗೆಯ ದೃಷ್ಟಿಯಿಂದ ನಾನು ಸಾಲ ಮಾಡಬೇಕಾದರೆ ಎಲ್ಲಾ ಅಭಿವೃದ್ಧಿ ರಾಷ್ಟ್ರಗಳಲ್ಲಿ ಮತ್ತು ಅಭಿವೃದ್ಧಿಯನ್ನು ಮಾಡತಕ್ಕ ರಾಜ್ಯಗಳಲ್ಲಿ ಡಿಫಿಸಿಟ್ ಫೈನಾನ್ಸ್ ಅವಶ್ಯಕ. ಡಿಫಿಸಿಟ್ ಫೈನಾನ್ಸ್ ಬಗ್ಗೆ ಮಾನ್ಯ ಮೊಯಿಲಿಯವರು ಒತ್ತಿ ಹೇಳಿದ್ದಾರೆ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಹಿಂದಿನ ವರ್ಷಕ್ಕಿಂತಲೂ ಈ ವರ್ಷ ಈ ಕೊರತೆಯನ್ನು ನಾವು ಕಡಿಮೆ ಮಾಡಿದ್ದೇವೆ. ಅದಕ್ಕಾಗಿ ೯೧.೫೩ ಕೋಟಿ ರೂಪಾಯಿಗಳು ಕೊರತೆ ಎಂಬುದಾಗಿ ಹೇಳಿದ್ದೇವೆ. ಪ್ಲಾನ್‌ನಲ್ಲಿ ಕಡಿಮೆಯಾಗಿರತಕ್ಕ ೧೦೦ ಕೋಟಿಯನ್ನು ಗಮನಕ್ಕೆ ತೆಗೆದುಕೊಂಡರೂ ಕೂಡ ೧೬೫.೨೧ ಕೋಟಿ ರೂಪಾಯಿಗಳಾಗುತ್ತವೆ. ಇದು ಡಿಸಿಫಿಟ್ ಇದೆ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದು ಒಂದು. ನಾನು ಒಂದು ಮಾತನ್ನು ಹೇಳಿದರೆ ತಾವು ಯಾರೂ ತಪ್ಪು ಭಾವಿಸಿಕೊಳ್ಳಬಾರದು. ಈ ರೀತಿಯ ಡಿಫಿಸಿಟ್ ನಮ್ಮ ರಾಜ್ಯ ಒಂದರಲ್ಲೇ ಅಲ್ಲ, ಎಲ್ಲಾ ರಾಜ್ಯಗಳಲ್ಲೂ ಇದೆ. ಈ ಮಾತು ಬಂದಾಗ ನಾವೂ ಈ ರಾಷ್ಟ್ರದ ಒಂದು ಭಾಗವಾಗಿದ್ದೇವೆ. ಈ ರಾಷ್ಟ್ರದ ಆರ್ಥಿಕ ನೀತಿ ಮತ್ತು ಆರ್ಥಿಕ ಸ್ಥಿತಿ ನಮ್ಮ ಮೇಲೂ ಪರಿಣಾಮ ಬೀರುತ್ತದೆ. ನಮ್ಮ ಯೋಜನೆಯಲ್ಲಿ ೧೦೦ ಕೋಟಿ ಕಡಿಮೆಯಾಗಿದೆ. ಇದನ್ನು ಎಲ್ಲಾ ರಾಜ್ಯಗಳಿಗೂ ಹೋಲಿಸಿ ನೋಡಿದಾಗ ನಮ್ಮದು ಬಹಳ ಕಡಿಮೆ. ನಾನು ಅವುಗಳ ಹೆಸರುಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಕೆಲವು ರಾಜ್ಯಗಳು ೩೦೦ ಕೋಟಿ-೪೦೦ ಕೋಟಿ ರೂಪಾಯಿಗಳ ಕೊರತೆಯನ್ನು ಮಾಡಿದ್ದಾರೆ. ಸರ್ವೇಸಾಮಾನ್ಯವಾಗಿ ಎಲ್ಲಾ ರಾಜ್ಯಗಳಲ್ಲಿ ಯೋಜನಾ ವೆಚ್ಚವನ್ನು ಕಡಿಮೆ ಮಾಡಲಾಗಿದೆ. ಇವತ್ತು ಕೇಂದ್ರ ಸರ್ಕಾರದ ವಿಚಾರವಾಗಿ ಹೇಳುವುದಾದರೆ, ಏನ್‌ಟೈರ್ ಪೀರಿಯೆಡ್‌ನಲ್ಲಿ ಡಿಫಿಸಿಟ್ ಪ್ರೊವೈಡ್ ಮಾಡಿರತಕ್ಕಂತಹದ್ದು ೧೪ ಸಾವಿರ ಕೋಟಿ ರೂಪಾಯಿಗಳು ಇನ್ನೂ ವರ್ಷ ಪೂರ್ಣವಾಗಿಯೇ ಇಲ್ಲ, ಈಗಾಗಲೇ ೩೯ ಸಾವಿರ ಕೋಟಿಗೆ ಮುಟ್ಟಿದೆ. ಇದರ ಜೊತೆಗೆ ರಿಸರ್ವ್ ಬ್ಯಾಂಕಿನಿಂದ ಅವರು ಸಾಲವನ್ನಾಗಿ ಪಡೆದುಕೊಂಡಿರುವುದನ್ನೂ

ತೆಗೆದುಕೊಂಡರೆ ಇದರ ಎರಡರಷ್ಟು ಆಗುತ್ತದೆ. ನಮಗೆ ಆ ರೀತಿಯಾಗಿ ರಿಸರ್ವ್ ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳುವುದಕ್ಕೆ ಅವಕಾಶ ಇಲ್ಲ. ಆದರೆ ಅವರಿಗೆ ಇದೆ. ಈ ಹಿನ್ನಲೆಯಲ್ಲಿ ಈ ಡಿಫಿಸಿಟ್ ಏನು ಇದೆ, ಅದು ಅಷ್ಟು ಹೆಚ್ಚು ಅಲ್ಲ. ಅದನ್ನು ಸರಿದೂಗಿಸಿಕೊಂಡು ಹೋಗುವುದರ ಬಗ್ಗೆ ನನ್ನ ಭಾಷಣದಲ್ಲಿ ಹೇಳಿದ್ದೇನೆ, ಯಾವ ರೀತಿ ಮಾಡಬಹುದು ಎಂದು.

ಇನ್ನೊಂದು ಮಾತನ್ನು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಈ ವರ್ಷ ಹೊಸ ಕರಭಾರವನ್ನು ಹಾಕದೆ ೧೦೪೦ ಕೋಟಿ ರೂಪಾಯಿಗಳ ಯೋಜನೆಯನ್ನು ನಾವು ಈ ಮನೆಯ ಮುಂದಿಟ್ಟಿದ್ದೇವೆ. You should appreciate. ಎಲ್ಲಾ ರಾಜ್ಯಗಳಲ್ಲೂ ಟ್ಯಾಕ್ಸನ್ನು ಹಾಕಿದ್ದಾರೆ. They have taken all measures, ೩-೪ ರಾಜ್ಯಗಳನ್ನು ಬಿಟ್ಟರೆ ಬಾಕಿ ಎಲ್ಲಾ ರಾಜ್ಯಗಳಲ್ಲೂ ಟ್ಯಾಕ್ಸನ್ನು ಹಾಕಲಾಗಿದೆ. ೮ ಕೋಟಿ ರೂಪಾಯಿಗಳವರೆಗೆ ತೆರಿಗೆಯಲ್ಲಿ ರಿಯಾಯಿತಿಯನ್ನು ನಾವು ಕೊಟ್ಟಿದ್ದೇವೆ. ಒಂದು ರೀತಿಯಲ್ಲಿ ಅದನ್ನು ರಾಷ್ಟ್ರೀಕರಣ ಮಾಡಿದ್ದೇವೆ. ಅನೇಕ ವಸ್ತುಗಳ ಮೇಲೆ ಕರವನ್ನು ತೆಗೆದಿದ್ದೇವೆ. ಕಡಿಮೆ ಮಾಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಚುನಾವಣೆಯ ವರ್ಷವಾದ್ದರಿಂದ...

ಶ್ರೀ ಎಸ್.ಆರ್. ಬೊಮ್ಮಾಯಿ.—ಚುನಾವಣೆಯ ವರ್ಷವೆಂಬುದಾಗಿ ಉದಾಹರಣೆಯನ್ನು ಕೊಟ್ಟು ಇವತ್ತು ಆದೇಶ ನನ್ನ ಮಾನ್ಯ ಮಿತ್ರರು ಹೇಳಿದ್ದಾರೆ. ನಾನು ಹಾಗೇ ನೆನಪುಮಾಡಿಕೊಂಡೆ.

೪.೩೦. ಪಿ.ಎಂ.

ನಾನು ೧೯೮೭ರಲ್ಲಿ ಸಾರ್ವಜನಿಕ ಲೆಕ್ಕಪತ್ರ ಮಿತಿಯ ಚೇರ್ಮನ್ ಆಗಿದ್ದಾಗ ನಾನು ಒಂದು ವರದಿಯನ್ನು ಕೊಟ್ಟಿದ್ದೇನೆ. ಆ ಸಮಿತಿಯ ಶಿಫಾರಸ್ಸಿನಲ್ಲಿ ಬರೀ ಕರವನ್ನು ಏರಿಸಿ ಕಂದಾಯವನ್ನು ಹೆಚ್ಚು ಮಾಡುವ ನೀತಿ ಸರಿಯಲ್ಲವೆಂದು ಹೇಳಿದ್ದೇನೆ. ಎರಡನೆಯದಾಗಿ we have reco-mmended for a separate cell to monitor the Revenue Yielding Circles. ನಾನು ಉದಾಹರಣೆ ಕೊಟ್ಟು ಹೇಳಿದ್ದೇನೆ. ಎಲ್ಲಿ ಇನ್‌ಫ್ಲೇಷನ್ ಆಗುತ್ತದೆ, ಎಲ್ಲಿ ಬೆಲೆ ಹೆಚ್ಚು ಆಗುತ್ತದೆ ಅಲ್ಲಿ ಅಷ್ಟು ಮಟ್ಟಿನ ಪ್ರಮಾಣದಲ್ಲಿ ಆದಾಯ ಹೆಚ್ಚು ಆಗಬೇಕು. ೧೦೦ ರೂಪಾಯಿಗೆ ೫ ಪರ್ಸೆಂಟ್ ಟ್ಯಾಕ್ಸ್ ಇದ್ದರೆ ಆ ವಸ್ತುವಿನ ಬೆಲೆ ೨೦೦ ರೂಪಾಯಿಯಾದರೆ ಕನಿಷ್ಟ ಪಕ್ಷ ೧೦ ರೂಪಾಯಿ ಬರಬೇಕು. ಕಡೇ ಪಕ್ಷ ೮ ರೂಪಾಯಿಯಾದರೂ ಬರಬೇಕಲ್ಲವೇ ? Without any new taxation, by inflation itself, the additionai Revenue must accrue to the exchequer. ಅದು ಆಗುತ್ತಾ ಇಲ್ಲ ಎನ್ನುವ ಬಗ್ಗೆ ಏನು ಮಾಡಬೇಕೆಂದು ಹೇಳಿದ್ದೇನೆ. ಇನ್ನೊಂದು ವಿಷಯವನ್ನೂ ಕೂಡಾ ಹೇಳಿದ್ದೇನೆ. ಪಕ್ಕದ ರಾಜ್ಯದಲ್ಲಿ ಹೆಚ್ಚು ಇದ್ದರೆ, diversification of tax and evasion of tax must be evaded. ನಾನು ಆ ಕಮಿಟಿಯ ಚೇರ್ಮನ್ ಆಗಿದ್ದಾಗ ಆ ಕಮಿಟಿ ಸದಸ್ಯರು ಹೇಳಿದ್ದಾರೆ. ಅಂದು ನಾನು ಕಮಿಟಿಯಲ್ಲಿ ಹೇಳಿದ ವಿಚಾರಗಳನ್ನು ಇಂದು ಆಚರಣೆಯಲ್ಲಿ ತರುತ್ತಿದ್ದೇನೆ. Without and new tax and giving concessions on number of Committees which affect the farmer and the rural people, only by rationalisation any plugging the leakage, better collection of taxes achieved. ಅವಶ್ಯಕ ಇರುವ ಹಣವನ್ನು ಒದಗಿಸುವ ಪ್ರಾಮಾಣಿಕ ಪ್ರಯತ್ನ ಈ ಬಡ್ಜೆಟ್‌ನಲ್ಲಿ ಇದೆ. ಮಾನ್ಯ ಅಧ್ಯಕ್ಷರೇ, ನಾನು ತಮಗೆ ಒಂದು ವಿಚಾರವನ್ನು ಹೇಳಬಯಸುತ್ತೇನೆ. ಈ ವಿವರಣೆಯನ್ನು ಕೊಡುತ್ತೇನೆ, In 1986–87, the collection was 757·16 crores, growth rate was 10·5 In 1987-88, the collection was 935·59 crores, growth rate w s 23·49. In 1988–89 the grow h rate was 17·57 whereas the collection was 1100 crores. ಹಿಂದಿನ ವರ್ಷಕ್ಕಿಂತಲೂ ಈ ವರ್ಷ ೧೬೫ ಕೋಟಿ ರೂಪಾಯಿ ಹೆಚ್ಚು ಆದಾಯ ಬಂದಿದೆ. ನಾನು ಇನ್ನೊಂದು ವಿಚಾರವನ್ನು ಹೇಳಬೇಕಾಗುತ್ತದೆ. ಹಿಂದಿನ ಬಡ್ಜೆಟ್‌ನಲ್ಲಿ ನಾವು ಘೋಷಣೆ ಮಾಡಿದ ಅನೇಕ ಟ್ಯಾಕ್ಸ್ ಮೆಷರ್ಸ್ ಮಾಡಿಲ್ಲ. ವೇಕೆಂಟ್ ಲ್ಯಾಂಡ್ ಟ್ಯಾಕ್ಸ್ ಬಗ್ಗೆ ಹಿಂದಿನ ಬಡ್ಜೆಟ್‌ನಲ್ಲಿ ಹೇಳಿದ್ದೇವೆ. ಅದು ಕಾನೂನಾಗಿ ಜಾರಿಗೆ ಬಂದಿಲ್ಲ. ಹೊಸ ಕರವನ್ನು ಹಾಕದೇ ಇವತ್ತು ೧೬೫ ಕೋಟಿ ರೂಪಾಯಿ ಆದಾಯ ಹೆಚ್ಚು ಆಗಿದೆ. According to me, I took certain steps to plug the leakage and evasion of tax and those steps have yielded good results. ಇವತ್ತು ಈ ಮಾತನ್ನು ತಮ್ಮ

ಗಮನಕ್ಕೆ ತರಬಯಸುತ್ತೇನೆ. ಈ ದಿಸೆಯಲ್ಲಿ ನಾನು ಮುಂದಿನ ವರ್ಷ ಹೊಸದಾಗಿ ಯಾವುದೇ ಟ್ಯಾಕ್ಸ್ ಹಾಕದೇ ಆದಾಯವನ್ನು ಹೆಚ್ಚು ಮಾಡತಕ್ಕ ಭರವಸೆಯನ್ನು ಹೊಂದಿದ್ದೇನೆ. ನಾಗರೀಕರ ಮೇಲೆ ಹೊರೆ ಇಲ್ಲದೇ by proper collection and rationalisation. ಆದಾಯ ಹೆಚ್ಚು ಮಾಡತಕ್ಕ ಒಂದು ಕಾರ್ಯಕ್ರಮವನ್ನು ನಾನು ಹಾಕಿಕೊಂಡಿದ್ದೇನೆ. ಜಿಲ್ಲಾಪರಿಷತ್‌ಗಳಿಗೆ ಕಡಿಮೆ ಹಣವನ್ನು ಬಿಡುಗಡೆ ಮಾಡಿದ್ದೀರಿ ಎನ್ನುವ ಮಾತು ಬಂದಿದೆ, ಅದು ಸರಿಯಾದುದಲ್ಲ. ನಾವು ೧೯೮೭-೮೮ನೇ ಸಾಲಿನಲ್ಲಿ ೯೭ ಕೋಟಿ ರೂಪಾಯಿಗಳನ್ನು ಇದಕ್ಕೋಸ್ಕರ ಬಿಡುಗಡೆ ಮಾಡಿದ್ದೇವೆ. ಪ್ಲಾನ್ ಅಂಡ್ ನಾನ್‌ಪ್ಲಾನ್ ಎರಡೂ ಸೇರಿ ಅಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ. ಅದರ ಮುಂದಿನ ವರ್ಷ ೯೦ ಕೋಟಿ ರೂಪಾಯಿಗಳನ್ನು ಕೊಡತಕ್ಕ ಬಗ್ಗೆ ಬಜೆಟ್‌ನಲ್ಲಿ ಉಲ್ಲೇಖ ಮಾಡಿದ್ದೇವೆ. ರೆವಿನ್ಯೂ ಕಲೆಕ್ಷನ್ ಬಗ್ಗೆ ಕೆಲವು ಟೀಕೆಗಳು ಬಂದಿವೆ. ಕಮರ್ಷಿಯಲ್ ಟ್ಯಾಕ್ಸ್ ಅರಿಯರ್ಸ್, ಎಕ್ಸೈಸ್ ಟ್ಯಾಕ್ಸ್ ಅರಿಯರ್ಸ್ ಹಾಗೂ ಬೇರೆ ಬೇರೆ ಟ್ಯಾಕ್ಸ್‌ಗಳ ಅರಿಯರ್ಸ್ ಬಗ್ಗೆ ಅನೇಕ ಸದಸ್ಯರುಗಳು ಹೇಳಿದ್ದಾರೆ, ಅದನ್ನು ನಾನು ಒಪ್ಪುತ್ತೇನೆ. ಎಲ್ಲಿ ಅರಿಯರ್ಸ್ ಇದೆ ಅಲ್ಲಿ ಅದನ್ನು ವಸೂಲಿ ಮಾಡತಕ್ಕದ್ದು ಸರ್ಕಾರದ ಆದ್ಯಕರ್ತವ್ಯ. ಆದರೆ ಶೇಕಡ ೫೦ರಷ್ಟು ಕೇಸುಗಳು ಇರುವುದರಿಂದ ನ್ಯಾಯಾಲಯಗಳ ತಡೆಯಾಜ್ಞೆಗಳಿಂದ ಇದನ್ನು ವಸೂಲಿ ಮಾಡಲಿಕ್ಕೆ ಕಷ್ಟವಾಗುತ್ತಿದೆ. ಈ ಕೇಸುಗಳನ್ನು ಬೇಗ ಇತ್ಯರ್ಥ ಮಾಡಿದೆಯೆಂದು ನಮ್ಮ ಸರ್ಕಾರಿ ವಕೀಲರುಗಳಿಗೆ ಎಚ್ಚರಿಕೆಯನ್ನು ಕೂಡ ಕೊಟ್ಟಿದ್ದೇವೆ. ಆದಷ್ಟು ಬೇಗ ಕೋರ್ಟಿನಲ್ಲಿರತಕ್ಕ ಕೇಸುಗಳನ್ನು ಇತ್ಯರ್ಥ ಮಾಡುವ ಬಗ್ಗೆ ಪ್ರಯತ್ನ ಮಾಡಬೇಕೆಂದು ಹೇಳಿದ್ದೇವೆ. ಇನ್ನೊಂದು ವಿಚಾರ ರಿವ್ಯೂ ಮಾಡುವಾಗ ಕಂಡುಬಂದಿದೆ. ಎಕ್ಸೈಜ್‌ನಲ್ಲಿ ಏನು ಅರಿಯರ್ಸ್ ಇದೆ, ಇನ್ನೊಂದು ತರಹ ಅರಿಯರ್ಸ್ ಇದೆ, ಬೆನಾಮಿ ಹೆಸರಿನಲ್ಲಿ ಅರಿಯರ್ಸ್ ಇವೆ, ಆ ಹೆಸರಿನ ಜನರೇ ಇಲ್ಲ. ಇಂತಹ ಹೆಸರುಗಳಲ್ಲಿ ಮತ್ತು ಫರ್ಮ್‌ಗಳಲ್ಲಿ ಅರಿಯರ್ಸ್ ಇದೆ. ಅದಕ್ಕಾಗಿ ನಾನು ಈಗಾಗಲೇ ಒಂದು ಆದೇಶವನ್ನು ಕೊಟ್ಟಿದ್ದೇನೆ. ಕೋರ್ಟ್‌ನಲ್ಲಿ ಇರುವುದನ್ನು ಹೊರತುಪಡಿಸಿ, ಯಾವ ಫರ್ಮ್‌ನಲ್ಲಿ ಬಿಸಿನೆಸ್ ನಡೆಸತಕ್ಕವರು ಇರಬಹುದು, ಒಂದು ಫರ್ಮ್ ಇರಬಹುದು, ಇಂಡಿವಿಜುಯಲ್ ಇರಬಹುದು, ಏನೇ ಇದ್ದರೂ ಅವರ ಲೈಸೆನ್ಸ್ ರದ್ದು ಮಾಡತಕ್ಕದ್ದು, ಲೀಸ್ ಇದ್ದರೆ ಅದನ್ನೂ ಸಹ ರದ್ದು ಮಾಡತಕ್ಕದ್ದು ಈ ಕೆಲಸವನ್ನು ಮಾಡಲಿಕ್ಕೆ ನಾವು ಹಿಂದುಮುಂದು ನೋಡುವುದಿಲ್ಲ. I have asked them to verify if the very persons are carrying as business under a different firm they should be black listed. This is one way of doing it.

ಶ್ರೀ ಎಂ. ವರದೇಗೌಡ.—ಮೂರು ತಿಂಗಳು ಬ್ಯಾಂಕ್ ಗ್ಯಾರೆಂಟಿ ಕೊಟ್ಟಿರುತ್ತಾರೆ. ಬ್ಯಾಂಕ್‌ಗಳ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳುವುದಕ್ಕೆ ಏನಾದರೂ ಏರ್ಪಾಡು ಮಾಡಿದ್ದೀರಾ ?

ಶ್ರೀ ಕೆ.ಬಿ. ಶಾಣಪ್ಪ.—ಎಕ್ಸೈಜ್ ಕಂಟ್ರಾಕ್ಟರುಗಳು ಯಾವ್ಯಾವ ಡ್ರೈವರ್ ಹೆಸರಿನ ಮೇಲೆ ಬೇನಾಮಿ ಹೆಸರಿನ ಮೇಲೆ ತೆಗೆದುಕೊಂಡಿರುತ್ತಾರೆಂಬುದು ಎಕ್ಸೈಜ್ ಕಮಿಷನರ್‌ರವರಿಗೆ ಗುರುತು ಇರುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಬೆನಾಮಿ ವ್ಯವಹಾರದ ಬಗ್ಗೆ ಒಳಹೊಕ್ಕು ನೋಡತಕ್ಕದ್ದು ಅವಶ್ಯಕವಿದೆ.

ಶ್ರೀ ಎಂ. ವರದೇಗೌಡ.—ಅವರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಿಕ್ಕೆ ಸರ್ಕಾರ ಕ್ರಮ ತೆಗೆದುಕೊಂಡಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ತಮ್ಮ ಸಲಹೆಯನ್ನು ಗಮನದಲ್ಲಿಡುತ್ತೇನೆ.

ಶ್ರೀ ಎಂ. ರಾಮಪ್ಪ.—ತಾವು ಹೇಳಿದ್ದು ಬೇರೆ. ಅವರು ಹೇಳಿದ್ದು ತಮಗೆ ಅರ್ಥವಾಗಲಿಲ್ಲ. ಬಹಳ ಗಂಭೀರವಾದ ವಿಚಾರವನ್ನು ಮಾನ್ಯ ಸದಸ್ಯರು ಹೇಳಿದ್ದಾರೆ, ಅವರು ಹೇಳಿದ್ದು ಗುರುತು ಇಲ್ಲದೆ ತಾವು ಗಮನದಲ್ಲಿಡುತ್ತೇನೆಂದರೆ ಹೇಗೆ ? ಇದು ಬಹಳ ಗಂಭೀರವಾದ ವಿಚಾರ.

(ಗೊಂದಲ)

ಶ್ರೀ ಎಂ. ವರದೇಗೌಡ.—ಅವರು ಬೆನಾಮಿ ಆಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಗಮನದಲ್ಲಿಡುತ್ತೇನೆಂದರೆ, ಕೊನೆಯಲ್ಲಿ ಉತ್ತರ ಹೇಳುತ್ತೇನೆಂದು ಅರ್ಥ.

ಶ್ರೀ ಎಂ. ರಾಮಪ್ಪ.—ಬ್ಯಾಂಕ್ ಗ್ಯಾರಂಟಿ ಕೊಟ್ಟಮೇಲೆ ಬೆನಾಮಿ ಆಗುವುದಿಲ್ಲ. ಬ್ಯಾಂಕ್ ಗ್ಯಾರಂಟಿ ಇರುತ್ತದೆ, ತಾವು ಜಪ್ತಿ ಮಾಡಬೇಕು, ಅದನ್ನು ಬಿಟ್ಟು ತಾವು ಬೆನಾಮಿ ಎಂದು ಹೇಳಿ ಕೊಂಡು ಅವರನ್ನು ತಪ್ಪಿಸಲಿಕ್ಕೆ ನೀವೆ ಸಹಾಯ ಮಾಡುತ್ತೀರಿ ಎಂದು ಅವರು ಹೇಳುತ್ತಿದ್ದಾರೆ. ತಾವು ಅದಕ್ಕೆ ಆಮೇಲೆ ಹೇಳುತ್ತೇನೆಂದರೆ ಹೇಗೆ ಸ್ವಾಮಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅರಿಯರ್ಸ್ ಪ್ರಶ್ನೆ ಇದ್ದಾಗ ಬ್ಯಾಂಕ್ ಗ್ಯಾರಂಟಿ ಇರಲಿಲ್ಲ. ಅದಕ್ಕೆ ನಾನು ಕೊನೆಯಲ್ಲಿ ಉತ್ತರ ಕೊಡುತ್ತೇನೆ ಕ್ಲಾರಿಫಿಕೇಷನ್ ಕೇಳಿದರೆ ಹೇಳುವುದಕ್ಕೆ ನಾನು ತಯಾರಿದ್ದೇನೆ ಇಲ್ಲಿ non plan expenditure is 58.30 percent. ಆದರೆ non-plan expenditure is non-productive ಅನ್ನುವ ಭಾವನೆ ಇದ್ದರೆ ಅದು ಸರಿಯಲ್ಲ. ಸ್ಯಾಲರಿ ಕೊಡತಕ್ಕದ್ದು ಬಿಟ್ಟು ಬಿಡಿ. ನಾನ್‌ಪ್ಲಾನ್‌ನಲ್ಲಿ ಇರತಕ್ಕಂಥಾದ್ದು, ಅದು ಶಿಕ್ಷಣ ಇರಬಹುದು ಆ್ಯಂಟಿಪಾರ್ಟಿ ಕಾರ್ಯಕ್ರಮ ಇರಬಹುದು, ಸೋಷಿಯಲ್ ವೆಲ್‌ಫೇರ್ ಮೆಶರ್ಸ್ ಇರಬಹುದು, ಆಮೇಲೆ ಮೇಯಿಂಟೆನೆನ್ಸ್ ಇರಬಹುದು, ಸ್ಕೂಲ್ ಬಿಲ್ಡಿಂಗ್ಸ್ ಇರಬಹುದು. ಬೇರೆ ಬೇರೆ ಮೇಯಿಂಟೆನೆನ್ಸ್ ಎಕ್ಸ್‌ಪೆಂಡೀಚರ್ ಇರಬಹುದು ಸ್ಕೂಲ್‌ಬಿಲ್ಡಿಂಗ್ಸ್ ರೋಡ್‌ಗಳನ್ನು ಮಾಡದೆ ಇದ್ದರೆ ಅದು ಲ್ಯಾಪ್ಸ್ ಆಗುತ್ತದೆ. ಅಲ್ಲದೆ ಹಿಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಯಾವುದು ಪ್ಲಾನ್ ಆಗಿರುತ್ತದೋ ಅದು ಮುಂದಿನ ಸಲ ನಾನ್ ಪ್ಲಾನ್ ಆಗಿರುತ್ತದೆ. ಅದು ಕಂಟಿನ್ಯೂಟಿ ಇರುವಂಥಾದ್ದು. ಅದ್ದರಿಂದ non-plan expenditure is non-productive ಎನ್ನುವ ಭಾವನೆ ಏನು ಇದೆ. ಅದು ಸರಿಯಾದುದ್ದು ಅಲ್ಲ. ಇಲ್ಲಿ ನಾನು ಒಂದು ವಿಚಾರವನ್ನು ಹೇಳಬೇಕಾಗುತ್ತದೆ. ಕೆಲವರು ಟೀಕೆ ಮಾಡಿದರು ೧೯೮೫ರಲ್ಲಿ ನಮ್ಮ ಪ್ರಣಾಳಿಕೆಯಲ್ಲಿ ಆಹಾರ ಧಾನ್ಯಗಳನ್ನು ಕೊಡತಕ್ಕದ್ದು ಸಬ್ಸಿಡೈಸ್ಡ್ ರೇಟ್‌ನಲ್ಲಿ ಬಟ್ಟೆ ಕೊಡತಕ್ಕಂಥಾದ್ದು ಪಠ್ಯಪುಸ್ತಕಗಳನ್ನು ಕೊಡತಕ್ಕಂಥ ವಿಚಾರಗಳನ್ನು ಹೇಳಿದಾಗ ಇದು wasteful expenditure, non-productive expenditure ಎನ್ನುವ ಟೀಕೆ ಬಂತು. ಆಮೇಲೆ ನಾವು ಕೊಡತಕ್ಕಂತ ಸಬ್ಸಿಡಿ ಏನಿದೆ, ಮಿಲ್ಕ್ ಸಬ್ಸಿಡಿ ಇರಬಹುದು, ಫುಡ್‌ಗ್ರೇನ್ಸ್ ಸಬ್ಸಿಡಿ ಇರಬಹುದು, ಫರ್ಟಿಲೈಸರ್ ಸಬ್ಸಿಡಿ ಇರಬಹುದು, ಅದರ ಬಗ್ಗೆ ಕೂಡ ಟೀಕೆ ಮಾಡಿದರು. ನಾವು ಒಂದು ವಿಚಾರವನ್ನು.........

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಾಗೆ ಯಾರು ಹೇಳಿಲ್ಲ. ಬೇಕಾದರೆ ಸದನದ ನಡವಳಿಕೆ ಗಳನ್ನು ತೆಗೆದು ನೋಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಉತ್ತರ ಕೊಡಲಿಕ್ಕೆ ಕೆಲವು ಪಾಯಿಂಟ್‌ಗಳನ್ನು ಗುರುತು ಹಾಕಿಕೊಂಡಿದ್ದೇನೆ, ಮಾನ್ಯ ಸದಸ್ಯರು ಹಾಗೆ ಹೇಳಿದ್ದಾರೆ, ಅವರ ಹೆಸರನ್ನು ಬರೆದುಕೊಂಡಿಲ್ಲ ಅಷ್ಟೆ. ನಾನ್ ಪ್ಲಾನ್ ಎಕ್ಸ್‌ಪೆಂಡೀಚರ್‌ನಲ್ಲಿ ಇದೆಲ್ಲಾ ಬರುತ್ತದೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕಾವೇರಿ ಬೇಸಿನ್‌ನಲ್ಲಿ ನಾನ್ ಪ್ಲಾನ್ ಎಕ್ಸ್‌ಪೆಂಡೀಚರ್‌ನಲ್ಲಿ ಮಾಡುತ್ತೀರಿ. For social justice you have to do certain things.

SRI M. S. KRISHNAN.—We have distinguished between development and non-develpment expenditure and not between non-plan and plan expenditure.

SRI S. R. BOMMAI.—It is development expenditure. How can you say it is wasteful expenditure ?

SRI M. S. KRISHNAN.—Non-development expenditure and development expenditure, we have said. Non-development expenditure has been increased.

SRI S. R. BOMMAI.—That is the point you have made 58.30% is non-plan expenditure. In this, more than half is development expenditure. ಅದನ್ನು ನಾನು ಹೇಳುತ್ತಿದ್ದೇನೆ. ನಾನ್ ಪ್ಲಾನ್‌ನಲ್ಲಿ ಇರತಕ್ಕಂಥಾದ್ದು ಏನಿದೆ,

ಅಲ್ಲಿ ಡೆವೆಲೆಪ್‌ಮೆಂಟ್ ಇದೆ ಎನ್ನುವುದನ್ನು ನಾನು ಹೇಳುತ್ತಿದ್ದೇನೆ. ಈಗ ಅನೇಕ ಜನ ಮಾನ್ಯ ಸದಸ್ಯರು ನೀರಾವರಿ ಆದ್ಯತೆ ಕೊಡಬೇಕು, ವಿದ್ಯುಚ್ಛಕ್ತಿ ಆದ್ಯತೆಯನ್ನು ಕೊಡಬೇಕು ಎಂದು ಹೇಳಿದರು ಇದನ್ನು ನಾನು ಒಪ್ಪುತ್ತೇನೆ. ಆ ಎಲ್ಲಾ ಯೋಜನೆಗಳನ್ನು ಮುಕ್ತಾಯ ಮಾಡಬೇಕಾದರೆ ೧೫–೧೮ ವರ್ಷಗಳಾಗುತ್ತವೆ. ಅಲ್ಲಿಯವರೆಗೆ ಈ ಒಣ ಬೇಸಾಯ ಮಾಡತಕ್ಕಂಥ ರೈತರಿಗೆ ನಾವು ಸಹಾಯ ಮಾಡಬೇಡವೆ ? ಅವರ ಅಭಿವೃದ್ಧಿಯನ್ನು ಮಾಡಬಾರದೆ ? ಇವತ್ತು ಭೂಹೀನರು ಇದ್ದಾರೆ Land Development, either dry land or irrigation land, will benefit the land owner and also the land less people in that area ಬರೀ ಅವರಿಗೆ ಅನುಕೂಲ ಆಗುತ್ತದೆ. ಎನ್ನು ಅಭಿಪ್ರಾಯ ನನ್ನದಲ್ಲ. ಆದರೆ ಭೂಹೀನರು ಇದ್ದಾರೆ. ಹಳ್ಳಿಗಳಲ್ಲಿ ಕಸಬುದಾರರು ಇದ್ದಾರೆ. ಅವರಿಗೆ ಏನು ಕೊಡುವುದು ಬೇಡವೆ ? ಇವತ್ತು ಪ್ರೊಡಕ್ಟೀವ್ ಎಕ್ಸ್‌ಪೆಂಡೀಚರ್ ಏನ್ನುವುದರ ಕಲ್ಪನೆ ಬದಲಾಗುತ್ತಿದೆ ಇವತ್ತು, improving the human resources quality is also productive. If a man is better qualified- wheher he is an agricultural labourer or a technician he will produce better things. ಇದರಲ್ಲಿ ನಮ್ಮ Union Minister ಹೇಳಿದ ಮಾತನ್ನು ಇಲ್ಲಿ ಹೇಳಬೇಕಾಗುತ್ತದೆ. Improving human quality is non productive’ ಏನ್ನುವುದು ತಪ್ಪು. ಇವತ್ತು ಗ್ರೀನ್ ಕಾರ್ಡ್ ವಿಚಾರ ಇದೆ. ಈ ವಿಚಾರದಲ್ಲಿ ನಮ್ಮನ್ನೆಲ್ಲಾ ಟೀಕೆ ಮಾಡಿದರು. ಆದರೆ ಇವತ್ತು ಕೇಂದ್ರ ಮಟ್ಟದಲ್ಲಿ ಈ ಯೋಜನೆಯನ್ನೂ ಸಹ ಮಾಡುತ್ತಿದ್ದಾರೆ. ಇನ್ನು ಸೀರೆಗಳ ಯೋಜನೆ, ಮಹಿಳೆಯರಿಗೆ ಸೀರೆ ಕೊಡತಕ್ಕಂಥ ಯೋಜನೆಯನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಒಪ್ಪಿದೆ, ಅದರಲ್ಲಿಯೂ ಈ ಒಂದು ಕಾರ್ಯಕ್ರಮ ಇದೆ. ಇನ್ನು ಫರ್ಟಿಲೈಸರ್ಸ್ ಮತ್ತು ಫುಡ್ ಗ್ರೈನ್ಸ್ ಕೊಡುವಂತದ್ದನ್ನು ಅವರು ಒಪ್ಪಿದ್ದಾರೆ. ಇದು ಹೊಸ ಕಾರ್ಯಕ್ರಮ. ಮೊನ್ನೆ ನಡೆದಂಥ ವರ್ಕಿಂಗ್ ಕಮಿಟಿಯಲ್ಲಿ ಈ ವಿಚಾರ ಬಂದಿದೆ. ನಮ್ಮ ಗೆಳೆಯರು ಏನು ಹೇಳುತ್ತಾ ಇದ್ದಾರೆಂದರೆ,...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹ್ಯಾಂಡ್ ಲೂಮ್ ಬಟ್ಟೆ ಮೇಲೆ ಮೊದಲಿನಿಂದ ರಿಬೇಟ್ ಕೊಡುತ್ತಿದ್ದಾರೆ. ಖಾದಿ ಮೇಲೂ ರೆಬೇಟ್ ಕೊಡುತ್ತಿದ್ದಾರೆ .

ಶ್ರೀ ಎಸ್. ಆರ್. ಬೊಮ್ಮಾಯಿ.—ರಿಬೇಟ್ ಕೊಡುವುದು ಬೇರೆ......

ಶ್ರೀ ಎಂ. ವೀರಪ್ಪ ಮೊಯ್ಲಿ.—ಹ್ಯಾಂಡ್‌ಲೂಮ್ ಬಟ್ಟೆ ಮೇಲೆ ೧೯೭೫ರಿಂದ ಸಬ್ಸಿಡಿ ಕೊಡುತ್ತಿದ್ದಾರೆ. ನಾಟ್ ರಿಬೇಟ್...

(ಅಧ್ಯಕ್ಷರು ತಮ್ಮ ಪೀಠದಲ್ಲಿ ಉಪಸ್ಥಿತರಾದರು)

ಶ್ರೀ ಕೆ. ಹೆಚ್. ಶ್ರೀನಿವಾಸ.—ನಾವು ಯಾರೂ ಆಂಟಿ ಪಾವರ್ಟಿ ಕಾರ್ಯಕ್ರಮ ಮಾಡುವುದು ತಪ್ಪು ಎಂದು ಹೇಳಿಲ್ಲ. ಹಿಂದೆ ನಾವು ಮುಕ್ತ ಕಂಠದಿಂದ ಇದನ್ನು ಸ್ವಾಗತ ಮಾಡಿದ್ದೇವೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಹೋದಸಾರಿ ಮಾತನಾಡುವಾಗ ಸ್ಪಷ್ಟವಾಗಿ ಹೇಳಿದ್ದಾರೆ. ಈ ಆಂಟಿ ಪಾವರ್ಟಿ ಕಾರ್ಯಕ್ರಮವನ್ನು ಯಾರು ಒಪ್ಪಲಿ, ಬಿಡಲಿ, ಇದರ ಕ್ರೆಡಿಟ್ ಪ್ರಪ್ರಥಮವಾಗಿ ಶ್ರೀಮತಿ ಇಂದಿರಾಗಾಂಧಿಯವರಿಗೆ ಹೋಗಬೇಕೆಂದು ಅವರೇ ಈ ಸದನದಲ್ಲಿ ಹೇಳಿದ್ದಾರೆ. ನೀವು ಇಲ್ಲಿ ಸೀರೆ ಕಾರ್ಯಕ್ರಮವನ್ನು ತರಬಹುದು. ಆದರೆ. ಕಾಲ, ದೇಶ ವರ್ತಮಾನದ ಅವಶ್ಯಕತೆಗಳಿಗನುಸಾರವಾಗಿ ಒಂದು ಕಡೆ ಸೀರೆ ಕೊಡಬಹುದು, ಪಂಚೆ ಕೊಡಬಹುದು, ಸ್ಕೂಲಿನಲ್ಲಿ ಛಡ್ಡಿ ಕೊಡಬಹುದು ಇದು ಅದಲ್ಲ. ನೀವು ಈ ಕಾರ್ಯಕ್ರಮಗಳನ್ನು ಶ್ರದ್ಧೆಯಿಂದ ಮಾಡುತ್ತೀರೋ ಅಥವಾ ತೋರುದಾಕಿಗೆ ಮಾಡುತ್ತಿದ್ದೀರೋ ಎನ್ನುವುದರ ಬಗ್ಗೆ ಕೆಲಕೆಲವರು ಕೆಲವು ಅಭಿಪ್ರಾಯಗಳನ್ನು ಕೊಟ್ಟಿರಬಹುದು. ಈ ಕಾರ್ಯಕ್ರಮ ತಪ್ಪು ಎಂದು ನಾವು ಎಂದೂ ಹೇಳಿಲ್ಲ. ದಯವಿಟ್ಟು ಇದರ ಬಗ್ಗೆ ಪ್ರಚಾರ ಮಾಡಿ. ತಾವು ಸಂತೋಷಪಟ್ಟುಕೊಳ್ಳಬೇಡಿ...

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಸಂತೋಷಪಡುತ್ತೇನೆ. ಮಾನ್ಯ ಕೆ. ಹೆಚ್. ಶ್ರೀನಿವಾಸ್ ಅವರು ತಮ್ಮ ಅಭಿಪ್ರಾಯವನ್ನು ಬದಲು ಮಾಡಿದ್ದಾರೆ. ೧೯೭೫ರಲ್ಲಿ ಅವರು ಹೇಳಿದ ಮಾತಿಗೂ, ೧೯೮೦ರಲ್ಲಿ ಅಂದರೆ ಇವತ್ತು ಹೇಳುವ ಮಾತಿಗೂ ವ್ಯತ್ಯಾಸ ಇದೆ. ನಿಮ್ಮ ಪಕ್ಷದ ನಾಯಕರೂ, ಅನೇಕ ಸದಸ್ಯರೂ ಟೀಕೆ ಮಾಡಿದ್ದಾರೆ...

ಶ್ರೀ ಕೆ. ಹೆಚ್. ಶ್ರೀನಿವಾಸ್.—ಬಡತನ ನಿವಾರಣಾ ಕಾರ್ಯಕ್ರಮದ ಬಗ್ಗೆ ನಾವು ಎಲ್ಲಿಯೂ. ಸ್ವಾಗತ ಮಾಡಿದ್ದೇವೆ. ನಮ್ಮ ಕ್ಷೇತ್ರದಲ್ಲಿಯೂ ಕೂಡ ಈ ನಿಮ್ಮ ಕಾರ್ಯಕ್ರಮವನ್ನು ಸ್ವಾಗತ ಮಾಡಿದ್ದೇವೆ. ನಾವು ಅಲ್ಲಿಯೂ ಕೂಡ ಅಪಪ್ರಚಾರ ಮಾಡಿಲ್ಲ. ಲೋಪದೋಷಗಳು ಇದ್ದರೂ ಸಹಿತ, ಅದನ್ನು ದೊಡ್ಡದಾಗಿ ಮಾಡುವುದಕ್ಕೆ ಹೋಗಿಲ್ಲ. ಆದರೆ ಇದನ್ನು ಕಂಡು ಹಿಡಿದ ಬ್ರಹ್ಮರು ನೀವೇ ಎಂದು ಹೇಳಿಕೊಳ್ಳುವುದಕ್ಕೆ ಹೋಗಬೇಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಬ್ರಹ್ಮರು ಯಾರೋ, ವಿಷ್ಣು ಯಾರೋ ಈ ವಿಚಾರ ಬೇಡ ಇದೇ ಮನೆಯಲ್ಲಿ ಉಗ್ರವಾಗಿ ಟೀಕೆ ಮಾಡಿದ್ದುಂಟು. ಬೇಕಾದರೆ ರೆಕಾರ್ಡ್ ತೆಗೆದು ನೋಡಿ. ಪಾಪ್ಯುಲಿಸ್ಟ್ ಪ್ರೋಗ್ರಾಂ, ಅಗ್ಗದ ಪ್ರಚಾರದ ಕಾರ್ಯಕ್ರಮ ಎಂದು ಹೇಳಿದ್ದೀರಿ...

ಶ್ರೀ ಕೆ. ಹೆಚ್. ಶ್ರೀನಿವಾಸ್.—ಆಂಟಿ ಪಾವರ್ಟಿ ಕಾರ್ಯಕ್ರಮವನ್ನು ಅಗ್ಗದ ಪ್ರಚಾರಕ್ಕಾಗಿ ನೀವು ಸ್ವೀಕಾರ ಮಾಡಿದ್ದೀರೆಂದು ಇವತ್ತಿಗೂ ನಮ್ಮ ಚಾರ್ಜು ಇದೆ. ಇದನ್ನು ನೀವು ಶ್ರದ್ಧೆಯಿಂದ ಮಾಡಿಲ್ಲ. ಇಂತಹ ಕಾರ್ಯಕ್ರಮಗಳನ್ನು ನೀವು ಮಾಡದೇಹೋದರೆ ನಿಮಗೆ ವೋಟು ಬರುವುದ ಕಡಿಮೆಯಾಗುತ್ತದೆ ಎಂದು ಮಾಡಿದ್ದೀರಿ...

(ಗೊಂದಲ)

ಶ್ರೀ ವೇದಾಂತ ಹೆಮ್ಮಿಗೆ.—ಪೂಜಾರಿಗಳಿಗೆ ಸಾರಾಯಿ ಕೊಟ್ಟರಲ್ಲ, ಆ ಕಾರ್ಯಕ್ರಮದ ಬಗ್ಗೆ ಸ್ವಲ್ಪ ಹೇಳಿ......

ಶ್ರೀ ಕೆ. ಹೆಚ್, ಶ್ರೀನಿವಾಸ್.—ನೀವು ಏಕೆ ಬೆಂಬಲ ಕೊಡಲಿಲ್ಲ. ನಿಮ್ಮನ್ನು ಕರೆಯಲಿಲ್ಲ ಎಂದು ಬಾಯ್‌ಕಾಟ್ ಮಾಡಿದಿರಿ......

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಸೀರೆ, ಪಠ್ಯಪುಸ್ತಕಗಳನ್ನು ಕೊಡಬೇಕೆಂದು ಮಾನ್ಯ ರಘುಪತಿಯವರು ಹೊರಟರು, ಆದರೆ ಅವರನ್ನೇ ತೆಗೆದಿರಿ...

ಶ್ರೀ ಎಂ. ರಾಮಪ್ಪ.—ನಮ್ಮ ಜಾತಿಯವರು ಒಬ್ಬರು ಇದ್ದರು, ಅವರನ್ನೂ ತೆಗೆದಿರಿ, ನನಗೆ ಬಹಳ ಚಿಂತೆಯಾಗಿದೆ...

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ವಿಚಾರ ಇಲ್ಲಿ ಅನಾವಶ್ಯಕ. ಇವತ್ತು ಫುಡ್ ಗ್ರೈನ್ಸ್‌ಗೆ ಸುಮಾರು ೩೮ ಕೋಟಿ ರೂಪಾಯಿ ಸಬ್ಸಿಡಿ ಕೊಡುತ್ತಿದ್ದೇವೆ. ನಾವು ಶ್ರದ್ಧೆಯಿಂದ ಮಾಡುತ್ತಿದ್ದೇವೆ ಎನ್ನುವುದರ ಬಗ್ಗೆ ಇವತ್ತು ಶ್ರೀನಿವಾಸ್‌ರವರು ನೋಡಬೇಕು. ಇನ್ನು ಗ್ರೀನ್ ಕಾರ್ಡ್ ವಿಚಾರ ಹೇಳಿದರು, ಇದನ್ನು ೩೩ ಲಕ್ಷ ಕುಟುಂಬಗಳಿಗೆ ಕೊಟ್ಟಿದ್ದೇವೆ. ೩೮ ಕೋಟಿ ರೂಪಾಯಿಗಳ ಸಬ್ಸಿಡಿ ಕೊಡುತ್ತಿದ್ದೇವೆ. ಕೇಂದ್ರ ಸರಕಾರದವರು ಮೂರು ಸಲ ಅಕ್ಕಿಯ ಇಷ್ಯೂ ಪ್ರೈಸ್ ರೈಸ್ ಮಾಡಿದ್ದಾರೆ. ಆದರೆ ನಾವು ಹೆಚ್ಚು ಮಾಡಲಿಲ್ಲ. ಅವರು ಇಷ್ಯೂ ಪ್ರೈಸ್ ಹೆಚ್ಚು ಮಾಡಿದರೂ ನಾವು ನಾವುಹೆಚ್ಚು ಮಾಡಲಿಲ್ಲ, because we are committed to the programme. Our commitment is there. You take anything. Whatever we have pronounced, we have implemented it with dedication and with commitment. ಅದನ್ನು ತಾವು ಆಲೋಚನೆ ಮಾಡಬೇಕು. ಮಾನ್ಯ ಸಭಾಧ್ಯಕ್ಷರೇ, ಈ ಸಮಯದಲ್ಲಿ ಒಂದು ವಿಚಾರ ನಾನು ಹೇಳಬೇಕಾಗುತ್ತದೆ. ರಾಜಕೀಯ ಪಕ್ಷಗಳ ಬಗ್ಗೆ ಮಾತನಾಡುತ್ತಾ ಮಾನ್ಯ ಖರ್ಗೆಯವರು. ಚುನಾವಣಾ ಪ್ರಣಾಳಿಕೆಗಳನ್ನು ಜನರ ಮುಂದಿಟ್ಟು ಚುನಾವಣೆಯಲ್ಲಿ ರಾಜಕೀಯ ಪಕ್ಷಗಳು ಆಯ್ಕೆಯಾಗುತ್ತವೆ ಎಂಬ ಮಾತನ್ನು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ ಆದರೆ ರಾಜಕೀಯ ಪಕ್ಷಗಳ ಒಂದು ಒರೆಗಲ್ಲು, ಅಳತೆಗೋಲು ಏನು ? ಚುನಾವಣೆಯ ಮುಂದೆ ಪ್ರಣಾಳಿಕೆಯಲ್ಲಿ ಏನು ವಾಗ್ದಾನಗಳನ್ನು ಮಾಡಿದ್ದೇವೆಯೋ ಅದೇರೀತಿ ಅಧಿಕಾರಕ್ಕೆ ಬಂದಾಗ ನುಡಿದಂತೆ ನಡೆಯಬೇಕು, ನುಡಿದಂತೆ ನಡೆ ಎಂಬ ನಮ್ಮ ಭಾಷೆಯನ್ನು ಖರ್ಗೆಯವರು ಉಪಯೋಗ ಮಾಡಿದರು, ಬಹಳ ಸಂತೋಷ. ನಾವು ನುಡಿದಂತೆ ನಡೆದಿದ್ದೇವೆ. ಮೊದಲು ಜನತಾ ಪಕ್ಷ ಹಾಗೂ

ಈಗ ಜನತಾ ದಳ ಏನಿದೆ ಇದು ಅವರ ಒಂದು ನೀತಿ. ಚುನಾವಣಾ ಪ್ರಣಾಳಿಕೆಯಲ್ಲಿ ಅನೇಕ ಕಡೆ ಹೇಳಿದ್ದೇವೆ. It is our Bible, it is our Kuran and it is our Geetha. ಅದಕ್ಕಾಗಿ ಹೇಳುತ್ತಿದ್ದೇನೆ, ನಮ್ಮ ೧೯೮೫ರ ಮತ್ತು ೧೯೮೭ರ ಚುನಾವಣಾ ಪ್ರಣಾಳಿಕೆಗಳನ್ನು ನೋಡಿರಿ. ನೀವು ನೋಡಿಲ್ಲ. ಯಾವುದಾದರೂ ಸರಕಾರದ ಪ್ರಾಮಿಸಸ್ ಮತ್ತು ಪರ್‌ಫಾರ್ಮೆನ್ಸ್ ಅಂದರೆ ವಾಗ್ದಾನಗಳನ್ನು ಮತ್ತು ಕೃತಿಗಳನ್ನು ತುಲನೆ ಮಾಡಿ ನೋಡಿದರೆ ಅದನ್ನು ಈಡೇರಿಸಿರುವುದು ಕರ್ನಾಟಕ ಸರಕಾರ ಒಂದೇ.

ಶ್ರೀ ಆರ್. ವೆಂಕಟರಾಮಯ್ಯ.—ಪ್ರೊಫೆಷನಲ್ ಟ್ಯಾಕ್ಸ್ ಬಗ್ಗೆ ಏನು ಹೇಳುತ್ತೀರಿ ? ಸ್ಟೈಫಂಡರಿ ಗ್ರಾಜುಯೇಟ್ಸ್ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ವಿಷಯಕ್ಕೂ ಬರುತ್ತೇನೆ. Itemwise I world like my friends to please go through our manifesto and also our performance. ಇವತ್ತು ನಾವು ಏನೂ ಮುಚ್ಚಿಟ್ಟಿಲ್ಲ. ಕನ್ನಡಿ ಹಾಗೆ ನಿಮಗೆ ಕೊಟ್ಟಿದ್ದೇವೆ.

ಶ್ರೀ ಎಂ. ವೀರಪ್ಪಮೊಯಿಲಿ.—ಜನಗಳಿಗೆ ಗೊತ್ತಾಗಬೇಕಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಜನಗಳಿಗೆ ಏನು ಎಂದು ಚೆನ್ನಾಗಿಗೊತ್ತಿದೆ. ಏತಕ್ಕೆ ಗೊತ್ತಿದೆ ಎಂದರೆ, ಅವರು ಅದರ ಪ್ರತಿಫಲವನ್ನು ಪಡೆಯುತ್ತಿದ್ದಾರೆ, ಅವರು ಅನುಭವಿಸುತ್ತಿದ್ದಾರೆ, ಅದಕ್ಕೆ ಅವರಿಗೆ ಎಲ್ಲಾ ಗೊತ್ತಿದೆ, ಅವರು ಫಲಾನುಭವಿಗಳಾಗಿದ್ದಾರೆ. ಅವರ ಹತ್ತಿರ ಹೋದರೆ ಅವರು ಹೇಳುತ್ತಾರೆ. ಹಸಿರು ಕಾರ್ಡು ನಮಗೆ ಕೊಡಿ ಎಂದು ಕೇಳುತ್ತಾರೆ. ಹಸಿರು ಕಾರ್ಡ್ ಕೊಡುವುದನ್ನು ನಗರಗಳಿಗೂ ನಗರಗಳಿಗೂ ವಿಸ್ತರಣೆ ಮಾಡುತ್ತಿದ್ದೇವೆ. ಕೇಂದ್ರ ಸರಕಾರದಿಂದ ನಮಗ ಬರುವ ಹಕ್ಕಿ ಕಡಿಮೆಯಾದರೂ ಕೂಡಾ ನಾವು ಕೊಡುತ್ತಿದ್ದೇವೆ. ಅದು ಅವರ ತಪ್ಪಲ್ಲ. ಕೇಂದ್ರ ಸರಕಾರವನ್ನು ನಾನು ದೂಷಣೆ ಮಾಡುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಕೇಂದ್ರ ಸರಕಾರದಿಂದ ಬರುವ ಅಕ್ಕಿ ಕಡಿಮೆಯಾಗಿದೆ ಎಂಬ ವಾದ ಏನಿದೆ ಅದು ಸತ್ಯಕ್ಕೆ ದೂರವಾದುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಕ್ಕಿ ೬೮ ಸಾವಿರ ಟನ್ ಬರಬೇಕಾಗಿತ್ತು. ಅದು ಈಗ ೫೦ ಸಾವಿರ ಟನ್‌ಗೆ ಇಳಿದಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾವು ಇರುವಾಗ ೧೯೮೨ನೇ ಇಸವಿಯಲ್ಲಿ ಹತ್ತು ಸಾವಿರ ಟನ್ ಬರುತ್ತಿತ್ತು, ಈಗ ಎಷ್ಟು ಬರುತ್ತಿದೆ ಎಂದರೆ ೬೫ ಸಾವಿರ ಟನ್ ಬರುತ್ತಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಎರಡು ವರ್ಷಗಳಿಂದ ೬೮ ಸಾವಿರ ಟನ್ ಬರುತ್ತಿತ್ತು. ನಂತರ ಅದು ೪೮ ಸಾವಿರ ಟನ್‌ಗೆ ಇಳಿದಿದೆ ಈಗ ೪೦ ಸಾವಿರ ಟನ್‌ಗೆ ಬಂದಿದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಅದು ನಿಮ್ಮ ತಪ್ಪು. Alright, we will have a debate on that.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದು ನಮ್ಮ ತಪ್ಪಲ್ಲ. ಕೇಂದ್ರದಿಂದ ಬರತಕ್ಕಂಥ ಅಕ್ಕಿ ಕಡಿಮೆಯಾಗಿದೆ, ನಾನು ದೂಷಣೆ ಮಾಡುತ್ತಿಲ್ಲ. ಅಲ್ಲೂ ಬರಗಾಲ ಬಂತೂ, ಬೇರೆ ರಾಜ್ಯಗಳಿಗೆ ಕೊಟ್ಟರು. ರಾಜಕೀಯದಿಂದ ನಮ್ಮ ರಾಜ್ಯಕ್ಕೆ ಕಡಿಮೆ ಕೊಟ್ಟರು ಎಂದು ಹೇಳುವುದಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಲೆವಿ ಕಾಂಟ್ರಿಬ್ಯೂಷನ್ ನೋಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಲೆವಿ ಕಾಂಟ್ರಿಬ್ಯೂಷನ್ ಕಳೆದ ವರ್ಷಕ್ಕಿಂತ ಈ ವರ್ಷ ಹೆಚ್ಚಿದೆ. ಕಾಲಕಾಲಕ್ಕೆ ಏನು ವಸೂಲಾಗಬೇಕೋ ಅದು ಆಗುತ್ತಿದೆ. Still we are extending it. ನಮ್ಮ ಈ ಮ್ಯಾನಿಫೆಸ್ಟೋ ಏನಿದೆ ಇದು ನಮ್ಮ ಗೀತೆ ಎಂದು ಹೇಳುತ್ತಿದೇನೆ. ಅದೇರೀತಿ ತಮ್ಮ ಮ್ಯಾನಿಫೆಸ್ಟೋ ನೋಡಿ ಹಾಗೂ ತಮ್ಮ ಸಾಧನೆಗಳನ್ನೂ ನೋಡಿ ಎಂದು ಹೇಳುತ್ತಿದ್ದೇನೆ. ಇವತ್ತು ಕೇಂದ್ರ ಸರ್ಕಾರದವರು ಲೋಕಸಭಾ ಚುನಾವಣೆಯಲ್ಲಿ ಚುನಾವಣಾ

ಪ್ರಣಾಳಿಕೆ ಕೊಟ್ಟಿದ್ದಾರೆ. ಅದರಲ್ಲಿ ಯಾವುದು ಇವತ್ತು ಆಚರಣೆಗೆ ಬಂದಿದೆ ? which is the promise they have fulfilled ? That should be the test of any political party. we are prepared to be measured by this test, ನಮಗೆ ಇವತ್ತು ಜನತೆ ಮುಂದೆ ಹೋಗುವುದಕ್ಕೆ ಅಂಜಿಕೆ ಇಲ್ಲ.

SRI M. VEERAPPA MOILY.—we accept that challenge.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದಕ್ಕೇ ಬೇಗ ಚುನಾವಣೆಗೆ ಹೋಗೋಣವೆಂದು ಹೇಳಿದ್ದುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಹೇಳಿದ್ದನ್ನು ಕೇಳಿದ್ದೇನೆ. ನಿಮ್ಮ ಭಾಷಣ ಕೇಳಿದ್ದೇನೆ. ಆ ವಿಷಯಕ್ಕೆ ನಾನು ಬರುತ್ತೇನೆ. ಚುನಾವಣೆ ಬಗ್ಗೆ ನಾನು ನಂತರ ಬರುತ್ತೇನೆ. ಇನ್ನು ವಿಶೇಷವಾಗಿ ಮಹಿಳೆಯರಿಗೆ ಕೆಲವು ವಾಗ್ದಾನಗಳನ್ನು ಮಾಡಿದ್ದೇವೆ. ಕರ್ನಾಟಕ ಸರ್ಕಾರ ೧೯೮೩ರಿಂದ ಇದುವರೆಗೂ ಮಹಿಳೆಯರಿಗೆ ವಿಶೇಷವಾದಂತಹ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಈ ಸಮಾಜದಲ್ಲಿ ಅರ್ಧದಷ್ಟು ಜನ ಮಹಿಳೆಯರು ಇದ್ದಾರೆ. ಅರ್ಧದಷ್ಟು ಜನ ಹಿಂದುಳಿದಿದ್ದಾರೆ. ಇದು ಎಲ್ಲರೂ ಒಪ್ಪತಕಂಥ ಮಾತು. ಇಂದು ಪುರುಷ ಪ್ರಧಾನವಾದ ಸಮಾಜವಾಗಿದೆ. ಮಹಿಳೆಯರ ಬಹಳ ಹಿಂದೆ ಬಿದ್ದಿದಾರೆ. ನಾವು ಅವರನ್ನು ಬಹಳ ಹೊಗಳಿದ್ದೇವೆ. ಬೇಕಾದಷ್ಟು ಹೋಗಳುತ್ತೇವೆ. ಲಕ್ಷ್ಮಿ, ಸರಸ್ವತಿ ಮಹಾತಾಯಿ ಇತ್ಯಾದಿ ಇತ್ಯಾದಿ ಹೇಳುತ್ತೇವೆ...

ಶ್ರೀ ಎಂ. ವೀರಪ್ಪ ಮೊಯಿಲಿ.— ಅದಕ್ಕೆ ತಮಿಳುನಾಡಿನಲ್ಲಿ ಒಬ್ಬ ಮಹಿಳೆಯ ಸೀರೆಯನ್ನು ಎಳೆಯಲು ಹೋಗಿದ್ದುದು. ಇದು ನಿಮ್ಮ ನ್ಯಾಷನಲ್ ಫ್ರಂಟ್ ಸರ್ಕಾರ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಅಲ್ಲಿ ನಡೆದ ವಿಚಾರ ಇಲ್ಲಿ ಬೇಡ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಇದು ಮಹಿಳೆಯರಿಗೆ ನೀವು ಕೊಡುತ್ತಿರುವುದು..

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಮಹಿಳೆಯರು ಮಹಿಳೆಯರಾಗಿ ನಡೆದುಕೊಂಡರೆ ಎಲ್ಲಾ ಗೌರವ ಸಿಗುತ್ತದೆ. ಮರ್ಯಾದೆ ಬಿಟ್ಟರೆ ಈ ರೀತಿ ಆಗುತ್ತದೆ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಮಹಿಳೆಯರ ಸೀರೆ ಎಳೆಯುವುದು ಅವರನ್ನು ಬೆತ್ತಲೆ ಮಾಡುವುದು ಇತ್ಯಾದಿ ನಡೆಯುತ್ತಿದೆ ಇದಕ್ಕೆ ನಿಮ್ಮ ಬೆಂಬಲವಿರಬೇಕು ಅಲ್ಲವೇ ?

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಪಿತೂರಿ ಮಾಡಲು ಹೊರಟಿದ್ದೀರೇನು? ಶಾಸನ ಸಭೆಯಲ್ಲಿ ಯಾವ ರೀತಿ ನಡೆದುಕೊಳ್ಳಬೇಕು ಎನ್ನುವುದು ಅವರಿಗೆ ಗೊತ್ತಿಲ್ಲವೇ?

(ಗೊಂದಲ)

ಅಧ್ಯಕ್ಷರು. ಅವರ ಚಿಂತೆ ನಿಮಗೇತಕ್ಕೆ? ನಿಮ್ಮ ಚಿಂತೆ ನೀವು ನೋಡಿಕೊಳ್ಳಿ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಮಹಿಳೆಯರಿಗೆ ಆ ರೀತಿ ಅಪಮಾನ ಆಗಿದ್ದನ್ನು ಎಲ್ಲರೂ ಖಂಡಿಸಬೇಕಾಗುತ್ತದೆ. ಅದೇ ರೀತಿಯಾಗಿ ಮುಖ್ಯ ಮಂತ್ರಿಗಳು ಬಜೆಟ್ ಭಾಷಣ ಮಾಡುವಂತಹ ಸಂದರ್ಭದಲ್ಲಿ ಗುಂಡಾಗಿರಿ ಮಾಡುವಂಥಾದ್ದನ್ನೂ ಸಹ ಖಂಡಿಸಬೇಕಾಗುತ್ತದೆ. ಆದರೆ ನಾನು ಒಂದು

ಮಾತನ್ನು ಬಹಳ ಹೆಮ್ಮೆಯಿಂದ ಹೇಳುತ್ತೇನೆ. ನಮ್ಮ ಶಾಸನ ಸಭೆಗಳಲ್ಲಿ ಅಂದರೆ ಮೇಲ್ಮನೆಯಲ್ಲಾಗಲಿ ಅಥವಾ ಕೆಳಮನೆಯಲ್ಲಾಗಲಿ ನೂರಾರು ಪಾಲು ಒಳ್ಳೆಯ ರೀತಿಯಲ್ಲಿ ನಡೆದುಕೊಂಡು ಬರುತ್ತಿದ್ದೇವೆ.

೫–೦೦ ಪಿ.ಎಂ.

ಆದರೆ ಇಂಥಾ ಕೆಲಸಗಳು ಯಾವುದೇ ವಿಧಾನಸಭೆಯಲ್ಲಿ ನಡೆಯಕೂಡದು. ಮಾನ್ಯ ಸದಸ್ಯೆಣಿಯರಾದ ಶ್ರೀಮತಿ ಮುಖ್ತರ್ ಉನ್ನೀಸಾ ಅವರು ಒಂದು ಮಾತನ್ನು ಹೇಳಿದರು. ಮಂತ್ರಿ ಮಂಡಲದಲ್ಲಿ ಮಹಿಳೆಯರಿಗೆ ಕ್ಯಾಬಿನೆಟ್ ದರ್ಜೆಯ ಮಂತ್ರಿಗಳನ್ನಾಗಿ ಮಾಡದೆ ಬರೀ ರಾಜ್ಯ ಮಂತ್ರಿಗಳನ್ನಾಗಿ ಮಾಡಿದ್ದೀರಿ ಎಂದು ಹೇಳಿದರು. ಮಹಿಳೆಯರಿಗೆ ಕ್ಯಾಬಿನೆಟ್ ದರ್ಜೆಯ ಮಂತ್ರಿ ಪದವಿ ಕೊಡು ವುದಕ್ಕೆ ನಾನು ಆಲೋಚನೆ ಮಾಡುತ್ತೇನೆ. ನಿಮ್ಮ ಕಡೆಯೇ ಇದ್ದ ಒಬ್ಬ ಮಹಿಳಾ ನಾಯಕರನ್ನು ತೆಗೆಯಲಿಕ್ಕೆ ನೀವು ಹೋಗುತ್ತಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದರಲ್ಲಿ ನಿಮ್ಮ ಕುತಂತ್ರ ಇದೆಯೆಂದು ಕಾಣುತ್ತದೆ. ನೀವೇ ಅವರನ್ನು ತೆಗೆಯುವ ಬಗ್ಗೆ ಪ್ರಯತ್ನ ಮಾಡುತ್ತಿದ್ದೀರೆಂದು ನೀವು ಹೇಳಿರುವ ವಿಷಯದಲ್ಲೇ ಗೊತ್ತಾಗುತ್ತದೆ.

ಶ್ರೀ ಎಂ. ವೀರಪ್ಪಮೊಯಿಲಿ,—ಈ ಪಕ್ಷಾಂತರ ಎಲ್ಲಿಂದ ಪ್ರಾರಂಭವಾಗಿದೆ ಎಂದು ನಿಮ್ಮನ್ನೇ ಕೇಳಬೇಕಾಗಿದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅವರು ಕಾಗದ ಬರೆದದ್ದಕ್ಕೆ, ನಾನು ಸೀಟನ್ನು ಕೊಟ್ಟಿದ್ದೇನೆಂದು ತಾವೇ ಹೇಳಿದ್ದೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದರ ಬಗ್ಗೆ In spite of her recommendation I have examined. That is what I said. I take the entire responsibility on myself. ನಾನು ಯಾರ ಮೇಲೂ ಜವಾಬ್ದಾರಿ ಹಾಕುವುದಿಲ್ಲ. ನಾಳೆ ಈ ವಿಷಯ ಸದನದಲ್ಲಿ ಬಂದಾಗ ಹೇಳುತ್ತೇನೆ. I take the entire responsibility. ಮಹಿಳೆಯರ ಬಗ್ಗೆ ನಾನು ಏನು ಹೇಳುತ್ತಿದ್ದೇನೆ ಎಂದರೆ, ನಮ್ಮ ರಾಜ್ಯದಲ್ಲಿ ಮೊದಲನೆಯದಾಗಿ ನೂರಕ್ಕೆ ಇಪ್ಪತ್ತರಷ್ಟು ಸ್ಥಾನಗಳನ್ನು ಸ್ಥಾನಿಕ ಸಂಸ್ಥೆಗಳಲ್ಲಿ ಮೀಸಲಾಗಿಡುವಂತೆ ಮಾಡಿದ್ದೇವೆ ಇದು ಯಾವ ರಾಜ್ಯದಲ್ಲೂ ಇಲ್ಲ. 20% reservation for Women, I would like even the amendment of the Constitution and Election Law. ಪಾರ್ಲಿಮೆಂಟಿನಲ್ಲಾಗಲೀ, ಶಾಸನ ಸಭೆಗಳಲ್ಲಾಗಲೀ ಮಹಿಳೆಯರಿಗೆ ೨೦ ಪರ್‌ಸೆಂಟ್ ರಿಸರ್ವೇಷನ್ ಕೊಡುವುದಕ್ಕೆ ನನ್ನ ಒಪ್ಪಿಗೆ ಇದೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ, ಈ ರೀತಿ ಸೌಲಭ್ಯ ಬೇರೆ ರಾಜ್ಯಗಳಲ್ಲಿ ಇಲ್ಲ. ನಮ್ಮ ರಾಜ್ಯದಲ್ಲಿ ವಿಧವಾ ಮಾಸಾಶನ ಕೊಡುತ್ತಿದ್ದೇವೆ. ಗರ್ಭಿಣಿ ಯರಿಗೆ ಗರ್ಭಿಣಿ ಭತ್ಯೆಯನ್ನು ಕೊಡುವ ನಿಯಮ ಇದೆ. ಇದು ಯಾವ ರಾಜ್ಯದಲ್ಲೂ ಇಲ್ಲ. ಇದೇ ರೀತಿ ಮಹಿಳೆಯರಿಗೆ ಸಾಧ್ಯವಾದಷ್ಟು ಮಟ್ಟಿಗೆ ನಮ್ಮ ರಾಜ್ಯ ಸರ್ಕಾರ ಸಹಾಯ ಮಾಡುತ್ತಿದೆ.

ಶ್ರೀ ಎಸ್. ಬಂಗಾರಪ್ಪ.—ವಿಧವೆಯರಿಗೆ ಕೊಡುತ್ತಿರುವ ಮಾಸಾಶನವನ್ನು ನಿಮ್ಮ ಸರ್ಕಾರ ಸರಿಯಾಗಿ ಕೊಡುತ್ತಿದೆಯೋ? ವಿಧವೆಯರಿಗೆ ೬ ತಿಂಗಳಿನಿಂದ ನೀವು ಮಾಸಾಶನವನ್ನು ಕೊಟ್ಟಿಲ್ಲ. ಇದರ ಜೊತೆಗೆ ಗರ್ಭಿಣಿಯರಿಗೆ ಸರಿಯಾದ ಸಮಯಕ್ಕೆ ಹೆರಿಗೆ ಭತ್ಯೆಯನ್ನು ಕೊಡುತ್ತಿಲ್ಲ ನೀವು ಹಣ ಕೊಟ್ಟಿಲ್ಲವೆಂದು ಡೆಲಿವರಿಯನ್ನು ಮುಂದಕ್ಕೆ ಹಾಕುವುದಕ್ಕೆ ಆಗುವುದಿಲ್ಲ. ೬ ತಿಂಗಳಿನಿಂದ ನೀವು ಯಾವುದೇ ಭತ್ಯೆಯನ್ನು ಕೊಟ್ಟಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಯೋಜನೆಗಳಿಗೆ ಮೊದಲನೇ ವರ್ಷ ೮ ಕೋಟಿ ರೂಪಾಯಿಗಳ ಖರ್ಚು ಇದ್ದದ್ದು ಈಗ ೩೦ ಕೋಟಿ ರೂಪಾಯಿಗಳ ಮೇಲೆ ಹೋಗಿದೆ. ವಿಧವೆ ಯರಿಗೆ ಮಾಸಾಶನ ಕೊಡುವುದು ಎಲ್ಲಿಯಾದರೂ ನಿಧಾನವಾಗಿದ್ದರೆ, ಅದನ್ನು ಕೊಡೋಣ.

ಶ್ರೀ ಎಸ್. ಬಂಗಾರಪ್ಪ.—ಗರ್ಭಿಣಿಯರಿಗೆ ಕೊಡುವ ಭತ್ಯೆಯ ಬಗ್ಗೆ ಏನು ಮಾಡುತ್ತೀರಿ?

ಶ್ರೀ ಎಂ. ರಘುಪತಿ.—ಮಾನ್ಯ ಬಂಗಾರಪ್ಪನವರು, ವಿಧವೆಯರಿಗೆ ಗರ್ಭಿಣಿ ಭತ್ಯೆಯನ್ನು ಏಕೆ ಕೊಡುತ್ತಿಲ್ಲ ಎಂದು ಕೇಳುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ನಾನು ಕೇಳಿದ್ದು, ಗರ್ಭಿಣಿಯರಿಗೆ ಹೆರಿಗೆ ಭತ್ಯೆ ಕೊಡುವ ಬಗ್ಗೆ. ರಘುಪತಿಯವರು ಇಂಥಾ ವಿಷಯಗಳನ್ನು ಮಾತನಾಡುವುದು ಸರಿಯಲ್ಲ.

SMT. MUKTAARUNNISSA BEGUM.—What action the government has taken regarding dowry victims? What protection you have given? Everyday we used to see about dowry deaths. What you have done?

ಶ್ರೀ ಎಸ್. ಆರ್. ಬೊಮ್ಮಾಯಿ.—ನಮ್ಮ ರಾಜ್ಯದಲ್ಲಿ ಸರಕಾರಿ ನೌಕರಿಗಳಲ್ಲಿ ಶೇಕಡಾ ೩೦ರಷ್ಟು ಮೀಸಲಾತಿಯನ್ನು ಮಹಿಳೆಯರಿಗಾಗಿ ಇಟ್ಟಿದ್ದೇವೆ. ಇಂಥ ಒಂದು ಕ್ರಮವನ್ನು ತಮಿಳುನಾಡು ಒಂದನ್ನು ಬಿಟ್ಟರೆ ಬೇರೆ ಯಾವ ರಾಜ್ಯದಲ್ಲಿಯೂ ತೆಗೆದುಕೊಂಡಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಮ್ಮ ಈ ಕ್ರಮವನ್ನು ನಾವು ಸ್ವಾಗತ ಮಾಡಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವುಗಳು ಸ್ವಾಗತ ಮಾಡಿದ್ದಕ್ಕಾಗಿ ತಮಗೆ ಅಭಿನಂದನೆಗಳು. ಇವೊತ್ತು ನಾವು ರಾಷ್ಟ್ರದಲ್ಲಿ ಮಹಿಳೆಯರಿಗೆ ಆರ್ಥಿಕವಾಗಿ ಸ್ವಯಂಪೂರ್ಣತೆ ಹೊಂದಲು ಪ್ರಯತ್ನ ಮಾಡಬೇಕಾಗಿದೆ. ಅಂಥ ಒಂದು ಬಲವನ್ನು ಹೊಂದಿರತಕ್ಕಂಥ ಒಂದು ಸಮಾಜವನ್ನು ನಾವು ಕಟ್ಟಬೇಕಾಗುತ್ತದೆ. ಸರ್ಕಾರಿ ನೌಕರಿಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಮಾಡಿರುವುದು ಬೇರೆ ರಾಜ್ಯಗಳಲ್ಲಿ ಇಲ್ಲ.

ಶ್ರೀ ಆರ್. ಎನ್. ನಾಯಕ್.—ರಾಜ್ಯದಲ್ಲಿ ಗಂಡು ಮಕ್ಕಳು ನೌಕರಿ ಇಲ್ಲದೇ ಅಲೆದಾಡುತ್ತಾ ಇದ್ದಾರೆ. ಮೊದಲು ಅವರಿಗೆ ನೌಕರಿಯನ್ನು ಕೊಡಿ. ಅದನ್ನು ಬಿಟ್ಟು ಮಹಿಳೆಯರಿಗೆ ೩೦-೪೦ ಪರ್‌ಸೆಂಟ್ ಮೀಸಲಾತಿ ಕೊಡುವುದರಿಂದ ಏನು ಪ್ರಯೋಜನ ? ಗಂಡುಮಕ್ಕಳು ಉದ್ಯೋಗಸ್ಥರಾದರೆ ಮಹಿಳಾ ವರ್ಗವೂ ಸುಧಾರಿಸುತ್ತದೆ ...

ಶ್ರೀ ಎಸ್. ಆರ್. ಬೊಮ್ಮಾಯಿ.—ಒಟ್ಟಿನಲ್ಲಿ ಮಹಿಳೆಯರಿಗಾಗಿ ವಿಶೇಷವಾದಂಥ ಕಾರ್ಯಕ್ರಮಗಳನ್ನು ನಮ್ಮ ಸರಕಾರ ಮಾಡಿ ಕೊಟ್ಟಿದೆ ಎಂದು ನಾನು ಹೇಳುತ್ತಾ ಇದ್ದೇನೆ. ಇನ್ನು ಡೌರಿ ವಿಚಾರದ ಬಗ್ಗೆ ಈಗಾಗಲೇ ಹೇಳಿದ್ದೇನೆ.

ಶ್ರೀ ಮತಿ ಮುಕ್ತರುನ್ನೀಸಾ ಬೇಗಂ.—ನಿಮ್ಮ ಸಿ. ಓ. ಡಿ. ವಿಚಾರಣೆಯಿಂದ ಮಹಿಳೆಯರಿಗೆ ಏನೂ ಪ್ರಯೋಜನವಾಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಸರಿಯಾಗಿ ಬಜೆಟ್‌ನ್ನು ಓದಿಲ್ಲ ಎಂದು ಕಾಣುತ್ತದೆ. Immediately it will be enquired into by COD. Any dowry death will be enquired by COD. ಬಜೆಟ್‌ನಲ್ಲಿ ಅದನ್ನು ಹೇಳಿದ್ದೇನೆ. ಆವತ್ತಿನಿಂದ ಅದು ಜಾರಿಗೆ ಬರುತ್ತದೆ.

SMT MUKTHARUNNISA.—Have you set up any court separately?

ಶ್ರೀ ಎಸ್. ಆರ್. ಬೊಮ್ಮಾಯಿ.—ಅಂಥ ಪ್ರಕರಣಗಳಿಗಾಗಿ ಸ್ಪೆಷಲ್ ಕೋರ್ಟ್ ಮಾಡುವ ಬಗ್ಗೆ ನಿರ್ಣಯ ತೆಗೆದುಕೊಂಡಿದ್ದೇವೆ. I have said it in the budget. Special Courts will be established, to Speedy decision of the dowry death cases. ನಿಮ್ಮ ಮನಸ್ಸಿನಲ್ಲಿ ಏನಾದರೂ ಸಂಶಯ ಇದ್ದರೆ ಅದನ್ನು ದಯವಿಟ್ಟು ಬಿಟ್ಟು ಬಿಡಿ. ಡೌರಿಡೆತ್ಸ್ ಹೆಚ್ಚಿಗೆ ಆಗಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಾರೆ. ಆದರೆ ಆ ಬಗ್ಗೆ ಇರುವ ಅಂಕಿಅಂಶಗಳನ್ನು ನೋಡಿದರೆ ಹೆಚ್ಚಿಗೆ ಆಗಿಲ್ಲ ಎಂದು ಕಂಡುಬರುತ್ತದೆ. ಬೇಕಾದರೆ ಆ ಬಗ್ಗೆ ಇರುವ ಅಂಕಿಅಂಶಗಳನ್ನು ಓದುತ್ತೇನೆ. ವರ್ಷದಿಂದ ವರ್ಷಕ್ಕೆ ಆ ಸಂಖ್ಯೆ ಕಡಿಮೆಯಾಗಿದೆ. ಮೊದಲಿನಿಂದಲೂ ಈ ತರಹದ ಪ್ರಕರಣಗಳು ಹೆಚ್ಚಾಗಿ ಬೆಳಕಿಗೆ ಬರುತ್ತಾ ಇರಲಿಲ್ಲ. ಈಗೀಗ ಮಹಿಳೆಯರಲ್ಲಿ ಪ್ರಜ್ಞೆ ಹೆಚ್ಚಾಗಿ ಮೂಡಿದ ಪರಿಣಾಮವಾಗಿ ಪ್ರಕರಣಗಳು ಹೊರಗೆ ಬರುತ್ತಾ ಇವೆ. ನಮ್ಮ ಸರಕಾರವು ಮಹಿಳೆಯ ಕಲ್ಯಾಣಕ್ಕಾಗಿ ಇಂಥ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ಎಂದು ಹೇಳಲು ಹೆಮ್ಮೆ ಪಡಬೇಕಾಗುತ್ತದೆ. ಅದೇ ರೀತಿಯಲ್ಲಿ ಎಲ್ಲರೂ ಇದನ್ನು ಮೆಚ್ಚಿಕೊಳ್ಳುತ್ತಾರೆ ಎಂದು ನಾನು ನಂಬಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇಂಥ ಯೋಜನೆಗಳನ್ನು ಪೇಪರ್‌ನಲ್ಲಿ ನೋಡಲು ಚೆನ್ನಾಗಿ ಇರುತ್ತದೆ.

ಶ್ರೀಮತಿ ಮುಕ್ತರುನ್ನೀಸಾ.—ಶಿಶುಕಲ್ಯಾಣದ ಬಗ್ಗೆ ಏನು ಕಾರ್ಯಕ್ರಮ ಇದೆ ಎಂದು ಹೇಳಿ. What action you have taken for the Welfare of the child ?

ಶ್ರೀ ಎಸ್. ಆರ್. ಬೊಮ್ಮಾಯಿ.—ಇನ್ನು ಅನೇಕ ಮಾನ್ಯ ಸದಸ್ಯರುಗಳು ಹರಿಜನ ಗಿರಿಜನರ ಕಲ್ಯಾಣದ ಬಗ್ಗೆ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ಎಂದು ಕೇಳಿದ್ದಾರೆ, ಅದು ಸಹಜವಾದ ಕೇಳಿಕೆಯಾಗಿದೆ ಎಂದು ನಾನು ಭಾವಿಸುತ್ತೇನೆ. ಯಾಕೆಂದರೆ, ಯಾವುದೇ ಸರಕಾರ ಅಧಿಕಾರದಲ್ಲಿದ್ದರೂ ಕೂಡ ಅದು ಹರಿಜನ–ಗಿರಿಜನರ ಬಗ್ಗೆ ವಿಶೇಷವಾದಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಅಂಥ ಕಲ್ಯಾಣಕಾರಿ ಕಾರ್ಯಕ್ರಮಗಳನ್ನು ಕೊಡತಕ್ಕಂಥ ಪ್ರಾಮಾಣಿಕವಾದಂಥ ಪ್ರಯತ್ನವನ್ನು ನಾವು ಮಾಡಿದ್ದೇವೆ ಎಂದು ಹೇಳಬಯಸುತ್ತೇನೆ. ಇನ್ನೊಂದು ಕಾರ್ಯಕ್ರಮವನ್ನು ಈ ದಿಶೆಯಲ್ಲಿ ನಾವು ಹಾಕಿಕೊಂಡಿದ್ದೇವೆ. ಅದೇನೆಂದರೆ, ಪರೀಕ್ಷೆಗಳಲ್ಲಿ ಪ್ರಥಮ ಕ್ರಮಾಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಸರಕಾರಿ ಸೇವೆಯಲ್ಲಿ ಉದ್ಯೋಗವನ್ನು ಕೊಡುವುದು. ಈ ಬಗ್ಗೆ ಹೈಕೋರ್ಟಿನಲ್ಲಿ ಇದ್ದ ವಿಚಾರ ಇನ್ನೂ ಇತ್ಯರ್ಥವಾಗಿಲ್ಲ, ಆದಷ್ಟು ಜಾಗ್ರತೆ ಇತ್ಯರ್ಥ ಮಾಡುವಂತೆ ನಾನು ಈಗಾಗಲೇ ಮನವಿ ಮಾಡಿಕೊಂಡಿದ್ದೇನೆ. ಮೂರು ತಿಂಗಳೊಳಗಾಗಿ ಒಂದು ನಿರ್ಣಯವನ್ನು ಕೊಡಿ ಎಂದು ಅವರನ್ನು ಕೇಳಿಕೊಂಡಿದ್ದೇನೆ. ಈ ನಿರ್ಣಯದ ವಿಚಾರಣೆಯನ್ನು ೨–೩ ವರ್ಷಗಳಿಂದ ಮುಂದುವರಿಸಿರುವುದರಿಂದಾಗಿ ಸ್ವಲ್ಪ ವಿಳಂಬವಾಗಿದೆ. ವಿಳಂಬ ಆದರೆ ಅದು ಡಿನೆಯಲ್ ಆಫ್ ಜಸ್ಟೀಸ್ ಆಗುತ್ತದೆ......

ಶ್ರೀ ಎಸ್. ಬಂಗಾರಪ್ಪ.—ಇದು ೧೯೮೩–೮೪ರ ಬಜೆಟ್‌ನಲ್ಲಿ ಹೇಳಿರತಕ್ಕಂಥ ವಿಚಾರವಾಗಿದೆ. ಯಾವಾಗ ಜನತಾ ಸರಕಾರವು ಅಸ್ತಿತ್ವಕ್ಕೆ ಬಂತು ಆಗ ಈ ವಿಚಾರವನ್ನು ಬಹುಶಃ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದೀರಿ. ಅದನ್ನು ಇತ್ಯರ್ಥ ಮಾಡುವಲ್ಲಿ ಇಷ್ಟು ವರ್ಷ ಏತಕ್ಕೆ ವಿಳಂಬವಾಯಿತು ? ಈ ಬಗ್ಗೆ ನಿಮ್ಮ ಪ್ರಾಮಾಣಿಕ ಯತ್ನಗಳು ಏನು ? ಶ್ರೀ ರಾಮ್ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ ಸ್ಟೇ ಆರ್ಡರನ್ನು ವೆಕೇಟ್ ಮಾಡಿಸಬೇಕೆಂದು ನಾವೆಲ್ಲ ? ಎಷ್ಟು ಒತ್ತಡ ತಂದರೂ ಕೂಡ ಏನೂ ಪ್ರಯೋಜನವಾದಂತೆ ಕಾಣಲಿಲ್ಲ. ಈ ಅವಧಿಯಲ್ಲಿ ಎಷ್ಟು ಜನ ಅಡ್ವೊಕೇಟ್ ಜನರಲ್‌ಗಳು ಎಷ್ಟು ಸಾರಿ ಚೇಂಜಾದರು, ಅಷ್ಟೊಂದು ಜನ ಇದ್ದರೂ ಒಂದು ಸ್ಟೇ ಆರ್ಡರನ್ನು ವೆಕೇಟ್ ಮಾಡಿಸುವುದಕ್ಕೆ ಆಗಲಿಲ್ಲ. ಆದ್ದರಿಂದ ಇದಕ್ಕೆ ಸಂಬಂಧಿಸಿದ ಎಲ್ಲ ಫೈಲುಗಳನ್ನೂ ಸದನದ ಮುಂದಿಡಿ. Will you kindly place all the connected records on the floor of this august House ? ಏಕೆ ಈ ಭಾಷಣ ಮಾಡುತ್ತೀರಿ, ಸುಮ್ಮನೆ ? ಇದರಲ್ಲಿ ನಿಮ್ಮ ಪ್ರಾಮಾಣಿಕ ಪ್ರಯತ್ನ ಇಲ್ಲವೆಂದು ನಾನು ಹೇಳಲೇಬೇಕಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದನ್ನು ನಾವು ಅನೌನ್ಸ್ ಮಾಡುವಾಗ ಪೂರ್ಣ ಮನಸ್ಸಿನಿಂದಲೇ ಮಾಡಿದ್ದೇವೆ, ಎರಡನೇ ಥಾಟಂತೂ ನಮಗೆ ಇಲ್ಲವೇ ಇಲ್ಲ. ಕೋರ್ಟ್‌ನಲ್ಲಿ ಡಿಲೇ ಆಗಿದೆ, Delay in giving decision is denial of justice. I agree with you ಈ ಅವಧಿಯಲ್ಲಿ ಎಷ್ಟು ಜನರಿಗೆ ಈ ಸದವಕಾಶ ಸಿಗುತ್ತಿತ್ತೋ ಅವರೆಲ್ಲಾ ಈ ಸೌಲಭ್ಯದಿಂದ ವಂಚಿತರಾಗಿದ್ದಾರೆ ಎಂಬುದನ್ನು ನಾನು ಒಪ್ಪುತ್ತೇನೆ. Through this House I made special appeal to the court and I will also narrate what steps the Advocate General and the Government Pleader have taken to dispose off the case. We are trying our best to get the cases disposed off as early as early as possible. I still appeal in such cases they should be taken as a special case and decision must be given by taking not more than six months. A Special Bench may be constituted where social justice has to be done. I agree with the sentiments expressed by the hon. members. I will do my best to get a final decision in the matter.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ಮಾನ್ಯ ಬಂಗಾರಪ್ಪನವರು ಹೇಳಿದ ಪ್ರಕಾರ ತಾವು ಇಲ್ಲಿ ಅಶೂರೆನ್ಸ್ ಕೊಟ್ಟಿದ್ದೀರಿ. ನಮಗೆ ಬೇಕಾದ್ದಿಷ್ಟೆ' ನಿಮ್ಮ ಸರ್ಕಾರ ಕಾನೂನು ಇಲಾಖೆಗೆ

ಒತ್ತಾಯ ಮಾಡಿ ಸ್ಟೇ ವೆಕೇಟ್ ಮಾಡಿಸಲು ಎಷ್ಟು ಒತ್ತಾಯ ತಂದಿದೆ. ಅದು ಫೈನಲ್ ಲೆವೆಲ್‌ಗೆ ಬಂದಿದೆಯೇ ? ನಿಮ್ಮ ಲಾ ಸೆಕ್ರೆಟರಿಯವರು ಅಡ್ವೋಕೇಟ್ ಜನರಲ್‌ರವರಿಗೆ ಎಷ್ಟು ಪತ್ರ ಬರೆದಿದ್ದಾರೆ ಎಂಬ ವಿವರವನ್ನೆಲ್ಲ ಇಲ್ಲಿತಿಳಿಸಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆಯಿತು, ಈ ಮನೆಗೆ ಎಲ್ಲವನ್ನೂ ತಿಳಿಸುತ್ತೇನೆ. What are the efforts of the Government this House is entitled to know

SRI S. R. BOMMAI.—I will place it.

ಶ್ರೀ ಎಸ್. ಬಂಗಾರಪ್ಪ.—ಬರೀ ಲೆಟರ್ ಬರೆದಿರುವುದಲ್ಲ. in pursuance of thos. letters written by the government, the Advocate General ಹೈಕೋರ್ಟ್‌ನಲ್ಲಿ ಸ್ಟೆ ವೆಕೇಟ್ ಮಾಡಿಸುವುದಕ್ಕೆ ಆನೆಸ್ಟಾಗಿ ಏನೆಲ್ಲಾ ಮಾಡಿದ್ದಾರೆ ಅದೆಲ್ಲಾ ಇಲ್ಲ ಬರಬೇಕಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕೋರ್ಟಿನಲ್ಲಿ ಸ್ಟೇ ವೆಕೇಟ್ ಮಾಡಿಸುವುದಕ್ಕೆ ಎಕ್ಸಪಿಡೈಟ್ ಮಾಡಿ ಎಂದು ಸರ್ಕಾರ ಪತ್ರ ವ್ಯವಹಾರ ಮಾಡಿರುವುದನ್ನೆಲ್ಲ ಇಲ್ಲಿ ಇಡುತ್ತೇನೆ, ತಾವು ನೋಡ ಬಹುದು. ಈ ವರ್ಷ ನನ್ನ ಬಜೆಟ್‌ನಲ್ಲಿ ಒಂದು ವಿಷಯವನ್ನು ಹೇಳಿದ್ದೇನೆ. ಅದು ಯಾವುದೇ ಸರ್ಕಾರವಿರಲಿ, ರಿಸರ್ವೇಷನ್ ವಿಚಾರದಲ್ಲಿ ಇರುವ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿ ಮಾಡಬೇಕು. ಈಗ ಏನಾಗಿದೆ ಎಂದರೆ, ನಾವು ಗವರ್ನಮೆಂಟ್‌ನವರು ಆರ್ಡರ್ ಮಾಡುತ್ತೇವೆ, ಕೆ.ಪಿ.ಎಸ್.ಸಿ. ಮೂಲಕ ಆಗುವ ಸರ್ಕಾರಿ ಅಪಾಯಿಂಟ್‌ಮೆಂಟ್ ಏನಿವೆ ಅಲ್ಲಿ ಈ ನಿಯಮಗಳನ್ನು ಫಾಲೋ ಮಾಡ ಲಾಗುತ್ತಿದೆ. ಆದರೆ ಅರೆ ಸರ್ಕಾರಿ ಸರ್ಕಾರಿ ಸಂಸ್ಥೆಗಳಲ್ಲಿ ಕೈಗಾರಿಕಾ ಸಂಸ್ಥೆಗಳಲ್ಲಿ ಅದು ಜಾರಿಗೆ ಬಂದಿಲ್ಲ. ನಾನು ಒಪ್ಪಿಕೊಳ್ಳುತ್ತೇನೆ, ಕಳೆದ ೪೦ ವರ್ಷಗಳಲ್ಲೂ ಏನಾಗಿದೆ ಎಂದು ನೋಡಿದರೆ, ರಿಸರ್ವೇಷನ್ ನಿಯಮಗಳು ಯೂನಿವರ್ಸಿಟಿಯಲ್ಲಿ ಜಾರಿಗೆ ಬರಲಿಲ್ಲ, ಕಾಲೇಜುಗಳಲ್ಲಿ ಜಾರಿಗೆ ಬರಲಿಲ್ಲ, ಖಾಸಗಿ ಸಂಸ್ಥೆಗಳಲ್ಲಿ ಬರಲಿಲ್ಲ. ಇದಕ್ಕೆ ದಾರಿ ಏನು ಎಂದು ನಮ್ಮ ಸರ್ಕಾರ ಆಲೋಚನೆ ಮಾಡಿದೆ. ಕಾನೂನು ಪ್ರಕಾರ ಇದನ್ನು ಕಡ್ಡಾಯ ಮಾಡುವುದು ಮತ್ತು ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು ಎಂದು ಸರ್ಕಾರ ಇದರ ಬಗ್ಗೆ ಕಾನೂನು ತರಲು ಬಲವಾದ ಇಚ್ಛೆಯಿಂದ ನಿರ್ಣಯ ತೆಗೆದುಕೊಂಡಿದೆ. ಒಂದೆರಡು ತಿಂಗಳಲ್ಲಿ ಕಾನೂನನ್ನು ಜಾರಿಗೆ ತರುತ್ತೇವೆ. Within two months we will pass the law, if necessary by an Ordinance, or in the next Session. ಇದರ ಬಗ್ಗೆ ಆಗಲೇ ಕ್ಯಾಬಿನೆಟ್‌ನಲ್ಲಿ ಕನ್‌ಸಿಡರ್ ಮಾಡಿದ್ದೇವೆ. ಇದು ದೊಡ್ಡ ಸಮಸ್ಯೆ. ನನಗೆ ಸ್ವಂತ ಅನುಭವವಿದೆ. As Industries Minister I have reviewed it. ಈ ಬಗ್ಗೆ ಯೂನಿವರ್ಸಿಟಿಯಲ್ಲಿ ಕೇಳಿದರೆ, ಇಲ್ಲಾ ಸಾರ್ ಕ್ವಾಲಿಫೈಡ್ ಆಪ್ಲಿಕೆಂಟ್ಸ್ ಇಲ್ಲ ಎಂದು ಹೇಳುತ್ತಾರೆ. ಕೈಗಾರಿಕಾ ಸಂಸ್ಥೆಗಳಲ್ಲಿ ಸಹ ಅದೇ ಉತ್ತರ ಬರುತ್ತದೆ ಆದರೆ ನಮಗೆಲ್ಲ ಗೊತ್ತಿದೆ, ಪಿಹೆಚ್‌ಡಿ, ಎಂ.ಎ. ಮುಂತಾದವುಗಳಲ್ಲಿ ಫಸ್ಟ್ ಕ್ಲಾಸ್ ಸ್ಟೂಡೆಂಟ್ಸ್ ಪರಿಶಿಷ್ಟಜಾತಿ ಪಂಗಡಗಳಲ್ಲಿದ್ದಾರೆ. ಆದರೆ ಅವರಿಗೆ ಕೆಲಸ ಸಿಗುತ್ತಿಲ್ಲ. ಆದ್ದರಿಂದ ಇವತ್ತು ಕಾನೂನು ಮಾಡಿ ಇದರಲ್ಲಿ ಯಾರು ವಿಫಲರಾಗು ತ್ತಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಜೊತೆಗೆ ಇನ್ನೊಂದು ವಿಚಾರವನ್ನು ಹೇಳಿ ದ್ದೇನೆ. ಜೊತೆಗೆ ಯಾರು ರಿಸರ್ವೇಷನ್‌ನನ್ನು ಸೆಂಟ್ ಪರ್ಸೆಂಟ್ ಪಾಲಿಸುತ್ತಾರೋ ಅವರಿಗೆ ಬೋನಸ್ ಅವಾರ್ಡ್‌ನ್ನು ಇನ್‌ಸೆಂಟೀವಾಗಿ ಕೊಡುತ್ತೇವೆ. ರಿಸರ್ವೇಷನ್ ಅನ್ನು ಪಾಲಿಸತಕ್ಕಂತಹ ಸಂಸ್ಥೆಗಳಿಗೆ ಅವಾರ್ಡ್ ಕೊಡುತ್ತೇವೆಂದು ಹೇಳಿದ್ದೇವೆ. ಅದನ್ನು ಕಾನೂನಿನಲ್ಲಿ ಅಳವಡಿಸುತ್ತೇವೆ. ಈ ವಿಚಾರ ದಲ್ಲಿ ವೆಸ್ಟ್ ಬೆಂಗಾಲ್ ಬಿಟ್ಟರೆ ಬೇರೆ ಯಾವುದೇ ಸರಕಾರ ಮಾಡಿಲ್ಲ. ದಲಿತರಿಗಾಗಿ ಅನುಕೂಲ ಮಾಡಿ ಕೊಡುವ ಸಲುವಾಗಿ ಕಾನೂನನ್ನು ಮಾಡತಕ್ಕಂತಹ ನಿರ್ಣಯವನ್ನು ಕರ್ನಾಟಕರಾಜ್ಯ ಜನತಾ ದಳದ ಸರ್ಕಾರ ಕೈಗೆತ್ತಿಕೊಂಡಿದೆ ಎಂದು ಹೆಮ್ಮೆಯಿಂದ ಹೇಳುತ್ತಿದ್ದೇನೆ. ಒಬ್ಬ ಮುಖ್ಯಮಂತ್ರಿಯವರು ಈ ಸದನದಲ್ಲಿ ನಡೆದಂತಹ ಬಡ್ಜೆಟ್ ಮೇಲಿನ ಚರ್ಚೆಗೆ ಉತ್ತರ ಹೇಳುವಾಗ ಈ ರೀತಿ ಹೇಳಿದಾಗ......

ಶ್ರೀ ಎಂ. ವೀರಪ್ಪ ಮೊಯಿಲಿ.—೧೯೮೩–೮೪ರಲ್ಲಿ ಕೊಟ್ಟಂತಹ ಆಶ್ವಾಸನೆಯನ್ನು ಈಡೇರಿಸಿಲ್ಲ.

SRI S, R. BOMMAI.—I am sorry Mr. Moily. I am going to bring a law. Please welcome it. If you have got any sympathy for Scheduled Castes, please welcome it.

SRI M. VEERAPPA MOILY.—We will welcome it. But the question is we have lot of suspicion about *bonafidvs*......

(Interruptions)

ಶ್ರೀ ಎಸ್. ಆರ್. ಬೊಮ್ಮಾಯಿ.—ಒಳ್ಳೆಯ ಕೆಲಸವನ್ನು ಮಾಡಿದಾಗ ಅದನ್ನು ಸ್ವಾಗತ ಮಾಡ ತಕ್ಕಂತಹ ಸೌಜನ್ಯ ತೋರಿಸಿ, ಸರಿಯಾಗಿ ಮಾಡಿ ಎಂದು ಎಚ್ಚರಿಕೆ ಕೊಡಿ.

SRI M. VEERAPPA MOILY.—You have not said this in your budget speech or in Governor's Address. ಲೆಜಿಸ್ಲೇಷನ್ ತರುತ್ತೇವೆಂದು ಹೇಳಿದ್ದೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಹೇಳಿದ್ದೇನೆ, ತೋರಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಿಂದೆ ಈ ಅಧಿವೇಶನದಲ್ಲಿ ಅಗ್ರಿಕಲ್ಚರ್ ಯೂನಿವರ್ಸಿಟಿ ಬಗ್ಗೆ ಅಮೆಂಡ್‌ಮೆಂಟ್ ತರುತ್ತೇವೆಂದು ಹೇಳಿದ್ದರು. ಇನ್ನೂ ೩-೪ ಅಮೆಂಡ್‌ಮೆಂಟ್‌ಗಳನ್ನು ತರುತ್ತೇವೆಂದು ಹೇಳಿ, ಅದನ್ನು ಕೈಬಿಟ್ಟರು.

SRI S. R. BOMMAI.—The Bili is ready and it has been approved by the Cabinet. ಇದಕ್ಕಿಂತ ಇನ್ನೂ ಏನು ಹೇಳಬೇಕು. ಎರಡು ತಿಂಗಳಲ್ಲಿ ತರುತ್ತೇನೆ. ಈ ವಿಚಾರ ರಾಷ್ಟ್ರದ ಯಾವುದೇ ರಾಜ್ಯದಲ್ಲಿ ಇಲ್ಲ. ಕರ್ನಾಟಕ ಸರಕಾರ ಇದನ್ನು ಜಾರಿಗೆ ತರುತ್ತಿದೆ. ದಲಿತರ ಪರವಾಗಿ ನಮಗಿರತಕ್ಕಂತಹ ಕಳಕಳಿಯನ್ನು ವ್ಯಕ್ತ ಮಾಡುತ್ತಿದ್ದೇನೆ. This is a historic decision, in my view, in the countty. All the constitutional proteections which have been given to SC/ST have been flouted. But I would like to say by bringing statute we can do justice. ಇದು ಹಿಸ್ಟಾರಿಕ ಡಿಸಿಷನ್ ಇದೆ. ಎರಡು ತಿಂಗಳಲ್ಲಿ ಕಾನೂನು ಮಾಡತಕ್ಕಂತಹ ಭರವಸೆ ಕೂಡ ಕೊಡುತ್ತೇನೆ.

ಶ್ರೀ ಕೆ, ಹೆಚ್. ಶ್ರೀನಿವಾಸ್.—ಕೋರ್ಟ್‌ನಲ್ಲಿ ಸ್ಟೇ ಆಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಸ್ಟೇ ಮಾಡಿಸುತ್ತಿದ್ದೀರಿ ಎಂದು ಹೇಳಬೇಕಾಗುತ್ತದೆ. ಉಚ್ಚ ಜಾತಿಯವರು ಸ್ಟೇ ಮಾಡಿಸುತ್ತಿದ್ದಾರೆಂದು ಹೇಳಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಮಗೆ ಬ್ಲಡ್ ಪ್ರೆಷರ್ ಜಾಸ್ತಿಯಾಗುತ್ತದೆ, ತಾವು ಏನು ಹೇಳುತ್ತೀರೋ ಹೇಳಿ, ಆದರೆ ಪರ್ಸನಲ್ ಅಲಿಗೇಷನ್ಸ್ ಬೇಡ.

ಶ್ರೀ ಎಸ್. ಆರ್, ಬೊಮ್ಮಾಯಿ.—ಶ್ರೀನಿವಾಸ್‌ರವರು ಬಹಳ ಪಂಡಿತರು ಅವರ ಬಗ್ಗೆ ನನಗೆ ಗೌರವವಿದೆ. ಮಾಡಿಸುತ್ತೇವೆಂದು ಹೇಳಿದಂತಹ ಮಾತು ಸರಕಾರಕ್ಕೆ ಸರಿಯಲ್ಲ. ಯಾವ ಸರಕಾರ ಮಾಡಿಸುತ್ತದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇಂತಹ ವಿಚಾರಗಳು ಬಂದಾಗ ನಿಮ್ಮ ಕಾನೂನು ಇಲಾಖೆ ಅಡ್ವೊಕೇಟ್ ಜನರಲ್‌ರವರು ಏನು ಮಾಡುತ್ತಾರೆ. ಮೂರು ಕಾಸಿನ ವಿಚಾರ ಬಂದರೆ ಸ್ಟೇ ಸಿಗುವುದಿಲ್ಲ, ಸರಕಾರದ ವಿರುದ್ಧವಾಗಿ ಕೇಸ್ ಹಾಕಿದರೆ ಮಾತ್ರ ಸ್ಟೇ ಲೀಲಾ ಜಾಲವಾಗಿ ಸಿಗುತ್ತದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಸರಕಾರದ ಇಲಾಖೆಯ ದೋಷವಿದ್ದರೆ ಹೇಳಿ ಆದರೆ ಸರ್ಕಾರ ಸ್ಟೇ ಮಾಡಿಸುತ್ತೇವೆಂದು ಹೇಳುವುದು ಸರಿಯಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನೀವು ಆಡಳಿತದ ಮಟ್ಟಿಗೆ ಏನೇನು ಸಾಧನೆ ಮಾಡಬೇಕೋ ಅದನ್ನು ಮಾಡುವುದು ಬಿಟ್ಟುಕೊಂಡು ಪ್ರತಿಯೊಂದಕ್ಕೂ ಕಾನೂನು ತರುತ್ತೇವೆಂದು ಹೇಳುತ್ತೀರಿ. I am not questioning your *bonafides* but you have to use your administration

ಶ್ರೀ ಎಸ್. ಆರ್. ಬೊಮ್ಮಾಯಿ.—ಅದನ್ನು ಹೇಗೆ ಉಪಯೋಗ ಮಾಡಬೇಕು ಎನ್ನುವುದು ನನಗೆ ಗೊತ್ತಿದೆ. ಯಾವುದೇ ಸರ್ಕಾರ ಇದ್ದಾಗ ಕಾನೂನು ಇಲಾಖೆಯಲ್ಲಾಗಲೀ, ಅಡ್ವೈಸರಿ ಬೋರ್ಡ್‌ನಲ್ಲಾಗಲೀ black sheeps ಇದ್ದೇ ಇರುತ್ತದೆ. ನಮ್ಮ ಸರ್ಕಾರದಲ್ಲೂ ಇದೆ, ಹಿಂದೆ ಇದು ಇರಲಿಲ್ಲ, ಮುಂದೆ ಇರುವುದಿಲ್ಲ ಎಂದೇನಲ್ಲ. There are black sheeps and there are people who want to halt the progressive measures.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇದನ್ನು ತಯಾರು ಮಾಡುವ ಹೊತ್ತಿನಲ್ಲಿ there will be a built-in self-defeating provision.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದನ್ನು ನಾವು ನೋಡಬೇಕು. ಇಲ್ಲಿ ಮನೆಯಲ್ಲಿ ಕಣ್ಣು ತೆರೆದು ನೋಡಬೇಕು. ಲಾ ಡಿಪಾರ್ಟ್‌ಮೆಂಟ್ ಟ್ರ್ಯಾಪ್ ಮಾಡಿರಬಹುದು, ಈ ಮನೆಯಲ್ಲಿ ಚರ್ಚೆ ಮಾಡುತ್ತೇವಲ್ಲಾ, ಇಲ್ಲಿ ಪಾಸು ಮಾಡುವಾಗ ನೋಡಬೇಕಲ್ಲ, ಅದು ನಮ್ಮ ಶಾಸಕರ ಕರ್ತವ್ಯ.

ಶ್ರೀ ಡಿ. ಎ. ಚಿನ್ನಪ್ಪ.—ಲ್ಯಾಂಡ್ ರೆವಿನ್ಯೂ ಅಮೆಂಡ್‌ಮೆಂಟ್ ಇನ್ನೂ ಆಗಲಿಲ್ಲವಲ್ಲ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಷೆಡೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಹಾಗೂ ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ಸರ್ಕಾರ ಇಟ್ಟಿರತಕ್ಕಂಥ ಒಂದು ಕಳಕಳಿಯ ಬಗ್ಗೆ ಈ ಮಾತನ್ನು ಕಾನೂನು ವಿಚಾರವಾಗಿ ಹೇಳಿದ್ದೇನೆ. ಇನ್ನೊಂದು ವಿಚಾರ ಏನೆಂದರೆ,

ಶ್ರೀ ಎಸ್. ಬಂಗಾರಪ್ಪ.—ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ಏನು ಹೇಳಿದ್ದೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಕಾನೂನಿನಲ್ಲಿ ಅದು ಇದೆ. ರಿಸರ್ವೇಷನ್ ಇಂಪ್ಲಿಮೆಂಟೇಷನ್ ಮಾಡತಕ್ಕಂಥದ್ದು ಇದೆ. This Act is applicable to SC/ST and Backward Classes.

ಶ್ರೀ ಎಂ. ರಾಮಪ್ಪ.—ಉದ್ಯೋಗದಲ್ಲಿರುವವರು ಡಿಸ್ಟ್ರಿಕ್ಟ್‌ನಲ್ಲಿ ಇಂತಿಂಥವರೇ ಇರಬೇಕು, ಇಂತಿಂಥ ಜಾತಿಯವರೇ ಇರಬೇಕು ಎಂದು ಏನಾದರೂ ಮಾಡುತ್ತೀರಾ ? ಒಂದೇ ಜಾತಿಯವರು ಅಲ್ಲಿ ಎಕ್ಸಿಕ್ಯೂಟೀವ್ ಇಂಜಿನಿಯರ್ ಇರುತ್ತಾರೆ, ತಹಶೀಲ್ದಾರ್, ಇನ್ಸ್‌ಪೆಕ್ಟರ್ಸ್ ಇರುತ್ತಾರೆ.

ಶ್ರೀ ಆರ್. ಎನ್. ನಾಯಕ್.—ಅವರು ಒಂದೇ ತಾಲ್ಲೂಕಿನಲ್ಲಿ ಒಂದೇ ಜಾತಿಯವರನ್ನು ಪೋಸ್ಟ್ ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಆ ರೀತಿ ಮಾಡಿದ್ದರೆ ಹೌದು ಎಂದು ಹೇಳಿ, ಇಲ್ಲದಿದ್ದರೆ ಇಲ್ಲ ಎಂದು ಹೇಳಿಬಿಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದಕ್ಕೆ ಕೊನೆಗೆ ಉತ್ತರವನ್ನು ಕೊಡುತ್ತೇನೆ, ಈಗ ತಾವು ದಯವಿಟ್ಟು ಕುಳಿತುಕೊಳ್ಳಿ. ಎಂಪ್ಲಾಯ್‌ಮೆಂಟ್ ಬಗ್ಗೆ ಅದರಲ್ಲಿಯೂ ಗ್ರಾಮಾಂತರ ಪ್ರದೇಶದಲ್ಲಿ ಉದ್ಯೋಗದ ಒಂದು ಯೋಜನೆಯನ್ನು ಈ ಮನೆಯ ಮುಂದೆ ಇಟ್ಟಿದ್ದೇನೆ. ಇನ್ನೊಂದು ಮಾತನ್ನು ಇಲ್ಲಿ ಒಪ್ಪಿಕೊಳ್ಳಬೇಕು. ಈ ಲ್ಯಾಂಡ್ ಆರ್ಮಿ ಏನು ಇದೆ, ಇದರ ಕನ್‌ಸೆಪ್ಟೇ ಬೇರೆ. ಇದು ಮೂಲಭೂತವಾಗಿ ಪ್ರಾರಂಭವಾದದ್ದು ಗ್ರಾಮಾಂತರ ಪ್ರದೇಶದ ಯುವಕರನ್ನು ತರಬೇತಿ ಮಾಡತಕ್ಕಂಥದ್ದು, ಅವರಿಗೆ ಉದ್ಯೋಗವನ್ನು ಕೊಡತಕ್ಕಂಥದ್ದು, ಅವರು ತಮ್ಮ ಕಾಲಮೇಲೆ ತಾವು ನಿಲ್ಲತಕ್ಕಂಥ ಒಂದು ಶಿಕ್ಷಣವನ್ನು ಕೊಡತಕ್ಕಂಥದ್ದು. ಆದರೆ ಕಳೆದ ೧೫–೧೬ ವರ್ಷಗಳಲ್ಲಿ ಈ ಗುರಿಯನ್ನು ಸರಿಯಾಗಿ ಸಾಧನೆ ಮಾಡಲಿಲ್ಲ ಎಂದು ನಾನು ಒಪ್ಪುತ್ತೇನೆ. ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟತಕ್ಕಂಥ ವಿಚಾರಕ್ಕೆ ಬಿಲ್ಡಿಂಗ್ ಕಟ್ಟತಕ್ಕಂಥ ವಿಚಾರಕ್ಕೆ ಕೈಹಾಕಿದ್ದೀರಿ ಎಂದು ಹೇಳಿದರೆ ಅದನ್ನು ನಾನು ಒಪ್ಪುವುದಿಲ್ಲ ಇದು ಸರಿಯಲ್ಲ. Land Army is meant to train and employ rural youth or even urban youths. ಈ ಗುರಿಯ ಸಾಧನೆಯ ದೃಷ್ಟಿಯಿಂದ ಹೊಸ ಯೋಜನೆಯನ್ನು ಮಾಡಿದ್ದೇವೆ. Trisom, Land Army and even Construction Corporation where some projects are taken and government gives employment also. ಅಲ್ಲಿ ಶಿಕ್ಷಣ ಪಡೆದಂಥ ಯುವಕರು ಇರಬಹುದು, ಶಿಕ್ಷಣ ಪಡೆಯದಂಥ ಯುವಕರು ಇರಬಹುದು, ಸ್ವಲ್ಪ ಶಿಕ್ಷಣ ಪಡೆದಂಥವರು ಇರಬಹುದು, ಅವರಿಗೆ ಕೆಲಸ ಮಾಡತಕ್ಕಂಥದ್ದಕ್ಕೆ ಮತ್ತು ಅದೇ ಕಾಲಕ್ಕೆ ತರಬೇತಿಯನ್ನು ಕೊಡತಕ್ಕಂಥದ್ದು. ಈ ಯೋಜನೆಯನ್ನು ನಾನು ಕ್ರೋಢೀಕರಿಸಿದ್ದೇನೆ. ಪ್ರಾರಂಭದಲ್ಲಿ ಈ ವರ್ಷ

ಇಪ್ಪತ್ತು ಸಾವಿರ ಯುವಕರಿಗೆ ಉದ್ಯೋಗ ಕಲಿಕೆ ಮತ್ತು ಗಳಿಕೆ, ಕೆಲಸ ಮಾಡತಕ್ಕಂಥದ್ದು ಮತ್ತು ಕಲಿಯತಕ್ಕಂಥದ್ದು, ಅವೆರಡಕ್ಕೂ ಅವಕಾಶ ಮಾಡಿಕೊಡುತ್ತಿದ್ದೇವೆ. ವಿವರವಾದ ಯೋಜನೆಯನ್ನು ಇವತ್ತು ಸಿದ್ಧಪಡಿಸಿದ್ದೇನೆ. ಇದೊಂದು ಹೊಸ ವಿಚಾರ, ಹೊಸ ಹೆಜ್ಜೆ. ಇದನ್ನು ಪ್ರಯೋಗ ಮಾಡತಕ್ಕಂಥದ್ದು ಬಹಳ ಅವಶ್ಯಕವಾದುದು. ಆದಕ್ಕಾಗಿ ಮಾನ್ಯ ಸದಸ್ಯರ ಸಹಕಾರವನ್ನು ಕೇಳುತ್ತಿದ್ದೇವೆ.

ಶ್ರೀ ಎಂ. ವರದೇಗೌಡ.—ಸ್ಟೈಫಂಡರಿ ಗ್ರಾಜುಯೇಟ್‌ಗಳು ರಿಟೈರ್ಡ್ ಆಗುವ ಸ್ಟೇಜ್‌ಗೆ ಬಂದು ಮುಷ್ಕರ ಹೂಡಿದ್ದಾರೆ. ಇಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ಕಲಿಕೆ ಮತ್ತು ಗಳಿಕೆಯ ಬಗ್ಗೆ ಹೇಳುತ್ತಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸಂಪೂರ್ಣವಾದ ಯೋಜನೆಯನ್ನು ಇವತ್ತು ಸಿದ್ಧಮಾಡಿ ಈ ಮನೆಯ ಮುಂದೆ ಇಡುತ್ತೇನೆ. ಇಂತಹ ಯೋಜನೆಗಳನ್ನು ಒಂದು ಲಕ್ಷದ ದೃಷ್ಟಿಯಿಂದ ಯೋಚನೆ ಮಾಡದೆ ಇಡೀ ರಾಜ್ಯದ ದೃಷ್ಟಿಯಿಂದ ಯೋಚನೆ ಮಾಡಬೇಕಾಗುತ್ತದೆ. The entire scheme of employment, I want to place before the House when we meet next ಅದನ್ನು ತಯಾರು ಮಾಡುತ್ತಿದ್ದೇವೆ,

ಶ್ರೀ ಎಸ್. ಬಂಗಾರಪ್ಪ.—ತಾವು ಎಂಪ್ಲಾಯ್‌ಮೆಂಟ್ ಬಗ್ಗೆ ಹೇಳುವಾಗ ಈ ಸದನದ ಅಭಿಪ್ರಾಯವನ್ನು ತೆಗೆದುಕೊಳ್ಳುತ್ತೇವೆಂದೂ ಮಾಡುತ್ತೇವೆಂದೂ ಹೇಳಿದ್ದೀರಿ. ಇದು ಈಗಾಗಲೇ ಈ ಸದನದಲ್ಲಿ ಹೇಳಿರತಕ್ಕ ವಿಚಾರ. ಎಲೆಕ್ಷನ್ ಚುನಾವಣಾ ಕಾಲದಲ್ಲಿ ತಾವು ಘೋಷಣೆ ಮಾಡಿದ್ದೀರಿ. ಅದರ ಆಧಾರದ ಮೇಲೆ ಮತ ಪಡೆದು ಬಂದಿದ್ದೀರಿ. ಮನೆಗೆ ಒಂದೊಂದು ಉದ್ಯೋಗ ಕೊಡುತ್ತೇವೆ ಎಂದು ಸದನದಲ್ಲಿ ಹೇಳಿದ್ದೀರಿ. ನೀವು ರಾಜ್ಯಾದ್ಯಂತ ಪ್ರಚಾರ ಮಾಡಿದ್ದೀರಿ. Those who are literate and illeterate ಇಬ್ಬರಿಗೂ ಇದು ಅಪ್ಲೈ ಆಗತಕ್ಕ ವಿಚಾರ ಮತ್ತು ಎಲ್ಲೆಲ್ಲಿ ಬರಗಾಲ ಬೀಳುತ್ತದೆ ಅಲ್ಲಿ, ಬರಗಾಲ ಪ್ರದೇಶದಲ್ಲಿ ಮಾತ್ರವಲ್ಲದೆ ಎಲ್ಲಾ ಪ್ರದೇಶಗಳಲ್ಲಿ ಬರತಕ್ಕ ವಿಚಾರ. ನಾನು ಇವೊತ್ತು ನೇರವಾದ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ನಿಮ್ಮ ಘೋಷಣೆ ಪ್ರಕಾರ, ಈ ಸದನದಲ್ಲಿ ಮಾಡಿದ ಹೇಳಿಕೆ ಪ್ರಕಾರ, ಇವೊತ್ತು ತಾವು ಮನೆಗೆ ಒಂದೊಂದು ಉದ್ಯೋಗವನ್ನು ಕೊಡತಕ್ಕ ವಿಚಾರದಲ್ಲಿ ಯಾವ ಯಾವ ಪ್ರಯತ್ನ ಮಾಡಿದ್ದೀರಿ, ಎಷ್ಟು ಸಾಧನೆ ಮಾಡಿದ್ದೀರಿ ಎಂಬುದನ್ನು ತಿಳಿಸಬೇಕು. ಏಕೆಂದರೆ, ನೀವು ಕೇಳಿದ್ದು ಐದು ವರ್ಷ ಟೈಮ್. This is the fag end of your term, your term means this term ಹೊರಟು ಹೋಗುತ್ತದೆ. ಎಂಪ್ಲಾಯ್‌ಮೆಂಟ್ ಬಗ್ಗೆ ಇಂಪ್ಲಿಮೆಂಟ್ ಮಾಡುವುದಕ್ಕೆ ಟೈಮ್ ಎಲ್ಲಿದೆ. ಕರ್ನಾಟಕ ರಾಜ್ಯದಲ್ಲಿರತಕ್ಕ ಎಲ್ಲ ಕುಟುಂಬಗಳಿಗೆ ಒಂದೊಂದು ಉದ್ಯೋಗವನ್ನು ಕೊಟ್ಟು ಮುಗಿಸುತ್ತೀರಾ ಬೊಮ್ಮಾಯಿಯವರೇ?

ಶ್ರೀ ಎಸ್. ಆರ್. ಬೊಮ್ಮಾಯಿ.—ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಎಷ್ಟು ಕೊಟ್ಟಿದ್ದೀರಿ ಹೇಳಿ? ವಿದ್ಯಾವಂತರು ಎಷ್ಟು ಇದ್ದಾರೆ, ಅವಿದ್ಯಾವಂತರು ಎಷ್ಟು ಇದ್ದಾರೆ, ಎಷ್ಟು ವಿದ್ಯಾವಂತ ಕುಟುಂಬಗಳಿಗೆ ಉದ್ಯೋಗ ಕೊಟ್ಟಿದ್ದೀರಿ, ಎಷ್ಟು ಅವಿದ್ಯಾವಂತ ಕುಟುಂಬಗಳಿಗೆ ಉದ್ಯೋಗ ಕೊಟ್ಟಿದ್ದೀರಿ, ಯಾವ ಸ್ಕೀಮ್ ಪ್ರಕಾರ ಉದ್ಯೋಗ ಕೊಟ್ಟಿದ್ದೀರಿ ಎನ್ನುವುದನ್ನು You please place all those details on the table of this House.

ಶ್ರೀ ಎಸ್. ಆರ್. ಬೊಮ್ಮಾಯಿ. ಆ ಮೇಲೆ ಹೇಳುತ್ತೇನೆ. ಈ ತರಹ ಆದರೆ ಆಗುವುದಿಲ್ಲ ...

ಶ್ರೀ ಆರ್. ವೆಂಕಟರಾಮಯ್ಯ.—ಸ್ಟೈಫಂಡರಿಯವರು ಸ್ಟ್ರೈಕ್ ಮಾಡುತ್ತಿದ್ದಾರೆ. ನೀವು ಅವರಿಗೆ ಆಶ್ವಾಸನೆ ಕೊಟ್ಟಿದ್ದೀರಿ, ಇದರ ಬಗ್ಗೆ ಏನು ಹೇಳುತ್ತೀರಿ, ಅವರನ್ನು ಖಾಯಂ ಮಾಡುತ್ತೀರಾ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಹೊಸದಾಗಿ ನೌಕರಿ ಕೊಡುವುದು ಆಮೇಲೆ ಆಯಿತು. ಸ್ಟೈಫಂಡರಿ ಗ್ರಾಜುಯೇಟ್ಸ್ ಜೀತದಾಳುಗಳಂತೆ ದುಡಿಯುತ್ತಿದ್ದಾರೆ. ಅದಕ್ಕೆ ಪರಿಹಾರ ಹುಡುಕಿ ಎಂದು ನಮ್ಮ ವಿನಂತಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮನೆಗೆ ಒಂದು ಉದ್ಯೋಗ ಎಂದರೆ ಸರ್ಕಾರಿ ಕೆಲಸ ಅಲ್ಲ. ಎಲ್ಲಾ ಕುಟುಂಬಗಳಿಗೆ ಸರ್ಕಾರಿ ನೌಕರಿ ಕೊಡುವುದು ಎಂದಲ್ಲ, ಎಂದು ನಾನು ಹೇಳುತ್ತಿದ್ದೇನೆ. ಈ ದೃಷ್ಟಿಯಿಂದ ನಾನು ಈಗಾಗಲೇ ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದೇನೆ. small scale iudustries ನಲ್ಲಿ ಎಷ್ಟು ಎಂಪ್ಲಾಯ್‌ಮೆಂಟ್ ಕೊಟ್ಟಿದ್ದೇವೆ large scale industries ನಲ್ಲಿ ಎಷ್ಟು ಕೊಟ್ಟಿದ್ದೇವೆ, ಅಲ್ಲಿ ಎಂಪ್ಲಾಯ್‌ಮೆಂಟ್ ಎಷ್ಟು ಆಗಿದೆ ಎಂಬುದನ್ನು ಹೇಳಿದ್ದೇನೆ...

ಶ್ರೀ ಎಸ್. ಬಂಗಾರಪ್ಪ.—ಕ್ಷಮಿಸಬೇಕು, ನಾನು ಕೇಳುವುದು How many families are these in the entire State, both literate and illeterate? ಎಷ್ಟು ಲಿಟರೇಟ್ ಕುಟುಂಬಗಳು ಇದ್ದಾವೆ, ಎಷ್ಟು ಇಲ್‌ಲಿಟರೇಟ್ ಕುಟುಂಬಗಳು ಇದ್ದಾವೆ ಅವಕ್ಕೆ ಎಷ್ಟೆಷ್ಟು ಉದ್ಯೋಗಗಳನ್ನು ಕೊಟ್ಟಿದ್ದೀರಿ ಎನ್ನುವುದರ ಬಗ್ಗೆ ಡೀಟೇಲ್ಸ್ ಕೊಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕ್ಲಾರಿಫಿಕೇಶನ್‌ಗೆ ಕೊನೆಗೆ ಉತ್ತರ ಕೊಡುತ್ತೇನೆ; Let me complete my points. ಕಲಿಕೆಯೊಡನೆ ಗಳಿಕೆ ಯೋಜನೆ ಏನು ಇದೆ, ಅದಕ್ಕೆ ಹೊಸ ರೂಪ ಕೊಡತಕ್ಕಂಥ ಒಂದು ಹೆಜ್ಜೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಎಂ. ರಾಮಪ್ಪ.—ಮಂಡಲ್ ಪಂಚಾಯತ್‌ಗೆ ಇವೊತ್ತು ಹೊಸದಾಗಿ ಉದ್ಯೋಗ ಕೊಡತಕ್ಕ ಅವಕಾಶ ಕೊಡುತ್ತೀರಾ?

ಶ್ರೀ ಎಸ್. ಆರ್. ಬೊಮ್ಮಾಯಿ.—ಇವೊತ್ತು ಇನ್ನೂ ಒಂದು ವಿಚಾರ ಹೇಳಿದೆ. ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಒಂದು ಬೋರ್ಡ್ ಮಾಡುವ ವಿಚಾರ ಏನಿದೆ ಇದರ ಬಗ್ಗೆ ಸರ್ಕಾರ ನಿರ್ಧಾರ ಮಾಡಿದೆ.

ಶ್ರೀ ಎಂ. ರಾಮಪ್ಪ.—ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಬಳ್ಳಾರಿಗೆ ಏನು ಮಾಡುತ್ತೀರಿ ಎಂದು ಕೇಳುತ್ತೇನೆ....

ಅಧ್ಯಕ್ಷರು.—ಬಳ್ಳಾರಿ ಬೋರ್ಡ್ ಮಾಡುತ್ತಾರೆ. ತಾವು ಕುಳಿತುಕೊಳ್ಳಿ.

ಶ್ರೀ ಡಿ. ಎ. ಚಿನ್ನಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಮಲ್ನಾಡ್ ಡೆವೆಲಪ್‌ಮೆಂಟ್ ಕಾರ್ಪೋರೇಷನ್ ಮಾಡುತ್ತೇವೆಂದು ಹೇಳಿದ್ದಾರೆ...........

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಚಾರದಲ್ಲಿ ಮಾನ್ಯ ಧರ್ಮಸಿಂಗ್‌ರವರು ಹಾಗೂ ಖರ್ಗೆಯವರು ಅರೆಮನಸ್ಸಿನಿಂದ ಟೀಕೆ ಮಾಡಿದ್ದಾರೆ. ಅವರ ಮನಸ್ಸಿಗೆ ಬಹಳ ಸಂತೋಷ ಆಗಿದೆ. ಅವರ ಮನಸ್ಸಿನಲ್ಲಿ ನಾವು ಮಾಡಲಿಕ್ಕೆ ಆಗಲಿಲ್ಲ, ಈ ಒಂದು ಬೋರ್ಡ್ ಅನ್ನು ಬೊಮ್ಮಾಯಿಯವರು ಮಾಡಿದ್ದಾರೆ. ನಾವು ಇಬ್ಬರು ಬಲಾಢ್ಯರು ಮಂತ್ರಿಗಳು ಆಗಿದ್ದೆವು, ಬೊಮ್ಮಾಯಿಯವರು ಬೋರ್ಡ್ ಅನ್ನು ಸ್ಥಾಪನೆ ಮಾಡತಕ್ಕ ಪ್ರಯತ್ನ ಮಾಡಿದ್ದಾರೆ ಎನ್ನುವ ಸಂತೋಷ ಇದೆ. ಆದರೆ ಅದನ್ನು ಹೊರಗೆ ಹೇಳಲಿಕ್ಕೆ ಆಗುವುದಿಲ್ಲ. ಇದನ್ನು ನಾನು ಚುನಾವಣೆಯ ದೃಷ್ಟಿಯಿಂದ ಮಾಡಲಿಲ್ಲ.........

ಶ್ರೀ ಆರ್. ಧರ್ಮಸಿಂಗ್.—ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ, ಸಲ್ಲಿಸಿದ್ದೇವೆ, ಅಧ್ಯಕ್ಷರೇ, ತಾವು ಕೂಡ ಇದ್ದೀರಿ,

ಅಧ್ಯಕ್ಷರು.—ಕೆಲವು ಮಂದಿ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಶ್ರೀ ಆರ್. ಧರ್ಮಸಿಂಗ್.—ಆದರೆ ಮೊದಲಿನ ಸರ್ಕಾರದಲ್ಲಿ ಹೈದರಾಬಾದ್ ಏರಿಯಾ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಆಗಬೇಕು ಎನ್ನತಕ್ಕ ಬಗ್ಗೆ ರಿಪೋರ್ಟ್ ಏನು ಇದೆ ಅದರಲ್ಲಿ ೧೦ ವರ್ಷಗಳಿಗೆ ೩೫೦ ಕೋಟಿ ರೂಪಾಯಿಗಳನ್ನು ಕೊಡಬೇಕು ಎನ್ನುವುದು ಇದೆ. ಆದರೆ ತಾವು ಈಗ ಕೇವಲ ಎರಡುಕೋಟಿ ರೂಪಾಯಿ ಕೊಟ್ಟರೆ ಆಗುವುದಿಲ್ಲ. ಈ ಬೇಡಿಕೆಗೆ ಫೈನಾನ್ಸಿಯಲ್ ಪ್ಯಾಟರ್ನ್ ಆಗಿದೆ ಅದನ್ನು ತಾವು ಒಪ್ಪಬೇಕು ಎನ್ನುವ ವಿಚಾರ ಇದರಲ್ಲಿದೆ ಎಂದು ಹೇಳುತ್ತೇನೆ......

೫–೩೦ ಪಿ. ಎಂ.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಅಧ್ಯಕ್ಷರೆ, ೬ ತಿಂಗಳ ಹಿಂದೆ ಏನಾದರೂ ಹೈದರಾಬಾದ್ ಕರ್ನಾಟಕ ಬೋರ್ಡನ್ನು ಮಾಡಿದ್ದರೆ ಏನಾದರೂ ಪ್ರಗತಿ ಮಾಡಬಹುದಾಗಿತ್ತು.

ಶ್ರೀ ಎಸ್. ಆರ್. ಬೊಮ್ಮಾಯಿ.—ಇವತ್ತು ನಾನು ಈ ನಿರ್ಣಯಕ್ಕೆ ಬಂದಿಲ್ಲ. ಆ ಭಾಗದ ಮಾನ್ಯ ಶಾಸಕರಿಗೆ ಗೊತ್ತಿದೆ. ಎರಡು ಸಭೆಗಳನ್ನು ಮಾಡಿದ್ದೆ. ನೀವು ಬೇಗ ನಿರ್ಣಯ ತೆಗೆದು ಕೊಳ್ಳಿ, ನಮ್ಮ ಸರ್ಕಾರ ನಿಮಗೆ ಇದೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಆಂಧ್ರಧಲ್ಲಿರುವ ತೆಲಂಗಾಣ ಮತ್ತು ವೆಸ್ಟ್ ಬೆಂಗಾಲ್‌ನಲ್ಲರುವ ಸುಂದರಬನ್ ಯಾವರೀತಿ ಇದೆಯೋ ಆ ರೀತಿ ಮಾಡ ಮಾಡಬೇಕು ಎಂಬ ಉದ್ದೇಶ ಇದೆ. ಇದರ ಬಗ್ಗೆ ಇವತ್ತು ಬೆಳಿಗ್ಗೆ ಮಾನ್ಯ ಖರ್ಗೆಯವರು ಹೇಳಿದರು. ಮಾನ್ಯ ಧರ್ಮಸಿಂಗ್‌ರವರ ಒಂದು ರಿಪೋರ್ಟಿನ ಆಧಾರದ ಮೇಲೆ ಈ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಆ ಭಾಗದ ಅಭಿವೃದ್ಧಿಗೆ ಇದು ಅವಶ್ಯ. ಅದರ ಜೊತೆಗೆ ನಾನು ಹೇಳಿದೆ, ಪ್ರೊವಿಜನಲಿ ೪ ಕೋಟಿ ರೂಪಾಯಿ ಇಟ್ಟಿದ್ದೇವೆ. ಈ ೪ ಕೋಟಿ ರೂಪಾಯಿಗಳು ಸಾಲದು ಎನ್ನುವುದು ನನಗೆ ಗೊತ್ತಿದೆ, It is not sufficient ಇದು ಆಗಬೇಕಾದರೆ ಹೆಚ್ಚಿನ ಹಣ ಕೊಡಬೇಕಾಗುತ್ತದೆ.

SRI MOHD. LAIQUDDIN BURANUDDIN.—Sir, hon'ble Chief Minister's hollow promisgs and slogans will not solve the problem You should pass a statute.

ಶ್ರೀ ಎಂ. ರಾಮಪ್ಪ.—ಇದರಲ್ಲಿ ಕೂಡ ಅಪಾಯಿಂಟ್‌ಮೆಂಟ್ ರೇಷಿಯೋ ಹೇಗೆ ಮಾಡುತ್ತೀರಿ?

ಅಧ್ಯಕ್ಷರು.—ಕ್ಲಾರಿಫಿಕೇಷನ್‌ಗೆ ನಾನು ಅವಕಾಶ ಕೊಟ್ಟಿಲ್ಲ. ಮುಖ್ಯ ಮಂತ್ರಿಗಳು ಉತ್ತರ ಹೇಳಿ ಮುಗಿಸಲಿ. ಅಪೊಸಿಷನ್ ಲೀಡರ್ ಇದ್ದವರು. ಮಾಜಿ ಲೀಡರ್ ಇದ್ದವರು ಏನಾದರೂ ಕೇಳಲಿ ಎಂದು ಅವಕಾಶ ಕೊಟ್ಟರೆ, ಅವರು ಕೇಳುತ್ತಾರೆ ನಾವೂ ಕೇಳೋಣ ಎಂದು ಇತರರು ಕೇಳಿದರೆ ಹೇಗೆ.

(ಗೊಂದಲ)

ಶ್ರೀ ಕೆ. ಬಿ. ಶಾಣಪ್ಪ.—ಅವರಿಗೆ ಅವಕಾಶ ಕೊಟ್ಟಿದ್ದೀರಿ, ನಮಗೆ ಅವಕಾಶ ಇಲ್ಲವೇ?

(ಗೊಂದಲ)

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೆ. ಬಿ. ಶಾಣಪ್ಪ —ಮಾನ್ಯ ಮುಖ್ಯ ಮಂತ್ರಿಗಳು ಬಹಳ ಸಮಾಧಾನವಾಗಿ ಉತ್ತರ ಕೊಡುತ್ತಾ ಇದ್ದಾರೆ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಮ್ಮ ಸಹಕಾರವನ್ನು ಕೇಳುತ್ತಾ ಇದ್ದೇನೆ.

ಶ್ರೀ ಕೆ. ಬಿ. ಶಾಣಪ್ಪ.—ಹೈದರಾಬಾದ್ ಕರ್ನಾಟಕ ಬೋರ್ಡನ್ನು ನಾವು ಸ್ವಾಗತ ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು.—ಈ ರೀತಿ ೪–೫ ಮಂದಿ ಒಟ್ಟಿಗೆ ಎದ್ದು ನಿಂತರೆ ಹೇಗೆ ?

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಏನು ಹೇಳುತ್ತೇನೆ ಎಂದು ಕೇಳಿ. ಧರ್ಮಸಿಂಗ್ ರವರೆ ನಾನು ಹೇಳಿದಮೇಲೆ ನೀವು ಏನಾದರೂ ಹೇಳುವುದಿದ್ದರೆ ಹೇಳಿ.

ಶ್ರೀ ಡಿ ಎ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್ ಇದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ರೀತಿ ಡಿಸ್ಟರ್ಬ್ ಮಾಡಿದರೆ ಹೇಗೆ, I want to answer each and every point raised by hon'ble members. As far as possible I will touch all points. ದಯಮಾಡಿ ಸಹಕಾರ ಕೊಡಬೇಕು. ನಾನು ಈ ವಿಚಾರದಲ್ಲಿ ಒಂದು ಮಾತನ್ನು ಆ ಭಾಗದ ಎಲ್ಲಾ ಶಾಸಕರಿಗೂ ಹೇಳಬಯಸುತ್ತಾ ಇದ್ದೇನೆ. ಇದು ಯಶಸ್ವಿಯಾಗಬೇಕಾದರೆ ನಾವೂ ನೀವೂ ಜಂಟಿಯಾಗಿ ಪ್ರಯತ್ನ ಮಾಡಬೇಕಾಗುತ್ತದೆ. ನಾನು ಹಿಂದೆ ಪ್ರಧಾನ ಮಂತ್ರಿಯವರಿಗೆ ಒಂದು ಪತ್ರ ಬರೆದಿದ್ದೆ. ಇದನ್ನು ಯೋಜನಾ ಆಯೋಗ ಒಪ್ಪಬೇಕಾಗುತ್ತದೆ, ಒಪ್ಪಲಿಕ್ಕೆ ಏನೂ ತೊಂದರೆಇಲ್ಲ. ಎಂಟನೇ ಪಂಚವಾರ್ಷಿಕಯೋಜನೆ ಬರುತ್ತಾ ಇದೆ. ತಾವೂ ಮೆಮೊರ್ಯಾಂಡಂ ಕೊಟ್ಟಿದ್ದೀರಿ. ಈ ವರ್ಷ ಎಷ್ಟು ಖರ್ಚಾಗುತ್ತದೆ ಎನ್ನುವುದು ಮುಖ್ಯವಲ್ಲ. ಇದು ಪಂಚವಾರ್ಷಿಕ ಯೋಜನೆಯಲ್ಲಿ ಸ್ಪೆಷಲಾಗಿ ಇನ್‌ಕ್ಲೂಡ್ ಆಗಬೇಕಾಗುತ್ತದೆ. ನಾನು ಸರ್ಕಾರದ ಪರವಾಗಿ ನನ್ನ ಪ್ರಯತ್ನ ಮಾಡುತ್ತಾ ಇದ್ದೇನೆ. ನೀವೂ ಕೂಡ ಪ್ರಯತ್ನ ಮಾಡಿದರೆ ಇದು ಯಶಸ್ವಿಯಾಗುತ್ತದೆ. ಒಂದು ಮಾತನ್ನು ಹೇಳುತ್ತಾ ಇದ್ದೇನೆ. ಇದಕ್ಕೆ ೪ ಕೋಟಿ ರೂಪಾಯಿ ಹಣ ಇಟ್ಟಿದ್ದೇವೆ. ನಾವೆಲ್ಲಾ ಬೇಗ ದೆಲ್ಲಿಗೆ ಹೋಗಿ ಪ್ರಯತ್ನಮಾಡಿ ಅಲ್ಲಿ ಒಪ್ಪಿಗೆಯಾದರೆ ರಾಜ್ಯ ಸರ್ಕಾರ ಮ್ಯಾಚಿಂಗ್ ಗ್ರಾಂಟ್ ಕೊಡಬೇಕಾಗುತ್ತದೆ. ಇವತ್ತು ಕೇಂದ್ರ ಸರ್ಕಾರ ೧೦ ಕೋಟಿ ಕೊಡಲಿಕ್ಕೆ ಒಪ್ಪಿದರೆ ನಾವು ೧೦ ಕೋಟಿ ಕೊಡುತ್ತೇವೆ, ಅವರು ೨೦ ಕೋಟಿ ಕೊಡಲಿಕ್ಕೆ ಒಪ್ಪಿದರೆ ನಾವು ೨೦ ಕೋಟಿ ಕೊಡುತ್ತೇವೆ. ಈ ಭರವಸೆಯನ್ನು ತಮಗೆ ಕೊಡುತ್ತಾ ಇದ್ದೇನೆ. ನಾವೂ ನೀವೂ ಪ್ರಯತ್ನ ಮಾಡೋಣ. ಚುನಾವಣೆ ಮೇಲೆ ಕಣ್ಣಿಟ್ಟು ಅಲ್ಲ, ಆ ಭಾಗದ ಅಭಿವೃದ್ಧಿಯಾಗಬೇಕು. ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಾ ಇದ್ದೇನೆ. ಇನ್ನು ಸ್ಟೈಫಂಡರಿ ಗ್ರಾಜುಯೇಟ್ಸ್ ಬಗ್ಗೆ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೭ ವರ್ಷಗಳಾದ ಮೇಲಾದರೂ ಬುದ್ಧಿ ಬಂತಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆಮೇಲೆ ಸೋಷಿಯಲ್ ವೆಲ್‌ಫೇರ್ ಬಗ್ಗೆ ನಮ್ಮ ಗೆಳೆಯರ ಒಂದು ಪ್ರಶ್ನೆ ಕೇಳಿದ್ದಾರೆ. ತಾವೂ ಪತ್ರ ಬರೆದಿದ್ದೀರಿ. ತಾವೂ ಒಂದು ಪತ್ರ ನನಗೆ ಬರೆದು. ಶಾಸಕರಿಗೂ ಕಳಿಸಿದ್ದೀರಿ. ಆದರೆ ಆದರಲ್ಲಿ ಖರ್ಚಾದ ಹಣದ ಲೆಕ್ಕ ಪೂರ್ಣವಾಗಿಲ್ಲ. ಏನಾಗಿದೆಯೆಂದರೆ ಹಣ ಖರ್ಚಾಗಿದೆ. ೩೦೦ ಲಕ್ಷ ನಾವು ಲ್ಯಾಂಡ್ ಆರ್ಮಿಗೆ ಕೊಡಬೇಕಾಗಿದೆ. ಕೆಲಸ ಮಾಡಿದ್ದಾರೆ, ಬಿಲ್ಸ್ ಪೆಂಡಿಗ್ ಇದೆ Rs. 100 lakhs to be released to Scheduled Castes and Scheduled Tribes Development Corporation ಈ ಎರಡನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ The percentage of expenditure is 69.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಎರಡೂ ಇನ್‌ಕ್ಲೂಡ್ ಆದರೂ ಕೂಡ ೧೫೭ ಕೋಟಿ ರೂಪಾಯಿಗಳಲ್ಲಿ ೩೭ ಕೋಟಿ ರೂಪಾಯಿಗಳು ಮಾತ್ರ ಆಗುತ್ತದೆ.

† SRI S.R. BOMMAI.—It worksout to 69%.

† SRI M. MALLIKARJUNA KHARGE.—I am speaking out of the figures given by you.

ಶ್ರೀ ಎಸ್.ಆರ್. ಬೊಮ್ಮಾಯಿ. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ಗೆ ಟೋಟಲ್ ಸ್ಟೇಟ್ ಪ್ಲಾನ್‌ನಲ್ಲಿ ೭ ಕೋಟಿ ೫೦ಲಕ್ಷ ರೂಪಾಯಿಗಳು ಇರತಕ್ಕಂಥಾದ್ದು. ಸ್ಪೆಷಲ್ ಕಾಂಪೋನೆಂಟ್‌ಗೆ ಇರತಕ್ಕದ್ದು ೯ ಕೋಟಿ ೪೦ ಲಕ್ಷ ರೂಪಾಯಿಗಳು. ಇದನ್ನು ಲೆಕ್ಕ ಹಾಕಿದರೆ ..ಪ್ರತಿಶತ ೬೯ ಆಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ಪೆಷಲ್ ಕಾಂಪೋನೆಂಟ್‌ನಲ್ಲಿ ಎಲ್ಲಾ ಇಲಾಖೆಯಲ್ಲಿ ಖರ್ಚು ಮಾಡಬೇಕಾದ ಹಣ ೧೫೭ ಕೋಟಿ ರೂಪಾಯಿ. ಆದ ರೀತಿದರಲ್ಲಿ ೧೧೮ ಕೋಟಿ ರೂಪಾಯಿಗಳನ್ನು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕಡಿತ ಮಾಡಿದ್ದಾರೆ. ಇದರ ಬಗ್ಗೆ ವಿವರಗಳನ್ನು ಕೊಟ್ಟಿಲ್ಲ. ಈ ಒಂಭತ್ತು ತಿಂಗಳಲ್ಲಿ ೩೩ ಕೋಟಿ ಚಿಲ್ಲರೆ ಖರ್ಚಾಗುತ್ತದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಒಂದು ವಿಚಾರ ಇಲ್ಲಿ ಹೇಳಬೇಕಾಗುತ್ತದೆ. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಿಂದ ಎಸ್.ಸಿ.ಎಸ್.ಟಿ.ಯವರಿಗೆ ೧೯೮೩ಕ್ಕೆ ಮೊದಲು ಕಟ್ಟಿದಂಥ ಹಾಸ್ಟಲುಗಳು ೧೪೪೮. ಕಳೆದ ೨೦ ವರ್ಷಗಳಿಂದಲೂ ಅಷ್ಟು ಹಾಸ್ಟೆಲುಗಳನ್ನು ಕಟ್ಟಿದ್ದಾರೆ. ಈ ಐದು ವರ್ಷಗಳಲ್ಲಿ ನಮ್ಮ ಸರ್ಕಾರ ಎಸ್.ಸಿ.ಎಸ್.ಟಿ: ಯವರಿಗೆ ೩೫೮ ಹಾಸ್ಟೆಲುಗಳನ್ನು ಕಟ್ಟಿದೆ...... Is it not a pronregsive step ?

SRI M. MALLIKARUJNA KHARGE.—At Gulbarga, during our Government we had constructed a hostel which is worth about Rs. 47 lakhs. For two hostels we have spent nearly Rs. 80 lakhs. Number of hostels is not important. the money spent on them is impartent.

ಶ್ರೀ ಎಸ್.ಆರ್. ಬೊಮ್ಮಾಯಿ.—ಹುಬ್ಬಳ್ಳಿಯಲ್ಲಿ ೨೮ ಲಕ್ಷ ರೂಪಾಯಿ ಖರ್ಚು ಮಾಡಿ ಒಂದು ಹಾಸ್ಟೆಲ್ ಕಟ್ಟಿದ್ದೇವೆ. ಎಸ್.ಸಿ.ಎಸ್.ಟಿ. ವಿಚಾರದಲ್ಲಿ ಸರ್ಕಾರ ಮಾಡಿರತಕ್ಕ ಸಾಧನೆಗಳನ್ನು ಹೇಳಿದ್ದೇವೆ.

SRI M. MALLIKARJUNA KHARGE.—You are not giving a complete picture about the special componant plan.

ಶ್ರೀ ಎಸ್.ಆರ್. ಬೊಮ್ಮಾಯಿ.—ಟ್ಯಾಕ್ಸೇಷನ್ ಬಗ್ಗೆ ಇನ್ನೊಂದು ವಿಚಾರವನ್ನು ಮಾನ್ಯ ಮೊಯಿಲಿಯವರು ಹೇಳಿದ್ದಾರೆ, ಲಾಸ್ಟ್ ಪಾಯಿಂಟ್ ಟ್ಯಾಕ್ಸ್ ಬಗ್ಗೆ ಸಮರಿ ಅಸೆಸ್‌ಮೆಂಟ್ ಬಗ್ಗೆ, ೫ಲಕ್ಷ ಮಿತಿ ಬಗ್ಗೆ ಹೇಳಿದ್ದಾರೆ. ಲಾಸ್ಟ್ ಪಾಯಿಂಟ್ ಮಾಡುವುದರಲ್ಲಿ ಬಹಳ ಎಚ್ಚರಿಕೆಯಿಂದ ಮಾಡಿದ್ದೇವೆ. ಕಾರಣ ಅಂದರೆ, ಫಸ್ಟ್ ಪಾಯಿಂಟ್ ಮಾಡಿದರೆ ಮುಂದೆ ಇವೇಷನ್ ಆಗತಕ್ಕದ್ದು ಬಹಳಷ್ಟು ಇದೆ. ಹಿಂದೆ ನಾನು ಪಿ.ಎ.ಸಿ. ರಿಪೋರ್ಟ್‌ನಲ್ಲಿಯೂ ಸಹ ಹೇಳಿದ್ದೇನೆ. I said it inmy PAC report also. There will be two firms of a same person. One firmbuys a product at Rs. 100 and sells at Rs. 500 through he otfiher firm. There is intelligent way of tax evasion. I have ollowed the Central Excise pattern. ಸೆಂಟ್ರಲ್ ಎಕ್ಸೈಜ್ ಡಿಪಾರ್ಟ್‌ಮೆಂಟಿನವರೂ ಅದೇ ಮಾಡಿದ್ದಾರೆ. ಲಾಸ್ಟ್ ಪಾಯಿಂಟ್ ಹಾಕಿದ್ದಾರೆ, ಫಸ್ಟ್ ಪಾಯಿಂಟು ಹಾಕಿದ್ದಾರೆ. They get more income and evasion will be stopped. It is only on the pattern of Central Excise which we have followed here. We have given impetus for proper tax collection and stoppage of tax evasion. ಚೆಕ್‌ಗೆ ಅವಕಾಶ ಇದೆ. ಅವರು ಸಮರಿ ಅಸೆಸ್‌ಮೆಂಟ್ ಬಗ್ಗೆ ಹೇಳಿದರು. ಅದು ನಿಜವಾಗಿ ಲಾಭವಾಗಿದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಮಗೆ ಕಮರ್ಷಿಯಲ್ ಟಾಕ್ಸ್ ಬರತಕ್ಕದ್ದು ಸುಮಾರು ೭೦ ಪರ್ಸೆಂಟ್ ಟ್ಯಾಕ್ಸ್ ರೆಕವರ್ ಆಗುತ್ತದೆ. ಸ್ಮಾಲ್ ಮರ್ಚೆಂಟ್ಸ್‌ನಿದ ಏನು ಬರುತ್ತಿದೆ ಅದೆಲ್ಲಾ ಕೂಡಿ ೮ ಕೋಟಿ ರೂಪಾಯಿಗಿಂತಲೂ ಹೆಚ್ಚು ಇಲ್ಲ. ಒಬ್ಬರು ೧೦೦ ರೂಪಾಯಿ ಕೊಡುತ್ತಾರೆ, ಇನ್ನೊಬ್ಬರು ೨೦೦ ರೂಪಾಯಿ ಕೊಡುತ್ತಾರೆ, ಮತ್ತೊಬ್ಬರು ೫೦೦ ರೂಪಾಯಿ ಕೊಡುತ್ತಾರೆ. ಆದರೆ ಇವತ್ತು ನಮ್ಮ ಅಧಿಕಾರಿಗಳು ಯಾರಿದ್ದಾರೆ, ನಮ್ಮ ಸಿಬ್ಬದಿ ಯಾರಿದ್ದಾರೆ ಅವರು ಹೆಚ್ಚಿನ ಸಮಯವನ್ನು ಅಲ್ಲಿಯೇ ಕಳೆಯುತ್ತಿದ್ದಾರೆ. ಇವರಿಂದ ಬರತಕ್ಕ ಆದಾಯ ಕೇವಲ ೮–೧೦ ಕೋಟಿ ರೂಪಾಯಿ ಮಾತ್ರ. ಆದ್ದರಿಂದ ನಮ್ಮ ಸಿಬ್ಬಂದಿ ಹೆಚ್ಚು ಸಮಯವನ್ನು ಅಲ್ಲಿ ಕಳೆಯುವುದು ತಪ್ಪಬೇಕು. ಅವರಾಗಿಯೇ ಸರ್ಕಾರಕ್ಕೆ ರಿಟರ್ನ್ ಕೊಡಬೇಕು. ನಾವು ರ್‍ಯಾಂಡಂ ಚೆಕ್ ಮಾಡುತ್ತೇವೆ. ಆದರೆ ಇಲ್ಲಿ ಒಂದು ಸ್ವಲ್ಪ ವ್ಯತ್ಯಾಸವಾಗಬಹುದು. ೨೦೦ ರೂಪಾಯಿ ಕೊಡಬೇಕಾದವನು ಸ್ವಲ್ಪ ಕಡಿಮೆ ಕೊಡಬಹುದು. ಇದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಈ ಜಾಗದಲ್ಲಿ ಸರ್ಕಾರಿ ಸಿಬ್ಬಂದಿ ಹೆಚ್ಚು ಕಾಲ ಇರತಕ್ಕ ಅವಶ್ಯಕತೆ ಇರುವುದಿಲ್ಲ. If at all it is there, it is a small evasion- ಕೆಲವರಿಗೆ ಮಾತ್ರ ಇದರಲ್ಲಿ ಲಾಭ ಸಿಕ್ಕುತ್ತದೆ. ಇದನ್ನು ೫ ಲಕ್ಷದವರೆಗೆ ಮಾಡಬೇಕೆಂದು ಸ್ಮಾಲ್ ಟ್ರೇಡರ್ಸ್ ಅಸೋಸಿಯೇಷನ್‌ನವರು

ಹೇಳಿದ್ದರಿಂದ ನಾನು ಇದನ್ನು ಮಾಡಿದ್ದೇನೆ. ಇದರಿಂದ ಹೆಚ್ಚು ಜನರಿಗೆ ಲಾಭ ಸಿಕ್ಕುತ್ತದೆ. ಚಿಕ್ಕ ವ್ಯಾಪಾರಸ್ಥರಿಗೆ ಸಮ್ಮರಿ ಅಸೆಸ್‌ಮೆಂಟ್‌ನಿಂದ ಸ್ವಲ್ಪಮಟ್ಟಿನ ಕಿರುಕುಳ ತಪ್ಪುತ್ತದೆ. ಒಟ್ಟಿನಲ್ಲಿ ಸರ್ಕಾರಕ್ಕೆ ಬರಬೇಕಾದ ಆದಾಯದಲ್ಲಿ ಬಹಳ ವ್ಯತ್ಯಾಸವೇನೂ ಆಗುವುದಿಲ್ಲ. ತಾವು ಕೇಳಿದ್ದರಿಂದ ನಾನು ಈ ವಿವರಣೆಯನ್ನು ಹೇಳಿದ್ದೇನೆ.

ಮಾನ್ಯ ಅಧ್ಯಕ್ಷರೆ, ಇವತ್ತು ಎಲ್ಲದಕ್ಕೂ ಉತ್ತರವನ್ನು ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಆದರೂ ಮಾನ್ಯ ಸದಸ್ಯರ ಪ್ರಶ್ನೆಗಳಿಗೆ ಸಾಕಷ್ಟು ಸಮರ್ಪಕವಾದ ರೀತಿಯಲ್ಲಿ ನಾನು ಉತ್ತರವನ್ನು ಕೊಡತಕ್ಕ ಪ್ರಯತ್ನವನ್ನು ಮಾಡಿದ್ದೇನೆ. ಇನ್ನು ಸ್ಟೈಫೆಂಡರಿಯವರ ಬಗ್ಗೆ ಹೇಳುವುದಾದರೆ, ಮೊದಲು ೧೮ ಸಾವಿರ ಇದ್ದುದು ಈಗ ಆ ಸಂಖ್ಯೆ ೫ ಸಾವಿರಕ್ಕೆ ಇಳಿದಿದೆ......

ಶ್ರೀ ಎಂ.ಎಸ್. ಕೃಷ್ಣನ್.—ಸ್ವಾಮಿ, ಈ ವಿಷಯ ಪ್ರತಿಯೊಂದು ಅಧಿವೇಶನವಲ್ಲೂ, ಪ್ರತಿ ವರ್ಷವೂ ಇಲ್ಲಿ ಬರುತ್ತಿದೆ. ನಾವು ಸರ್ಕಾರವನ್ನು ಒತ್ತಾಯ ಮಾಡುತ್ತಲೇ ಬರುತ್ತಿದ್ದೇವೆ. ಪ್ರತಿ ಸಾರಿಯೂ ತಾವು ಆಶ್ವಾಸನೆಯನ್ನು ಕೊಡುತ್ತಿದ್ದೀರಿ. ಆದರೆ ಅದು ಈಡೇರಲಿಲ್ಲ, ಅವರ ಸಮಸ್ಯೆ ಬಗೆಹರಿಯಲಿಲ್ಲ. ಈಗಲೂ ಕೂಡ ತಾವು ಕೊಡತಕ್ಕ ಭರವಸೆ ಬರೀ ಭರವಸೆ ಆಗಬಾರದು.

ಶ್ರೀ ಆರ್. ವೆಂಕಟರಾಮಯ್ಯ.—ನಾವು ಬಹಳ ದಿವಸದಿಂದ ಹೇಳುತ್ತಲೇ ಬಂದಿದ್ದೇವೆ. ನೀವೂ ಕೂಡ ಇದನ್ನು ಒಪ್ಪಿಕೊಂಡಿದ್ದೀರಿ. ಇನ್ನೂ ಉಳಿದಿರುವ ಸ್ಟೈಫೆಂಡರಿಯವರು ಯಾರಿದ್ದಾರೆ ಅವರಿಗೂ ತಾವು ಅಪಾಯಿಂಟ್‌ಮೆಂಟನ್ನು ಕೊಟ್ಟುಬಿಡಿ.

ಕ

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಚಾರವನ್ನು ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ ಆ ದಿವಸ ಅಲ್ಲಿ ಕುಳಿತಿದ್ದಾಗ ನಾನೇ ಎತ್ತಿದವನು, ಅವತ್ತಿನಿಂದ ಇವತ್ತಿನವರೆಗೂ ಸ್ಟೈಫೆಂಡರಿಯವರು ನನ್ನ ಹತ್ತಿರ ಬರುತ್ತಿದ್ದಾರೆ, ಚರ್ಚೆ ಮಾಡುತ್ತಿದ್ದಾರೆ. ಅವರಿಗೆ ಕೆಲಸವನ್ನು ಕೊಡತಕ್ಕ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ನಾನು ಈಗಾಗಲೇ ಹೇಳಿದಂತೆ ಇವರ ಸಂಖ್ಯೆ ೧೮ ಸಾವಿರದಿಂದ ೫ ಸಾವಿರಕ್ಕೆ ಇಳಿದಿದೆ. ಉಳಿದವರಿಗೆ ಕೆಲಸವನ್ನು ಕೊಟ್ಟಿದ್ದೇವೆ. ಅವರಿಗೋಸ್ಕರ ಮತ್ತು ಅವರ ಪರವಾಗಿ ನಾವು ಕಾನೂನನ್ನು ತಿದ್ದುಪಡಿ ಮಾಡಿದ್ದೇವೆ, ನೇಮಕಾತಿಯ ಸಂದರ್ಭದಲ್ಲಿ ಅವರಿಗೆ ೫೦ ಪರ್ಸೆಂಟ್ ರಿಸರ್ವ್ ಇಡುವಂತೆ ವ್ಯವಸ್ಥೆ ಮಾಡಿದ್ದೇವೆ. ಇದಕ್ಕಿಂತ ಹೆಚ್ಚಿಗೆ ಇಡುವುದಕ್ಕೆ ಸಾಧ್ಯವಿಲ್ಲ......

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ಅವರ ಮನವಿಯನ್ನು ಸಹಾನುಭೂತಿಯಿಂದ ಪರಿಶೀಲಿಸಿ ಅವರು ನೆಮ್ಮದಿಯಿಂದ ಜೀವನ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮೊದಲು ಅವರ ಸಂಬಳ ೧೫೦ ರೂಪಾಯಿ ಇದ್ದುದನ್ನು ನಾವು ಪ್ರತಿವರ್ಷವೂ ಹೆಚ್ಚಿಸುತ್ತಾ ಬಂದಿದ್ದೇವೆ. ನಾವು ಯಾರನ್ನೂ ಮನೆಗೆ ಕಳುಹಿಸದೆ ನೌಕರಿಯನ್ನು ಕೊಡತಕ್ಕ ಪ್ರಯತ್ನ ಮಾಡುತ್ತೇವೆಂದು ಭರವಸೆಯನ್ನು ಕೊಡುತ್ತೇನೆ. ಒಂದುವೇಳೆ ಅವರ ವಯಸ್ಸು ಮೀರಿದ್ದರೆ ಅದನ್ನು ರಿಲ್ಯಾಕ್ಸ್ ಕೂಡ ಮಾಡುತ್ತಿದ್ದೇವೆ. ಅವರಿಗೆ ಸಂಬಳವನ್ನು ಹೆಚ್ಚಿಗೆ ಮಾಡಿದ್ದೇವೆ. ನಮ್ಮ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಇನ್ನೂ ಹೆಚ್ಚು ಮಾಡುವುದಾದರೆ ಮಾಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಈ ವರ್ಷ ೨೦೦ ಜನರಿಗೆ ಉದ್ಯೋಗವನ್ನು ಕೊಟ್ಟಿದ್ದೀರಿ ಇದು ಸಾಕೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಕೊನೆಯದಾಗಿ ಹೇಳುವುದಾದರೆ, ನಮ್ಮ ಗೆಳೆಯರಾದ ಶ್ರೀನಿವಾಸ್‌ರವರು ಉತ್ತಮ ವಾಗ್ಮಿಗಳು. ಅವರ ನಾಲಿಗೆಯ ಮೇಲೆ ಇರತಕ್ಕ ಸರಸ್ವತಿ ನನ್ನ ನಾಲಿಗೆಯ ಮೇಲೆ ಇಲ್ಲ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಎಲ್ಲರ ನಾಲಿಗೆಯ ಮೇಲೂ ಒಬ್ಬಳೇ ಸರಸ್ವತಿ ಇರುವುದು. ಆದರೆ ಒಬ್ಬೊಬ್ಬರ ನಾಲಿಗೆಯ ಮೇಲೆ ಬೇರೆ ಬೇರೆ ರೀತಿಯ ಡ್ಯಾನ್ಸನ್ನು ಮಾಡುತ್ತಾಳೆ ಅಷ್ಟೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಸರಕಾರ ಅಭದ್ರವಾಗಿದೆ, ಬ್ಯಾಕ್ ಸೀಟ್ ಡ್ರೈವಿಂಗ್ ಎಂದು ಮುಂತಾಗಿ ಹೇಳಿದ್ದಾರೆ. ಅವರು ಒಂದು ಮಾತನ್ನು ಗಮನದಲ್ಲಿಟ್ಟುಕೊಳ್ಳಬೇಕು. ಎಲ್ಲೆಲ್ಲಿ ಕಾಂಗ್ರೆಸ್ಸೇತರ ಸರ್ಕಾರಗಳಿವೆ ಅವೆಲ್ಲಾ ಸ್ಟೇಬಲ್ ಆಗಿವೆ. ಈ ಜನತಂತ್ರದಲ್ಲಿ ಪರಸ್ಪರ

ಭಿನ್ನಾಭಿಪ್ರಾಯ ಬಂದಾಗ ಚುನಾವಣೆ ಆಗಬೇಕಾಗುತ್ತದೆ. ಕಾಂಗ್ರೆಸ್ (ಐ) ರಾಜ್ಯಗಳಲ್ಲಿ ೩-೩ ತಿಂಗಳಿಗೊಮ್ಮೆ ಮುಖ್ಯ ಮಂತ್ರಿಗಳ ಬದಲಾವಣೆ ಆಗುತ್ತಿದೆ......

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ. —ಕಾಲು ಕೆರೆದು ಜಗಳ ತೆಗೆದು ನಿಮ್ಮ ಭಾಷಣವನ್ನು ಮುಗಿಸಬೇಕೆಂದು ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ. —ಇಲ್ಲಿ ಅಭದ್ರ ಸರ್ಕಾರವಿದೆ ಚುನಾವಣೆಗೆ ಹೋಗಬೇಕು ಎಂದು ಮಾನ್ಯ ಶ್ರೀನಿವಾಸ್‌ರವರು ಹೇಳಿದರು. ನಾನಾದರೂ ಅವರಿಗೆ ಹೇಳುತ್ತೇನೆ, ದೊಡ್ಡ ದೊಡ್ಡ ರಾಜ್ಯಗಳಾದ ಉತ್ತರ ಪ್ರದೇಶ, ಒರಿಸ್ಸಾ, ಮಧ್ಯ ಪ್ರದೇಶ, ಗುಜರಾತ್, ಮಹಾರಾಷ್ಟ್ರ ಇಲ್ಲೆಲ್ಲಾ ೫ ವರ್ಷಗಳಲ್ಲಿ ೭ ಸಾರಿ ಮುಖ್ಯ ಮಂತ್ರಿಗಳ ಬದಲಾವಣೆಗಳಾಗಿವೆ. ಇಷ್ಟೊಂದು ಬದಲಾವಣೆ ಯಾದರೆ ಅಲ್ಲಿ ಸ್ಟೆಬಿಲಿಟಿ ಎಲ್ಲಿಂದ ಬರುತ್ತದೆ ?

ಶ್ರೀ ಎಸ್. ಆರ್. ಬಂಗಾರಪ್ಪ. —ನಮ್ಮ ಪಕ್ಷದ ನಾಯಕರನ್ನು ಆಗಾಗ ಬದಲಾವಣೆ ಮಾಡಿದರೆ ಆಡಳಿತದಲ್ಲಿ ಅಭದ್ರತೆ ಉಂಟಾಗುತ್ತದೆಂದು ಹೇಳುತ್ತಿದ್ದೀರಿ, ಹಾಗಿದ್ದರೆ ನಾನು ನೇರವಾಗಿ ನಿಮಗೆ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಏನೆಂದರೆ, ನಿಮ್ಮಲ್ಲಿ ನಾಯಕತ್ವ ಬದಲಾವಣೆ ಆದಮೇಲೆ ನಿಮ್ಮ ಪಕ್ಷದಲ್ಲಿ ಒಗಟ್ಟು ಮೊದಲಿನಂತೆಯೇ ಉಳಿದುಕೊಂಡಿದೆಯೇ ? ನಿಮ್ಮ ಪಕ್ಷ ಒಡೆದ ಮೇಲೆ ಸುಭದ್ರ ಸರ್ಕಾರ ಎಲ್ಲಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ. —ನಮ್ಮ ಪಕ್ಷದಲ್ಲಿ ಒಂದು ತತ್ವದ ಮೇಲೆ ಭಿನ್ನಾಭಿಪ್ರಾಯ ಬಂದಿದೆ. ಆದರೆ ನಿಮ್ಮಲ್ಲಿ ಏನಾಗಿದೆ ಎಂದರೆ ಗುಜರಾತ್‌ನ ವಿಧಾನ ಸಭೆಯಲ್ಲಿ ನಿಮ್ಮ ಪಕ್ಷದ ಶಾಸಕರೇ, ನಿಮ್ಮ ನಾಯಕರನ್ನು ವಿರೋಧ ಮಾಡಿದರು. ಮಧ್ಯಪ್ರದೇಶದಲ್ಲಿ ಏನಾಯಿತು ಎಂಬುದು ನಿಮಗೆಗೊತ್ತಿದೆ. ಬಿಹಾರದಲ್ಲಿ ಒಂದು ತಿಂಗಳು ಸರ್ಕಾರವೇ ಇರಲಿಲ್ಲ. ಅಲ್ಲಿ ಮಂತ್ರಿಗಳೇ ಇರಲಿಲ್ಲ. ಆದರೂ ಸಹ ಇಲ್ಲಿ ನೀವು ನಮಗೆ ನಮ್ಮ ಸರ್ಕಾರದ ಸ್ಟೆಬಿಲಿಟಿ ಬಗ್ಗೆ ಮತ್ತು ಆಡಳಿತದ ಬಗ್ಗೆ ಹೇಳುತ್ತಿದ್ದೀರಿ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ. — ಆದರೆ ನಿಮ್ಮ ಸರ್ಕಾರದ ಮೆಜಾರಿಟಿ ಬಗ್ಗೆ ನಿಮ್ಮ ಪಕ್ಷದ ಸದಸ್ಯರೇ ಮಾತನಾಡಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ —ನಮ್ಮ ಪಕ್ಷದ ಸದಸ್ಯರಿಂದ ಪ್ರಾಮಾಣಿಕವಾದಂತಹ ಭಿನ್ನಾಭಿಪ್ರಾಯ ಬಂದಿದೆ. ಇದೇ ಪ್ರಜಾಪ್ರಭುತ್ವ. ಆದರೆ ನಿಮ್ಮ ಪಕ್ಷದ ಶಾಸಕರು, ಗುಜರಾತ್ ಶಾಸನ ಸಭೆಯಲ್ಲಿ ಮಾರಾಮಾರಿ ಮಾಡುತ್ತಾರೆ. ಮಧ್ಯಪ್ರದೇಶದಲ್ಲಿ ಒಂದು ತಿಂಗಳು ಸರ್ಕಾರವೇ ಇರಲಿಲ್ಲ. ಆದ್ದರಿಂದ...

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ. —ಈ ರಾಷ್ಟ್ರದ...

ಶ್ರೀ ಎಸ್. ಬಂಗಾರಪ್ಪ. ಬಿಹಾರದಲ್ಲಿ ನಿಮ್ಮ ಪಕ್ಷದ ಉಪಾಧ್ಯಕ್ಷರಾದ ಶ್ರೀ ರಾಮಕೃಷ್ಣ ಹೆಗಡೆ ಅವರ ಸಮ್ಮುಖದಲ್ಲಿಯೇ, ಮಾರಾಮಾರಿ ನಡೆದಿದೆ. ಆದರೂ ಇವರು ಬೇರೆಯದನ್ನು ಹೇಳುವುದಕ್ಕೆ ಹೋಗಿದ್ದಾರೆ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ. —ಶ್ರೀ ಕೆ. ಹೆಚ್. ಶ್ರೀನಿವಾಸ್ ಅವರು ಹೇಳಿದ್ದಕ್ಕೆ ನಾನು ಇದನ್ನು ಹೇಳಬೇಕಾಗಿತ್ತು.

ಶ್ರೀ ಕೆ. ಹೆಚ್. ಶ್ರೀನಿವಾಸ್. ನಾನು ನನ್ನ ಸ್ವಂತ ಮಾತನ್ನು ಹೇಳಲಿಲ್ಲ. ನೀವು ಹೇಳಿದ ಮಾತನ್ನೇ ನಿಮಗೆ ಹೇಳಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ರಾಷ್ಟ್ರದ ಆರ್ಥಿಕ ಉನ್ನತಿ ಆಗಬೇಕಾದರೆ ೫ ವರ್ಷಗಳಲ್ಲಿ ಕೇಂದ್ರದಲ್ಲಿ ಅರ್ಥ ಮಂತ್ರಿಗಳು ಎಷ್ಟು ಸಲ ಬದಲಾವಣೆ ಆಗಬೇಕು. ಮೂರು ತಿಂಗಳಿಗೆ, ಆರು ತಿಂಗಳಿಗೊಮ್ಮೆ ಅರ್ಥ ಮಂತ್ರಿಗಳು ಕೇಂದ್ರದಲ್ಲಿ ಬದಲಾವಣೆಯಾದರೆ, ಈ ರಾಷ್ಟ್ರದ ಅರ್ಥ ನೀತಿ ಯಾವರೀತಿ ಸ್ಥಿರವಾಗಿ ಉಳಿಯುತ್ತದೆ ? ಸ್ಟೆಬಿಲಿಟಿ ಯಾವರೀತಿ ಉಳಿಯುತ್ತದೆ ?

ಶ್ರೀ ಎಸ್. ಬಂಗಾರಪ್ಪ.—ನಮ್ಮ ಪಕ್ಷದಲ್ಲಿ ಭಿನ್ನಾಭಿಪ್ರಾಯ ಇದ್ದರೂ ಸಹ ಕೇಂದ್ರದಲ್ಲಿ ಪ್ರಧಾನ ಮಂತ್ರಿಗಳು ಬದಲಾವಣೆ ಆಗಿಲ್ಲ. ಆದರೆ ನಿಮ್ಮ ಪಕ್ಷದ ಜನತಾ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಾಗ, ಮೊದಲು ಶ್ರೀ ಮುರಾರ್ಜಿ ದೇಸಾಯಿಯವರು ಪ್ರಧಾನಮಂತ್ರಿಗಳಾದರು. ನಂತರ ಶ್ರೀ ಚರಣ್‌ಸಿಂಗ್ ಅವರು ಪ್ರಧಾನ ಮಂತ್ರಿಗಳಾದರು. ಆದರೂ ನಿಮ್ಮ ಸರ್ಕಾರ ಕೇಂದ್ರದಲ್ಲಿ ೫ ವರ್ಷಗಳ ಕಾಲ ಉಳಿಯಲಿಲ್ಲ. ಮೂರು ವರ್ಷಗಳಲ್ಲಿಯೇ ಮಂಗಳ ಹಾಡಲಾಯಿತು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಮ್ಮ ಸರ್ಕಾರದ ಮೆಜಾರಿಟಿ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಮಗೆ ಎಲ್ಲಿಯವರೆಗೆ ಮೆಜಾರಿಟಿ ಇರುತ್ತದೆಯೋ ಅಲ್ಲಿಯವರೆಗೆ ನಾವು ಅಧಿಕಾರದಲ್ಲಿರುತ್ತೇವೆ. ಮೆಜಾರಿಟಿ ಹೋದಾಗ ಮನೆಗೆ ಹೋಗುತ್ತೇವೆ. ನಮಗೆ ಎಲ್ಲಿಯವರೆಗೆ ಮೆಜಾರಿಟಿ ಇರುತ್ತದೋ ಅಲ್ಲಿಯವರೆಗೆ ಯಾರೂ ಸಹ ನಮ್ಮನ್ನು ಅಲುಗಾಡಿಸುವುದಕ್ಕಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವೇ ಅಲ್ಲಾಡುತ್ತಿದ್ದೀರಿ ? ಅದಕ್ಕೆ ನಾವು ಏನು ಮಾಡುವುದು.

(ಗೊಂದಲ)

ಶ್ರೀ ಕೆ. ಎಚ್. ಶ್ರೀನಿವಾಸ್.—ಈಗ ನೀವೇ ಅಲ್ಲಾಡುತ್ತಿದ್ದೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಸರ್ಕಾರದ ಸಂಪೂರ್ಣ ಅವಧಿ ಮುಗಿಯುವವರೆಗೂ ಈ ಸರ್ಕಾರ ಅಧಿಕಾರದಲ್ಲಿರುತ್ತದೆ. ಅಲ್ಲಾಡುವ ಪ್ರಶ್ನೆ ಇಲ್ಲಿ ಬರುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಲ್ಲಿ ನಾವು ನಿಮ್ಮನ್ನು ಅಲ್ಲಾಡಿಸುವ ಪ್ರಶ್ನೆಯೇ ಇಲ್ಲ. ನೀವೇ ಅಲ್ಲಾಡುತ್ತಿದ್ದೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ದೆಹಲಿಯಲ್ಲಿ ನಿಮ್ಮ ಪಕ್ಷದ ಸರ್ಕಾರ ಅಲ್ಲಾಡುತ್ತಿದೆ. ಅಲ್ಲಿರುವ ದೊಡ್ಡ ಮರವೇ ಅಲ್ಲಾಡುತ್ತಿರಬೇಕಾದರೆ, ಅದರ ಕೊಂಬೆಗಳ ಗತಿ ಏನು ?

ಶ್ರೀ ಎಂ. ವೀರಪ್ಪ ಮೊಯಿಲಿ.—ದೆಹಲಿಯ ಆಡಳಿತದ ಬಗ್ಗೆ ನೀವು ಹೇಳುವುದಕ್ಕೆ ಹೋಗಬೇಡಿ. ದೆಹಲಿಯ ಗದ್ದುಗೆ ಒಂದು ದೊಡ್ಡ ಮರ. ಅದನ್ನು ಹತ್ತುವುದಕ್ಕೆ ಹೋಗಿ ಕೆಳಗೆ ಬಿದ್ದು ಕೈಕಾಲು ಮುರಿದುಕೊಳ್ಳಬೇಡಿ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಕೈಕಾಲು ನಡುಗಿದರೆ ಭೂಕಂಪವಾಯಿತೆಂದು ಹೇಳಬೇಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಮ್ಮ ಆಂತರಿಕ ವ್ಯವಹಾರದಲ್ಲಿ ನಾನು ಕೈಹಾಕುವುದಕ್ಕೆ ಹೋಗುವುದಿಲ್ಲ. ಈಗ ನಿಮ್ಮ ವಿರೋಧ ಪಕ್ಷದ ನಾಯಕರ ಬಗ್ಗೆ ಭಿನ್ನಾಭಿಪ್ರಾಯ ಹೊಂದಿದಂತಹ ಗೆಳೆಯರು ನಿಮ್ಮಲ್ಲಿ ಇದ್ದಾರೆ. ಮುಂದೆ ಆ ಜಾಗಕ್ಕೆ ಶ್ರೀ ಎಸ್. ಬಂಗಾರಪ್ಪ ಅಥವಾ ಶ್ರೀ ಎಂ. ವೀರಪ್ಪ ಮೊಯಿಲಿ ಅವರು ಬರುತ್ತಾರೋ ಗೊತ್ತಿಲ್ಲ. ಆ ಜಾಗಕ್ಕೆ ಬರುವವರ ಪೈಕಿ ಶ್ರೀ ಕೆ. ಎಚ್. ಶ್ರೀನಿವಾಸ್ ಅವರ ಹೆಸರೂ ಸಹ ಇದೆ ಎಂದು ನಾನು ಕೇಳಿದ್ದೇನೆ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಸರ್ಕಾರ ಭದ್ರವಾಗಿ ಇದೆ. ಆಡಳಿತದಲ್ಲಿ ಬಿಗಿ ಇದೆ. ನಾನು ಹೇಳುತ್ತಿದ್ದೇನೆ ಆದಾಯದಲ್ಲಿ ಹೆಚ್ಚಳವಾಗಿದೆ. ಕಳೆದ ನಾಲ್ಕು ತಿಂಗಳಲ್ಲಿ ಆಡಳಿತ ಬಿಗಿಯಾಗಿದೆ. ಸರ್ಕಾರ ಭದ್ರವಾಗಿಯೇ ಇದೆ. ಜನರ ಹತ್ತಿರ ಹೋಗುವ ಕಾಲ ಬರುತ್ತಿದೆ. ಅದು ತಡವೇನಿಲ್ಲ.

ನಾವು ಜನರ ಹತ್ತಿರ ಹೋಗುವುದಕ್ಕೆ ಹಿಂದೆ ಬೀಳುವುದಿಲ್ಲ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ. ಜನತಾ ದಳ ಸರ್ಕಾರದ ಬಗ್ಗೆ ರಾಜ್ಯಪಾಲರಲ್ಲಿ ಹೋಗಿ ಹೇಳಿದಿರಿ. ರಾಜ್ಯಪಾಲರನ್ನೇ ತೆಗೆಯಲಿಕ್ಕೆ ಪ್ರಯತ್ನ ಮಾಡಿದಿರಿ. ಆದರೆ ಏನೂ ಆಗಲಿಲ್ಲ. ಅದೇನೇ ಇರಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಗೌವರ್ನರ್‌ನ್ನು ತೆಗೆಯಬೇಕೆಂದು ನಿಮ್ಮ ಹತ್ತಿರ ಬಂದು ಹೇಳಿದ್ದೇವೆ ? ಫಾಲ್ಸ್ ಇನ್‌ಫರ್‌ಮೇಷನ್ ಏತಕ್ಕೆ ಕೊಡುತ್ತಿದ್ದೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಮ್ಮ ಪಕ್ಷದವರು ನಿರ್ಣಯ ಕೊಟ್ಟಿದ್ದಾರೆ. ಗೌವರ್ನರ್ ನಿರ್ಣಯ ಕೊಟ್ಟಿದ್ದಾರೆ. ಸಭೆಯ ಮಾನ್ಯ ಸದಸ್ಯರು ನಿರ್ಣಯವನ್ನು ಕೊಟ್ಟಿದ್ದಾರೆ. ನಾನೂನು ಬದ್ಧವಾದ ಸರ್ಕಾರ ಇದೆ. ಸರ್ಕಾರ ಕಾನೂನು ಬದ್ಧವಾಗಿ ಕೆಲಸ ಮಾಡುತ್ತಿದೆ. ಅದರಲ್ಲಿ ಹಿಂದೆ ಮುಂದೆ ನೋಡಬೇಕಾದ ಅಗತ್ಯವಿಲ್ಲ. ಸರ್ಕಾರ ಭದ್ರವಾಗಿ ಜನತಂತ್ರದ ಆಧಾರದ ಮೇಲೆ ಇದೆ. ಮಾನ್ಯ ಕೆ. ಎಚ್. ಶ್ರೀನಿವಾಸ್‌ರವರು ಏನೋ ಆಕಾಶ ಕಳಚಿ ನನ್ನ ಮೇಲೆ ಬೀಳುತ್ತದೆಂದು ಹೇಳಿದರು. ನಾನು ೧೯೮೧ರಿಂದ ೮೩ರ ವರೆಗೆ ಪಕ್ಷದಲ್ಲಿ ಅಧ್ಯಕ್ಷನಾಗಿ ಇದ್ದೆ, ಪಕ್ಷ ಕಟ್ಟಿದ್ದೇನೆ. ೧೯೮೧ ರಿಂದ ೮೩ರ ವರೆಗೆ ಪಕ್ಷದ ಕಾರ್ಯವನ್ನು ಮಾಡಿದ್ದೇನೆ. ಯಾರದೇ ಆಶೀರ್ವಾದ ನನಗೆ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ನಿಮಗಿಂತ ಮೊದಲು ಅಧ್ಯಕ್ಷರಾಗಿ, ಲೀಡರ್ ಆಗಿದ್ದವರು ಏನೂ ಕೆಲಸ ಮಾಡಲಿಲ್ಲವೇ ?

ಶ್ರೀ ಎಸ್. ಆರ್. ಬೊಮ್ಮಾಯಿ. ಜನತಾ ಸರ್ಕಾರದ ಬಗ್ಗೆ ಬಹಿರಂಗವಾಗಿ ಹೇಳಿದ್ದೇನೆ. ೧೯೮೩ರಲ್ಲಿ ಅಧಿಕಾರಕ್ಕೆ ಬರಲಿಕ್ಕೆ ಕ್ರಾಂತಿರಂಗದ ಜೊತೆಗೆ ಮಾನ್ಯ ದೇವರಾಜ ಅರಸ್‌ರವರು ಮತ್ತು ಮಾನ್ಯ ಬಂಗಾರಪ್ಪನವರು ಸಹಕಾರ ಮಾಡಿದ್ದಾರೆ. ಅವರು ಸಹಕಾರ ಮಾಡದಿದ್ದರೆ ನಾವು ಅಧಿಕಾರಕ್ಕೆ ಬರುತ್ತಿರಲಿಲ್ಲ. ಅದಕ್ಕೋಸ್ಕರವಾಗಿ ವಿರೋಧ ಪಕ್ಷದವರು ಮಧ್ಯೆ ಒಡೆದು ಹೋಗಬಾರದು, ಸಂಘಟನೆಯಾಗಬೇಕು. ಜನತಾದಳದಲ್ಲಿ ಮಾನ್ಯ ಚಂದ್ರಶೇಖರ್‌ರವರು, ಜೆ. ಹೆಚ್. ಪಟೇಲ್‌ರವರು, ಮಾನ್ಯ ಹೆಗಡೆಯವರು, ಮಾನ್ಯ ರಾಚಯ್ಯನವರು ಎಲ್ಲರೂ ಇದ್ದಾರೆ. ಈವತ್ತು ಈ ವಿಚಾರದಲ್ಲಿ ನಿಮಗೆ ದಿಗಿಲಾಗಿದೆ. ಜನತಾದಳ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ನಿಮಗೆ ಒಂದು ರೀತಿಯಾದ ಗಾಬರಿಯಾಗಿದೆ. ನಿಮ್ಮ ಭವಿಷ್ಯದ ಬಗ್ಗೆ ಚಿಂತನೆ ಶುರುವಾಗಿದೆ. ಜನತಾದಳ ಎಲ್ಲಿದೆ, ಎಲ್ಲಿದೆ ಎಂದು ಕೇಳಿದಿರಿ. ರಾಷ್ಟ್ರದ ೩೦ ಕೋಟಿ ಜನರಲ್ಲಿ ಇದೆ. ಅದಕ್ಕೆ ಕಾಲ ಬರುತ್ತದೆ. ಡಿಸೆಂಬರ್ ಒಳಗೆ ಚುನಾವಣೆಗಳಾದರೆ, ಲೋಕಸಭೆ ಮತ್ತು ವಿಧಾನಸಭೆಗಳ ಚುನಾವಣೆಗಳು ಬಂದಾಗ ಎಲ್ಲಾ ಬಣ್ಣ ಬಯಲಾಗುತ್ತದೆ. ಅದಕ್ಕಾಗಿ ಕಾಯ್ದು ನೋಡೋಣ. ಶಾಸನಸಭೆಯ ಚುನಾವಣೆಗಳನ್ನು ಮತ್ತು ಲೋಕಸಭೆಯ ಚುನಾವಣೆಗಳನ್ನು ಕಾಯ್ದು ನೋಡೋಣ. ಜನ ತೀರ್ಮಾನ ಕೊಡುತ್ತಾರೆ.

ಅಧ್ಯಕ್ಷರು.—ಈಗ ದಯವಿಟ್ಟು ಮಾನ್ಯ ಖರ್ಗೆಯವರು ಕ್ಲಾರಿಫಿಕೇಶನ್ ಕೇಳಲಿ. ಮಾನ್ಯ ಖರ್ಗೆಯವರೇ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ನಾನು ಸ್ಪೆಷಲ್ ಕಾಂಪೊನೆಂಟ್ ಸ್ಕೀಮ್ ಬಗ್ಗೆ ಪ್ರಶ್ನೆ ಕೇಳಿದ್ದೆ. ಪತ್ರವನ್ನೂ ಕೂಡ ಬರೆದಿದ್ದೆ. ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾದ ಉತ್ತರವನ್ನು ಕೊಡಲಿಲ್ಲ. ಸ್ಪೆಷಲ್ ಕಾಂಪೊನೆಂಟ್ ಸ್ಕೀಮ್ ಬಗ್ಗೆ ಎಲ್ಲಾ ಡಿಪಾರ್ಟ್‌ಮೆಂಟ್‌ಗಳೂ ಸೇರಿ ಅದಕ್ಕೆ ಎಷ್ಟು ಹಣವನ್ನು ಸರ್ಕಾರದಿಂದ ಒದಗಿಸಿದ್ದೀರಿ, ಅದರಲ್ಲಿ ಖರ್ಚು ಮಾಡಿರುವುದು ಎಷ್ಟು ? ಇದರ ಬಗ್ಗೆ ಸ್ಪಷ್ಟವಾಗಿ ಉತ್ತರ ಬರಲಿಲ್ಲ. ತಮಗೆ ಹಣಕಾಸಿನ ಇಲಾಖೆಯಿಂದ ಕೊಟ್ಟಿರತಕ್ಕಂಥ ಉತ್ತರ ತಪ್ಪಿರಬಹುದು. ಅಥವಾ ಅವರು ಹೇಳಿದ್ದು ತಪ್ಪಿರಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಪ್ರಶ್ನೆಗೆ ನಾಳೆ ಅಥವಾ ನಾಡಿದ್ದು ಪೂರ್ಣ ವಿವರ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕೆಲವೊಂದು ಯೋಜನೆಗಳ ಹೆಸರಿನಲ್ಲಿ ಹಣವನ್ನು ಇಡುತ್ತಾರೆ. ಅದರಲ್ಲಿ ಇಷ್ಟು ಕಡೆ ಖರ್ಚು ಮಾಡಿದ್ದೇವೆಂದು ಹೇಳುತ್ತಾರೆ. ಆದರೆ ವಾಸ್ತವವಾಗಿ ಅಷ್ಟು ಹಣ ಅಲ್ಲಿ ಖರ್ಚಾಗಿರುವುದಿಲ್ಲ. ಇವತ್ತಿನ ದಿವಸ ಸರ್ಕಾರದಲ್ಲಿ ೫೦ ಸಾವಿರ ವೇಕೆನ್ಸಿಗಳು ಇವೆ ಎಂದು ಹೇಳಿದಿರಿ. ಅವನ್ನು ಈ ವರ್ಷ ಭರ್ತಿ ಮಾಡುತ್ತೀರಾ ಹೇಗೆ? ಎಕಾನಮಿ ಆರ್ಡರನ್ನು

ಲಿಫ್ಟ್ ಮಾಡಿ ಇಲಾಖೆಗಳಲ್ಲಿರತಕ್ಕ ಖಾಲಿ ಜಾಗಗಳನ್ನು ತುಂಬುತ್ತೀರಾ? ಇರಿಗೇಷನ್ ಪೊಟೆನ್ಷಿಯಾಲಿಟಿಯನ್ನು ನಮ್ಮ ಕಾಲದಲ್ಲಿ ಕ್ರಿಯೇಟ್ ಮಾಡಿದ್ದೇವೆ. ಅದಕ್ಕೆ ಹೆಚ್ಚಿನ ಹಣವನ್ನು ಕೊಟ್ಟಿದ್ದೇವೆಂದು ನೀವು ಒತ್ತಿ ಹೇಳಿದಿರಿ. ತಾವು ಕೊಟ್ಟ ಅಂಕಿಸಂಖ್ಯೆಗಳ ಪ್ರಕಾರ ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ಗೆ ಸಂಬಂಧಪಟ್ಟದ್ದನ್ನು ಹೇಳುತ್ತೇನೆ, ನೋಡಿ:

ವರ್ಷ	ಕೊಟ್ಟಿದ್ದು	ಖರ್ಚಾದದ್ದು
	(ಕೋಟಿ ರೂ.ಗಳಲ್ಲಿ)	
೧೯೮೫–೮೬	೪೯	೪೬
೧೯೮೬–೮೭	೬೬	೫೨
೧೯೮೭–೮೮	೮೫	೪೩
೧೯೮೮–೮೯	೪೫	೩೨ (ಫೆಬ್ರುವರಿ ಕೊನೆಯುವರೆಗೆ)

ಬಜೆಟ್ ಭಾಷಣದಲ್ಲಿ ಪ್ರಿಂಟ್ ಆದದ್ದನ್ನು ಅನುಸರಿಸಿಕೊಂಡು ಹೋಗುವುದಿಲ್ಲ. ಬಜೆಟ್ ಭಾಷಣದಲ್ಲಿ ಎಲ್ಲಾ ಇದೆ. ಇರಿಗೇಷನ್‌ಗೆ ಈ ವರ್ಷ ೩೧೯ ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ೧೯೮೭–೮೮ರಲ್ಲಿ ೮೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುವಾಗ ಬಜೆಟ್ಟಿನಲ್ಲಿ ಇರಿಗೇಷನ್‌ಗೆ ಎಷ್ಟು ಇಟ್ಟಿದ್ದರು ಎಂದು ಹೇಗೆ ಅರ್ಥ ಮಾಡಿಕೊಳ್ಳಬೇಕು? ಇದಕ್ಕೆ ಕಾರಣವೇನು? ಏತಕ್ಕೆ ಈ ರೀತಿ ಆಯಿತು? ಕಾಡಾ ಎಲ್ಲಾ ಸೇರಿಸಿ ೩೧೯ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಲ್ಲಾ ಇದು ಸರಿಯೇ? ಅಷ್ಟನ್ನು ಖರ್ಚು ಮಾಡುವ ಶಕ್ತಿ ಸರ್ಕಾರಕ್ಕೆ ಇದೆಯೇ?

ಶ್ರೀ ಎಸ್.ಆರ್. ಬೊಮ್ಮಾಯಿ.—ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ಗೆ ಬಜೆಟ್ಟಿನಲ್ಲಿ ಇಟ್ಟಿರುವುದಕ್ಕಿಂತ ಕಡಿಮೆ ಹಣ ಖರ್ಚಾಗಿದೆ ಎಂಬುದನ್ನು ಒಪ್ಪುತ್ತೇನೆ. ಕಾರಣವೇನೆಂದರೆ, ವಿಶ್ವ ಬ್ಯಾಂಕ್‌ನಿಂದ ಕ್ಲಿಯರೆನ್ಸ್ ಬರಬೇಕಾಗಿತ್ತು. ಅದನ್ನು ಲೆಕ್ಕ ಇಟ್ಟುಕೊಂಡು ಹಣವನ್ನು ಒದಗಿಸಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೧೯೮೭–೮೮ರದ್ದು ಆಯಿತು, ೧೯೮೮–೮೯ರದ್ದು ಏನು?

ಶ್ರೀ ಎಸ್.ಆರ್. ಬೊಮ್ಮಾಯಿ.—೩೦ ಕೋಟಿ ರೂಪಾಯಿ ವಿಶ್ವಬ್ಯಾಂಕಿನಿಂದ ಬರುತ್ತದೆಂಬ ಆಧಾರದ ಮೇಲೆ ಇಟ್ಟದ್ದು. ಅಪ್ಪರ್ ಕೃಷ್ಣದಲ್ಲಿ ಬಜೆಟ್ಟಿನಲ್ಲಿ ತೋರಿಸಿದ ಹಣಕ್ಕಿಂತ ಕಡಿಮೆ ಖರ್ಚಾಗಿದೆ. ಈ ವರ್ಷ ಸಂಪೂರ್ಣ ಹಣ ಖರ್ಚು ಮಾಡುತ್ತೇವೆಂದು ಹೇಳುತ್ತೇನೆ. ಮೇಕೆನ್ಸಿ ವಿಚಾರ ತೆಗೆದುಕೊಂಡರೆ ಈ ವರ್ಷ ಇಲ್ಲಿಗೆ ಮುಗಿಯಿತು, ಮುಂದಿನ ವರ್ಷ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ನಾನು ಮೂರು ವಿಚಾರಗಳನ್ನು ಕೇಳಬಯಸುತ್ತೇನೆ. ಕರ್ನಾಟಕದಲ್ಲಿರತಕ್ಕ ಲಿಟರೇಟ್ ಮತ್ತು ಇಲ್ಲಿಟರೇಟ್ ಕುಟುಂಬಗಳ ಪೈಕಿ ಮನೆಗೊಂದು ಉದ್ಯೋಗ ಕೊಡತಕ್ಕ ಘೋಷಣೆ ಪ್ರಕಾರ ಎಷ್ಟು ಕುಟುಂಬಗಳು ಬರುತ್ತವೆ? ಈ ಬಗ್ಗೆ ಅಂಕಿ ಅಂಶಗಳನ್ನು ಕೊಟ್ಟರೆ ಸಾಕು. ಸೊಸೈಟಿಗಳಿಗೆ ರೈತರು ಕಟ್ಟಬೇಕಾದ ಬಡ್ಡಿಯ ಹಣವನ್ನು ನಾವು ಕಟ್ಟುತ್ತೇವೆಂದು ವಹಿಸಿಕೊಂಡಿರಿ. ಇದುವರೆಗೆ ಸೊಸೈಟಿಗಳಿಗೆ ನೀವು ಹಣ ಕೊಟ್ಟಿಲ್ಲವೆಂದು ರೈತರು ತೊಂದರೆಪಡುತ್ತಿದ್ದಾರೆ. ಇದಕ್ಕೆ ಯಾವ ಕಾರ್ಯಕ್ರಮವನ್ನು ಹಾಕಿದ್ದೀರಿ? ಮಾರಾಟ ತೆರಿಗೆ ಇತ್ಯಾದಿ ಹಣ ವಸೂಲಾತಿ ವಿಚಾರ ಇರಬಹುದು ಅಥವಾ ಬೋರ್ಡ್. ಕಾರ್ಪೊರೇಷನ್ ವಿಚಾರ ಇರಬಹುದು. ಉದಾಹರಣೆಗೆ ಹೇಳುವುದಾದರೆ ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡಿನಿಂದ ೨೦೪ ಕೋಟಿ ರೂಪಾಯಿ ಬಾಕಿ ಬರಬೇಕಾಗಿದೆ ಒಂದೊಂದು ಕಂಪನಿಯಿಂದ ಒಂದೊಂದು ಲಕ್ಷ ರೂಪಾಯಿ ಬರಬೇಕಾಗಿದೆ. ಒಂದು ಲಕ್ಷಕ್ಕಿಂತ ಮೇಲ್ಪಟ್ಟು ಬಾಕಿ ಇರತಕ್ಕ ಕಂಪನಿಗಳ ಬಗ್ಗೆ ಮಾನ್ಯ ಕಾನಡೆಯವರ ಪ್ರಶ್ನೆಗೆ ಉತ್ತರ ಬಂದಿತು. ಕೆಲವು ಕೋರ್ಟಿನಲ್ಲಿ ಇರತಕ್ಕ ಕೇಸುಗಳನ್ನು ಬಿಡಿ. ಅವನ್ನು ಅರ್ಜೆಂಟ್ ಆಗಿ ಮುಗಿಸಬೇಕತ್ತು ಉಳಿದ ಕೇಸ್‌ಗಳಲ್ಲೂ ವಸೂಲಾತಿ ಆಗಿಲ್ಲ. ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ ಕೂಡ ಕೆಲವು ಕೇಸಸ್. ಬಿಟ್ಟರೆ ಉಳಿದಿರತಕ್ಕ ಹಣ ವಸೂಲ್ಮಾಡುವುದಕ್ಕೆ ಆಗಿಲ್ಲ, ಇಲಾಖೆ ಮಲಗಿದೆ. ಏತಕ್ಕೆ ಹಣವನ್ನು

೬–೦೦ ಪಿ.ಎಂ.

ವಸೂಲು ಮಾಡುತ್ತಿಲ್ಲ? ರಿಸೋರ್ಸಸ್ ಮೊಬಲೈಸೇಷನ್ ಮಾಡದೇ ಇದ್ದರೆ ಯೋಜನಾ ಗಾತ್ರವನ್ನು ಜಾಸ್ತಿ ಮಾಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಪ್ಲಾನಿಂಗ್ ಕಮಿಷನ್‌ನವರು ಹೇಗೆ

ಒಪ್ಪಿಗೆ ಕೊಡುತ್ತಾರೆ? ನಿಮ್ಮ ಹಣವನ್ನು ಎಲ್ಲಿಂದ ತೋರಿಸುತ್ತೀರಿ? ಈ ಮೂರು ಪ್ರಶ್ನೆಗಳಿಗೆ ಉತ್ತರ ಕೊಡಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮೊದಲನೆಯದು, ರೈತರಿಗೆ ಸಾಲ ಕೊಡತಕ್ಕದ್ದು. ಬಡ್ಡಿ ವಿಚಾರದಲ್ಲಿ ಸರ್ಕಾರ ಕೊಡತಕ್ಕ ಹಣವನ್ನು ಬಿಡುಗಡೆ ಮಾಡುತ್ತೇವೆ. ಏತಕ್ಕೆ ಅದು ನಿಂತಿದೆ ಎಂಬ ಬಗ್ಗೆ ಹೇಳುತ್ತೇನೆ. ನಬಾರ್ಡ್‌ನಿಂದ ಅಪೆಕ್ಸ್ ಬ್ಯಾಂಕಿಗೆ ದುಡ್ಡು ಬರಬೇಕು. ನಂತರ ರೈತರಿಗೆ ಕೊಡಬೇಕು. ಹಿಂದೆ ಒಂದು ಸಾರಿ ರೈತರಿಗೆ ಸಬ್ಸಿಡಿ ಕೊಡುವುದಿಲ್ಲ ಎಂದು ಬರೆದುಕೊಟ್ಟರೆ ಮಾತ್ರ ಹಣ ಬಿಡುಗಡೆ ಮಾಡುತ್ತೇವೆ ಎಂದು ಹೇಳಿದ್ದರು. ಮೂರು ದಿವಸದ ಹಿಂದೆ ನೀವು ರೈತರಿಗೆ ಸಬ್ಸಿಡಿ ಕೊಡುತ್ತಿದ್ದೀರಿ. ಆದ್ದರಿಂದ ಹಣ ಕೊಡುವುದಿಲ್ಲ ಎಂದು ಹೇಳಿದರು. ನಬಾರ್ಡ್‌ನವರ ನೀತಿ ಏನೆಂದರೆ ಬಡ್ಡಿ ಬಿಡಬಾರದು, ಸಬ್ಸಿಡಿ ಕೊಡಬಾರದು ಎಂಬುದು. ಮೂರು ದಿವಸದಿಂದ ಹಣ ಕೊಡುವುದನ್ನು ನಿಲ್ಲಿಸಿದ್ದರು. Again I had to speak to the Chairman followed by a Telegram. ನಾವು ರೈತರಿಗೆ ಸಬ್ಸಿಡಿ ಕೊಡುವುದಿಲ್ಲ, ನಬಾರ್ಡ್ ನೀತಿಯನ್ನು ಮುಂದು ವರೆಸಿಕೊಂಡು ಹೋಗುತ್ತೇವೆ ಎಂದು ಭರವಸೆ ಕೊಟ್ಟ ಮೇಲೆ ಹಣ ಬಿಡುಗಡೆ ಮಾಡಿದ್ದಾರೆ. ಈ ವಿಚಾರವನ್ನು ಗೌರ್ನಮೆಂಟ್ ಆಫ್ ಇಂಡಿಯಾ ಜೊತೆ ಚರ್ಚೆ ಮಾಡಲು ಎತ್ತಿಕೊಂಡಿದ್ದೇನೆ. ನಬಾರ್ಡ್‌ನವರ ನೀತಿ ಬದಲಾವಣೆಯಾಗದೇ ಇದ್ದರೆ ರೈತರಿಗೆ ಸಹಾಯ ಮಾಡುವುದು ಕಷ್ಟವಾಗುತ್ತದೆ. ನಾವು ಸಬ್ಸಿಡಿ ಕೊಟ್ಟರೆ ಹಣ ಬಿಡುಗಡೆ ಮಾಡುವುದಿಲ್ಲ ಎಂದು ಅವರು ಹೇಳುತ್ತಾರೆ. ಪಿ.ಎಲ್.ಡಿ. ಬ್ಯಾಂಕಿನವರೂ ಬಂದಿದ್ದರು. ನಾನು ಅವರಿಗೂ ಈ ವಿಚಾರ ಹೇಳಿದ್ದೇನೆ. ಈ ಕಾರಣಕ್ಕೆ ಸಬ್ಸಿಡಿ ಕೊಡತಕ್ಕದ್ದು ಮತ್ತು ಸಹಾಯ ಮಾಡತಕ್ಕದ್ದು ಕಷ್ಟಕ್ಕೆ ಬಂದಿದೆ. I have taken up the matter with the Government of India and I am hopeful of getting the clearence from it. ಆಮೇಲೆ ಮನೆಗೊಂದು ಕೆಲಸದ ಬಗ್ಗೆ ಹೇಳಿದ್ದಾರೆ. ಕೆಲಸ ಅಂದರೆ ಸರ್ಕಾರಿ ಕೆಲಸ ಅಲ್ಲ ಎಂದು ಹೇಳಿದ್ದೇನೆ. ಎಂಪ್ಲಾಯ್‌ಮೆಂಟ್ ಜನರೇಷನ್ ವಿಚಾರದಲ್ಲಿ ನನ್ನ ಹತ್ತಿರ ವಿವರವಾದ ಸಂಖ್ಯೆ ಇಲ್ಲ. I will give the details for the last 5 years in respect of the employment potential created in private or public sector industries and in other sectors irrespective of big or small. ಶೇಕಡ ೫೦ರಷ್ಟು ಆಗಿದೆ ಎಂಬ ಭಾವನೆ ಇದೆ. ಪೋರ್ಟ್‌ಫೋಲ್ ಇರುವುದಕ್ಕೆ ಹೊಸಯೊ ಜನೆಯನ್ನು ಹಾಕುತ್ತಿದ್ದೇವೆ. ಎಷ್ಟಾಗಿದೆ, ಎಷ್ಟಾಗಿಲ್ಲ ಎಂಬ ವಿವರವನ್ನು ಕೊಡುತ್ತೇನೆ. ಎಕ್ಸೈಜ್ ಬಗ್ಗೆ ತಾವು ಹೇಳಿದ್ದು ಸರಿಯಲ್ಲ. ಕಮರ್ಷಿಯಲ್ ಟ್ಯಾಕ್ಸ್ ಬಾಕಿ ಇರತಕ್ಕದ್ದು ಹಿಂದಿನದು ಎಲ್ಲಾ ಕೂಡಿದರೆ ೧೭೭.೫೮ ಕೋಟಿ ರೂಪಾಯಿಗಳು. ಸ್ಟೇಟ್ ಎಕ್ಸೈಜ್ ೮೦.೫ ಕೋಟಿ ರೂಪಾಯಿಗಳು, ಲ್ಯಾಂಡ್ ರೆವಿನ್ಯೂ ೧೩.೬೧ ಕೋಟಿ ರೂಪಾಯಿಗಳು ವಾಟರ್ ರೇಟ್ ೧೯.೮೧ ಕೋಟಿ ರೂಪಾಯಿಗಳು. ಸ್ಟಾಂಪ್ಸ್ ಅಂಡ್ ರಿಜಿಸ್ಟ್ರೇಷನ್ ೯.೩೧ ಕೋಟಿ ರೂಪಾಯಿಗಳು. ಮೋಟಾರ್ ವೆಹಿಕಲ್ಸ್ ೧೬ ಕೋಟಿ ರೂಪಾಯಿಗಳು. ಕೆ.ಇ.ಬಿ.ಗೆ ಸಂಬಂಧಪಟ್ಟದ್ದು ಬೇರೆ ವಿವರಗಳಿವೆ. ಅದನ್ನು ಕೊಡುತ್ತೇನೆ. The dues are from different Government Departments. ಮನೆಗೊಂದು ಕೆಲಸದ ಬಗ್ಗೆ ಮಾನ್ಯ ಬಂಗಾರಪ್ಪನವರಿಗೆ ಹೇಳುತ್ತೇನೆ, ತಾವು ಬೇಜಾರು ಮಾಡಿಕೊಳ್ಳಬೇಡಿ. ೧೯೭೧ರಲ್ಲಿ ಕಾಂಗ್ರೆಸ್ ಮ್ಯಾನಿಫೆಸ್ಟೋದಲ್ಲಿ ಮನೆ ಇಲ್ಲದವರಿಗೆ ಮನೆ, ಕೆಲಸ ಇಲ್ಲದವರಿಗೆ ಕೆಲಸ. ಜಮೀನಿಲ್ಲದವರಿಗೆ ಜಮೀನು ಕೊಡುತ್ತೇವೆ ಎಂದು ಶ್ರೀಮತಿ ಇಂದಿರಾಗಾಂಧಿಯವರು ಹೇಳಿದ್ದರು. ಎಷ್ಟು ಜನರಿಗೆ ಮನೆ ಕೊಟ್ಟಿದ್ದೀರಿ? ಎಷ್ಟು ಜನರಿಗೆ ಜಮೀನು ಕೊಟ್ಟಿದ್ದೀರಿ? ಎಷ್ಟು ಜನರಿಗೆ ಕೆಲಸ ಕೊಟ್ಟಿದ್ದೀರಿ ಎನ್ನುವುದನ್ನು ದಯವಿಟ್ಟು ಹೇಳಿ.

ಶ್ರೀ ಎಸ್. ಬಂಗಾರಪ್ಪ.—ಬಹಳ ಒಳ್ಳೆಯ ಪ್ರಶ್ನೆ ಕೇಳಿದ್ದೀರಿ. ನಿಜವಾಗಿ ಕೇಳಬೇಕಾದ ಪ್ರಶ್ನೆಯೇ ಇದು. ಅದಕ್ಕಾಗಿ ಮಾನ್ಯ ಅಧ್ಯಕ್ಷರ ಮುಖಾಂತರ ತಮ್ಮನ್ನು ಅಭಿನಂದಿಸುತ್ತೇನೆ. ನಮ್ಮ ಕಾಂಗ್ರೆಸ್ ಸರ್ಕಾರ ೧೯೮೩ರವರೆಗೆ ಯಾವರೀತಿ ಕೆಲಸ ಮಾಡಿದೆ ಎಂಬುದಕ್ಕೆ ದಾಖಲೆಗಳಿವೆ. ಅದನ್ನು ತೆಗೆಸಿ ನೋಡಿ. ತಾಲ್ಲೂಕುಗಳು ಅಂದರೆ ಕೆಲವು ಚಿಕ್ಕದಿರುತ್ತದೆ, ಕೆಲವು ದೊಡ್ಡದಿರುತ್ತದೆ, ಒಂದೊಂದು ತಾಲ್ಲೂಕಿಗೆ ಒಂದು ವರ್ಷಕ್ಕೆ ೬೦೦ ರಿಂದ ೧೦೦೦೦ ಮನೆಗಳನ್ನು ನಾವು ಮಂಜೂರು ಮಾಡಿದ್ದೇವೆ. ಒಂದೊಂದು ತಾಲ್ಲೂಕಿನಲ್ಲಿ ೯, ೧೦, ೧೫. ೨೦ ಮಂಡಲಗಳಿವೆ. ನನ್ನ ತಾಲ್ಲೂಕಿನಲ್ಲಿ ೧೯–೨೦ ಮಂಡಲಗಳಿವೆ. ಒಂದು ಮಂಡಲಕ್ಕೆ ೬೦–೭೦ ಮನೆಗಳನ್ನು ಕೊಟ್ಟಿದೆ. ನೀವು ಒಂದು ಮನೆಯನ್ನೂ ಕೊಟ್ಟಿಲ್ಲ. ನಿಮ್ಮದು ಎಲ್ಲಾ ಟೋಟಲ್ ಮಾಡಿದರೆ ಒಂದು ನೂರು ಮನೆಗಳನ್ನೂ ನೀವು ಕೊಡುವುದಕ್ಕಾಗಲಿಲ್ಲ, ನಾವು ಸಾವಿರ ಮನೆಗಳನ್ನು ಕೊಟ್ಟಿದ್ದೇವೆ, ಆ ಹೆಗ್ಗಳಿಕೆ ಕಾಂಗ್ರೆಸ್ ಸರ್ಕಾರಕ್ಕಿದೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರು ಆ ಸಂದರ್ಭದಲ್ಲಿ ಸಚಿವರಾಗಿದ್ದರು. ಅವರ ತಾಲ್ಲೂಕಿನಲ್ಲೇ ಜನತಾ ಮನೆಗಳನ್ನು ಕಟ್ಟಿದ್ದೇವೆಯೋ ಅಥವಾ ಇಲ್ಲವೋ ಎಂಬುದನ್ನು ಅವರಿಂದಲೇ ಕೇಳಿ ತಿಳಿದು ಕೊಳ್ಳಿ. ಇವತ್ತು ನಿಮ್ಮ ಮಂಡಲ್ ಪಂಚಾಯಿತಿ ಬಂದ ಮೇಲೆ ಏನಾಗಿದೆ ಎಂಬುವನ್ನು ಹೇಳಿ. ತಾವು ಇನ್ನೊಂದು ವಿಚಾರದಲ್ಲಿ ಮೊನ್ನೆ ಕೂಡ ಲ್ಯಾಂಡ್ ರಿಫಾರ್ಮ್ಸ್ ಬಗ್ಗೆ ಪ್ರಶ್ನೆ ಬಂದಾಗ ಉತ್ತರ ಕೊಟ್ಟಿರಿ. ೧೯೭೪ಕ್ಕಿಂತ ಹಿಂದೆ ಆಗಿರತಕ್ಕಂತಹವರಿಂದ ವಸೂಲು ಮಾಡುವುದಿಲ್ಲ ಎಂದು ಮುಂದೆ ಅದರ ಬಗ್ಗೆ ತಿದ್ದುಪಡಿಯನ್ನು ತರುವವರಿದ್ದೇವೆ ಎನ್ನುವ ಮಾತನ್ನೂ ಕೂಡ ಹೇಳಿದ್ದೀರಿ. ಆದರೆ ಮಾನ್ಯ ಕಂದಾಯ ಮಂತ್ರಿಗಳಾದ ಪಟೇಲ್‌ರವರು ಶಿವಮೊಗ್ಗದಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದು ಪತ್ರಿಕೆಯಲ್ಲೂ ಕೂಡ ಬಂದಿದೆ.

ಪ್ರೊ|| ಎ. ಲಕ್ಷ್ಮೀಸಾಗರ್.—ಅಡ್ಮಿನಿಸ್ಟ್ರೇಷನ್‌ನ ಎಲ್ಲಾ ವಿವರಣೆಯನ್ನೂ ಕೇಳಿದರೆ ಆಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಲಕ್ಷ್ಮೀಸಾಗರ್‌ರವರೆ ನಿಮಗೆ ಅರ್ಥವಾಗುವುದಿಲ್ಲ, ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

ಪ್ರೊ|| ಎ. ಲಕ್ಷ್ಮೀಸಾಗರ್.—ಇವೆಲ್ಲಾ ನಡೆಯುವುದಿಲ್ಲ. ದಬಾಯಿಸುವುದಕ್ಕೆ ಹೋಗಬೇಡಿ.

(ಗೊಂದಲ)

SRI S. BANGARAPPA.—You are unnecessary creating the trouble.* * Are serious about the poor people ? * *

(INTERRUPTIONS)

SRI S. BANGARAPPA.—I have taken permission of the Chair to raise a clarification.

MR. SPEAKER.—Nothing will go on record.

(INTERRUPTINS)

ಜನತಾ ಮನೆ ವಿಚಾರದಲ್ಲಿ ನಿಮ್ಮಿಂದಲೂ ಆಗಿದೆ. ಅವರಿಂದಲೂ ಆಗಿದೆ. ಜನತಾ ಮನೆಗಳನ್ನು ಕಟ್ಟಿಸಿಕೊಡುವ ವಿಚಾರದಲ್ಲಿ ಕಾಂಗ್ರೆಸ್ ಸರ್ಕಾರ ಇದ್ದಾಗಲೂ ಅವರ ಕಾರ್ಯ ಆಗಿದೆ, ಜನತಾ ಸರ್ಕಾರದ ಅವಧಿಯಲ್ಲೂ ಅದರ ಕಾರ್ಯ ಆಗಿದೆ. ಅವರ ಕಾಲದಲ್ಲಿ ಅವರು ಚೆನ್ನಾಗಿ ಕೆಲಸ ಮಾಡಿದ್ದಾರೆ. ಇವರ ಕಾಲದಲ್ಲಿ ಇವರೂ ಚೆನ್ನಾಗಿ ಕೆಲಸ ಮಾಡಿದ್ದಾರೆ.

ಪ್ರೊ|| ಎ. ಲಕ್ಷ್ಮೀಸಾಗರ್.—ಅವರು ವಿವರಣೆ ಎಂದು ಕೇಳುವ ಕಾಲದಲ್ಲಿ ಹೇಳಿದನ್ನು ಕಡತದಿಂದ ತೆಗೆದುಹಾಕಬೇಕು.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ 'Bloody hell' ಅಂತ ಹೇಳಿದ್ದು ಸರಿಯಾದುದಲ್ಲ. ಇಲ್ಲಿಯವರೆಗೆ ಸುಮ್ಮನೆ ಇದ್ದು ಈಗ ಏಕೆ ಈ ರೀತಿ? ಅನ್‌ಪಾರ್ಲಿಮೆಂಟರಿ ಪದಗಳನ್ನು ಇಬ್ಬರೂ ಉಪಯೋಗಿಸಿದ್ದರೆ ಅದನ್ನು ಕಡತದಿಂದ ತೆಗೆದುಹಾಕಲಾಗುವುದು.

ಪ್ರೊ|| ಎ. ಲಕ್ಷ್ಮೀಸಾಗರ್.—ನನ್ನದೊಂದು ಕ್ರಿಯಾಲೋಪ ಇದೆ. I am on a point of order. ಮಾನ್ಯ ಅಧ್ಯಕ್ಷರೆ, ಈ ಸಭೆಯಲ್ಲಿ ಇರುವಂತಹ ಸಂಪ್ರದಾಯವೇನೆಂದರೆ ಯಾವುದೇ ವಿಷಯದ ಮೇಲೆ ಪ್ರಸ್ತಾಪವಾಗಿ, ಅದಕ್ಕೆ ಸರಿಯಾಗಿ ಅಥವಾ ಪೂರ್ಣವಾಗಿ ಉತ್ತರ ಬರದಿದ್ದರೆ, ಅದರ ಬಗ್ಗೆ ೪ ಪ್ರಶ್ನೆಗಳನ್ನು ಅಲ್ಲಿ ಇಲ್ಲಿ ವಿವರಣೆಗೆ ಅಂತ ಕೇಳಬಹುದು. ಅದನ್ನು ಬಿಟ್ಟು ಇನ್ನೇನನ್ನೂ ಕೇಳುವುದಕ್ಕೆ ಅಧಿಕಾರ ಇದೆಯೆ? ತಾವು ಆ ರೀತಿಯ ಅವಕಾಶವನ್ನು ಅವರಿಗೆ

* * ಅಧ್ಯಕ್ಷರ ಆದೇಶದ ಮೇರೆಗೆ ತೆಗೆದುಹಾಕಲಾಗಿದೆ.

ಕೊಟ್ಟಿದ್ದೀರಾ ? ಮೊದಲಿನಿಂದ ಕೊನೆಯವರೆಗೂ ಅ ಕಾರದಿಂದ ಹ ಕಾರದವರೆಗೂ ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶ ಇಲ್ಲ.

ಅಧ್ಯಕ್ಷರು.—ನಿಮ್ಮ ಪಾಯಿಂಟ್ ಆಫ್ ಆರ್ಡರನ್ನು ಎತ್ತಿ ಹಿಡಿದಿದ್ದೇನೆ.

ಪ್ರೊ॥ ಎ. ಲಕ್ಷ್ಮೀಸಾಗರ್.—ಮತ್ತೆ ಪರಿಮಿತಿಯನ್ನು ತಾವು ನಿಗದಿ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಈ ಸಭೆಯ ಕಾರ್ಯಕಲಾಪಗಳು ಪೂರ್ಣವಾಗುವುದಿಲ್ಲ.

ಅಧ್ಯಕ್ಷರು. —ನಿಮ್ಮ ಕ್ರಿಯಾಲೋಪವನ್ನು ಎತ್ತಿ ಹಿಡಿದಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಅವರು ಎತ್ತಿದಂತಹ ಕ್ರಿಯಾಲೋಪಕ್ಕೆ ಈಗ ಉತ್ತರ ಕೊಡ ಬೇಕಲ್ಲ.

ಅಧ್ಯಕ್ಷರು.—ಇಲ್ಲಿ ೨೭ ಜನರು ಮಾತನಾಡಿದ್ದಾರೆ. ಅದಕ್ಕೆ ಮುಖ್ಯಮಂತ್ರಿಯವರು ಉತ್ತರವನ್ನು ಹೇಳಿದ್ದಾರೆ. ತಾವು ಈಗ ಕ್ಲಾರಿಫಿಕೇಷನ್ ಕೇಳಬೇಕು. ಅದಕ್ಕೆ ಅವರು ಉತ್ತರ ಕೊಡಬೇಕು. ಒಂದು ಕಡೆಯಿಂದ ನಾವು ಹೋಗುತ್ತಿದ್ದೇವೆ. ಅವರಿಗೂ ಉತ್ತರ ಹೇಳಿದ್ದಾರೆ, ನಿಮಗೂ ಅವರು ಉತ್ತರ ಹೇಳಿದ್ದಾರೆ. ಮೊಯಿಲಿಯವರೇ ತಾವು ಈಗ ಕೇಳಿ. ಬಂಗಾರಪ್ಪನವರೇ ತಮಗೆ ನಾನು ಕೊನೆಯಲ್ಲಿ ಮತ್ತೊಮ್ಮೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಕೊಡುತ್ತೇನೆ. ತಾವು ಸಮಾಧಾನದಿಂದ ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಒಂದೇ ಒಂದು ವಿಚಾರ. ನಾನು ತಮ್ಮ ಪರ್ಮಿಷನ್ ತೆಗೆದುಕೊಂಡು ಹೇಳಿದೆ.

ಅಧ್ಯಕ್ಷರು.—ಬೇಡ, ಬೇಡ. ತಾವು ಕುಳಿತುಕೊಳ್ಳಿ ಕೊನೆಗೆ ನಾನು ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ದಯವಿಟ್ಟು ಕೇಳಿ. ತಮ್ಮ ಪರ್ಮಿಷನ್‌ಗೆ ಮರ್ಯಾದೆ, ಬೆಲೆ ಗಿಲೆ ಇಲ್ಲವೇ ? ತಾವು ಪರ್ಮಿಷನ್ ಕೊಡುವುದು, ಅವರು ಹೇಳಿದ ಮೇಲೆ ಬೇಡ ಎಂದು ಹೇಳುವುದೇ ?

ಅಧ್ಯಕ್ಷರು.—ಅವರು ಕ್ರಿಯಾಲೋಪ ಎತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ನಾವು ಹಾಗೇ ಕುಳಿತುಕೊಳ್ಳುವುದೇ ?

ಅಧ್ಯಕ್ಷರು.—ಸದಸ್ಯರು ಕ್ಲಾರಿಫಿಕೇಷನ್. ಕೇಳುವವರು ಬಹಳ ಜನರು ಇದ್ದಾರೆ.

ಶ್ರೀ ಎಸ್. ಬಂಗಾರಪ್ಪ —ಕರ್ನಾಟಕದ ೫ ಲಕ್ಷ ಗೇಣಿದಾರರಿಗೆ ಸಂಬಂಧಪಟ್ಟ ವಿಷಯ ಇದಾಗಿದೆ.

ಅಧ್ಯಕ್ಷರು.—ಕೊನೆಯಲ್ಲಿ ಸ್ಪೆಷಲ್ ಕೇಸ್ ಎಂದು ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಫಾರ್ಮರ್ಸ್ ಬಗ್ಗೆ ಅವರು ಹೇಳಿದ್ದಾರೆ. ಅತ್ಯಂತ ಕಡಿಮೆ ಇರುವ ಫಾರ್ಮರ್ಸ್‌ದು ನಿಲ್ಲಿಸಬೇಕೆಂದು ಹೇಳಿದ್ದಾರೆ. ಅದಕ್ಕೆ ಸುತ್ತೋಲೆ ಹೋಗುತ್ತಿದೆ. ಎಲ್ಲಾದರೂ ಆ ರೀತಿ ಆಗಿದ್ದರೆ ಅದನ್ನು ನಮ್ಮ ಗಮನಕ್ಕೆ ತಂದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—೧೯೮೪ ಕ್ಕಿಂತಲೂ ಹಿಂದೆ......

ಶ್ರೀ ಎಸ್. ಆರ್. ಬೊಮ್ಮಾಯಿ.—೧೦ ಎಕರೆಗಿಂತಲೂ ಕಡಿಮೆ ಜಮೀನು ಇರುವಂತಹವರಿಂದ ಯಾವುದೇ ವಸೂಲಾತಿ ಮುಂದಿನ ನಿರ್ಣಯದವರೆಗೆ ಮಾಡಬಾರದು ಎಂದು ಸರ್ಕಾರದ ನಿರ್ಣಯ ವಾಗಿದೆ. ಈಗಾಗಲೇ ಅದನ್ನು ಹೇಳಿದ್ದೇವೆ. ಅವನ್ನು ನಿಲ್ಲಿಸುತ್ತೇವೆ. ಇದರ ಬಗ್ಗೆ ವಿವರಣೆ ಕೂಡಾ ಕೊಟ್ಟಿದ್ದೇನೆ.

ಶ್ರೀ ಜೆ. ಹೆಚ್. ಪಟೇಲ್.—ನಾನು ಒಂದು ವಿಷಯದ ಬಗ್ಗೆ ಸ್ವಲ್ಪ ವಿವರಣೆ ಕೊಡಬೇಕಾಗಿದೆ. ಮಾನ್ಯ ಸದಸ್ಯರು ಬಹಳ ದೊಡ್ಡವರ ಬಾಕಿ ವಸೂಲಿ ಮಾಡಿಲ್ಲ ಬರೀ ಸಣ್ಣ ಸಣ್ಣವರಿಂದ ವಸೂಲಿ ಮಾಡುತ್ತಿದ್ದೀರಿ ಎಂದಿದ್ದಾರೆ. Out of 204 crores, 186 crores are due from

V. I. S. L., ಪ್ರೈವೇಟ್ ಸೆಕ್ಟಾರ್‌ನಲ್ಲಿ ೧೬ ಕೋಟಿ ರೂಪಾಯಿ ಬಾಕಿ ಇದೆ. ಇದರಲ್ಲಿ ೧೦ ಕೋಟಿ ರೂಪಾಯಿಗೆ ಕೋರ್ಟ್‌ನಿಂದ ತಡೆ ಇದೆ. Only 4½ crores are due from the so-called private Soctors. ಮುನಿಸಿಪಾಲಿಟಿಯಿಂದ ಬಾಕಿ ಇದೆ, ಬೇರೆ ಬೇರೆ ಕಾರ್ಪೋರೇಷನ್‌ಗಳಿಂದ ಬಾಕಿ ಇದೆ.

ಶ್ರೀ ಎಸ್. ಬಂಗಾರಪ್ಪ.—ಪ್ರೈವೇಟ್ ಇಂಡಸ್ಟ್ರಿಯಲಿಸ್ಟ್‌ನಿಂದ ವಸೂಲಿ ಮಾಡಬೇಕು.

ಶ್ರೀ ಜೆ. ಹೆಚ್. ಪಟೇಲ್.—ಕೋರ್ಟಿಗೆ ಹೋಗಿರುವವರದ್ದು ಬಾಕಿ ಇದೆ. ಕೋರ್ಟಿಗೆ ಹೋಗದವರಿಂದ ನಾವು ವಸೂಲಿ ಮಾಡುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾವು ಮೂಲಭೂತವಾದ ಪ್ರಶ್ನೆಯನ್ನು ಇಟ್ಟಿದ್ದೇವೆ. ಮುಖ್ಯಮಂತ್ರಿಯವರು he has chosen to politically answer to our budget speeches. ರಾಜಕೀಯವಾಗಿ ಉತ್ತರ ಕೊಡುವುದಕ್ಕೆ ಹೋಗಿದ್ದಾರೆ. ವಿತ್ತ ಮಂತ್ರಿಗಳ ರೀತಿ ಅವರು ಉತ್ತರ ಕೊಟ್ಟಿಲ್ಲ. ಆಯವ್ಯಯದಲ್ಲಿ ಬಡವರಿಗೆ ಕೆಲಸ ಕೊಡುವ ಬಗ್ಗೆ ಸಾಕಷ್ಟು ವ್ಯಾಖ್ಯಾನ ಮಾಡಿದ್ದೀರಿ. ಅಧ್ಯಕ್ಷರೇ, ನಾವು ಒಂದು ಪತ್ರವನ್ನು ಮುಖ್ಯಮಂತ್ರಿಗಳಿಗೆ ಬರೆದು ಅದರ ಪ್ರತಿಯನ್ನು ೧೮-೩-೮೯ ರಂದು ನಮಗೆ ಹಂಚಿದ್ದೀರಿ. ಅದರ ಒಕ್ಕಣೆ ಈ ರೀತಿ ಇದೆ.

> "೯ ತಿಂಗಳ ಅವಧಿಯಲ್ಲಿ ಖರ್ಚು ಮಾಡಬೇಕಾಗಿದ್ದ ¾ ಹಣ ೧೧೮೨೮.೬೯ ಲಕ್ಷದಲ್ಲಿ ಕೇವಲ ೩೩೫೪.೪೮ ಲಕ್ಷ ಮೊತ್ತ ಖರ್ಚುಮಾಡಿ ೮೪೭೪.೨೧ ಲಕ್ಷ ಮೊತ್ತವನ್ನು ವೆಚ್ಚ ಮಾಡದೆ ಉಳಿಸಿದ್ದಾರೆ. ಇದನ್ನು ನೋಡಿದರೆ ಬಡ ಜನತೆಯ ಬಗ್ಗೆ ಅಧಿಕಾರಿಗಳ ಮನೋಭಾವನೆ ಕನಿಕರವಿಲ್ಲದ್ದೆಂದು ಸುಸ್ಪಷ್ಟವಾಗುತ್ತದೆ."

ತಾವು ಇದಕ್ಕೆ ಅಧಿಕಾರಿಗಳು ಕಾರಣರು ಎಂದು ಪತ್ರದಲ್ಲಿ ಹೇಳಿದ್ದೀರಿ. ಆದರೆ ಈ ರೀತಿ ಆಗುವುದಕ್ಕೆ ಜವಾಬ್ದಾರರು ಯಾರು ? ಇದಕ್ಕೆ ಇದೇ ಜನತಾದಳದ ಸರ್ಕಾರ ಕಾರಣವಲ್ಲವೇ ? ಜನತಾದಳದವರಿಗೆ ಬಡವರ ಮೇಲೆ ಕನಿಕರವಿಲ್ಲವೆಂದು ತಾವೇ ಸರ್ಟಿಫಿಕೇಟ್ ಕೊಟ್ಟಿದ್ದೀರಿ ? ಇದರ ಬಗ್ಗೆ ತಾವು ಏನು ಸ್ಪಷ್ಟೀಕರಣ ಕೊಡುತ್ತೀರಿ ? ಇಷ್ಟೆಲ್ಲಾ ಪಾಸ್ ಮಾಡಿದಮೇಲೆ ಇದನ್ನು ಸ್ವೀಕರಿಸಿ ಒಪ್ಪಲಿಲ್ಲ ಎನ್ನುವುದಾದರೆ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಏನು ಉತ್ತರವನ್ನು ಕೊಡುತ್ತಾರೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮೊಯಿಲಿಯವರು ಆಗಲೇ ಹೊರಗೆ ಹೋಗಿದ್ದಾಗ ಮಾನ್ಯ ಖರ್ಗೆಯವರು ಇದೇ ಪ್ರಶ್ನೆ ಕೇಳಿದ್ದರು. ಅದಕ್ಕೆ ನಾನು ಉತ್ತರ ಕೊಟ್ಟು ಈ ಬಗ್ಗೆ ಎಲ್ಲಾ ವಿವರಗಳನ್ನು ನಾಳೆ ಇಲ್ಲವೇ ನಾಳಿದ್ದು ಕೊಡುತ್ತೇನೆಂದು ಹೇಳಿದ್ದೇನೆ.

ಶ್ರೀ ಎಂ. ವೀರಪ್ಪಮೊಯಿಲಿ.- ೬ ವರ್ಷಗಳಲ್ಲಿ ಒಟ್ಟು ಸಂಪನ್ಮೂಲದಲ್ಲಿ ಎಷ್ಟು ಸಂಗ್ರಹ ಮಾಡಿದ್ದೀರಿ ? ಸುಮಾರು ೨೩೬೯.೩೧ ಲಕ್ಷ ರೂಪಾಯಿಗಳಲ್ಲಿ ಕ್ಯಾಪಿಟಲ್ ಎಕ್ಸ್‌ಪೆಂಡಿಚರ್ ಎಷ್ಟೆಂದು ಹೇಳಿದರೆ ೪೮೧ ಕೋಟಿ ಮಾತ್ರ. ಕರ್ನಾಟಕದ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್‌ಗೆ ತಮ್ಮ ಸರ್ಕಾರದ ಕೊಡುಗೆ ೨೩೬೯.೩೧ ಲಕ್ಷ ರೂಪಾಯಿಗಳಲ್ಲಿ ೪೮೧ ಕೋಟಿ ಮಾತ್ರ ಖರ್ಚು ಮಾಡಿದ್ದೀರಿ. ಇದು ಮಾನ್ಯ ಸಭಾಧ್ಯಕ್ಷರು ಒದಗಿಸಿರುವ ಅಂಕಿಅಂಶ. ಕರ್ನಾಟಕ ರಾಜ್ಯದಲ್ಲಿ ೬ ವರ್ಷಗಳಲ್ಲಿ ಅಭಿವೃದ್ಧಿಯಾಗಿದೆಯೋ ಎಂಬುದನ್ನು ತಾವು ಹೇಳಬೇಕು. ನಾನು ಇರಿಗೇಷನ್ ಬಗ್ಗೆ ಹೇಳಿದ್ದೇನೆ, ಅದಕ್ಕೆ ಸರಿಯಾಗಿ ಉತ್ತರ ಕೊಡಲಿಲ್ಲ. ಇರಿಗೇಷನ್ ತೆಗೆದುಕೊಳ್ಳುವುದಾದರೆ, ೧೯೮೭-೮೮ರಲ್ಲಿ ಬಜೆಟ್ ಪ್ರಾವಿಜನ್ ೨೩೭.೬೦ ಕೋಟಿ ಇದ್ದರೆ ಆಕ್ಚುಯಲ್ ಎಕ್ಸ್‌ಪೆಂಡಿಚರ್ ೧೫೦.೩೬ ಕೋಟಿ. ೧೯೮೪—೮೫ರಲ್ಲಿ ನೀವು ಆಕ್ಚುಯಲ್ ಖರ್ಚು ಮಾಡಿರತಕ್ಕದ್ದು ೧೨೭ ಕೋಟಿ. ಸುಮಾರು ಮೂರ್ನಾಲ್ಕು ವರ್ಷಗಳಲ್ಲಿ ೧೨೭ ಮತ್ತು ೧೫೦ಕೋಟಿ ಅಂದರೆ ಮೂರು ಕೋಟಿ ರೂಪಾಯಿಗಳು ಮಾತ್ರ ಜಾಸ್ತಿಯಾಗಿದೆ. ಈ ವರ್ಷ ಹೆಚ್ಚಾಗಿದೆಯೇ ? ಆವರೇಜ್ ಇನ್‌ಫ್ರಾಸ್ಟ್ರಕ್ಚರ್ ರೇಟ್ ತೆಗೆದುಕೊಂಡರೂ ಕೂಡಾ ೭ ಪರ್ಸೆಂಟ್ ಇದೆ. Therefore you have maintained only the Irrigation Department and not a development project. ಅದರ ಪ್ರಕಾರ ಇರಿಗೇಷನ್‌ಗೆ ೧೯೮೮-೮೯ರಲ್ಲಿ ನೀವು ಪ್ರೊವೈಡ್ ಮಾಡಿದ್ದುದು ೧೫೭ ಕೋಟಿ ರೂಪಾಯಿಗಳು. That means you have provided only 237 crores in 1987-88 and only 157 crores in 1986-88 which makes it clear that you have provided about 80 crores less for irrigation in 1988-89

With this, what kind of Irrigation projects we can develop? ಹೈದರಾಬಾದ್ ಕರ್ನಾಟಕ ಏರಿಯಾಕ್ಕೆ ಇರಿಗೇಷನ್‌ಗೆ ಏನೂ ಬರಲಿಲ್ಲ ಎಂದರೆ ಹೇಗೆ ಬರುತ್ತದೆ? ಇಷ್ಟು ಕಡಿಮೆ ಮಾಡಿದರೆ ಹೇಗೆ ಬರುತ್ತದೆ? ಅಭಿವೃದ್ಧಿ ಸಾಧನೆಯ ಮೇಲೆ ಜಸ್ಟಿಫೈ ಮಾಡಲಿಕ್ಕೆ ಸಾಧ್ಯವೆ? Is it the contribution of the Janatha Dal Government? Even in the Energy Secter, don't be under the impression that we are impressed on your statement that you have achieved 48%. ಎನರ್ಜಿ ಸೆಕ್ಟರ್ ತೆಗೆದುಕೊಂಡರೂ ೧೯೮೭–೮೮ನೇ ಸಾಲಿನಲ್ಲಿ ಬಜೆಟ್ ಎಸ್ಟಿಮೇಟ್ ೨೦೮ ಕೋಟಿ ರೂಪಾಯಿ ಇದ್ದರೆ ನೀವು ಖರ್ಚು ಮಾಡಿದ್ದುದು ೧೫೪.೬೯ ಕೋಟಿ ಅಂದರೆ ೬೦–೭೦ ಕೋಟಿ ಕಡಿಮೆ ಖರ್ಚು ಮಾಡಿದ್ದೀರಿ. ೧೯೮೮–೮೯ರಲ್ಲಿ ೨೬೪.೧೭ ಕೋಟಿ ಕೊಟ್ಟಿದ್ದೀರಿ. Even there. There is a very steep downfall. Just don't walk away by saying that you achieved 40% or 50%. This time you have provided 274 crores. ಅದರ ಪ್ರಕಾರ ನೀವು ಖರ್ಚುಮಾಡಿರುವುದು ೨೦೦ ಕೋಟಿ ರೂಪಾಯಿಗಳು ಮಾತ್ರ. ಎಲ್ಲಾ ಬಾಬತ್ತಿನ ಬಗ್ಗೆ ೧೯೮೩–೮೪ರಿಂದ ನಾನು ಪಟ್ಟಿ ಮಾಡಿ ತೋರಿಸಿದ್ದೇನೆ. ಇದರಲ್ಲಿ ಯಾವ ತರಹ ಇನ್‌ಕ್ರೀಸ್ ಇದೆ? ಇನ್ನು ಮುಂದೆ ಬಜೆಟ್ ಎಸ್ಟಿಮೇಟ್ ಮಾಡುತ್ತೇವೆ, ೪೭ ಪರ್ಸೆಂಟ್ ಮೆಂಟೇನ್ ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟರೆ ನಂಬಬಹುದು. ಈ ವರ್ಷ ನೋಡೋಣವೆಂದು ಹೇಳಬಹುದು. ಆದರೆ ನೀವು ನಡೆದುಕೊಂಡ ರೀತಿ ಏನಿದೆ ನುಡಿದಂತೆ ನಡೆ ಆಗಲಿಲ್ಲ. ನುಡಿ ಮಾತ್ರ ನಡೆಹಿನ್ನಡೆಯಾಗಿದೆ. ಈಗ ನಾನು ಹೇಳಿರುವುದು ಇದೊಂದು ಸ್ಯಾಂಪಲ್ ಮಾತ್ರ. ಅದಕ್ಕೆ ಉತ್ತರ ಕೊಡಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ನೀವು ನಿಮ್ಮ ಬಜೆಟ್ ಭಾಷಣದಲ್ಲಾಗಲೀ, ಅಥವಾ ಹಿಂದೆ ರಾಜ್ಯಪಾಲರ ಭಾಷಣದಲ್ಲಾಗಲೀ ಒಂದು ವಿಷಯದ ಬಗ್ಗೆ ಮಾತನಾಡಿಲ್ಲ. ಇಷ್ಟು ಹೊತ್ತು ಪ್ರಸ್ತಾಪ ಮಾಡಿರುವುದು ನಿರುದ್ಯೋಗದ ಬಗ್ಗೆ, ಉದ್ಯೋಗಾವಕಾಶ ಕಲ್ಪಿಸುವ ಬಗ್ಗೆ. ಆದರೆ ಕಳೆದುಕೊಂಡಿರುವ ಉದ್ಯೋಗದ ಬಗ್ಗೆ ಏನು ಮಾಡುತ್ತೀರಿ ಎಂದು ಹೇಳಿಲ್ಲ. ತಮಗೆ ಗೊತ್ತಿರುವ ಹಾಗೆ, ನಮ್ಮ ರಾಜ್ಯದಲ್ಲಿ ಸುಮಾರು ೧೫ ಟೆಕ್ಸ್‌ಟೈಲ್ ಮಿಲ್‌ಗಳು ಕ್ಲೋಸ್ ಆಗಿವೆ, ಕೋಆಪರೇಟೀವ್ ಶುಗರ್ ಇಂಡಸ್ಟ್ರಿಗಳು ಕ್ಲೋಸ್ ಆಗಿವೆ, ಇಂಜಿನಿಯರಿಂಗ್ ಫ್ಯಾಕ್ಟರಿಗಳು ಕ್ಲೋಸ್ ಆಗಿವೆ, ಚಾಮುಂಡಿ ಮೊಪೆಡ್ಸ್, ಅಲೆಂಬಿಕ್ ಗ್ಲಾಸ್ ಫ್ಯಾಕ್ಟರಿ ಕ್ಲೋಸ್ ಆಗಿದೆ. ನಾನು ಎಲ್ಲಾ ಹೆಸರುಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇವೆಲ್ಲ ೧೯೮೩ರಿಂದ ೮೪, ೮೫ರಲ್ಲಿ ಕ್ಲೋಸ್ ಆಗಿರುವುದು. ಮೈಸೂರಿನ ಕೆ. ಆರ್. ಮಿಲ್ಸ್ ಕ್ಲೋಸ್ ಆಗಿದೆ. ದಾವಣಗೆರೆಯಲ್ಲಿ ಎಲ್ಲವೂ ಮುಚ್ಚಿದೆ. ಇದರ ಬಗ್ಗೆ ಹಲವಾರು ಬಾರಿ ಚರ್ಚೆ ಮಾಡಿದ್ದೇವೆ. ಆದರೂ ಇದರ ಬಗ್ಗೆ ಏನೊಂದೂ ಸ್ಪಷ್ಟವಾದಂಥ ಆಶ್ವಾಸನೆ ಇಲ್ಲ, ಮಾಡಿದ್ದೇವೆ ಎಂದೂ ಹೇಳಿಲ್ಲ, ಯಾವುದೇ ಚಕಾರ ಎತ್ತಿಲ್ಲ. ಆ ಸಂಸ್ಥೆಗಳಲ್ಲಿದ್ದ ಕೆಲಸಗಾರರು ಬೀದಿ ಪಾಲಾಗಿದ್ದಾರೆ. ಇವೊತ್ತು ಕೂಡ ಏನು ಪೊಸಿಶನ್ ಇದೆ ಎಂದು ಹೇಳಲಿಕ್ಕೆ ನೀವು ತಯಾರಿಲ್ಲ, ಹೇಳಲೂ ಇಲ್ಲ. ನಮ್ಮ ರಾಜ್ಯದಲ್ಲಿ ಆರು ಸಾವಿರ ಸಣ್ಣ ಸಣ್ಣ ಫ್ಯಾಕ್ಟರಿಗಳು ಮುಚ್ಚಿ ಹೋಗಿವೆ. ಇದನ್ನು ಸರ್ಕಾರದವರೇ ಹೇಳಿರುವುದು. ಸರ್ಕಾರದ ಪ್ರಕಾರ ಆರು ಸಾವಿರ ಫ್ಯಾಕ್ಟರಿಗಳು ಮುಚ್ಚಿರಬೇಕಾದರೆ ಇವರ ಧೋರಣೆ ಏನು? ಇದನ್ನು ಸರಿಪಡಿಸುವುದಕ್ಕೆ ಏನಾದರೂ ಧೋರಣೆ ಇದೆಯೋ? ಇವರು ನಮ್ಮ ಹೊಸ ಇಂಡಸ್ಟ್ರಿಯಲ್ ಪಾಲಿಸಿಯನ್ನು ತೆಗೆದುಕೊಂಡು ಬರುತ್ತೇವೆ ಎಂದು ಹೇಳಿದರು. ಶ್ರೀ ಎಸ್. ಆರ್. ಬೊಮ್ಮಾಯಿಯವರು ಮುಖ್ಯಮಂತ್ರಿಗಳಾದ ಮೇಲೆ ಒಂದು–ಒಂದೂವರೆ ತಿಂಗಳ ಹಿಂದೆ ಇದರ ಬಗ್ಗೆ ಮಾತನಾಡಿದ್ದಾರೆ. ಅದೇನು ಹೊಸ ಇಂಡಸ್ಟ್ರಿಯಲ್ ಪಾಲಿಸಿಯೋ ನಮಗಂತೂ ಕಂಡು ಬರಲಿಲ್ಲ. ನಮಗೆ ಬೇಕಾಗಿರುವುದು ಪಾಲಿಸಿ ಪ್ರಶ್ನೆ ಅಲ್ಲ. ಮುಚ್ಚಿರುವ ಫ್ಯಾಕ್ಟರಿಗಳನ್ನು ತೆರೆಯುವುದು, ಈ ಕಾರ್ಮಿಕರಿಗೆ ಕೆಲಸ ಕೊಡುವುದು, ಅವರ ಬವಣೆಯನ್ನು ತಪ್ಪಿಸುವುದು. ಉದ್ಯೋಗ ಒದಗಿಸುವ ಪ್ರಶ್ನೆ ಒಂದು ಕಡೆ ಇರಲಿ. ಇರುವುದನ್ನು ಬಗೆಹರಿಸುವುದಕ್ಕೆ ಏನು ಪ್ರಯತ್ನ ಮಾಡಿದ್ದೀರಿ? ಇದರ ಬಗ್ಗೆ ಸ್ಪಷ್ಟವಾದಂಥ ಹೇಳಿಕೆ ಬೇಕು, ಇದುವರೆಗೂ ಹೇಳಿಕೆ ಬಂದಿಲ್ಲ, ಚರ್ಚೆ ಕೂಡ ಆಗಿಲ್ಲ. ಇದು ಮೊದಲನೆಯದು, ಎರಡನೆಯದು ಏನೆಂದರೆ, ಎಂಪ್ಲಾಯಮೆಂಟ್ ಪೊಟೇನ್‌ಷಿಯಲ್ ಬಗೆ ಪುನಃ ಪುನಃ ಹೇಳುತ್ತಾರೆ. ನಾನು ಓದಿದಹಾಗೆ ಆರ್.ಎಲ್ ಇ.ಜಿ.ಪಿ. ಐ.ಆರ್.ಡಿ.ಪಿ. ಸ್ಕೀಮ್‌ಗಳು ಏನಿವೆ ಅವು poverty alleviation schemes. ಈ ದೇಶದಲ್ಲಿ ಯಾರಿಗೆ ಸೇರಬೇಕೋ ಅವರಿಗೆ ಸೇರಿಲ್ಲ. ಆದ್ದರಿಂದ employment potential ಏನು ಜಾಸ್ತಿಯಾಗಬೇಕೋ ಅದು ಆಗಿಲ್ಲ. ಅದನ್ನು ಸರ್ವೆ ಮಾಡಿದ್ದಾರೆ. ಈ ಬಗ್ಗೆ ನಮ್ಮ ರಾಜ್ಯದಲ್ಲಿ ಏನು ಪರಿಸ್ಥಿತಿ ಇದೆ ಎಂದು ಏನಾದರೂ ಅಸಸ್‌ಮೆಂಟ್ ಮಾಡಿದ್ದೀರಾ? ಸ್ಟಡಿ ಮಾಡಿದ್ದೀರಾ? ಮಾಡದೇ ಇದ್ದರೆ ಏನಾದರೂ ಮಾಡಬೇಕು. ಇದರ

ಬಗ್ಗೆ ಆರ್.ಎಲ್.ಇ.ಜಿ.ಪಿ. ಐ.ಆರ್.ಡಿ.ಪಿ. ಪಾವರ್ಟಿ ಅಲಿನಿಯೇಶನ್ ಪ್ರೋಗ್ರಾಮ್ಸ್ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಒಂದು ಸರ್ವೆ ಮಾಡಿ. ನಮಗೆ ಈ ಸಲವೇ ಬೇಡ, ಮುಂದಿನ ಸಲ ಬರಲಿ, ಪರವಾಗಿಲ್ಲ. ಅಷ್ಟರೊಳಗೆ ಸರ್ವೆ ಮಾಡಿಸುತ್ತೇವೆ ಎಂದು ಹೇಳಿದರೆ ಸಾಕು. ಇನ್ನು ಮೂರನೆಯದು ಕೃಷಿಕಾರ್ಮಿಕರಿಗೆ ಸಂಬಂಧಪಟ್ಟಂತೆ ಒಂದು ಒಳ್ಳೆಯ ಕೆಲಸ ಮಾಡಿದ್ದೀರಿ. ಅದನ್ನು ನಾವು ಕೂಡ ಸ್ವಾಗತ ಮಾಡಿದ್ದೇವೆ. ಗ್ರೂಪ್ ಇನ್‌ಶೂರೆನ್ಸ್ ಒಳ್ಳೆಯ ಯೋಜನೆ. ಕೃಷಿಕಾರ್ಮಿಕರಿಗೆ ಅವರ ಅನೇಕ ವಿಷಯಗಳಿಗೆ ಸಂಬಂಧಪಟ್ಟಂತೆ ಸೇವಾ ನಿಯಮಗಳು ಬೇಕಾದಷ್ಟು ಮಾಡಬೇಕಾಗಿದೆ. ಅದನ್ನು ಬೇರೆ ರಾಜ್ಯಗಳಲ್ಲಿ ಅದರಲ್ಲೂ ಮುಖ್ಯವಾಗಿ ಕೇರಳದಲ್ಲಿ, ಪಶ್ಚಿಮ ಬಂಗಾಳದಲ್ಲಿ ಮಾಡಿದ್ದಾರೆ. ಕೇರಳಾದಲ್ಲಿ ಶ್ರೀ ಅಚ್ಯುತ್‌ಮೆನನ್ ಅವರ ಕಾಲದಲ್ಲಿ ಮಾಡಿದ್ದು. ಅದನ್ನು ನಾವು ಕೂಡ ಮಾಡುತ್ತೇವೆ ಎಂದು ಹೇಳಿದ್ದರು. ಅದನ್ನು ಮಾಡಿ ಎಂದು ನಾವು ಕೂಡ, ೧೯೭೮ರಿಂದ ಕೇಳಿಕೊಂಡುಬಂದಿದ್ದೇವೆ.

ಅಧ್ಯಕ್ಷರು.—ಮತ್ತೊಂದು ಮಿನಿ ಭಾಷಣವನ್ನೇ ಶುರು ಮಾಡಿದ್ದೀರಲ್ಲ ?

ಶ್ರೀ ಎಂ. ಎಸ್. ಕೃಷ್ಣನ್.—ಭಾಷಣ ಅಲ್ಲ. ಕೃಷಿಕಾರ್ಮಿಕರ ಬಗ್ಗೆ ಹೇಳುತ್ತಿದ್ದೇನೆ.

ಅಧ್ಯಕ್ಷರು.—ಇದು ಮಿನಿ ಭಾಷಣವೇ ಆಯಿತಲ್ಲ. ಏನಾದರೂ ಕ್ಲಾರಿಫಿಕೇಷನ್ ಕೇಳಿ. ಕ್ಲಾರಿಫಿಕೇಷನ್ ಕೇಳಿ ಎಂದರೆ ಭಾಷಣ ಮಾಡುತ್ತೀರಿ. ಒಂದೆರಡು ವಿಷಯಗಳನ್ನು ಕೇಳಿದರೆ ಅವರು ಉತ್ತರ ಹೇಳುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಕ್ಲಾರಿಫಿಕೇಷನ್‌ನ್ನೇ ಕೇಳುತ್ತಿರುವುದು. ಪ್ರೊಫೆಶನ್ ಟ್ಯಾಕ್ಸ್ ಬಗ್ಗೆ ಕ್ಲಾರಿಫಿಕೇಷನ್ ಕೇಳುತ್ತಿದ್ದೇನೆ, ಇದರ ಬಗ್ಗೆ ತಾವು ಹೇಳಿದ್ದೀರಿ, ಪೇಜ್ ನಂಬರ್...

ಅಧ್ಯಕ್ಷರು.—ಮತ್ತೆ ಭಾಷಣ ಮಾಡುವುದಕ್ಕೆ ಹೊರಟಿದ್ದೀರಿ.

ಶ್ರೀ ಎಂ. ಎಸ್. ಕೃಷ್ಣನ್.—ಇದರ ಬಗ್ಗೆ ಕ್ಲಾರಿಫಿಕೇಷನ್ ಬೇಕು. I am only asking clarification. Why should you Include pensions and why should you not give concession ?

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ, ಏನು ಅರ್ಥ ಇದು ? ಶ್ರೀ ವೆಂಕಟರಾಮಯ್ಯನವರೇ ನೀವು ಕ್ಲಾರಿಫಿಕೇಷನ್ ಕೇಳಿ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಕ್ಲಾರಿಫಿಕೇಷನ್ ಕೇಳುವುದಕ್ಕೇ ಬಿಡುವುದಿಲ್ಲವಲ್ಲ.

ಅಧ್ಯಕ್ಷರು.—ಸಾಕು. ನೀವು ಕುಳಿತುಕೊಳ್ಳಿ. ಶ್ರೀ ವೆಂಕಟರಾಮಯ್ಯನವರೇ ನೀವು ಕೇಳಿ. ಮುಖ್ಯಮಂತ್ರಿಗಳು ಒಮ್ಮೆಲೆ ಉತ್ತರ ಹೇಳುತ್ತಾರೆ ಕೇಳಿ.

ಶ್ರೀ ಆರ್. ವೆಂಕಟರಾಮಯ್ಯ.—ಪ್ಯಾರಾ ೫೯ರಲ್ಲಿ ಕೃಷಿ ಕಾರ್ಯದಲ್ಲಿ ಸಕ್ರಿಯನಾಗಿ ತೊಡಗಿರುವಾಗ ಅಸಮರ್ಥನಾದ ವ್ಯಕ್ತಿಗೆ ೬೦ ರೂಪಾಯಿಗಳ ಮಾಸಿಕ ನಿವೃತ್ತಿ ವೇತನವನ್ನು ನೀಡಲಾಗುವುದು..... ......

ಅಧ್ಯಕ್ಷರು.—ಇದಕ್ಕೆ ಕ್ಲಾರಿಫಿಕೇಷನ್ ಏನುತ್ತಾರೆಯೋ ? ಎರಡು ತಾವು ಅವರು ಉತ್ತರ ಹೇಳಿದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಇಂಗ್ಲೀಷ್‌ನಲ್ಲಿ ಡಿಸೇಬಲ್ಡ್ ಎಂದು ಇದೆ ಇಂಗ್ಲೀಷ್ ಮತ್ತು ಕನ್ನಡದಲ್ಲಿ ಹೆಚ್ಚು ಕಡಿಮೆ ಇದೆ. Disabled ಅಂದರೆ ಯಾರಿಗೂ ಸಿಗುವುದಿಲ್ಲ. ಆಮೇಲೆ ಹೊರ ರಾಜ್ಯಗಳಿಂದ ಬರುವ ಬೀರ್‌ಗೆ ನೀವು ಶುಲ್ಕ ಹಾಕಿ, ರಾಜ್ಯದಲ್ಲಿ ಏಳುವರೆ ಕೋಟಿ ರೂಪಾಯಿಗಳನ್ನು ಕೆಲವು ಕಂಪನಿಗಳಿಗೆ ಅನುಕೂಲ ಮಾಡಿಕೊಟ್ಟಿದ್ದೀರಿ ಎಂದು ಕೇಳಿದ್ದೆ, ಅದಕ್ಕೆ ತಾವು ಉತ್ತರ ಹೇಳಲಿಲ್ಲ. ಇದರಿಂದ ನಮಗೆ ಏಳೂವರೆ ಕೋಟಿ ರೂಪಾಯಿಗಳು ನಷ್ಟವಾಗುತ್ತಿದೆ. ಮೂರನೆಯದು ಸೆಕೆಂಡ್ಸ್ ಕರ್ನಾಟಕದಲ್ಲಿ ಸೆಕೆಂಡ್ಸ್ ವಿಪರೀತ ಇರುವುದರಿಂದ, ದಿನಕ್ಕೆ ಒಂದು ಕೋಟಿ ರೂಪಾಯಿ ನಷ್ಟವಾಗುತ್ತಿದೆ. ಇದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ಎಂದು ಕೇಳಿದ್ದೆ, ಇದಕ್ಕೆ ಉತ್ತರ ಕೊಡಲಿಲ್ಲ. ಇನ್ನೊಂದು ನೀರಿನ ತೆರಿಗೆ ತರೀ ಜಮೀನಿಗೆ ನೀರನ್ನು ಕೊಡದೇ ಇದ್ದರೂ ತೆರಿಗೆ ಹಾಕಿದ್ದೀರಿ. ಇದರ ಬಗ್ಗೆ ಸುತ್ತೋಲೆ ಕಳುಹಿಸುತ್ತೇವೆಂದು ಹೇಳಿದಿರಿ, ಇದುವರೆಗೂ ಸುತ್ತೋಲೆ ಕಳುಹಿಸಲಿಲ್ಲ. ಇದರ ಬಗ್ಗೆ

ಉತ್ತರ ಹೇಳಬೇಕು. ಇನ್ನು ರಾಜ್ಯದಲ್ಲಿ ೨೨ ಸಾವಿರ ಸೊಸೈಟಿಗಳು ಇವತ್ತು ಸ್ಥಗಿತವಾಗಿವೆ, ಅವರು ಮುಷ್ಕರ ಮಾಡಿದ್ದಾರೆ. ರೈತರು ಸಾಲ ವಾಪಸ್ ಕೊಡುವುದಕ್ಕೆ ಹೋದರೂ, ಆ ಸಾಲವನ್ನು ತೆಗೆದು ಕೊಳ್ಳುತ್ತಾ ಇಲ್ಲ. ತಕ್ಷಣ ಈ ಸೊಸೈಟಿಗಳನ್ನು ತೆರೆಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ಸನ್ಮಾನ್ಯ ಅಧ್ಯಕ್ಷರೇ, ಈ ಸಲದ ಮಾರಾಟ ಕರವನ್ನು ಮಾನ್ಯ ಮುಖ್ಯ ಮಂತ್ರಿಗಳು ಹೆಚ್ಚಿಗೆ ಹಾಕದೇ, ಆದಾಯವನ್ನು ಹೆಚ್ಚಿಸುವ ಸಾಹಸವನ್ನು ಮಾಡಿದ್ದಾರೆ. ಅನೇಕ ಜನ ಸ್ನೇಹಿತರು, ದೊಡ್ಡ ದೊಡ್ಡ ವಸ್ತುಗಳ ಮೇಲೆ, ಶ್ರೀಮಂತರು ಖರೀದಿ ಮಾಡುವ ವಸ್ತುಗಳ ಮೇಲೆ ಟ್ಯಾಕ್ಸ್ ಕಡಿಮೆ ಮಾಡಿದ್ದಾರೆಂದು ಟೀಕೆ ಮಾಡಿದ್ದಾರೆ. ಖರೇ ಹೇಳಬೇಕಾದರೆ...

ಅಧ್ಯಕ್ಷರು.—ನೀವು ಭಾಷಣ ಮಾಡಬೇಡಿ, ಕ್ಲಾರಿಫಿಕೇಷನ್ ಮಾತ್ರ ಕೇಳಿ. ನಿಮಗೆ ಕ್ಲಾರಿಫಿ ಕೇಷನ್ ಎಂದರೆ ಗೊತ್ತಿಲ್ಲ.....

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್.—ಈ ಟ್ಯಾಕ್ಸ್‌ನ್ನು ಇನ್ನೂ ಸಹಿತ ಕಡಿಮೆ ಮಾಡಬೇಕಾಗಿತ್ತು ಕೆಲವೊಂದು ಕಮಾಡಿಟೀಸ್ ಮೇಲೆ ಟ್ಯಾಕ್ಸ್ ಕಡಿಮೆ ಮಾಡಿದ್ದರೂ ನಮ್ಮ ರಾಜ್ಯದ ಆದಾಯನ್ನು ಹೆಚ್ಚು ಮಾಡಲಾಗಿದೆ ಎಂಬ ವಿಚಾರವನ್ನು ನಾನು ಸ್ವಾಗತ ಮಾಡುತ್ತೇನೆ. ಮತ್ತೊಂದು ವಿಷಯ ವೇನೆಂದರೆ, ನಗರ ಪ್ರದೇಶಗಳಲ್ಲಿ ಪ್ರಾಥಮಿಕ ಶಾಲಾ ಕಟ್ಟಡಗಳು ಹೆಚ್ಚು ಬರಬೇಕಾಗಿದೆ. ಈ ದಿಸೆಯಲ್ಲಿ ಹೆಚ್ಚಿನ ಪ್ರಯತ್ನ ಮಾಡಬೇಕಾಗಿದೆ. ಇಂಗ್ಲೀಷ್ ಮೀಡಿಯಂ ಶಾಲೆಗಳು ಬರುತ್ತಿವೆ, ಆದ್ದರಿಂದ ಶಾಲಾ ಕೊಠಡಿಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ನೀರಾವರಿ ತೆರಿಗೆ ಏರಿಕೆ ಮಾಡಿರುವ ವಿಚಾರದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಅಬ್ಜಕ್ಷನ್ ಮಾಡುವುದಕ್ಕೆ ಅವಕಾಶ ಇದೆ ಎಂದು. ಡಿಸೆಂಬರ್ ೨೨. ೧೯೮೮ರ ಗೆಜೆಟ್‌ನಲ್ಲಿ " the revised water rates will come into effect with effect from 1st January 1989.'' ಎಂದು ಹೇಳಿದ್ದಾರೆ ಈ ರೀತಿ ಹೇಳಿದಮೇಲೆ ಅವನಿಗೆ ಅಬ್ಜಕ್ಷನ್ ಮಾಡು ವುದಕ್ಕೆ ಎಲ್ಲಿ ಅವಕಾಶ ಇದೆ ? ಎರಡನೆಯದು, ಒಂದು ಬೆಳೆ ಬೆಳೆಯುವವನಿಗೂ ಇದೇ ರೇಟು, ಎರಡು ಬೆಳೆ ಬೆಳೆಯುವನಿಗೂ ಅದೇ ರೇಟು, ಮೂರು ಬೆಳೆ ಬೆಳೆಯುವವನಿಗೂ ಇದೆ ರೇಟು. ಈ ಒಂದು ಏರಿಕೆ ಮಾಡಿರುವುದು ಈ ರಾಜ್ಯದ ರೈತನಿಗೆ ಮಾಡಿದಂಥ ಅನ್ಯಾಯವಾಗಿದೆ, ಇದು ಧರ್ಮವೇ ? ಆದ್ದರಿಂದ ಇದನ್ನು ಪರಿಶೀಲನೆ ಮಾಡುತ್ತೀರಾ. ಬಗರ್ ಹುಕುಂ ಸಾಗುವಳಿಯನ್ನು ಕಂದಾಯ ಇಲಾಖೆಯ ಜಮೀನಿನಲ್ಲಿ ಯಾರು ಮಾಡುತ್ತಿದ್ದಾರೆ. ಅವರಿಗೆ ಸಾಕಷ್ಟು ಟಿ.ಟಿ. ಹಾಕಿ, ಫೈನ್‌ನ್ನು ಬಲವಂತವಾಗಿ ವಸೂಲ್ಮಾಡುತ್ತಿದ್ದಾರೆ. ದಯವಿಟ್ಟು ಈ ರೀತಿ ಟಿ.ಟಿ. ವಸೂಲ್ಮಾಡದಂತೆ ಆದೇಶ ಕೊಟ್ಟು ತಕ್ಷಣ ಆ ಜಮೀನನ್ನು ಖಾಯಂ ಮಾಡುತ್ತೀರಾ ? ಗೇಣಿದಾರರ ಬಗ್ಗೆ ತಮಗೆ ಈಗಾಗಲೇ ಪತ್ರ ಕಳುಹಿಸಿದ್ದೇನೆ. ಇನ್ನು ಮಾನ್ಯ ಬಂಗಾರಪ್ಪನವರು ಕೇಳಿದಂಥ ಪ್ರಶ್ನೆಗೆ ಸಂಬಂಧಿಸಿದಂತೆ, ನಾವು ಶಿವಮೊಗ್ಗದಲ್ಲಿ ಒಂದು ದೊಡ್ಡ ಹೋರಾಟ ಮಾಡಿಕೊಂಡು ಬಂದಿದ್ದೇವೆ. ಒಂದು ಸೆಂಟ್, ಎರಡು ಸೆಂಟ್ ಜಮೀನು ಇರುವವರಿಂದ ಬಲವಂತವಾಗಿ ಫೈನನ್ನು ವಸೂಲ್ಮಾಡುತ್ತಿದ್ದಾರೆ. ಈ ರೀತಿ ವಸೂಲ್ಮಾಡಿದಂತ ಹಣವನ್ನು ವಾಪಸ್ ಕೊಡಿಸುತ್ತೀರಾ ? ಇಂತಹ ಜಮೀನುಗಳ ಪ್ರೀಮಿಯಂ ಹಣ ಕಟ್ಟಿಲ್ಲವೆಂದು ತಹಶೀಲ್ದಾರರು, ಬೇಗೂರಿನ ಒಬ್ಬ ಲಂಬಾಣಿ ವ್ಯಕ್ತಿಯ ಮತ್ತು ಇನ್ನೂ ಅನೇಕ ಜನರ ಜಮೀನು ಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುತ್ತಾ ಇದ್ದಾರೆ. ಇವಕ್ಕೋಸ್ಕರ ಬಗರ್ ಹುಕುಂ ಸಾಗುವಳಿ, ಪ್ರೀಮಿಯಂ ಹಣ, ನೀರಾವರಿ ತೆರಿಗೆ ಇವುಗಳ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟವಾದ ಉತ್ತರ ಕೊಡಬೇಕು.

ಅಧ್ಯಕ್ಷರು.—ನೆಕ್ಸ್ಟ್, ತಿಮ್ಮೇಗೌಡರೇ ತಾವು ಕೇಳಿ...............

ಡಾ॥ ಹೆಚ್. ಎಲ್. ತಿಮ್ಮೇಗೌಡ.—ಮಾನ್ಯ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ.........

(ಗೊಂದಲ)

ಅಧ್ಯಕ್ಷರು.—ಅವಕಾಶ ಕೊಡದಿದ್ದರೆ ಜಗಳ ಮಾಡುತ್ತಾರೆ ಎಂದರೆ ಅಬ್ಜೆಕ್ಷನ್ ಮಾಡುತ್ತಾರೆ ಎಂದು ಅರ್ಥ. ಜಗಳ ಅಲ್ಲ ಅಬ್ಜೆಕ್ಷನ್, ಅದಕ್ಕೋಸ್ಕರ ಎಲ್ಲರಿಗೂ ನಾನು ಅವಕಾಶ ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಪಟಮಕ್ಕಿ ರತ್ನಾಕರ್.—ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಹೇಳಲಿ. ಅವರು ಎಷ್ಟು ಕೊಶ್ಚನ್ಸ್‌ಗೆ ಉತ್ತರ ಹೇಳುವುದಕ್ಕೆ ಆಗುತ್ತದೆ ?

ಶ್ರೀ ಆರ್. ವೆಂಕಟರಾಮಯ್ಯ.—ನಾವು ಸೀರಿಯಸ್ ಪ್ರಾಬ್ಲಂಗಳನ್ನು ರೈಸ್ ಮಾಡಿರುತ್ತೇವೆ. ಅದಕ್ಕೆ ಅವರು ಉತ್ತರವನ್ನೇ ಕೊಟ್ಟಿಲ್ಲ.

(ಗೊಂದಲ)

ಅಧ್ಯಕ್ಷರು.—ಅವರು ವಿವರಣೆ ಕೊಡುತ್ತಾರೆ, ಉತ್ತರ ಕೊಡುತ್ತಾರೆ, ಎಲ್ಲರೂ ಕುಳಿತುಕೊಳ್ಳಿರಿ. ತಿಮ್ಮೇಗೌಡರೇ, ಈಗ ನೀವು ಕ್ಲಾರಿಫಿಕೇಷನ್ ಕೇಳಿರಿ.

ಡಾ॥ ಹೆಚ್. ಎಲ್. ತಿಮ್ಮೇಗೌಡ.—ಮಾನ್ಯ ಮುಖ್ಯ ಮಂತ್ರಿಗಳು ಮುಂದಿನ ವರ್ಷ ೩೮೪೦ ಪ್ರಾಥಮಿಕ ಶಾಲಾ ಉಪಾಧ್ಯಾಯರನ್ನು ನೇಮಕ ಮಾಡುತ್ತೇವೆ ಎಂದು ಹೇಳಿದ್ದಾರೆ. ನಾನು ನನ್ನ ಭಾಷಣದಲ್ಲಿ ಒಂದೊಂದು ತರಗತಿಗೆ ಒಬ್ಬೊಬ್ಬ ಉಪಾಧ್ಯಾಯರನ್ನು ನೇಮಕ ಮಾಡಿದರೂ ಕೂಡಾ ಒಟ್ಟು ಮೂವತ್ತೈದು ಸಾವಿರ ಜನ ಉಪಾಧ್ಯಾಯರು ಬೇಕಾಗುತ್ತಾರೆ ಎಂದು ಹೇಳಿದ್ದೆ. ಈಗ ನೀವು ಹೇಳಿದಷ್ಟು ಹೆಚ್ಚು ಮಾಡಿದರೂ ಕೂಡಾ ಒಂದೊಂದು ತರಗತಿಗೆ ಒಬ್ಬೊಬ್ಬ ಉಪಾಧ್ಯಾರನ್ನು ನೇಮಕ ಮಾಡುವುದಕ್ಕೆ ಸಿಗುವುದಿಲ್ಲ. ಹಾಗಾದರೆ ಇಡೀ ಮುಂದಿನ ವರ್ಷವೆಲ್ಲಾ ಕೇವಲ ೩೪೦೦ ಪ್ರಾಥಮಿಕ ಶಾಲಾ ಉಪಾಧ್ಯಾಯರನ್ನು ನೇಮಕ ಮಾಡುತ್ತೀರಾ ? ಹೀಗಾದರೆ ನಿಮ್ಮ ಕಡ್ಡಾಯ ಶಿಕ್ಷಣ ಹೇಗೆ ಮಾಡುತ್ತೀರಿ ? ಹಳ್ಳಿಗಳಲ್ಲಿರತಕ್ಕ ಮಕ್ಕಳಿಗೆ ಪ್ರೈಮರಿ ಶಾಲೆಗಳಲ್ಲಿ ಹೇಗೆ ಶಿಕ್ಷಣ ಕೊಡುತ್ತೀರಿ ? ಇದಕ್ಕಾಗಿ ಪ್ರಾಥಮಿಕ ಶಾಲಾ ಉಪಾಧ್ಯಾಯರ ನೇಮಕವನ್ನು ಹೆಚ್ಚು ಮಾಡಬೇಕೆಂದು ನಾನು ಸಲಹೆ ಮಾಡಿದೆ. ಈ ವಿಚಾರದಲ್ಲಿ ತಾವು ಏನು ಉತ್ತರ ಹೇಳುತ್ತೀರೋ ಹೇಳಿರಿ.

ಅಧ್ಯಕ್ಷರು.—ನಾರಾಯಣರಾವ್ ಅವರೇ ತಾವು ಕ್ಲಾರಿಫಿಕೇಷನ್ ಕೇಳಿರಿ.

ಶ್ರೀ. ಎಂ. ಎಸ್. ನಾರಾಯಣರಾವ್.—ಸನ್ಮಾನ್ಯ ಅಧ್ಯಕ್ಷರೇ, ಮೊದಲನೇ ಕ್ಲಾರಿಫಿಕೇಷನ್ ಕೇಳುತ್ತಿರುವುದು ಎಂದರೆ, ಬೆಂಗಳೂರು ನಗರದ ಸುತ್ತಮುತ್ತ ಇರುವ ರೆವಿನ್ಯೂ ಸೈಟ್‌ಗಳನ್ನು ಯಾವಾಗ ರೆಗ್ಯುಲರೈಸ್ ಮಾಡುತ್ತೀರಿ ಎಂದು ಖಂಡಿತವಾಗಿ

೬.೩೦ ಪಿ. ಎಂ.

ನಿಗದಿತ ದಿನಾಂಕವನ್ನು ಹೇಳಬೇಕೆಂದು ನಾನು ಕೇಳುತ್ತೇನೆ. ಮತ್ತೊಂದು ವಿಷಯ ಏನೆಂದರೆ, ಬೆಂಗಳೂರು ನಗರದಲ್ಲಿ ಕಾನೂನಿಗೆ ವಿರುದ್ಧವಾಗಿ ದೇವಸ್ಥಾನಗಳ ಹತ್ತಿರ, ಶಾಲೆಗಳ ಹತ್ತಿರ, ಹರಿಜನ ಗಿರಿಜನ ಕೇರಿಗಳಲ್ಲಿ ಲಿಕ್ಕರ್ ಷಾಪ್ಸ್, ವೈನ್ ಷಾಪ್ಸ್ ಏನು ಇವೆ ಇವುಗಳನ್ನು ತೆಗೆದುಹಾಕುತ್ತೇವೆಂದು ಹೇಳಿದ್ದೀರಿ ಅದನ್ನು ಈಗಲೇ ತೆಗೆದುಹಾಕುತ್ತೀರಾ ಅಥವಾ ಯಾವಾಗ ತೆಗೆದು ಹಾಕುತ್ತೀರಿ ? ಇನ್ನು ಸರೋಜಿನಿ ಮಹಿಷಿ ವರದಿಯನ್ನು ಜಾರಿಗೆ ತರಬೇಕಾಗಿದೆ, ಅದನ್ನು ಯಾವಾಗ ಜಾರಿಗೆ ತರುತ್ತೀರಿ? ನಿಗದಿತ ತಾರೀಖನ್ನು ಹೇಳಬೇಕೆಂದು ಕೇಳುತ್ತೇನೆ. ಡಾ॥ ವೆಂಕಟೇಶ್ ಅವರ ವರದಿಗೆ ಕಾಯದೇ ಸರೋಜಿನಿ ಮಹಿಷಿ ವರದಿಯನ್ನು ಜಾರಿಗೆ ಕೊಡುತ್ತೀರಾ ? ಇನ್ನು ಬೆಂಗಳೂರು ನಗರ ಕಾರ್ಪೋರೇಷನ್‌ಗೆ ೨೦–೨೫ ಕೋಟಿ ರೂಪಾಯಿ ಆಕ್ಟ್ರಾಯ್ ಕಾಂಪನ್‌ಸೇಷನ್ ಕೊಡಬೇಕಾಗಿದೆ. ಇದನ್ನು ಮಾರ್ಚ್ ೩೧ನೇ ತಾರೀಖಿನೊಳಗೇ ಕೊಡುತ್ತೀರಾ? ಬೆಂಗಳೂರು ನಗರದಲ್ಲಿ ಗೌರ್ನಮೆಂಟ್ ಸ್ಕೂಲ್ ಬಿಲ್ಡಿಂಗ್ಸ್ ಬಹಳ ದುಸ್ಥಿತಿಯಲ್ಲಿವೆ. ಇವುಗಳನ್ನು ಕಾರ್ಪೋರೇಷನ್‌ಗೆ ಹ್ಯಾಂಡ್ ಓವರ್ ಮಾಡುತ್ತೀರಾ ಅಥವಾ ಗೌರ್ನಮೆಂಟ್ ಮೂಲಕವೇ ಸರಿಪಡಿಸುತ್ತೀರಾ ? ಇವುಗಳಿಗೆ ಕ್ಲಾರಿಫಿಕೇಷನ್ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎಸ್ ಆರ್. ಬೊಮ್ಮಾಯಿ.—ಮಾನ್ಯ ಮೊಯಿಲಿಯವರು ಎರಡು ವಿಚಾರಗಳನ್ನು ಎತ್ತಿದ್ದಾರೆ. ಮೊದಲನೆಯದು. ಇರಿಗೇಷನ್ ಬಗ್ಗೆ ಏನು ಆಗಿದೆ, ಏನು ಆಗಿಲ್ಲ ಎಂದು ಅದಕ್ಕೆ ಉತ್ತರ ಕೊಟ್ಟಿದ್ದೇನೆ. ಉತ್ತರ ಕೊಟ್ಟಾಗ ನೀವು ಇರಲಿಲ್ಲ. ನನ್ನ ಭಾಷಣದಲ್ಲಿ ವಿವರಗಳನ್ನು ಹೇಳಿದ್ದೇನೆ. ೧೯೭೮ ರಿಂದ ೮೯ರವರೆಗೆ ಇರಿಗೇಷನ್‌ಗೆ ಕೊಟ್ಟಿರತಕ್ಕ ಹಣದ ಬಗ್ಗೆ ಹೇಳಿದ್ದೇನೆ,

ನಾನು ಎಂಟೈರ್ ಪೀರಿಯಡ್‌ನಲ್ಲಿ ಇರಿಗೇಷನ್‌ಗೆ ಖರ್ಚು ಮಾಡಿದ ವಿವರಗಳನ್ನು ನೀಡಿರುತ್ತೇನೆ. ಎಷ್ಟು ಎಕ್ಸ್‌ಪೆಂಡಿಚರ್ ಮಾಡಿರುತ್ತೇವೆ ಎಂದು ಹೇಳಿದ್ದೇನೆ. ತಾವು ಕೇಳಬೇಕಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ತಾವು ದಯವಿಟ್ಟು ಕೇಳಿ, ಇದನ್ನೆಲ್ಲಾ ಕೇಳಿ ಕೇಳಿ ಕಿವಿ ಸತ್ತು ಹೋಗಿದೆ. ಬಜೆಟ್ ಎಸ್ಟಿಮೇಟ್ ಎಷ್ಟು, ಎಷ್ಟು ಖರ್ಚು ಮಾಡಿದ್ದೀರಿ, ಎಷ್ಟು ಪೋರ್ಟ್‌ಫೋಲ್ ಇದೆ, ಅದನ್ನು ಹೇಳಿರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಬಜೆಟ್ ಎಸ್ಟಿಮೇಟ್ಸ್ ೧೯೭೮–೮೩ರಲ್ಲಿ ೫೯೦ ಕೋಟಿ ೭೪ ಲಕ್ಷ, ಖರ್ಚಾದುದು ೫೮೭ ಕೋಟಿ ೫೫ ಲಕ್ಷ. ೧೯೮೩–೮೮ರಲ್ಲಿ ಬಜೆಟ್ ಎಸ್ಟಿಮೇಟ್ಸ್ ೧೦೫೭.೭೫ ಕೋಟಿ ರೂಪಾಯಿಗಳು, ಅದರಲ್ಲಿ ೮೭೧.೭೬ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದ್ದೇವೆ. ಇರಿಗೇಷನ್ ಪೊಟೆನ್‌ಷಿಯಲ್ ಕ್ರಿಯೇಟಡ್ ೧೯೭೮–೮೩ರವರೆಗೆ ೨,೪೨,೭೧೬ ಹೆಕ್ಟೇರ್‌ಗಳು. ೧೯೮೩–೮೮ರವರೆಗೆ ೨,೬೨,೩೦೩ ಹೆಕ್ಟೇರ್ಸ್. ೧೯೮೩–೮೮ರ ಪೀರಿಯಡ್‌ನಲ್ಲಿ ಡ್ಯಾಮ್‌ಗೆ ಹೆಚ್ಚು ಖರ್ಚು ಮಾಡಿದ್ದೇವೆ, ಅದನ್ನು ಮಾನ್ಯ ಖರ್ಗೆಯವರಿಗೆ ಹೇಳಿದ್ದೇನೆ. ಅದಕ್ಕಾಗಿ ಇರಿಗೇಷನ್ ಪೊಟೆನ್‌ಷಿಯಲ್ ಕಡಿಮೆಯಾಗಿದೆ ಎಂಬ ಮಾತನ್ನು ಹೇಳುತ್ತೇನೆ. ಇದಾದ ಮೇಲೆ ಕಾವೇರಿ ವಲಯ ಬಗ್ಗೆ ಹೇಳುವುದಾದರೆ, ೭೮ರಿಂದ ಇದುವರೆಗೆ ೩೭೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.

SRI M. VEERAPPA MOILY.—I have asked you a pointed question. You are incapable of answering. Alright, you have no answer to give to me. ಈ ರೀತಿ ಉತ್ತರ ಹೇಳಿದರೆ ಆಗುವುದಿಲ್ಲ.

(ಗೊಂದಲ)

ಶ್ರೀ ಎಸ್. ಆರ್, ಬೊಮ್ಮಾಯಿ.—ನಾನು ಹೇಳಿದ್ದನ್ನು ನೀವು ಕೇಳಬೇಕಾಗುತ್ತದೆ. ಬೇಡವೆಂದರೆ ಬಿಡಿ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.—೨೨೬ ಕೋಟಿ ರೂಪಾಯಿಗಳ ಅಡಿಶನಲ್ ಮೊಬಲೈಜೇಶನ್ What have you spent for the capital expenditure it is only Rs. 487 crores.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಆಮೇಲೆ ಕೇಳಿ. ಪವರ್ ಪ್ರಾಜೆಕ್ಟ್ ಬಗ್ಗೆ ಹೇಳುವುದಾದರೆ ೧೯೭೪ರಿಂದ ೮೩ರವರೆಗೆ ಖರ್ಚುಮಾಡಿದಂತಹ ಹಣ ೪೫೨ ಕೋಟಿ ರೂಪಾಯಿಗಳು. ತಾವು ಪವರ್ ಬಗ್ಗೆ ಕೇಳಿದ್ದೀರಿ......

SRI M VEERAPPA MOILY—To avoid answering to my pointed question, you are answering what I have not asked for.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಹೇಳುವುದನ್ನು ಕೇಳಿ. ಆಮೇಲೆ ೧೯೮೩ರಿಂದ ೮೮ರವರೆಗೆ ೫೬೪ ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ, ಇದರಿಂದ ಎನರ್ಜಿ ಉತ್ಪತ್ತಿಯಾಗಿರುವುದು ೬೪೪ ಮೆಗಾವಾಟ್ಸ್. ನಾವು ೫ ವರ್ಷಗಳಲ್ಲಿ ಡಬ್ಬಲ್ ಮಾಡಿದ್ದೇವೆ. ತಾವು ಇನ್ನೊಂದು ವಿಚಾರ ಕೇಳಿದ್ದಿರಿ......

ನೀವು ನಾನು ಹೇಳಿದ್ದನ್ನು ಕೇಳಲಿಲ್ಲವೆಂದರೆ ನಾನೇನೂ ಮಾಡುವುದಕ್ಕೆ ಆಗುವುದಿಲ್ಲ. ನಿಮ್ಮನ್ನು ಕನ್ವೀನ್ಸ್ ಮಾಡುವ ಶಕ್ತಿ ನನಗಿಲ್ಲ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ತಮ್ಮ ತೀಕ್ಷ್ಣ ಬುದ್ಧಿಗೆ ತಿಳುವಳಿಕೆ ಕೊಡಲು ಆಗುವುದಿಲ್ಲ......

ಶ್ರೀ ಎಂ. ವೀರಪ್ಪಮೊಯ್ಲಿ. ಅದನ್ನು ಬೇರೆ ಕೆಲಸಕ್ಕೆ ಉಪಯೋಗಿಸುತ್ತೀರಿ,

ಶ್ರೀ ಎಸ್. ಆರ್. ಬೊಮ್ಮಾಯಿ.—ಇನ್ನು ೨೦ ಅಂಶಗಳ ಕಾರ್ಯಕ್ರಮ ಏನಿದೆ ಅದರಲ್ಲಿ ೧೬ ಕಾರ್ಯಕ್ರಮಗಳಲ್ಲಿ ನಾವು ವೆರಿ ಗುಡ್ ಬಂದಿದ್ದೇವೆ. ಈ ವಿಚಾರ ಪ್ಲಾನಿಂಗ್ ಕಮಿಷನ್‌ನವರು

ಹೇಳಿರತಕ್ಕಂಥ ವಿಚಾರ. ಇನ್ನು ಮಾನ್ಯ ಸದಸ್ಯರಾದ ಎಂ. ಎಸ್. ಕೃಷ್ಣನ್‌ರವರು ೪ ಪ್ರಶ್ನೆಗಳನ್ನು ಕೇಳಿದ್ದಾರೆ. ಇಂಡಸ್ಟ್ರೀಗಳು ಕ್ಲೋಸ್ ಆಗಿರುವ ಬಗ್ಗೆ ನಾನು ಇಲ್ಲಿ ವಿವರವಾಗಿ ಹೇಳತಕ್ಕಂಥಾದ್ದು ಸ್ವಲ್ಪ ಕಷ್ಟ ಇದೆ. ಇದರಲ್ಲಿ ನ್ಯಾಶನಲ್ ಟೆಕ್ಸ್‌ಟೈಲ್ಸ್ ಪಾಲಿಸಿ ಇದೆ. ಇನ್ನೂ ಅನೇಕ ಕಾರಣಗಳು ಇವೆ. ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್ ಬಗ್ಗೆ ಚರ್ಚೆಗೆ ಬಂದಾಗ ಮಾತನಾಡಿ. ಮಿಲ್‌ಗಳನ್ನು ತೆರೆಸಲು ನಾನಂತೂ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ. ಬಿನ್ನಿ ಮಿಲ್ ಅನ್ನು ಮುಂದಿನ ತಿಂಗಳ ೧೫ ರೊಳಗೆ ಪ್ರಾರಂಭ ಮಾಡಿಸುತ್ತೇನೆ. ಅದೇರೀತಿ ಮೈಸೂರು ಮಿಲ್ ಪಿ. ಆರ್, ಎಫ್: ದಾವಣಗೆರೆ ಕೆ. ಆರ್. ಮಿಲ್ ಈ ಎಲ್ಲಾ ಮಿಲ್‌ಗಳ ಬಗ್ಗೆ ಹೇಳುತ್ತೇನೆ. ಇನ್ನು ಆರ್, ಎಲ್. ಇ. ಜಿ. ಪಿ ಬಗ್ಗೆ ಹೇಳಿದ್ದಾರೆ. ಅದನ್ನು ನಾನು ಈಗಾಗಲೇ ಹೇಳಿದ್ದೇನೆ. ಇನ್ನು ವೃತ್ತಿ ತೆರಿಗೆ ಬಗ್ಗೆ ಹೇಳುವುದಾದರೆ, ಗೌರ್ನಮೆಂಟ್ ಆಫ್ ಇಂಡಿಯಾದವರು ಈ ವರ್ಷ ೨೫೦ ರೂಪಾಯಿಗಳಿಂದ ೨೫೦೦ ರೂಪಾಯಿಗಳವರೆಗೆ ಏರಿಸಬಹುದು ಎಂದು ಮಾಡಿದ್ದಾರೆ. The State Governments are permitted to levy up to Rs. 2500. ಎಲ್ಲಾ ರಾಜ್ಯ ಸರ್ಕಾರಗಳವರು ಹೆಚ್ಚು ಮಾಡಿದ್ದಾರೆ. ಮಹಾರಾಷ್ಟ್ರ, ಬಂಗಾಳ, ಗುಜರಾತ್ ಎಲ್ಲಾ ಕಡೆ ಮಾಡಿದ್ದಾರೆ...

ಶ್ರೀ ಎಂ. ಎಸ್. ಕೃಷ್ಣನ್.—ನಾನು ಕೇಳಿದ್ದು ಬೇರೆ. ಸ್ಯಾಲರಿ ಕ್ಲಾಸ್ ಬಗ್ಗೆ ಕೇಳಿದ್ದೆ ಬೋನಸ್ ಕೊಟ್ಟರೆ ಅದು ಸ್ಯಾಲರಿ ಆಗುವುದಿಲ್ಲ ಆ ಬಗ್ಗೆ ರಿಯಾಯಿತಿ ಕೊಡಿ ಎಂದು ನಾನು ಕೇಳಿದ್ದೆ.

ಶ್ರೀ ಎಸ್. ಆರ್ ಬೊಮ್ಮಾಯಿ.—ಅದು ಬೇಡ. ಈಗ ಇದ್ದದ್ದನ್ನು ವಸೂಲು ಮಾಡೋಣ. ಆ ಬಗ್ಗೆ ರೆಟ್ರೋಸ್ಪೆಕ್ಟೀವ್ ಆಗಿ ಮಾಡಿದರೆ ಆದಾಯ ಬರುತ್ತದೆ. ಇನ್ನು ಅಗ್ರಿಕಲ್ಚರಲ್ ವರ್ಕರ್ಸ್ ಬಗ್ಗೆ ನೀವು ವೆಲ್‌ಕಮ್ ಮಾಡಿದ್ದೀರಿ ದಿಸ್ ಏಬಲ್ಡ್ ಎನ್ನುವ ಪದದ ಬಗ್ಗೆ ತಾವು ಹೇಳಿದ್ದೀರಿ. ಇಂಗ್ಲೀಷ್‌ನಲ್ಲಿ ಏನು ಇದೆಯೋ ಅದು ಸರಿಯಾದುದಾಗಿದೆ. ಅದನ್ನು ಕನ್ನಡಕ್ಕೆ ಭಾಷಾಂತರ ಮಾಡಿದರೆ ಸರಿಯಾಗಿ ಕಾಣುವುದಿಲ್ಲ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ಈ ಕಾನೂನು ಮಾಡಬೇಕೆಂದು ಸಲಹೆ ಕೊಟ್ಟಿದ್ದೀರಿ. ಇದನ್ನು ಪರಿಶೀಲನೆ ಮಾಡುತ್ತೇನೆ, ಇನ್ನು ಮಾನ್ಯ ಯಡಿಯೂರಪ್ಪನವರು ಮೂರ್‍ನಾಲ್ಕು ಪ್ರಶ್ನೆಗಳನ್ನು ಕೇಳಿದ್ದಾರೆ. ಮೊದಲನೆಯದು, ವಾಟರ್ ರೇಟ್ ಬಗ್ಗೆ ಹೇಳಿದ್ದಾರೆ. ಮಾರ್ಚ್ ೧೫ರವರೆಗೆ ಅಬ್ಜಕ್ಷನ್ ಕೊಡಲಿಕ್ಕೆ ಟೈಮ್ ಇತ್ತು. ಇದನ್ನು ಡಿಸೆಂಬರ್‌ನಲ್ಲೇ ಪಬ್ಲಿಷ್ ಮಾಡಲಾಗಿದೆ. ಅಷ್ಟರೊಳಗೆ ಯಾರು ಅಬ್ಜಕ್ಷನ್ ಕೊಟ್ಟಿದ್ದಾರೋ ಅವುಗಳ ಬಗ್ಗೆ ಕೊನೆಗೆ ನಿರ್ಣಯ ತೆಗೆದುಕೊಳ್ಳುತ್ತೇವೆ, ಟಿ. ಟಿ. ಬಗ್ಗೆ ಹೇಳಿದ್ದೀರಿ. ಟಿ ಟಿ. ಹಾಕುವ ಬಗ್ಗೆ ಅದನ್ನು ಪರಿಶೀಲನೆ ಮಾಡುತ್ತಿದ್ದೇನೆ. ಟಿ. ಟಿ. ಏಕೆ ವಸೂಲಿ ಮಾಡುತ್ತಿದ್ದೀರಿ ಎಂದು ಅಧಿಕಾರಿಗಳಿಂದ ವರದಿಯನ್ನು ಕೇಳಿದ್ದೇನೆ. ಇನ್ನೊಂದು ವಿಷಯ ಎಂದರೆ, ಟಿ. ಟಿ. ಕಟ್ಟಿದರೆ ನಮ್ಮ ಹಕ್ಕು ಸಿಕ್ಕುತ್ತದೆ ಮತ್ತು ನಮಗೆ ಒಂದು ಆಧಾರ ಸಿಕ್ಕ ಹಾಗೆ ಆಗುತ್ತದೆಂದು ಕೆಲವರು ರೈತರು ಅವರಾಗಿಯೇ ಟಿ. ಟಿ. ಯನ್ನು ಕಟ್ಟಿದ್ದಾರೆ.

ಶ್ರೀ ಆರ್ ವೆಂಕಟರಾಮಯ್ಯ.—ಬಡ ರೈತರುಗಳಿಗೆ ಮುನ್ನೂರು, ನಾನ್ನೂರು ರೂಪಾಯಿಗಳಷ್ಟು ಟಿ. ಟಿ. ಯನ್ನು ಹಾಕುತ್ತಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಿಮಗೆ ಕೈ ಮುಗಿದು ಒಂದು ಮಾತು ಹೇಳುತ್ತೇನೆ, ಬಗರ್‌ಹುಕುಂ ಸಾಗುವಳಿ ಮಾಡಿರುವ ಬಡ ರೈತರುಗಳಿಂದ ೫೦೦ ರೂಪಾಯಿ, ೬೦೦ ರೂಪಾಯಿಗಳವರೆಗೆ ಟಿ. ಟಿ. ವಸೂಲಿ ಮಾಡುತ್ತಿದ್ದಾರೆ. ಆ ಜಮೀನನ್ನು ಅವರುಗಳಿಗೇ ಖಾಯಂ ಮಾಡಿ ಎಂದರೆ ಇದುವರೆಗೂ ಖಾಯಂ ಮಾಡುವ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ.

(ಗೊಂದಲ)

ಶ್ರೀ ಬಿ. ಲಕ್ಕಪ್ಪ.—ಏನೂ ಮಾಡಿಲ್ಲ

ಶ್ರೀ ಎಸ್. ಆರ್. ಬೊಮ್ಮಾಯಿ.—ಕೇಳಿ ಲಕ್ಕಪ್ಪನವರೇ, ಅದಕ್ಕೆ ಸಂಬಂಧಪಟ್ಟಂಥ ಬಿಲ್ ಈ ಮನೆಯ ಮುಂದೆ ಇದೆ. ಅದನ್ನು ನಾಳೆಯೋ ನಾಡಿದ್ದೋ ತೆಗೆದುಕೊಂಡು ಪಾಸ್ ಮಾಡೋಣ.

ಶ್ರೀ ಆರ್. ವೆಂಕಟರಾಮಯ್ಯ. ಅದನ್ನು ಬೇಗ ಮಾಡಿ. ೫ ವರ್ಷಗಳಿಂದಲೂ ಮಾಡುತ್ತೇವೆ, ಮಾಡುತ್ತೇವೆಂದು ಹೇಳುತ್ತಲೇ ಇದ್ದೀರಿ.

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಆಮೇಲೆ ಪ್ರೈಮರಿ ಸ್ಕೂಲ್ ಟೀಚರ್ಸ್ ಬಗ್ಗೆ...

ಶ್ರೀ ಬಿ. ಎಸ್. ಯಡಿಯೂರಪ್ಪ.—ಇವತ್ತಿನ ದಿವಸ ಬಡ ಗೇಣಿದಾರರಿಂದ ಹಣ ವಸೂಲಿ ಮಾಡುತ್ತಿದ್ದಾರೆ. ನನ್ನ ಪ್ರಶ್ನೆ ಏನು ಎಂದರೆ, ಎರಡು ಎಕರೆ, ಮೂರು ಎಕರೆ ಇರುವ ಬಡ ಗೇಣಿದಾರರಿಂದ ಬಲವಂತವಾಗಿ ಹಣವನ್ನು ವಸೂಲಿ ಮಾಡುತ್ತಿದ್ದಾರೆ. ಅಂತಹ ಜಮೀನನ್ನು ಖಾಯಂ ಮಾಡುವ ಬಿಲ್‌ನ್ನು ಮಂಡಿಸದೆ ಮುಂದೂಡುವುದರಿಂದ ಸಮಸ್ಯೆಪ ರಿಹಾರವಾಗುತ್ತದೆಯೇ ? ಚುನಾವಣೆ ಆದ ಮೇಲೆ ಮುಂದಿನ ವರ್ಷ ಇನ್ನೊಬ್ಬರು ಅಧಿಕಾರಕ್ಕೆ ಬಂದು ಇನ್ನೊಂದು ರೀತಿ ಕಾನೂನು ಮಾಡುವುದಕ್ಕೆ ಕಾರಣವಾಗುತ್ತದೆ. ಇದು ಸರಿಯಾದುದಲ್ಲ. ಯಾರು ಬಗರ್‌ಹುಕುಂ ಸಾಗುವಳಿ ಮಾಡಿದ್ದಾರೋ ಅಂಥವರುಗಳಿಗೆ ಜಮೀನುಗಳನ್ನು ಖಾಯಂ ಮಾಡಿ. ಇಲ್ಲ ಅಂದರೆ ಗೇಣಿದಾರರು ಕಟ್ಟಿರುವ ಟಿ ಟಿ. ಹಣವನ್ನು ವಾಪಸ್ ಕೊಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗಾಗಲೇ ರೈತರುಗಳು ಪ್ರೀಮಿಯಂ ಕಟ್ಟಿದ್ದಾರೆ. ಈ ಹಣ ಒಟ್ಟು ೮೦ ಕೋಟಿ ರೂಪಾಯಿಗಳಷ್ಟಾಗುತ್ತದೆ. ಈ ೮೦ ಕೋಟಿ ರೂಪಾಯಿಗಳನ್ನು ಪುನಃ ಅವರುಗಳಿಗೆ ವಾಪಸ್ ಕೊಡುವುದಕ್ಕಾಗುತ್ತದೆಯೇ ? ಕೊಡಬೇಕೆಂದರೂ ಸರ್ಕಾರದಲ್ಲಿ ಅಷ್ಟು ಹಣ ಇದೆಯೇ ?

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಸುಮ್ಮನೆ ಕೂಗಾಡಬೇಡಿ. ನನಗೂ ಬ್ಲಡ್ ಪ್ರೆಷರ್ ಇದೆ, ನಿಮಗೂ ಬ್ಲಡ್ ಪ್ರೆಷರ್ ಇದೆ. ದಯವಿಟ್ಟು ಶಾಂತ ರೀತಿಯಲ್ಲಿ ಮಾತನಾಡಿ.

(ಗೊಂದಲ)

ಶ್ರೀ ಪಟವುಕ್ಕಿ ರತ್ನಾಕರ್.—ಮಾನ್ಯ ಯಡಿಯೂರಪ್ಪನವರು ಏನು ಹೇಳಿದರೆಂದರೆ, ೧೦ ಎಕರೆ ಖುಷ್ಕಿ ಜಮೀನು ಇರುವವರಿಗೆ ಮನ್ನಾ ಮಾಡುವುದು ಬಿಡುವುದು ಅದು ಪ್ರತ್ಯೇಕ ಮಿನಿಮಮ್ ಒಂದು ಎಕರೆ, ಎರಡು ಎಕರೆ ಇರತಕ್ಕಂಥ ರೈತರುಗಳಿಂದ ಸರ್ಕಾರದ ಹಣ ವಸೂಲಿಮಾಡಿದೆ. ಅವರು ಹಣವನ್ನು ಕಟ್ಟಿದ್ದಾರೆ. ಅವರುಗಳು ಕಡು ಬಡವರಾಗಿದ್ದಾರೆ. ಅವರ ಬಗ್ಗೆ ಏನು ಮಾಡುತ್ತೀರೆಂದು ಮಾನ್ಯ ಯಡಿಯೂರಪ್ಪನವರು ಕೇಳಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಆಗಲೇ ಹೇಳಿದ್ದೇನೆ. ಅವರ ಬಗ್ಗೆ ಒಂದು ಅಮೆಂಡ್‌ಮೆಂಟ್ ತರಬೇಕೆಂದು ಇದ್ದೇವೆ. ಕಾನೂನು ತಿದ್ದುಪಡಿ ಮಾಡುವುದಕ್ಕೆ ಆಲೋಚನೆ ಮಾಡುತ್ತಿದ್ದೇವೆ. ಆಮೇಲೆ ಡಾ॥ ತಿಮ್ಮೆಗೌಡರು ಪ್ರೈಮರಿ ಸ್ಕೂಲ್ ಟೀಚರ್ಸ್ ಬಗ್ಗೆ ಹೇಳಿದ್ದಾರೆ. ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಟೀಚರ್ಸ್ ಇಲ್ಲವೆಂದು ಹೇಳಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದರಲ್ಲಿ ನಿಜವಾಗಿಯೂ ಬಹಳ ಅಂತರ ಇದೆ. ಒಂದೇ ಸಾರಿ ಎಲ್ಲಾ ಟೀಚರ್ಸ್‌ಗಳನ್ನು ಅಪಾಯಿಂಟ್ ಮಾಡಿಕೊಳ್ಳುವುದಕ್ಕಾಗುವುದಿಲ್ಲ ಎಷ್ಟೆಷ್ಟು ಸಾಧ್ಯವೋ ಅಷ್ಟನ್ನು ಅಪಾಯಿಂಟ್ ಮಾಡಿಕೊಳ್ಳುತ್ತೇವೆ.

ಶ್ರೀ ಡಾ॥ ಹೆಚ್. ಎಲ್. ತಿಮ್ಮೇಗೌಡ.—೩೫ ಸಾವಿರ ಟೀಚರ್ಸ್ ಕೊರತೆ ಇರುವಾಗ ೩ ಸಾವಿರ ಟೀಚರ್ಸ್‌ನ್ನು ಅಪಾಯಿಂಟ್ ಮಾಡಿದರೆ ಹೇಗೆ ?

ಶ್ರೀ ಎಸ್. ಆರ್, ಬೊಮ್ಮಾಯಿ.—ಸಾಧ್ಯವಾದಷ್ಟು ಮಾಡುತ್ತೇವೆ. ಆಮೇಲೆ ಮಾನ್ಯ ನಾರಾಯಣರಾವ್ ಅವರು ರೆವಿನ್ಯೂ ಸೈಟ್ ಬಗ್ಗೆ ಕೇಳಿದ್ದಾರೆ. ಅದರ ಬಗ್ಗೆ ಕಾನೂನು ತಿದ್ದುಪಡಿ ತರಬೇಕೆಂದು ಇದ್ದೇವೆ. ಅದು ಕೊನೆ ಹಂತದಲ್ಲಿ ಇದೆ. ರೆವಿನ್ಯೂ ಟ್ಯಾಕ್ಸ್ ಬಗ್ಗೆ ಈಗ ಕಾನೂನು ತಿದ್ದುಪಡಿ ಮಾಡುತ್ತಾ ಇದ್ದೇವೆ. ಹೀಗೆ ೪-೫ ಕಾನೂನು ತಿದ್ದುಪಡಿ ಮಾಡಬೇಕಾಗುತ್ತದೆ. ಇವುಗಳನ್ನು ಆದಷ್ಟು ಜಾಗ್ರತೆ ಮಾಡುತ್ತೇವೆ. ವೈನ್‌ಶಾಪ್‌ಗಳ ಬಗ್ಗೆ ಕಟ್ಟುನಿಟ್ಟಾದ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಸರೋಜಿನಿ ಮಹಿಷಿ ವರದಿ ಬಗ್ಗೆ ಮಾನ್ಯ ಸದಸ್ಯರುಗಳು ಕೇಳಿದ್ದಾರೆ. ಅದರಲ್ಲಿ ಈಗಾಗಲೇ ಅರ್ಧ ಭಾಗದಷ್ಟು ಜಾರಿಗೊಳಿಸಲು ಸರಕಾರ ಕ್ರಮ ತೆಗೆದುಕೊಂಡಿದೆ, ಇದರ ಬಗ್ಗೆ ಈಗಾಗಲೇ ಮಂತ್ರಿಮಂಡಲ ವಿಚಾರ ಮಾಡಿದೆ.

ಅಧ್ಯಕ್ಷರು.—ಈಗ ಮುಖ್ಯಮಂತ್ರಿಯವರಿಂದ ಉತ್ತರ ಮುಗಿಯಿತು. ಲೇಖಾನುದಾನದ ಮೇಲೆ ಚರ್ಚೆ ಪ್ರಾರಂಭ ಮಾಡ್ಯ ಮೊಯಿಲಿಯವರು ಮಾತನಾಡಬಹುದು......

(ಗೊಂದಲ)

ಶ್ರೀಮತಿ ಮುಕ್ತರುನ್ನೀಸ.—ಅಧ್ಯಕ್ಷರೇ, ನನಗೆ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು.—ಶ್ರೀ ವೀರಪ್ಪಮೊಯಿಲಿಯವರು ಮಾತನಾಡಿದ ಮೇಲೆ ತಮಗೆ ಅವಕಾಶವನ್ನು ಕೊಡುತ್ತೇನೆ,

(ಗೊಂದಲ)

ಅಧ್ಯಕ್ಷರು.—ಈಗ ಲೇಖಾನುದಾನದ ಮೇಲೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೇನೆ ಕ್ಲಾರಿಫಿಕೇಷನ್ ಎಲ್ಲಾ ಮುಗಿದಿದೆ. ಈಗ ಮೊಯಿಲಿಯವರು ಮಾತನಾಡಲಿ ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು... ಈಗಾಗಲೇ ೯೦೦ ನಿಮಿಷಗಳ ಕಾಲ ಚರ್ಚೆಯಾಗಿದೆ.

(ಗೊಂದಲ)

ಶ್ರೀಮತಿ ಮುಕ್ತರುನ್ನೀಸ.—ಅಧ್ಯಕ್ಷರೇ, ನನಗೆ ಮಾತನಾಡಲು ಅವಕಾಶ ಕೊಡಿ...

ಅಧ್ಯಕ್ಷರು.—ಲೇಖಾನುದಾನದ ಮೇಲೆ ಮೊಯಿಲಿಯವರು ಮಾತನಾಡಿದ ಮೇಲೆ ಮತ್ತೆ ಕೆಲವರಿಗೆ ಅವಕಾಶ ಮಾಡಿಕೊಡುತ್ತೇನೆ. ದಯವಿಟ್ಟು ಈಗ ಎಲ್ಲರೂ ಕುಳಿತುಕೊಳ್ಳಬೇಕು. ತಾವುಗಳು ಈ ತರಹ ಗೊಂದಲ ಉಂಟು ಮಾಡಿದರೆ ನಾನು ಓಟಿಗೆ ಹಾಕಬೇಕಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಬಜೆಟ್‌ನಲ್ಲಿ ಒಂದೆರಡು ಕರೆಕ್ಷನ್ ಇವೆ, ಅದನ್ನು ಹೇಳುತ್ತೇನೆ The following corrections will be made in the budjet speech. In Annexure-11, Serial No 2, the word excluding be corrected as 'including' It is a printing mistake. In Annexure-13 in Serial No. 3 the proposed rate of 15 be corrected as 10. These are the carrections

ಅಧ್ಯಕ್ಷರು.—ಮೊಯಿಲಿಯವರೆ, ತಾವು ಭಾಷಣ ಪ್ರಾರಂಭ ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಓಟ್ ಆನ್ ಅಕೌಂಟ್ ಮೇಲೆ ಮಾತನಾಡಲಿಕ್ಕೆ ಅವಕಾಶ ಇದೆಯೇ ?

ಶ್ರೀ ಎಂ ರಘುಪತಿ.—ಓಟ್ ಆನ್ ಅಕೌಂಟ್ ಮೇಲೆ ಮಾತನಾಡುವುದಕ್ಕೆ ತಾವು ಏಕೆ ಅವಕಾಶ ಮಾಡಿಕೊಟ್ಟಿದ್ದೀರಿ.

ಅಧ್ಯಕ್ಷರು.—ಅವರು ಐದು ನಿಮಿಷಗಳ ಕಾಲ ಮಾತನಾಡಲಿ,

SRI M. RAGUPATHI.—There is no debeate on vote on account. Never. If it is a full-fledged budget, then there is a scope. Now There no scope.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಚರ್ಚೆ ಇಲ್ಲದೆ ಆರು ತಿಂಗಳ ಕಾಲ ಓಟ್ ಆನ್ ಅಕೌಂಟ್ ತೆಗೆದುಕೊಂಡು ಹೋಗುತ್ತೀರಾ ? ಈ ರೀತಿಯಲ್ಲಿ ಹಿಂದೆ ಯಾವ ಸರ್ಕಾರವೂ ಮಾಡಿಲ್ಲ. ನೀವು ಮಾಡುತ್ತೀದ್ದೀರಿ.... .

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಸಭಾಧ್ಯಕ್ಷರೇ, ಲೇಖಾನುದಾನದ ಬಗ್ಗೆ ಚರ್ಚೆ ಮಾಡಲು ಸರಕಾರದವರ ಕಡೆಯಿಂದ ಬಹಳಷ್ಟು ಪ್ರತಿಭಟನೆ ಇದ್ದರೂ ಕೂಡ ನನಗೆ ಚರ್ಚೆಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಿಶೇಷವಾದಂಥ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇದರ ಬಗ್ಗೆ ಚರ್ಚೆ ಬೇಡ

ಎಂದು ಮಾನ್ಯ ರಘುಪತಿಯವರು ಮೂಲಭೂತವಾದಂಥ ಪ್ರಶ್ನೆಯನ್ನು ಎತ್ತಿದ್ದಾರೆ. ಇಲ್ಲಿ ತಾವುಗಳು ಒಂದು ವಿಷಯವನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುವುದು ಏನೆಂದರೆ, ಈ ಲೇಖಾನುದಾನವನ್ನು ಸರಕಾರದವರು ೬ ತಿಂಗಳ ಕಾಲದ ಮಟ್ಟಿಗೆ ಕೇಳಿದ್ದಾರೆ. ಇದರಲ್ಲಿ ಈಗ ಕೆಲವು ಪ್ರಶ್ನೆಗಳು ಉದ್ಭವವಾಗುತ್ತವೆ, ಇಲ್ಲಿ ಸರಕಾರದವರು ಯಾವ ಸಂದರ್ಭದಲ್ಲಿ ಈ ಆರು ತಿಂಗಳುಗಳ ಕಾಲ ಲೇಖಾನುದಾನವನ್ನು ತೆಗೆದುಕೊಳ್ಳುತ್ತಿದ್ದಾರೆ ಎನ್ನುವುದು ಮುಖ್ಯವಾದ ವಿಚಾರ. ನಾವು ಈಗ ಲೋಕಸಭೆಯ ಒಂದು ಪರಂಪರೆಯನ್ನು ನೋಡಿದರೆ, ಅಲ್ಲಿ ಹೆಚ್ಚಿಗೆ ಅಂದರೆ ಎರಡು ತಿಂಗಳುಗಳ ಕಾಲ ಲೇಖಾನುದಾನವನ್ನು ತೆಗೆದುಕೊಳ್ಳುತ್ತಾರೆ. ಒಂದು ವೇಳೆ ಚುನಾವಣೆ ಹತ್ತಿರ ಬರುತ್ತಾ ಇದೆ ಅಥವಾ ಚುನಾವಣೆಗೆ ಒಂದೆರೆಡು ತಿಂಗಳುಗಳು ಇದ್ದರೆ, ಅಥವಾ ಚುನಾವಣೆ ಬಂದ ಕೂಡಲೇ ಏನಾದರೂ ಪ್ರಶ್ನೆ ಬಂದರೆ, ಒಂದು ತಿಂಗಳ ಅಂದರೆ, ಮೂರು ತಿಂಗಳ ಅವಧಿಗೆ ಲೇಖಾನುದಾನವನ್ನು ತೆಗೆದು ಕೊಳ್ಳುತ್ತಾರೆ. ನಮಗೆ ತಿಳಿದಿರುವ ಪ್ರಕಾರ, ಮೂರು ತಿಂಗಳುಗಳಿಗಿಂತ ಹೆಚ್ಚು ಕಾಲದವರೆಗೆ ಲೋಕಸಭೆಯಲ್ಲಿ ಲೇಖಾನುದಾನ ತೆಗೆದುಕೊಂಡಂಥ ಪ್ರಸಂಗಗಳು ಇಲ್ಲ. ತಮಿಳುನಾಡಿನಲ್ಲಿ ಮಾನ್ಯ ರಾಜಾಜಿಯವರು ಮುಖ್ಯಮಂತ್ರಿಯವರಾಗಿದ್ದಂಥ ಕಾಲದಲ್ಲಿ ಒಮ್ಮೆ ಆರು ತಿಂಗಳುಗಳ ಕಾಲ ಲೇಖಾನುದಾನವನ್ನು ತೆಗೆದುಕೊಂಡ ಪ್ರಸಂಗ ಇದೆ. ಅದು ಏತಕ್ಕೆ ಅಂದರೆ, ಆಂಧ್ರ ಪ್ರದೇಶ, ಒಂದು ಹೊಸದಾಗಿ ಹುಟ್ಟಿದ್ದಂಥ ಕಾರಣದಿಂದಾಗಿ ಎರಡು ರಾಜ್ಯಗಳ ಸಂಪನ್ಮೂಲಗಳ ವಿತರಣೆ ಮಾಡತಕ್ಕಂಥ ಸಂದರ್ಭದಲ್ಲಿ ಅಲ್ಲಿ ಆರು ತಿಂಗಳ ಕಾಲ ಲೇಖಾನುದಾನವನ್ನು ತೆಗೆದುಕೊಂಡಿದ್ದಾರೆ. ಅದನ್ನು ಬಿಟ್ಟರೆ ಹೀಗೆ ಆರು ತಿಂಗಳ ಕಾಲ ಲೇಖಾನುದಾನ ತೆಗೆದುಕೊಂಡ ರಾಜ್ಯ ಅಂದರೆ, ಆಂಧ್ರ ಪ್ರದೇಶ ಮಾತ್ರ. ಬೇರೆ ಯಾವ ರಾಜ್ಯಗಳಲ್ಲಿಯೂ ಹೀಗೆ ಆರು ತಿಂಗಳುಗಳ ಕಾಲ ಲೇಖಾನುದಾನ ವನ್ನು ತೆಗೆದುಕೊಂಡಂಥ ಪ್ರಸಂಗಗಳು ಇಲ್ಲ. ತಾವು ಆರ್ಟಿಕಲ್ ೨೦೬ನ್ನು ಪರಿಶೀಲನೆ ಮಾಡಿದರೆ, ಅದನ್ನು ಗಮನದಲ್ಲಿ ತೆಗೆದುಕೊಂಡಾಗ, ನಾವು ಸದನದಲ್ಲಿ ಸ್ವಲ್ಪ ಪ್ರಜಾಪ್ರಭುತ್ವದ ಪರಿಜ್ಞಾನವನ್ನು ಇಟ್ಟುಕೊಂಡು ಮತ್ತು ಸತ್‌ಪರಂಪರೆಗಳನ್ನು ಇಟ್ಟುಕೊಂಡು ಕೆಲಸ ಮಾಡಬೇಕಾಗಿದೆ. ಅದನ್ನು ಬಿಟ್ಟು ಸರಕಾರದವರು ಲೇಖಾನುದಾನವನ್ನು ನಮ್ಮ ಮುಂದಿಟ್ಟಿದ್ದಾರೆ. ಅದನ್ನು ಮಂಜೂರು ಮಾಡಿ ಮನೆಗೆ ಹೋಗುವುದು ಸರಿಯಲ್ಲ. ಹಾಗೆ ಮಾಡಿದರೆ ನಾವು ಪ್ರಜಾಪ್ರಭುತ್ವ ರೀತ್ಯಾ ಸರಿಯಾಗಿ ಕೆಲಸ ಮಾಡಿದ ಹಾಗೆ ಆಗುವುದಿಲ್ಲ. ಈ ಒಂದು ವಿಚಾರವು ಮಂಡನೆಯಾಗ ಬೇಕಾದರೆ ಸಾರ್ವಜನಿಕರು ಈ ಪ್ರಸ್ತಾಪವನ್ನು ತಿಳಿದುಕೊಳ್ಳಬೇಕಾಗಿದೆ. ಆರ್ಟಿಕಲ್ ೨೦೬ ಎ ಪ್ರಕಾರ

> (a) to make any grant in advance in respect of the estimated expenditure for a part of any financial year pending the completion of the procedure prescribed in Article 203 for the voting of such grant and passing of the law in accordance with the provisions of Art. 204 in relation to that expenditure.

part of a financial year cannot be six months, cannot be nine months or it cannot be eleven months. ೬ ತಿಂಗಳು ೮ ತಿಂಗಳು, ೯ ತಿಂಗಳು ೧೧ ತಿಂಗಳುಗಳ ವರೆಗೆ ಕೂಡ ಮಾಡಿದರೆ ಬಹುಶಃ ಯಾವುದೇ ಒಂದು ಜವಾಬ್ದಾರಿಯುತವಾದಂಥ ಸರಕಾರ ಜನಗಳಿಗೆ ಒಂದು ಪ್ರತಿನಿಧಿಗಳ ಸಭೆಯಾಗಿ ಇಲ್ಲಿ ಕೆಲಸ ಮಾಡಿದಂಥ ಪರಿಸ್ಥಿತಿಯನ್ನು ಕಲ್ಪನೆ ಮಾಡುವುದಕ್ಕಾಗುವುದಿಲ್ಲ. ಇದು ಬಹಳ ಪ್ರಾಮುಖ್ಯವಾದ ವಿಚಾರ. ಲೋಕಸಭೆಯಲ್ಲಿ ಕೆಲಸ ಮಾಡಿದಂತಹ ಜಿ. ಹೆಚ್. ಪಟೇಲ್‌ರವರು ಮತ್ತು ರಾಜ್ಯಸಭೆಯಲ್ಲಿ ಕೆಲಸಮಾಡಿದಂತಹ ಶ್ರೀ ಹೆಗಡೆ ಯವರೂ ಇದ್ದಾರೆ. ಇವರಲ್ಲದೆ ರಾಜ್ಯಸಭೆಯಲ್ಲಿ ರಾಚಯ್ಯನವರೂ ಕೂಡ ಕೆಲಸ ಮಾಡಿದ್ದಾರೆ ಎಂತಹ ಸಂದರ್ಭದಲ್ಲೂ ಕೂಡ ಮೇ ೧೫ರ ಒಳಗೆ All the Demands are put to vote. It is never extended beyond may 15th. ಪ್ರೊಸೀಜರ್ ಪ್ರಕಾರ ಡಿಮ್ಯಾಂಡ್‌ಗಳ ಮೇಲೆ ಚರ್ಚೆಯಾಗಬೇಕು. ಮಾರ್ಚ್ ೩೧ರೊಳಗೆ ಯಾವುದೇ ಬೇಡಿಕೆಗಳ ಬಗ್ಗೆ ಚರ್ಚೆಗೆ ಅವಕಾಶ ವನ್ನು ಕೊಡಬೇಕಾಗುತ್ತದೆ. ಅದಕ್ಕೆ ೬ ತಿಂಗಳ ಕಾಲ ಏಕೆ ಕಾಯಬೇಕು ಎಲ್ಲಾ ಬೇಡಿಕೆಗಳ ಮೇಲೆ ಚರ್ಚೆ ಮಾಡಿ ಮೇ ತಿಂಗಳೊಳಗೆ ಪಾಸ್ ಮಾಡಬಹುದು. ಅದರ ಬದಲು ನಿರಂಕುಶವಾದಂತಹ ಅಧಿಕಾರ ವನ್ನು ಕೊಟ್ಟು, ಹಣವನ್ನು ಖರ್ಚು ಮಾಡುವುದಕ್ಕೆ ಸರಕಾರಕ್ಕೆ ಅವಕಾಶ ಕೊಟ್ಟರೆ ಸರಿಆಗುವುದಿಲ್ಲ. Bureaucracy - they may ride over Legislative power. The entire financial disciplinc will be distorted. ಸರ್ಕಾರದವರು ಆರು ತಿಂಗಳವರೆಗೆ ವೋಟ್ ಆನ್ ಅಕೌಂಟ್ ಏನು ಕೇಳುತ್ತಿದ್ದಾರೆ ಇದು ಸರಿಯಲ್ಲ. Not even 25% is spent

even on core sector, and even the expenditure on Scheduled Caste Scheduled tribe welfare programme and on planning, inadequate ಇಂತಹ ಸಂದರ್ಭ ಇಲ್ಲಿ ಬರುವುದಕ್ಕೆ ಸಾಧ್ಯವಿಲ್ಲ. ಇವರಿಗೆ ಹತೋಟಿ ಇಲ್ಲವೇ? ಪೂರ್ಣ ಪ್ರಮಾಣದ ಬಡ್ಜೆಟ್ ಡಿಮ್ಯಾಂಡ್ಸ್ ಪಾಸ್ ಆಗದೆ ಇದ್ದರೆ ಸರಕಾರ ನಡೆಸುವುದಕ್ಕೆ ತೊಂದರೆಯಾಗುತ್ತದೆ. ಅಧಿಕಾರದಲ್ಲಿರುವ ಸರಕಾರದವರು ಯಾವ ರೀತಿಯಲ್ಲಾದರೂ ತಿರುಚಿಕೊಂಡು ಅಧಿಕಾರದ ಚಕ್ರವನ್ನು ತಿರುಗಿಕೊಂಡು ಹೋಗಲಿಕ್ಕೆ ಸಾಧ್ಯವಾಗುತ್ತದೆ. ಇದನ್ನು ತಪ್ಪಿಸಬೇಕು, ವೋಟ್ ಆನ್ ಅಕೌಂಟ್ ಅನ್ನು ೨-೩ ತಿಂಗಳಿಗೆ ತೆಗೆದುಕೊಳ್ಳಿ, ಆರು ತಿಂಗಳು ಬೇಡ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೌಲ್ ಅಂಡ್ ಶಕದರ್ ಪುಸ್ತಕದ ಪೇಜ್ ೧೭೭ ರಲ್ಲಿ ವೋಟ್ ಆನ್ ಅಕೌಂಟ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಇವರ ಸರಕಾರ ಬಂದ ಮೇಲೆ ಪ್ರತಿ ವರ್ಷ ಕೂಡ ಓಟ್ ಆನ್ ಅಕೌಂಟ್ ತೆಗೆದುಕೊಂಡಿದ್ದಾರೆ, ಎರಡು ಸಾರಿ ವೋಟ್ ಆನ್ ಅಕೌಂಟ್ ಅನ್ನು ಮಾಡಿದ್ದಾರೆ, ಇದು ಮೂರನೇ ಬಾರಿ. ಮೂರನೇ ಸಲ ಈ ಸರಕಾರದ ಮೇಲೆ ಕಡಿವಾಣವನ್ನು ಹಾಕದಿದ್ದರೆ ಅದು ನಿರಂಕುಶ ಪ್ರಜಾಪ್ರಭುತ್ವ ವಾಗುತ್ತದೆಯೇ ಹೊರತು ಸರಿಯಾದಂತಹ ಜವಾಬ್ದಾರಿಯುತವಾದಂತಹ ಸರಕಾರವಾಗುವುದಿಲ್ಲ. ಕೌಲ್ ಅಂಡ್ ಶಕ್ದರ್‌ರವರ ಪುಸ್ತಕದಲ್ಲೂ ಕೂಡ ಎರಡು ಇಲ್ಲವೇ ಮೂರು ತಿಂಗಳಿಗೆ ವೋಟ್ ಆನ್ ಅಕೌಂಟ್ ತೆಗೆದುಕೊಳ್ಳಬಹುದು ಎಂದು ಇದೆ. ದಯಮಾಡಿ ನೋಡಬೇಕು. ಯಾವುದೇ ಸಂದರ್ಭದಲ್ಲೂ ಕೂಡ ೪-೬ ತಿಂಗಳ ಕಾಲ ವೋಟ್ ಆನ್ ಅಕೌಂಟ್ ತೆಗೆದುಕೊಳ್ಳಲು ಕೌಲ್ ಅಂಡ್ ಶಕದರ್‌ನಲ್ಲಿ ಪ್ರಾವಿಷನ್ ಕೊಟ್ಟಿಲ್ಲ. ನಾನು ಒಂದು ಪ್ರಿವಿಲೇಜ್ ಮೋಷನ್ ಅನ್ನು ಕೊಟ್ಟಿದ್ದೆ. ಅದನ್ನು ನಾಳೆ ತೆಗೆದುಕೊಳ್ಳುತ್ತೀರೋ, ಇವತ್ತು ತೆಗೆದುಕೊಳ್ಳುತ್ತೀರೋ ಗೊತ್ತಿಲ್ಲ. ಈ ರೀತಿಯಾಗಿ ಆರು ತಿಂಗಳ ಕಾಲ ವೋಟ್ ಆನ್ ಅಕೌಂಟ್ ಅನ್ನು ತೆಗೆದುಕೊಂಡು ಶಾಸನ ಸಭೆಯ ಅಧಿಕಾರವನ್ನು ಕಿತ್ತುಕೊಂಡು ಹೋಗತಕ್ಕಂತಹ ಪ್ರಯತ್ನವನ್ನು ಮಾನ್ಯ ಮುಖ್ಯ ಮಂತ್ರಿಗಳು ಮಾಡುತ್ತಿದ್ದಾರೆ. ಕೌಲ್ ಅಂಡ್ ಶಕದರ್‌ನ ಪೇಜ್ ೧೭೭ ರ ಪ್ರಕಾರ ಇದು ಪ್ರಿವಿಲೇಜ್ ಆಗುತ್ತದೆಯೇ ಇಲ್ಲವೇ ಎನ್ನುವುದನ್ನು ತಾವು ಪರಿಶೀಲನೆ ಮಾಡಿ, ಪ್ರಿವಿಲೇಜ್ ಆಗುತ್ತದೆನ್ನುವುದನ್ನು ತಾವು ಕಂಡು ಹಿಡಿಯಬೇಕು. ಈಗಲೂ ಕೂಡ ಸಮಯ ಮೀರಿಲ್ಲ. ಎರಡು ಸಾರಿ ಮಾಡಿದಂತಹ ತಪ್ಪನ್ನು ಮೂರನೇ ಸಾರಿ ಮಾಡಬಾರದು. ಇವತ್ತು ಮಾನ್ಯ ಖರ್ಗೆಯವರಿಗಾಗಲೀ, ನನಗಾಗಲೀ ಇದರಿಂದ ಏನು ತಿಳಿದು ಬರುತ್ತದೆಂದರೆ, ಕೊನೆಯವರೆಗೂ ಈ ಸರಕಾರ ತನ್ನ ಅಧಿಕಾರವನ್ನು ನಡೆಸುತ್ತದೆಯೋ ಎನ್ನುವ ಅನುಮಾನ ಬರುತ್ತದೆ. ಆರು ತಿಂಗಳಿಗೆ ಸಂಬಂಧಪಟ್ಟ ಹಾಗೆ ಅನುದಾನವನ್ನು ತೆಗೆದುಕೊಂಡರೆ, ಸೆಪ್ಟೆಂಬರ್‌ವರೆಗೆ ಅಧಿಕಾರವನ್ನು ತೆಗೆದುಕೊಳ್ಳುತ್ತೀರಿ. ಆದರೆ ಕರ್ತವ್ಯದಿಂದ ಪಲಾಯನ ಮಾಡತಕ್ಕಂತಹ ಒಂದು ಪ್ರಯತ್ನ, ಪ್ರಸಂಗ ಇಲ್ಲಿ ಖಂಡಿತವಾಗಿ ಉದ್ಭವವಾಗಿದೆ ಎಂದು ನಮಗೆ ಅನಿಸುತ್ತದೆ. ತಾವು ೨-೩ ತಿಂಗಳಿಗೆ ಇದನ್ನು ಸೀಮಿತಗೊಳಿಸಿ ತಿದ್ದುಪಡಿಯನ್ನು ತಂದರೆ ಈ ಲೇಖಾನುದಾನಕ್ಕೆ ನಾವು ಸರ್ವಾನುಮತದಿಂದ ಅನುಮತಿಯನ್ನು ಕೊಡುತ್ತೇವೆ. ನಿರಂಕುಶ ಪ್ರಜಾಪ್ರಭುತ್ವ ವಾದಕ್ಕೆ ಒಂದು ದೊಡ್ಡ ಪ್ರಜಾಪ್ರಭುತ್ವ ವಾದಿಗಳ ಬ್ಯಾನರ್ ಅನ್ನು ಹಚ್ಚಿ ಇಡೀ ದೇಶದಲ್ಲಿ ತಿರುಗತಕ್ಕಂತಹ ಪ್ರಯತ್ನವನ್ನು ಜನತಾದಳದವರು ಮಾಡುತ್ತಿದ್ದೀರಿ. ಇದು ಖಂಡಿತವಾಗಿಯೂ ಪ್ರಜಾಪ್ರಭುತ್ವದ ಪದ್ಧತಿಗೆ ವಿರುದ್ಧವಾದಂತಹ ವಿಚಾರವೆಂದು ಹೇಳಲಿಕ್ಕೆ ಬಯಸುತ್ತೇನೆ. ಈ ಪ್ರಜಾಪ್ರಭುತ್ವ ವಾದಕ್ಕೆ ಸ್ಪಂದನವನ್ನು ಕೊಡತಕ್ಕಂತಹ ಮುಖ್ಯ ಮಂತ್ರಿಗಳು ತಾವು ಆಗಬೇಕು. ಅದರ ಬದಲು ನಿರಂಕುಶ ಪ್ರಭುತ್ವಕ್ಕೆ ಸ್ಪಂದನ ಕೊಡತಕ್ಕಂತಹ ಮುಖ್ಯ ಮಂತ್ರಿಗಳು ತಾವು ಆಗಬಾರದು ಎಂದು ತಮ್ಮ ಮೂಲಕ ಮಾನ್ಯ ಸಭಾ ನಾಯಕರಲ್ಲಿ ಮನವಿ ಮಾಡುತ್ತೇನೆ.

೭-೦೦ ಪಿ. ಎಂ.

ಶ್ರೀ ಎಂ. ಎಸ್. ಕೃಷ್ಣನ್.—ಒಂದೇ ಒಂದು ಕ್ಲಾರಿಫಿಕೇಷನನ್ನು ಮಾನ್ಯ ಸಭಾ ನಾಯಕರಲ್ಲಿ ಕೇಳುತ್ತೇನೆ. ಇಲ್ಲಿ ಆರು ತಿಂಗಳ ಕಾಲಾವಕಾಶ ಬೇಕು ಎಂದು ಹೇಳುತ್ತಾರೆ. ಕೌಲ್ ಅಂಡ್ ಶಕ್ದರ್‌ನಲ್ಲಿ ನಾವು ನೋಡಿದ ಹಾಗೆ ಈ ರೀತಿ ಇದೆ.

'Normally the vote on account is taken for two months only. But during an election year or when it is anticipated that the main demands and the Appropriation

Bill will take longer than two months to be passed by the House, the vote on account may be for a period exceeding two months and may extend to 3 or 4 months'

I would only like to say• why this extended for more than four months ?

